ಸೋಮವಾರ, ಜೂನ್ 23, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 173 | ಪುಟ 14

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ತುರ್ತು ಭೂಸ್ಪರ್ಶ

ಬರ್ಮಿಂಗ್‌ಹ್ಯಾಮ್‌ನಿಂದ ದೆಹಲಿಗೆ ಬರುತ್ತಿದ್ದ ಏರ್ ಇಂಡಿಯಾ ವಿಮಾನವೊಂದಕ್ಕೆ ಬೆದರಿಕೆ ಕರೆ ಬಂದ ಕಾರಣ ರಿಯಾದ್‌ನಲ್ಲಿ ಭೂಸ್ಪರ್ಶ ಮಾಡಿಸಲಾಯಿತು

ಬೂಮ್ರಾಗೆ ಐದು

ಭಾರತ ತಂಡದ ವೇಗಿ ಜಸ್‌ಪ್ರೀತ್ ಬೂಮ್ರಾ, ಲೀಡ್ಸ್‌ನಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ಎದುರಿನ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಐದು ವಿಕೆಟ್ ಗಳಿಸಿದರು

ಗ್ಯಾರೇಜ್‌ನಿಂದ ಐಎಟಿಯತ್ತ... 4A | ಮುಂದುವರಿದ ಅತೃಪ್ತರ ಹೋರಾಟ 4B

ಇರಾನ್ ಮೇಲೆ ಅಮೆರಿಕ ದಾಳಿ

‘ಆಪರೇಷನ್ ಮಿಡ್‌ನೈಟ್ ಹ್ಯಾಮರ್’ 3 ಪರಮಾಣು ಘಟಕಗಳು ನಾಶ : ಟ್ರಂಪ್

ರಾಯಿಟರ್ಸ್/ಎಪಿ/ಪಿಟಿಐ

ಇಸ್ತಾಂಬುಲ್ / ವಾಷಿಂಗ್ಟನ್ / ಜೆರುಸಲೇಮ್: ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದಲ್ಲಿ ಮಧ್ಯಪ್ರವೇಶಿಸುವ ಕುರಿತು ಶೀಘ್ರವೇ ನಿರ್ಧರಿಸಲಾಗುವುದು ಎಂದು ಹೇಳುತ್ತಿದ್ದ ಅಮೆರಿಕ, ಶನಿವಾರ ತಡರಾತ್ರಿ ಇರಾನ್‌ನ ಮೂರು ಪ್ರಮುಖ ಪರಮಾಣು ಘಟಕಗಳ ಮೇಲೆ ಭಾರಿ ಬಾಂಬ್ ದಾಳಿ ನಡೆಸಿದೆ.

‘ಆಪರೇಷನ್ ಮಿಡ್‌ನೈಟ್ ಹ್ಯಾಮರ್’ ಹೆಸರಿನ ಸೇನಾ ಕಾರ್ಯಾಚರಣೆ ನಡೆಸುವ ಮೂಲಕ, ಇರಾನ್ ವಿರುದ್ಧ ಇಸ್ರೇಲ್ ಸಾರಿರುವ ಯುದ್ಧವನ್ನು ಅಮೆರಿಕ ಅಧಿಕೃತವಾಗಿ ಪ್ರವೇಶಿಸಿದಂತಾಗಿದೆ.

‘ಇರಾನ್‌ನ ಫೋರ್ಡೊ, ನಟಾನ್ಜ್ ಹಾಗೂ ಎಸ್‌ಫಹಾನ್‌ನಲ್ಲಿರುವ ಪರಮಾಣು ಘಟಕಗಳನ್ನು ಗುರಿಯಾಗಿಸಿ ನಡೆಸಿದ ದಾಳಿ ಯಶಸ್ವಿಯಾಗಿದೆ’ ಎಂದು ಟ್ರಂಪ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

‘ಪ್ರಮುಖ ಪರಮಾಣು ಘಟಕಗಳ ಮೇಲೆ ಭಾರಿ ಪ್ರಮಾಣದ ಬಾಂಬ್ ಹಾಕಲಾಗಿದ್ದು, ಎಲ್ಲ ಯುದ್ಧವಿಮಾನಗಳು ಸುರಕ್ಷಿತವಾಗಿ ಮರಳಿವೆ’ ಎಂದು ಹೇಳಿದ್ದಾರೆ.

ಅಮೆರಿಕದ ಈ ನಡೆ ಅಂತರರಾಷ್ಟ್ರೀಯ ನಿಯಮಗಳ ಉಲ್ಲಂಘನೆ ಎಂದು ಇರಾನ್ ಪ್ರತಿಕ್ರಿಯಿಸಿದೆ. ತನ್ನ ಜನರ ಹಾಗೂ ಸಾರ್ವಭೌಮತೆ ರಕ್ಷಣೆಗಾಗಿ ಎಲ್ಲ ಆಯ್ಕೆಗಳನ್ನು ಇರಾನ್ ಮುಕ್ತವಾಗಿರಿಸಿ ಕೊಂಡಿದ್ದು, ತಕ್ಕ ಉತ್ತರ ನೀಡುವುದಾಗಿ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಗುಡುಗಿದ್ದಾರೆ.

ಇನ್ನೊಂದೆಡೆ, ಇಂತಹ ದಿಟ್ಟ ನಿರ್ಧಾರ ಕೈಗೊಂಡಿದ್ದಕ್ಕಾಗಿ ಡೊನಾಲ್ಡ್ ಟ್ರಂಪ್ ಅವರನ್ನು ಅಭಿನಂದಿಸುವುದಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ಈ ಬೆಳವಣಿಗೆ ಬೆನ್ನಲ್ಲೇ, ತನ್ನ ವಾಯುಪ್ರದೇಶವನ್ನು ಮುಚ್ಚಿರುವುದಾಗಿ ಇಸ್ರೇಲ್ ಘೋಷಿಸಿದೆ.

‘ನಾಶ ಮಾಡಿದ್ದೇವೆ’: ಇರಾನ್ ಮೇಲೆ ಭೀಕರ ದಾಳಿ ನಡೆಸಿದ ಕೆಲ ಹೊತ್ತಿನ ನಂತರ, ಟೆಲಿವಿಷನ್ ಮೂಲಕ ಮಾತನಾಡಿದ ಡೊನಾಲ್ಡ್ ಟ್ರಂಪ್, ‘ರಾತ್ರೋರಾತ್ರಿ ನಡೆದ ದಾಳಿಗಳಲ್ಲಿ, ಇರಾನ್ ಪ್ರಮುಖ ಪರಮಾಣು ಘಟಕಗಳನ್ನು ನಾಶ ಮಾಡಿದ್ದೇವೆ. ಇದು ಸೇನೆಗೆ ಸಂದ ಅದ್ಭುತ ಯಶಸ್ಸು’ ಎಂದು ಹೇಳಿದರು.

9

ಭೂಮಿ ಮೇಲಿನ ಯಾವ ದೇಶವೂ ಮಾಡಲಾಗದಂತಹ ಕಾರ್ಯವನ್ನು ಅಮೆರಿಕ ಮಾಡಿದೆ. ಡೊನಾಲ್ಡ್ ಟ್ರಂಪ್ ಅವರ ನಿರ್ಧಾರ ಇತಿಹಾಸವನ್ನೇ ಬದಲಿಸಲಿದೆ

ಬೆಂಜಮಿನ್ ನೆತನ್ಯಾಹು, ಇಸ್ರೇಲ್ ಪ್ರಧಾನಿ

ಈ ದಾಳಿ ಮೂಲಕ ಅಮೆರಿಕ ರಾಜತಾಂತ್ರಿಕತೆಗೇ ದ್ರೋಹ ಬಗೆದಿದೆ. ರಾಜತಾಂತ್ರಿಕ ಮಾರ್ಗ ಈಗ ನಮ್ಮ ಆಯ್ಕೆಯಾಗಿ ಉಳಿದಿಲ್ಲ

ಅಬ್ಬಾಸ್ ಅರಾಗ್ಚಿ, ಇರಾನ್ ವಿದೇಶಾಂಗ ಸಚಿವ

‘ಮ್ಯಾಕ್ಸರ್ ಟೆಕ್ನಾಲಜೀಸ್’ ಬಿಡುಗಡೆ ಮಾಡಿರುವ ಉಪಗ್ರಹ ಚಿತ್ರದಲ್ಲಿ ಇರಾನ್‌ನ ಇಸ್‌ಫಹಾನ್ ಪರಮಾಣು ಘಟಕವು ಹಾನಿಗೊಂಡಿರುವುದು ಕಂಡುಬಂದಿದೆ —ಎಎಫ್‌ಪಿ ಚಿತ್ರ

ದಿನದ ಪ್ರಮುಖ ಬೆಳವಣಿಗೆ

- ದಾಳಿಗೆ ಬಿ–2 ಬಾಂಬರ್, ಟೊಮಾಹಾಕ್ ಕ್ಷಿಪಣಿ ಬಳಕೆ
- ಆಡಳಿತ ಬದಲಾವಣೆಗೆ ಇರಾನ್ ಮೇಲೆ ದಾಳಿ ನಡೆಸಿಲ್ಲ– ಅಮೆರಿಕ
- ಹೊರ್ಮುಜ್ ಜಲಸಂಧಿ ಬಂದ್ ಮಾಡಲು ಇರಾನ್ ಚಿಂತನೆ
- ಇಸ್ರೇಲ್ ಮೇಲೆ ಖೋರ್ರಾಮ್‌ಶಹ್ರ್–4 ಸೇರಿದಂತೆ 40 ಕ್ಷಿಪಣಿಗಳಿಂದ ಇರಾನ್ ದಾಳಿ
- ಪರಮಾಣು ಘಟಕಗಳ ಸ್ಥಳದಲ್ಲಿ ಯಾವುದೇ ವಿಕಿರಣ ಸೋರಿಕೆ ಕಂಡುಬಂದಿಲ್ಲ: ಐಎಇಎ
- ಇರಾನ್‌ನಿಂದ 311 ಭಾರತೀಯರು ವಾಪಸ್

ಪ್ರತೀಕಾರ: ಇರಾನ್ ಶಪಥ

ತನ್ನ ಮೂರು ಪರಮಾಣು ಘಟಕಗಳ ಮೇಲೆ ದಾಳಿ ನಡೆಸಿರುವ ಅಮೆರಿಕ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಇರಾನ್ ಭಾನುವಾರ ಶಪಥ ಮಾಡಿದ್ದು, ‘ತಾನು ನೀಡುವ ಪ್ರತ್ಯುತ್ತರ ಶಾಶ್ವತ ಪರಿಣಾಮವನ್ನುಂಟು ಮಾಡಲಿದೆ’ ಎಂದು ಹೇಳಿದೆ.

ಅಮೆರಿಕ ದಾಳಿಗೆ ಪ್ರತಿಕ್ರಿಯಿಸಿರುವ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ, ‘ಇರಾನ್‌ನ ಪರಮಾಣು ಘಟಕಗಳ ಮೇಲೆ ದಾಳಿ ಮಾಡುವ ಮೂಲಕ, ಅಮೆರಿಕವು ವಿಶ್ವಸಂಸ್ಥೆ ಸನ್ನದು, ಅಂತರರಾಷ್ಟ್ರೀಯ ಕಾನೂನು ಮತ್ತು ಅಣ್ವಸ್ತ್ರ ನಿಶ್ಶಸ್ತ್ರೀಕರಣ ಒಪ್ಪಂದದ (ಎನ್‌ಪಿಟಿ) ಉಲ್ಲಂಘನೆ ಮಾಡಿದೆ’ ಎಂದು ಹೇಳಿದ್ದಾರೆ.

ಅಮೆರಿಕದ ಯುದ್ಧದಾಹಿ ಹಾಗೂ ಅರಾಜಕತೆಯಿಂದ ಕೂಡಿದ ಆಡಳಿತವೇ ಬಾಂಬ್ ದಾಳಿಗೆ ಹೊಣೆ ಎಂದಿದ್ದಾರೆ.

ಟರ್ಕಿಯ ಇಸ್ತಾಂಬುಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅಮೆರಿಕ ದಾಟದೇ ಇರುವಂತಹ ಯಾವ ಮಿತಿಯೂ ಇಲ್ಲ. ದೇಶದ ಪರಮಾಣು ಘಟಕಗಳ ಮೇಲೆ ದಾಳಿ ಮಾಡುವ ಮೂಲಕ ಅಮೆರಿಕ ಎಲ್ಲ ಮಿತಿಗಳನ್ನು ಮೀರಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನು ಭೇಟಿಯಾಗಿ, ಈ ವಿದ್ಯಮಾನ ಕುರಿತು ಚರ್ಚಿಸುವೆ’ ಎಂದಿದ್ದಾರೆ.

ಇರಾನ್ ಅಧ್ಯಕ್ಷರ ಜೊತೆ ಮೋದಿ ಚರ್ಚೆ

ನವದೆಹಲಿ (ಪಿಟಿಐ): ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್‌ಕಿಯಾನ್ ಅವರ ಜೊತೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ದೂರವಾಣಿಯಲ್ಲಿ ಚರ್ಚಿಸಿದ್ದು, ಇರಾನ್–ಇಸ್ರೇಲ್ ಬಿಕ್ಕಟ್ಟು ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ.

ಮಾತುಕತೆ ಮತ್ತು ರಾಜತಾಂತ್ರಿಕ ಕ್ರಮಗಳ ಮೂಲಕ ಪ್ರಸ್ತುತ ಮೂಡಿರುವ ಬಿಕ್ಕಟ್ಟು ಶಮನಗೊಳಿಸಬೇಕು ಎಂದು ಮಾತುಕತೆ ವೇಳೆ ಸಲಹೆ ಮಾಡಿದ್ದಾರೆ.

ಮಾತುಕತೆ ಕುರಿತು ‘ಎಕ್ಸ್’ ಮೂಲಕ ಮಾಹಿತಿ ಹಂಚಿಕೊಂಡಿರುವ ಪ್ರಧಾನಿ, ಈಗಿನ ಬಿಕ್ಕಟ್ಟು ಕಳವಳಕಾರಿ. ಶಾಂತಿ ಸ್ಥಾಪನೆಗೆ ಮಾತುಕತೆ ಅಗತ್ಯ. ಶಾಂತಿ ಮತ್ತು ಸ್ಥಿರತೆಯನ್ನು ಮಾತುಕತೆಯಿಂದ ಮಾತ್ರವೇ ಸಾಧಿಸಲು ಸಾಧ್ಯ ಎಂದು ಸಲಹೆ ನೀಡಿರುವುದಾಗಿ ತಿಳಿಸಿದ್ದಾರೆ.

ಕೆಕೆಆರ್‌ಡಿಬಿ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ಹಣ

ಅನುದಾನ: ಬಿ.ಆರ್.ಪಾಟೀಲ ಆಕ್ಷೇಪ

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಆಳಂದ ಕ್ಷೇತ್ರದಲ್ಲಿ ಮೌಲಾನಾ ಆಜಾದ್ ಮಾದರಿ ವಸತಿ ಶಾಲೆ ನಿರ್ಮಾಣಕ್ಕೆ ಈಗಾಗಲೇ ಕೆಕೆಆರ್‌ಡಿಬಿ ಅನುದಾನ ಮಂಜೂರು ಮಾಡಿದೆ. ನಾನು ಬೇಡಿಕೆ ಇರಿಸದೆ ಇದ್ದರೂ ನನ್ನ ಗಮನಕ್ಕೂ ತರದೆ ಅಲ್ಪಸಂಖ್ಯಾತರ ಇಲಾಖೆಯು ಅದೇ ವಸತಿ ಶಾಲೆಗೆ ₹17 ಕೋಟಿ ಕೊಟ್ಟಿದೆ’ ಎಂದು ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರೂ ಆಗಿರುವ ಆಳಂದ ಶಾಸಕ ಬಿ.ಆರ್. ಪಾಟೀಲ ಹೇಳಿದರು.

ನಗರದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ಈಗಾಗಲೇ ಅನುದಾನ ಮಂಜೂರಾದ ವಸತಿ ಶಾಲೆಗೆ ಅಲ್ಪಸಂಖ್ಯಾತರ ಇಲಾಖೆ ಮತ್ತೆ ₹17 ಕೋಟಿ ಬಿಡುಗಡೆ ಮಾಡಿ ಭೂಮಿಪೂಜೆಯನ್ನೂ ನೆರವೇರಿಸಿದೆ. ಇದ್ಯಾವುದೂ ನನಗೆ ಗೊತ್ತೇ ಇಲ್ಲ’ ಎಂದು ಹೇಳಿದರು.

4

ಶಾಸಕರಿಗೆ ಮಾಹಿತಿ ಕೊಡದೆ ಆಳಂದದಲ್ಲಿ ವಸತಿ ಶಾಲೆಯ ಭೂಮಿಪೂಜೆ ನೆರವೇರಿಸಿದ್ದು, ಶಿಷ್ಟಾಚಾರದ ಉಲ್ಲಂಘನೆಯಾಗಿದೆ. ಈ ಬಗ್ಗೆ ವಿಧಾನಸಭಾ ಸ್ಪೀಕರ್‌ಗೆ ಹಕ್ಕುಚ್ಯುತಿ ಮಂಡಿಸಿ ಪತ್ರ ಸಹ ಸಲ್ಲಿಸಿದ್ದೇನೆ

ಬಿ.ಆರ್.ಪಾಟೀಲ, ಯೋಜನಾ ಆಯೋಗದ ಉಪಾಧ್ಯಕ್ಷ

25ರಂದು ಸಿಎಂ ಬುಲಾವ್

ರಾಜೀವ್ ಗಾಂಧಿ ವಸತಿ ನಿಗಮದಿಂದ ಮನೆಗಳ ಹಂಚಿಕೆಯಲ್ಲಿ ಹಣ ಪಡೆಯಲಾಗುತ್ತಿದೆ ಎಂಬ ಬಿ.ಆರ್. ಪಾಟೀಲ ಅವರ ಆರೋಪದ ಬೆನ್ನಲ್ಲೇ ವಿರೋಧ ಪಕ್ಷಗಳು ಸರ್ಕಾರದ ಮೇಲೆ ಮುಗಿಬಿದ್ದಿವೆ. ಈ ಬಗ್ಗೆ ವಿವರಣೆ ಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿ.ಆರ್. ಪಾಟೀಲ ಅವರಿಗೆ ಇದೇ 25ರಂದು ಸಂಜೆ ತಮ್ಮನ್ನು ಭೇಟಿ ಮಾಡುವಂತೆ ತಿಳಿಸಿದ್ದಾರೆ.

ಭಾನುವಾರ ಸಂಜೆ ಕಲಬುರಗಿಯಲ್ಲಿದ್ದ ಬಿ.ಆರ್. ಪಾಟೀಲ ಅವರಿಗೆ ದೂರವಾಣಿ ಕರೆ ಮಾಡಿದ ಸಿದ್ದರಾಮಯ್ಯ ಅವರು 25ರಂದು ಬೆಂಗಳೂರಿಗೆ ಬಂದು ತಮ್ಮನ್ನು ಕಾಣುವಂತೆ ತಿಳಿಸಿದರು. ಇದೇ 23ರಂದು ಮುಖ್ಯಮಂತ್ರಿ ದೆಹಲಿಗೆ ಹೊರಡುತ್ತಿದ್ದು, ಅಲ್ಲಿಂದ ವಾಪಸಾದ ಬಳಿಕ ಘಟನೆಯ ಕುರಿತು ಮಾಹಿತಿ ಪಡೆಯಲಿದ್ದಾರೆ.

ಈ ಪ್ರಕರಣದ ಕುರಿತು ಹೈಕಮಾಂಡ್‌ಗೂ ಮಾಹಿತಿ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ. ಅಲ್ಲದೇ, ಬಿ.ಆರ್. ಪಾಟೀಲ ತಾವು ಆಡಿದ ಮಾತುಗಳು ಸತ್ಯವಾಗಿದ್ದು, ತನಿಖೆ ನಡೆಸುವಂತೆಯೂ ಒತ್ತಾಯಿಸಿದ್ದಾರೆ.

ಮೆರವಣಿಗೆ

ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರ ಹಕ್ಕುಗಳಿಗಾಗಿ ನ್ಯೂಯಾರ್ಕ್‌ನಲ್ಲಿ ನಡೆದಿದ್ದ ಸ್ಟೋನ್‌ವಾಲ್ ದಂಗೆಯ ನೆನಪಲ್ಲಿ ‘ವಿಶ್ವ ಹೆಮ್ಮೆಯ ತಿಂಗಳು’ ಆಚರಣೆಯ ಪ್ರಯುಕ್ತ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಿಂದ ಪುರಭವನದವರೆಗೆ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಸದಸ್ಯರು ಭಾನುವಾರ ಮೆರವಣಿಗೆ ನಡೆಸಿದರು

ಒಳ ಮೀಸಲು ಸಮೀಕ್ಷೆ: 30ರವರೆಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ವೈಜ್ಞಾನಿಕವಾಗಿ ದತ್ತಾಂಶ ಸಂಗ್ರಹಿಸಲು ರಾಜ್ಯದಾದ್ಯಂತ ನಡೆಯುತ್ತಿರುವ ಪರಿಶಿಷ್ಟ ಜಾತಿಯ ಕುಟುಂಬಗಳ ಸಮೀಕ್ಷೆಯ ಅವಧಿಯನ್ನು ಇದೇ 30ರವರೆಗೆ ವಿಸ್ತರಿಸಲಾಗಿದೆ.

ಮೇ 5ರಿಂದ ಮನೆ ಮನೆ ಸಮೀಕ್ಷೆ ಆರಂಭಗೊಂಡಿತ್ತು. ಈವರೆಗೆ ರಾಜ್ಯದಾದ್ಯಂತ ಸಮೀಕ್ಷೆಯಲ್ಲಿ ಶೇ 91 ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇ 50ರಷ್ಟು ಪ್ರಗತಿ ಆಗಿದೆ. ಸಮೀಕ್ಷೆಯಲ್ಲಿ ಭಾಗವಹಿಸದೇ ಇರುವ ಕುಟುಂಬಗಳಿಗೆ ಅಂತಿಮ ಅವಕಾಶ ಕಲ್ಪಿಸುವ ಉದ್ದೇಶದಿಂದ ಸಮೀಕ್ಷೆಯ ಕೊನೆಯ ದಿನಾಂಕವನ್ನು ಇದೇ 23ರಿಂದ 30ರವರೆಗೆ ವಿಸ್ತರಿಸಲಾಗಿದೆ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ನೇತೃತ್ವದ ಏಕ ಸದಸ್ಯ ಆಯೋಗ ತಿಳಿಸಿದೆ.

ನಾಗರಿಕ ಸೇವಾ ಕೇಂದ್ರಗಳಾದ ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ಸಮೀಕ್ಷೆಗೆ ವ್ಯವಸ್ಥೆ ಮಾಡಲಾಗಿದೆ. ಬಿಬಿಎಂಪಿ ವ್ಯಾಪ್ತಿಯ ಎಲ್ಲ 198 ವಾರ್ಡ್‌ಗಳಲ್ಲೂ ಪ್ರತ್ಯೇಕ ಶಿಬಿರಗಳನ್ನು ತೆರೆಯಲಾಗಿದೆ. ಅಲ್ಲದೆ, ಆನ್‌ಲೈನ್ (https://schedulecastesurvey.karnataka.gov.in/selfdeclaration) ಲಿಂಕ್ ಮೂಲಕವೂ ಸ್ವಯಂಘೋಷಣೆ ಮಾಡಿಕೊಳ್ಳಬಹುದು ಎಂದು ಆಯೋಗ ತಿಳಿಸಿದೆ. ಈ ಕುರಿತಂತೆ ಎಲ್ಲ ಜಿಲ್ಲಾಧಿಕಾರಿಗಳು, ಬಿಬಿಎಂಪಿ ಮುಖ್ಯ ಆಯುಕ್ತರು ಮತ್ತು ವಲಯ ಆಯುಕ್ತರಿಗೆ ಆಯೋಗ ಪತ್ರ ಬರೆದಿದೆ.

ಭಯೋತ್ಪಾದಕರಿಗೆ ನೆರವು: ಇಬ್ಬರ ಬಂಧನ

ಶ್ರೀನಗರ: ದಕ್ಷಿಣ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ಭಯೋತ್ಪಾದಕರು ನಡೆಸಿದ್ದ ಭೀಕರ ದಾಳಿಗೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಶನಿವಾರ ಇಬ್ಬರು ಸ್ಥಳೀಯರನ್ನು ಬಂಧಿಸಿದೆ.

ಇನ್ನಷ್ಟು ವಿವರ 8

ಚಿನಕುರುಳಿ ಪ್ರಕಾಶ್ ಶೆಟ್ಟಿ

ಕದ್ರಾ ಹಿನ್ನೀರಿನಲ್ಲಿ ತೇಲುವ ಸೌರಫಲಕ: 321 ಮೆಗಾವಾಟ್ ಉತ್ಪಾದನೆ ಗುರಿ

ವಿದ್ಯುತ್ ಘಟಕಗಳ ಬಳಿ ಸೌರವಿದ್ಯುತ್

• ಗಾಣಧಾಳು ಶ್ರೀಕಂಠ

ಎಲ್ಲಿ	ಎಷ್ಟು ಸಾಮರ್ಥ್ಯ	ಯೋಜನಾ ವೆಚ್ಚ (₹ಕೋಟಿಗಳಲ್ಲಿ)
‘ಕದ್ರಾ’ ಹಿನ್ನೀರು	100 ಮೆಗಾವಾಟ್	₹650
ಬಿಡದಿ–ಡಬ್ಲ್ಯುಟಿಇ	20 ಮೆಗಾವಾಟ್	₹92.81
ಶಾಖೋತ್ಪನ್ನ ವಿದ್ಯುತ್ ಸ್ಥಾವರ	101 ಮೆಗಾವಾಟ್	₹414.95

ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳ ವಿವರ

ಘಟಕ	ಸಾಮರ್ಥ್ಯ	ವೆಚ್ಚ (₹ಕೋಟಿಗಳಲ್ಲಿ)
ಆರ್‌ಟಿಪಿಎಸ್	53.9 ಮೆ.ವಾ	₹228.08
ವೈಟಿಪಿಎಸ್	30.8 ಮೆ.ವಾ	₹125.31
ಬಿಟಿಪಿಎಸ್	15.4 ಮೆ.ವಾ	₹67.56

ಬೆಂಗಳೂರು: ಜಲ ವಿದ್ಯುತ್ ಉತ್ಪಾದಿಸುವ ಕದ್ರಾ ಜಲಾಶಯ, ತ್ಯಾಜ್ಯ ದಿಂದ ವಿದ್ಯುತ್ ಉತ್ಪಾದಿಸುವ (ಡಬ್ಲ್ಯುಟಿಇ) ಬಿಡದಿಯ ಘಟಕ ಹಾಗೂ ರಾಜ್ಯದ ಮೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ಇನ್ನು ಮುಂದೆ ಸೌರವಿದ್ಯುತ್ ಕೂಡ ಉತ್ಪಾದನೆಯಾಗಲಿದೆ.

ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ನಿಗಮ ನಿಯಮಿತದ ವ್ಯಾಪ್ತಿಯಲ್ಲಿರುವ ‘ತೆಹ್ರಿ’ (ಹೈಡ್ರೊ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್–ಟಿಎಚ್‌ಡಿಸಿಎಲ್) ಮೂಲಕ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಕೆಪಿಸಿಎಲ್), ತನ್ನ ವಿದ್ಯುತ್ ಉತ್ಪಾದನಾ ಘಟಕಗಳ ಆವರಣದಲ್ಲಿ ಸೌರ ಫಲಕಗಳನ್ನು ಅಳವಡಿಸಿ, ವಿದ್ಯುತ್ ಉತ್ಪಾದನೆಗೆ ಮುಂದಾಗಿದೆ.

ತೇಲುವ ಸೌರಫಲಕಗಳು: ಉತ್ತರ ಕನ್ನಡ ಜಿಲ್ಲೆಯ ಕದ್ರಾ ಜಲಾಶಯದ ಹಿನ್ನೀರಿನ 536 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ತೇಲುವ ಸೌರಫಲಕಗಳನ್ನು ಅಳವಡಿಸಿ 100 ಮೆಗಾವಾಟ್(ಮೆ.ವಾ) ವಿದ್ಯುತ್ ಉತ್ಪಾದಿಸಲು ಉದ್ದೇಶಿಸಲಾಗಿದೆ. ಇದು ಅಂದಾಜು ₹650 ಕೋಟಿ ವೆಚ್ಚದ ಯೋಜನೆ. ಚರ್ಚೆಯ ಹಂತದಲ್ಲಿದ್ದ ಈ ಯೋಜನೆ ಈಗ ಕಾರ್ಯರೂಪಕ್ಕೆ ಬರುತ್ತಿದೆ. ಸದ್ಯ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ‘ತೆಹ್ರಿ’ಗೆ ಸಲ್ಲಿಸಿದ್ದು ಟೆಂಡರ್ ಪ್ರಕ್ರಿಯೆಯ ಹಂತದಲ್ಲಿದೆ ಎಂದು ಕೆಪಿಸಿಎಲ್ ಅಧಿಕಾರಿ ಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಬಿಡದಿ ಡಬ್ಲ್ಯುಟಿಇ ಬಳಿ: ರಾಮನಗರ ಜಿಲ್ಲೆಯ ಬಿಡದಿಯಲ್ಲಿರುವ ಡಬ್ಲ್ಯುಟಿಇ ಘಟಕದ ಆವರಣದಲ್ಲಿ 20 ಮೆ.ವಾ ಸೌರವಿದ್ಯುತ್ ಉತ್ಪಾದನಾ ಘಟಕ ನಿರ್ಮಾಣಕ್ಕೆ ಸಿದ್ಧತೆ ನಡೆದಿದೆ. ಇದು ₹92.81 ಕೋಟಿ ವೆಚ್ಚದ ಯೋಜನೆ. ಈ ಯೋಜನೆಯ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ.

ಹಗಲು ವೇಳೆ ಸೌರ ವಿದ್ಯುತ್ ಉತ್ಪಾದಿಸಿ ಪೂರೈಸುವುದು, ರಾತ್ರಿ ಶಾಖೋತ್ಪನ್ನ ಮತ್ತು ಜಲ ವಿದ್ಯುತ್ತನ್ನು ಉತ್ಪಾದಿಸಿ ವಿದ್ಯುತ್ ಬೇಡಿಕೆಯನ್ನು ಸಮರ್ಥವಾಗಿ ನಿಭಾಯಿಸುವುದು ಯೋಜನೆಯ ಉದ್ದೇಶ

ಕೆ.ಜೆ.ಜಾರ್ಜ್, ಇಂಧನ ಸಚಿವರು

ಮೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ: ರಾಯಚೂರು (ಆರ್‌ಟಿಪಿಎಸ್), ಯರಮರಸ್ (ವೈಟಿಪಿಎಸ್) ಮತ್ತು ಬಳ್ಳಾರಿ (ಬಿಟಿಪಿಎಸ್) ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳ ಬಳಿ ಸೌರಫಲಕ ಅಳವಡಿಸಿ 101 ಮೆ.ವಾ ಸೌರವಿದ್ಯುತ್ ಉತ್ಪಾದಿಸಲು ಉದ್ದೇಶಿಸಲಾಗಿದೆ. ಇದು ₹414.95 ಕೋಟಿ ವೆಚ್ಚದ ಯೋಜನೆ.

ಈ ಯೋಜನೆಯ ಡಿಪಿಆರ್‌ಗೆ ಅನುಮೋದನೆ ದೊರೆತು, ಟೆಂಡರ್ ಪ್ರಕ್ರಿಯೆಯೂ ಪೂರ್ಣಗೊಂಡಿತ್ತು. ಆದರೆ, ಟೆಂಡರ್‌ನಲ್ಲಿ ಕಂಪನಿಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ನಿಗದಿಪಡಿಸಿರುವ ಯೂನಿಟ್ ದರಕ್ಕಿಂತ ಹೆಚ್ಚು ಬಿಡ್ ಮಾಡಿದ ಕಾರಣ, ಮರು ಟೆಂಡರ್ ಕರೆಯಲಾಗಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ. ಈ ಘಟಕಗಳಲ್ಲಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ಗ್ರಾಹಕರಿಗೆ ಪೂರೈಸಲು ಕೆಪಿಟಿಸಿಎಲ್ ಅನುಮೋದನೆ ನೀಡಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರತಿ ಗ್ರಂಥಾಲಯಕ್ಕೆ ₹2 ಲಕ್ಷ ಮೊತ್ತದ ಪುಸ್ತಕಗಳು

6,599 ‘ಗ್ರಾಮ ಗ್ರಂಥಾಲಯ’ಕ್ಕೆ ಸಿದ್ಧತೆ

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಕೇಂದ್ರ ಸರ್ಕಾರದ ನೆರವಿನೊಂದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ರಾಜ್ಯದಲ್ಲಿ ಹೊಸದಾಗಿ 6,599 ‘ಗ್ರಾಮ ಗ್ರಂಥಾಲಯ’ಗಳನ್ನು ತೆರೆಯಲು ಮುಂದಾಗಿದೆ.

ಕೇಂದ್ರ ಸರ್ಕಾರವು ರಾಜ್ಯಗಳಿಗೆ ಬಂಡವಾಳ ಹೂಡಿಕೆಗಾಗಿ ನೀಡುವ ಹಣಕಾಸು ನೆರವು ಯೋಜನೆಯ (ಎಸ್.ಎ.ಎಸ್.ಸಿ.ಐ) ‘ಮಕ್ಕಳು ಮತ್ತು ಹದಿಹರೆಯದವರಿಗಾಗಿ ಗ್ರಂಥಾಲಯಗಳು ಮತ್ತು ಡಿಜಿಟಲ್ ಮೂಲಸೌಕರ್ಯ’ ಕಾರ್ಯಕ್ರಮದಡಿ 31 ಜಿಲ್ಲೆಗಳಲ್ಲಿ ‘ಗ್ರಾಮ ಗ್ರಂಥಾಲಯ’ಗಳನ್ನು ಪ್ರಾರಂಭಿಸಲು ಸಿದ್ಧತೆ ಕೈಗೊಳ್ಳಲಾಗಿದೆ.

ಪ್ರತಿ ಗ್ರಂಥಾಲಯಕ್ಕೆ ತಲಾ ₹2 ಲಕ್ಷ ಮೊತ್ತದ ಪುಸ್ತಕಗಳನ್ನು ‘ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ’ದಿಂದ ಖರೀದಿಸಲಾಗಿದ್ದು, ಆಯಾ ಜಿಲ್ಲಾ ಪಂಚಾಯಿತಿಗಳಿಗೆ ಪುಸ್ತಕಗಳು ಸರಬರಾಜಾಗಿವೆ. 2,040 ಕನ್ನಡ, 627 ಇಂಗ್ಲಿಷ್ ಹಾಗೂ 20 ಕಲಿಕಾ ವಿಜ್ಞಾನ ಪುಸ್ತಕಗಳು ಸೇರಿ ಒಟ್ಟು 2,687 ಕೃತಿಗಳು ಪ್ರತಿ ಗ್ರಂಥಾಲಯಕ್ಕೆ ಶೀಘ್ರದಲ್ಲೇ ಹಂಚಿಕೆಯಾಗಲಿವೆ.



ಹೊಸ ಗ್ರಾಮ ಗ್ರಂಥಾಲಯಗಳಿಗೆ ಹಂಚಿಕೆಯಾಗಲಿರುವ ಪುಸ್ತಕಗಳು

‘ಮಕ್ಕಳ ಕತೆ, ವಿಜ್ಞಾನ ಮತ್ತು ವೈಜ್ಞಾನಿಕ ಚಟುವಟಿಕೆ, ಜೀವನ ಚರಿತ್ರೆ, ಮಕ್ಕಳು ಮತ್ತು ಸಮುದಾಯಕ್ಕಾಗಿ ಚಟುವಟಿಕೆಗಳು ಸೇರಿದಂತೆ ವೈವಿಧ್ಯಮಯ ವಿಷಯಗಳ ಪುಸ್ತಕಗಳು ಗ್ರಂಥಾಲಯಗಳಿಗೆ ಸಿಗಲಿವೆ. ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸುವುದು ಮತ್ತು ಡಿಜಿಟಲ್ ಕೌಶಲ ಬೆಳೆಸುವ ಗುರಿ ಹಾಕಿಕೊಳ್ಳಲಾಗಿದೆ. ಈ ಕಾರ್ಯಕ್ರಮವು ಗ್ರಂಥಾಲಯಗಳಲ್ಲಿ ಮಕ್ಕಳ ಸ್ನೇಹಿ ವಾತಾವರಣವನ್ನು ಸೃಷ್ಟಿಸುತ್ತದೆ ಮತ್ತು ಡಿಜಿಟಲ್ ಸಂಪನ್ಮೂಲಗಳನ್ನು ಒದಗಿಸುತ್ತದೆ’ ಎನ್ನುತ್ತಾರೆ ಜಿಲ್ಲಾ ಪಂಚಾಯಿತಿ ಅಧಿಕಾರಿಗಳು.

ಜಿಲ್ಲಾವಾರು ಹೊಸ ಗ್ರಾಮ ಗ್ರಂಥಾಲಯಗಳ ವಿವರ

ಜಿಲ್ಲೆ	ಗ್ರಾಮ ಗ್ರಂಥಾಲಯ
ಬಾಗಲಕೋಟೆ	180
ಬಳ್ಳಾರಿ	89
ಬೆಂಗಳೂರು (ಗ್ರಾ)	165
ಬೆಂಗಳೂರು ನಗರ	120
ಚಾಮರಾಜನಗರ	125
ಮಂಡ್ಯ	275
ದಕ್ಷಿಣ ಕನ್ನಡ	150
ದಾವಣಗೆರೆ	176
ಗದಗ	92
ಹಾವೇರಿ	191
ಕೊಪ್ಪಳ	155
ರಾಯಚೂರು	230
ವಿಜಯಪುರ	280
ವಿಜಯನಗರ	150
ಧಾರವಾಡ	110
ಚಿಕ್ಕಮಗಳೂರು	218
ತುಮಕೂರು	501
ಬೆಳಗಾವಿ	477
ಹಾಸನ	407
ಕೋಲಾರ	295
ಕೊಡಗು	60
ಕಲಬುರ್ಗಿ	291
ಮೈಸೂರು	270
ರಾಮನಗರ	193
ಬೀದರ್	205
ಶಿವಮೊಗ್ಗ	258
ಉತ್ತರ ಕನ್ನಡ	285
ಯಾದಗಿರಿ	140
ಚಿಕ್ಕಬಳ್ಳಾಪುರ	200
ಚಿತ್ರದುರ್ಗ	216
ಉಡುಪಿ	95
ಒಟ್ಟು	6,599

ಕಂಪ್ಯೂಟರ್, ಪೀಠೋಪಕರಣ: ನೂತನ ಗ್ರಾಮ ಗ್ರಂಥಾಲಯಗಳಿಗೆ ₹1 ಲಕ್ಷ ವೆಚ್ಚದಲ್ಲಿ ಕಂಪ್ಯೂಟರ್ ಮತ್ತು ಯುಪಿಎಸ್ ಹಾಗೂ ₹1 ಲಕ್ಷ ವೆಚ್ಚದಲ್ಲಿ ಪಿಠೋಪಕರಣಗಳ ಸೌಲಭ್ಯಗಳು ದೊರಕಲಿವೆ. ಪೀಠೋಪಕರಣಗಳನ್ನು ಖರೀದಿಸಲು ಪಂಚಾಯತ್ ರಾಜ್ ಆಯುಕ್ತಾಲಯದಿಂದ ಜಿಲ್ಲಾ ಪಂಚಾಯಿತಿಗಳಿಗೆ ಅನುದಾನ ಬಿಡುಗಡೆ ಮಾಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆದೇಶಿಸಿದೆ.

ಕಟ್ಟಡಗಳ ನವೀಕರಣ: ‘ಹೊಸ ಗ್ರಂಥಾಲಯಗಳಿಗೆ ಗುರುತಿಸಲಾದ ಕಟ್ಟಡಗಳಿಗೆ ಅಗತ್ಯವಿರುವ ದುರಸ್ತಿ, ನವೀಕರಣ, ವಿದ್ಯುತ್ ಮತ್ತು ಇಂಟರ್‌ನೆಟ್ ಸಂಪರ್ಕ, ಕುಡಿಯುವ ನೀರು, ಫ್ಯಾನ್ ಸೇರಿ ಮೂಲಸೌಲಭ್ಯಗಳನ್ನು ಗ್ರಾಮ ಪಂಚಾಯಿತಿ ಸ್ವಂತ ಸಂಪನ್ಮೂಲದಿಂದ ಅಥವಾ ಲಭ್ಯವಿರುವ ಇತರೆ ಅನುದಾನಗಳನ್ನು ಬಳಸಿ ಕಲ್ಪಿಸಬೇಕು’ ಎಂದು ಪಂಚಾಯತ್ ರಾಜ್ ಆಯುಕ್ತಾಲಯದ ಆಯುಕ್ತರು ಆದೇಶಿಸಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ 257 ಕಟ್ಟಡಗಳನ್ನು ಗುರುತಿಸಿದ್ದೇವೆ. ಪುಸ್ತಕ ಮತ್ತು ಪೀಠೋಪಕರಣಗಳನ್ನು ಶೀಘ್ರದಲ್ಲೇ ಗ್ರಾಮ ಗ್ರಂಥಾಲಯಗಳಿಗೆ ಹಂಚಿಕೆ ಮಾಡುತ್ತೇವೆ

ಲಕ್ಷ್ಮಿ ಪಿ., ಉಪ ಕಾರ್ಯದರ್ಶಿ (ಅಭಿವೃದ್ಧಿ), ಮಂಡ್ಯ ಜಿಪಂ

ಸ್ಥಾಪನೆ : 2000

RBI Licence No. UBD/KAN/0010P Dated 14-06-2000

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

CHARTERED SAHAKARI BANK NIYAMITHA

No.1, 1st Main, 1st Block, Koramangala, Bengaluru - 560034 Ph: 080 2552 6266/ 2552 6288/ 2552 6299 Website: www.csbank.in

Monday to Saturday 9.30 am to 5.00 pm 2nd, 4th Saturday and Sunday Holiday

2000-2025 ಬೆಳ್ಳಿ ಹಬ್ಬದ ವರ್ಷ

2024 - 25ನೇ ಸಾಲಿನ ಲಾಭ - ನಷ್ಟದ ತಃಖ್ತೆ

2023-24 ರೂ.	ವೆಚ್ಚ	2024-25 ರೂ.	2023-24 ರೂ.	ಆದಾಯ	2024-25 ರೂ.
13,73,94,738.50	ಠೇವಣಿ ಮೇಲಿನ ಬಡ್ಡಿ ಪಾವತಿ	14,89,53,501.89	12,85,24,968.00	ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ	12,51,23,854.00
2,49,04,767.00	ಸಿಬ್ಬಂದಿ ಸಂಬಳ, ಪಿ. ಎಫ್ ಮತ್ತು ಭತ್ಯೆಗಳು	2,33,96,380.00	16,78,01,483.04	ಹೂಡಿಕೆಗಳ ಮೇಲಿನ ಬಡ್ಡಿ	19,07,92,366.56
57,45,785.81	ಬಾಡಿಗೆ, ತೆರಿಗೆ, ವಿಮೆ , ವಿದ್ಯುತ್ ಇತ್ಯಾದಿ	61,62,547.40	11,96,478.21	ಕಮೀಷನ್, ವಿನಿಮಯ ಇತ್ಯಾದಿ	12,27,485.64
29,000.00	ಕಾನೂನು ಮತ್ತು ವಸೂಲಾತಿ ವೆಚ್ಚ	-	21,66,159.50	ಇತರೆ ಆದಾಯ	32,19,606.00
4,05,945.75	ಅಂಚೆ, ತಂತಿ ಮತ್ತು ದೂರವಾಣಿ ವೆಚ್ಚ	3,53,486.00			
13,80,981.00	ಲೆಕ್ಕಪರಿಶೋಧಕರ ಶುಲ್ಕ	12,91,385.00			
14,83,017.00	ಸವಕಳಿ ಹಾಗೂ ರಿಪೇರಿ ವೆಚ್ಚ	14,14,153.00			
6,42,085.00	ಮುದ್ರಣ , ಸ್ಟೇಷನರಿ ಮತ್ತು ಜಾಹೀರಾತು	6,99,541.00			
110,46,993.69	ಇತರೆ ಖರ್ಚುಗಳು	1,32,02,789.91			
2,91,51,323.00	ಆದಾಯ ತೆರಿಗೆ ಪಾವತಿ	3,12,50,434.00			
--	ಮುಂದೂಡಲ್ಪಟ್ಟ (ಡೆಫರ್ಡ್) ತೆರಿಗೆ	1,56,954.00			
8,75,04,452.00	ನಿವ್ವಳ ಲಾಭ	9,34,82,140.00			
29,96,89,088.75	ಜುಮ್ಲಾ	32,03,63,312.20	29,96,89,088.75	ಜುಮ್ಲಾ	32,03,63,312.20

ದಿನಾಂಕ : 31-3-2025 ರಲ್ಲಿದ್ದಂತೆ ಆಸ್ತಿ - ಜವಾಬ್ದಾರಿ ತಃಖ್ತೆ

31/03/2024 ರೂ.	ಜವಾಬ್ದಾರಿಗಳು	31/03/2025 ರೂ.	31/03/2024 ರೂ.	ಆಸ್ತಿಗಳು	31/03/2025 ರೂ.
14,19,79,200.00	ಪಾವತಿಯಾದ ಷೇರು ಬಂಡವಾಳ	16,18,92,200.00	88,86,503.00	ನಗದು ಶಿಲ್ಕು	1,20,82,936.00
83,50,49,777.62	ಕಾಯ್ದಿಟ್ಟ ಹಾಗೂ ಇತರೆ ನಿಧಿಗಳು	89,38,63,621.62	26,42,88,830.62	ಬ್ಯಾಂಕುಗಳಲ್ಲಿ ಶಿಲ್ಕು	26,31,48,528.86
305,95,62,487.75	ಠೇವಣಿಗಳು ಮತ್ತು ಇತರೆ ಖಾತೆಗಳು	302,39,28,483.58	269,33,17,554.00	ಹೂಡಿಕೆಗಳು	256,95,35,221.00
2,05,59,727.00	ಬರಬೇಕಾಗಿರುವ ಬಿಲ್ಲುಗಳ ಮೊತ್ತ	--	128,93,42,493.63	ಸಾಲ ಮತ್ತು ಮುಂಗಡಗಳು	143,03,62,396.22
11,38,220.00	ಸುಸ್ತಿ ಬಡ್ಡಿ ಕಾಯ್ದಿರಿಸಿದ್ದು	3,47,224.00	11,38,220.00	ಸುಸ್ತಿ ಸಾಲದ ಬಡ್ಡಿ ಬರಬೇಕಾದದ್ದು	3,47,224.00
49,57,725.00	ಠೇವಣಿಗಳ ಮೇಲೆ ಕೊಡಬೇಕಾದ ಬಡ್ಡಿಗಳು	44,69,124.00	3,34,58,045.00	ಹೂಡಿಕೆಗಳ ಬಡ್ಡಿ ಬರಬೇಕಾದದ್ದು	2,68,46,595.00
21,81,76,494.67	ಇತರೆ ಜವಾಬ್ದಾರಿಗಳು	18,69,10,409.67	2,05,59,727.00	ಬರಬೇಕಾದ ಬಿಲ್ಲುಗಳ ಮೊತ್ತ	--
8,75,04,452.00	ನಿವ್ವಳ ಲಾಭ	9,34,82,140.00	4,16,94,220.00	ಸ್ಥಿರಾಸ್ತಿಗಳು- ನಿವೇಶನ	4,60,35,098.00
61,88,583.00	ಅನ್‌ಕ್ಲೈಮಡ್ ಡಿ.ಇ.ಎ.ಎಫ್‌ನಲ್ಲಿ ಇರಿಸಿದ್ದು	1,72,50,333.00	55,67,822.00	ಚರಾಸ್ತಿಗಳು	52,77,015.00
10,000.00	ಬ್ಯಾಂಕ್ ಗ್ಯಾರಂಟಿ (ಕಾಂಟ್ರಾ)	10,000.00	1,06,74,668.79	ಇತರೆ ಆಸ್ತಿಗಳು	1,12,58,188.79
			61,88,583.00	ಅನ್‌ಕ್ಲೈಮಡ್ ಡಿಇಎಫ್‌ನಲ್ಲಿ ಇರಿಸಿದ್ದು	1,72,50,333.00
			10,000.00	ಬ್ಯಾಂಕ್ ಗ್ಯಾರಂಟಿ (ಕಾಂಟ್ರಾ)	10,000.00
437,51,26,667.04	ಜುಮ್ಲಾ	438,21,53,535.87	437,51,26,667.04	ಜುಮ್ಲಾ	438,21,53,535.87

Disclosure in financial statements – 'Notes to Accounts'

1. Regulatory Capital: *a) Composition of Regulatory Capital* (Amount in ₹ crore)

Sr.No.	Particulars	31.03.2025	31.03.2024
i)	Paid up share capital and reserves (net of deductions, if any)	16.19	14.20
ii)	Other Tier 1 capital	76.51	67.96
iii)	Tier 1 capital (i + ii)	92.70	82.16
iv)	Tier 2 capital	11.05	8.52
v)	Total capital (Tier 1+Tier 2)	103.75	90.68
vi)	Total Risk Weighted Assets (RWAs)	185.17	161.15
vii)	Paid-up share capital and reserves as percentage of RWAs	8.74%	8.81%
viii)	Tier 1 Ratio (Tier 1 capital as a percentage of RWAs)	50.06%	50.98%
ix)	Tier 2 Ratio (Tier 2 capital as a percentage of RWAs)	5.97%	5.29%
x)	Capital to Risk Weighted Assets Ratio (CRAR) (Total Capital as a percentage of RWAs)	56.03%	56.27%
	Amount of Tier 2 capital raised during the year of which: a) Perpetual Cumulative Preference Shares, b) Redeemable Non-Cumulative Preference Share. c) …….		

b) Draw down from Reserves

Reserves	Amount in Lakhs	Reason for with drawl
Member Welfare Fund	4.68	Scholarship for Member Children
Charity Fund	3.45	Charity fund given to Various Institution
Death Relief Fund	3.25	Death relief fund given to diseased member family
Staff Welfare Fund	4.90	Staff Health Insurance & Gift during family function

2. Asset Liability Management : a) Maturity pattern of certain items of assets and liabilities (Amount in ₹ crore)

	1 Day	2 to 7 days	8 to 14 days	15 to 30 days	31 days to 2 months	Over 2 months to 3 months	Over 3 months to 6 months	Over6 months and up to 1 year	Over 1 year to 3 years	Over 3 years to 5 years	Over 5 years	Total
Deposits	17.49	0.43	0.72	4.46	13.73	14.13	28.49	54.39	167.46	0.91	0.18	**302.39**
Advances	0.01	0.04	0.25	0.01	0.04	0.25	0.54	24.10	4.02	12.07	101.72	**143.04**
Investments	0.00	33.99	0.00	12.95	20.89	24.03	8.90	2.00	78.07	28.38	47.74	**256.95**
Borrowings	-	-	-	-	-	-	-	-	-	-	-	-

3. Investments : a) Composition of Investment Portfolio (Amount in ₹ crore)

Investment	31.03.2025			31.03.2024		
	Govt Sec	Other	Total	Govt Sec	Other	Total
Held to Maturity	68.04	-	68.04	76.55	-	76.55
Available for Sale	125.61	29.00	154.61	133.96	20.00	153.96
Total Investments	193.65	29.00	222.65	210.51	20.00	230.51
Less: Provision for depreciation and NPI	-			-		
Net Investments	**193.65**	**29.00**	**222.65**	**210.51**	**20.00**	**230.51**

b) Movement of Provisions for Depreciation and Investment Fluctuation Reserve (Amount in ₹ crore)

Particulars	31.03.2025	31.03.2024
i) Movement of provisions held towards depreciation on investments		
a) Opening balance	0.04	0.04
b) Add: Provisions made during the year	-	-
c) Less: Write off/ write back of excess provision during the year	-	-
d) Closing balance	0.04	0.04
ii) Movement of Investment Fluctuation Reserve		
a) Opening balance	6.50	4.40
b) Add: Amount transferred during the year	2.23	2.10
c) Less: Drawdown	-	-
d) Closing balance	8.73	6.50
iii) Closing balance in IFR as a percentage of closing balance of investments in AFS and HFT/Current category	5.65%	4.22%

c) Sale and transfers to/from HTM category: The one-time transfer of securities to/from HTM category with the approval of Board of Directors undertaken by banks at the beginning of the accounting year. **–NIL–**

c) **Non- SLR Investment portfolio :** i) Non-Performing Non- SLR Investment: **NIL**

ii) Issuer Composition of Non-SLR Investment:(Amount in ₹ crore)

Sr. No.	Non- SLR Investment	31.03.2025	31.03.2024
a)	PSUs		
b)	FIs	29.00	20.00
c)	Banks		
d)	Private Corporates	-	-
	Total	**29.00**	**20.00**

3. Asset Quality: a) Classification of advances and provisions held (Amount in ₹ crore)

	Total Standard Advances	Non-Performing				Total
		Sub-standard	Doubtful	Loss	Total NPA	
Gross Standard Advances and NPAs						
Opening Balance	126.57	0.59	1.77	-	2.36	128.93
Add: Additions during the year	53.10	1.99	-	-	1.99	55.09
Less: Reductions during the year*	39.27	1.28	0.43	-	1.71	40.98
Closing balance	**140.40**	**1.30**	**1.34**	**-**	**2.64**	**143.04**
Recoveries (excluding recoveries from upgraded accounts)	39.27	1.28	0.43	-	1.71	40.98
Provisions (excluding Floating Provisions)						
Opening balance of provisions held	1.82	0.06	12.67	-	12.73	14.55
Add: Fresh provisions made during the year	-	0.07	0.63	-	0.70	0.70
Less: Excess provision reversed/ Write-off loans	-	-	-	-	-	-
Closing balance of provisions held	1.82	0.13	13.30	-	13.43	15.25
Net NPAs						
Opening Balance	-	-	-	-	-	0.00
Add: Fresh additions during the year	-	- -	-		-	-
Less: Reductions during the year	-	- -	-		-	-
Closing Balance	-	-	-	-	-	0.00

Ratios (in per cent)	31.03.2025	31.03.2024
Gross NPA to Gross Advances	1.85%	1.83%
Net NPA to Net Advances	0%	0%
Provision coverage ratio	508.67%	538.40%

b) Sector-wise Advances and Gross NPAs (Amount in ₹ crore)

Sr. No	Sector*	31.03.2025			31.03.2024		
		O/s Total Advances	Gross NPAs	% of Gross NPAs to Total Advances	O/s Total Advances	Gross NPAs	% of Gross NPAs to Total Advances
i)	**Priority Sector**						
a)	Agriculture and allied activities	27.37	-	0.00	18.99	-	0.00
b)	Advances to industries sector eligible as priority sector lending	46.85	1.55	1.09	52.68	1.76	1.36
c)	Services	9.17	-	0.00	4.05	-	0.00
d)	Personal loans	0.22	-	0.00	0.16	0.01	0.01
	Subtotal (i)	**83.61**	**1.55**	**1.09**	**75.88**	**1.77**	**1.37**
ii)	**Non-priority Sector**						
a)	Agriculture and allied activities	-	-	-	-	-	-
b)	Industry	-		- -	-		- -
c)	Services	59.43	1.09	0.76	53.05	0.59	0.46
d)	Personal loans	-		- -	-		- -
	Sub-total (ii)	**59.43**	**1.09**	**0.76**	53.05	0.59	0.46
	Total (I + ii)	**143.04**	**2.64**	**1.85**	**128.93**	**2.36**	**1.83**

i) Details of accounts ***subjected to restructuring*** (Amount in ₹ crore)

Standard	31.03.2025		31.03.2024	
	No. of Borrowers	Gross Amount	No. of Borrowers	Gross Amount
Micro, Small and Medium Enterprises (MSME)	5	1.85	5	2.18
Retail (excluding agriculture and MSME)	5	2.00	5	2.08
Total	**10**	**3.85**	**10**	**4.26**
Provision Held		**0.47**		**0.47**

C. Divergence in asset classification and provisioning (Amount in ₹ crore)

Sr.	Particulars	Amount
1.	Gross NPAs as on March 31,2024*as reported by the bank	2.36
2.	Gross NPAs as on March 31, 2024 as assessed by Reserve Bank of India	2.36
3.	Divergence in Gross NPAs (2-1)	Nil
4.	Net NPAs as on March 31, 2024 as reported by the bank	Zero
5.	Net NPAs as on March 31, 2024 as assessed by Reserve Bank of India	Zero
6.	Divergence in Net NPAs (5-4)	Nil
7.	Provisions for NPAs as on March 31, 2024 as reported by the bank	12.73
8.	Provisions for NPAs as on March 31, 2024 as assessed by Reserve of India	12.73
9.	Divergence in provisioning (8-7)	Nil
10	Reported Profit before Provisions and Contingencies for the year ended March31, 2024	11.67
11.	Reported Net Profit after Tax (PAT) for the year ended March 31,2024	8.75
12.	Adjusted (notional) Net Profit after Tax (PAT) for the year ended March 31, 2024 after considering the divergence in provisioning	8.75

d) Fraud Accounts : Banks shall make disclose details on the number and amount of frauds as well as the provisioning thereon **–NIL-**

i) Disclosure under Resolution Framework for COVID-19 related Stress: Format for disclosures to be made starting March 31, 2025. (Amount in ₹ crore)

Type of borrower	Exposure to accounts classified as Standard consequent to implementation of resolution plan– Position as at the end of the previous year (A)	of (A), aggregate debt that slipped into NPA during the year	Of (A) amount paid by the borrowers during the year	Exposure to accounts classified as standard consequent to implementation of resolution plan- Position as at the end of this year
Personal Loans	4.26	-	0.41	3.85
Corporate persons*	-	-	-	-
Of which MSMEs	-	-	-	-
Others	-	-	-	-
Total	**4.26**	**-**	**0.41**	**3.85**

4. Exposure to real estate sector (Amount in ₹ crore)

Category	31.03.2025	31.03.2024
a) Residential Mortgages– Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits.	16.93	17.59
b) Commercial Real Estate–Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development and construction, etc.).Exposure would also include non-fund based(NFB) limits;	10.72	19.55
Exposure to Real Estate Sector	**10.72**	**37.14**
Total unsecured advances of the bank	0.23	0.11

5. Concentration of deposits, advances and NPAs: ***a)*** **Concentration of deposits** *(Amount in ₹ crore)*

Particulars	31.03.2025	31.03.2024
Total deposits of the twenty largest depositors	66.53	61.80
Percentage of deposits of twenty largest depositors to total deposits of the bank	22.00%	20.20%

Concentration of advances (Amount in ₹ crore)

Particulars	31.03.2025	31.03.2024
Total advances to the twenty largest borrowers	69.33	62.95
Percentage of advances to twenty largest borrowers to total advances of the bank	48.47%	48.82%

b) **Concentration of NPAs** (Amount in ₹ crore)

Particulars	31.03.2025	31.03.2024
Total Exposure to the top twenty NPA accounts	2.64	2.36
Percentage of exposures to the twenty largest NPA exposure to total Gross NPAs.	100%	100%

6.Transfers to Depositor Education and Awareness Fund (DEA Fund) *(Amount in ₹ Lakhs)*

Sr. No.	Particulars	31.03.2025	31.03.2024
i)	Opening balance of amounts transferred to DEA Fund	61.89	53.31
ii)	Add: Amounts transferred to DEA Fund during the year	110.68	8.58
iii)	Less: Amounts reimbursed by DEA Fund towards claims	0.07	-
iv)	Closing balance of amounts transferred to DEA Fund	172.50	61.89

7. Disclosure of complaints received by Bank from Customers (OBOs) : -NIL-

8. Disclosure of penalties imposed by the Reserve Bank of India: -NIL-

9. Other Disclosure: ***a) Business ratios:***

Sr.No.	Particular	31.03.2025	31.03.2024
i)	Interest Income as a percentage to Working Funds	7.50	7.64
ii)	Non-interest income as a percentage to Working Funds	0.11	0.09
iii)	Cost of Deposits	5.14	5.15
iv)	Net Interest Margin	4.24	4.38
v)	Operating Profit as a percentage to Working Funds	2.14	2.01
vi)	Return on Assets	2.22	2.26
vii)	Business (deposits plus advances) per employee	29.70	27.18
viii)	Profit per employee	0.62	0.55

b) Bank assurance business : The details of fees / brokerage earned in respect of insurance broking, agency and bank assurance business undertaken by them shall be disclosed for both the current year and previous year. **-NIL-**

c) Disclosures regarding Priority Sector Lending Certificates (PSLCs): *The amount of PSLCs (category-wise) sold and purchased during the year shall be disclosed.* *(Amount in ₹crore)*

PSLCs Purchased	31.03.2025	31.03.2024
PSLC- General	35.00	20.00
PSLC- Micro Enterprises	5.00	4.00
PSLCs Sold	Nil	Nil

d) Provision and contingencies *(Amount in ₹ Lakhs)*

Sr.No.	Provision debited to Profit and Loss Account	31.03.2025	31.03.2024
i)	Provisions for NPI	Nil	Nil
ii)	Provision towards NPA	Nil	Nil
iii)	Provision made towards Income Tax	312.50	291.51
iv)	Other Provisions and Contingencies (with details)		
a)	Deferred Tax	1.57	(-)2.72

e) **Payment of DICGC Insurance Premium** *(Amount in ₹ Lakhs)*

Sr. No.	Particulars	31.03.2025	31.03.2024
i)	Payment of DICGC Insurance Premium	39.98	34.56
ii)	Arrears in payment of DICGC premium	Nil	Nil

f) ***Disclosure of facilities granted to directors and their relatives: NIL***

UCBs shall disclose any fund or non-fund (guarantees, letters of credit, etc.) facilities extended to directors, their relatives, companies or firms in which they are interested.

(ಶಿವಣ್ಣ ಕೆ.ಬಿ.)	(ವೆಂಕಟೇಶ್ ಅಯ್ಯರ್ ಪಿ.ವಿ.)	(ನಾರಾಯಣ್ ಎಸ್. ಭಟ್)	(ಎಂ. ಮುನಿರೆಡ್ಡಿ)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು	ನಿರ್ದೇಶಕರು	ಉಪಾಧ್ಯಕ್ಷರು	ಅಧ್ಯಕ್ಷರು

-: ದೃಢೀಕರಣ :-

ನಾವು ಮೇಲ್ಕಂಡ ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ, ಬೆಂಗಳೂರು-34 ಇದರ 2024-25ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಮಾಡಿರುತ್ತೇವೆ. ನಮ್ಮ ಅತ್ಯುತ್ತಮ ಜ್ಞಾನ ಹಾಗೂ ನಂಬಿಕೆಯಂತೆ ಮತ್ತು ಲೆಕ್ಕಪರಿಶೋಧನೆಗೆ ದೊರೆತ ಮಾಹಿತಿ ಹಾಗೂ ವಿವರಣೆಗಳನ್ನು ಪರಿಶೀಲಿಸಿರುತ್ತೇವೆ ಹಾಗೂ ಅವು ತೃಪ್ತಿಕರವೆಂದು ಕಂಡುಬಂದಿರುತ್ತವೆ. ನಮ್ಮ ಅಭಿಪ್ರಾಯದಂತೆ ದೊರೆತ ಮಾಹಿತಿ ವಿವರಣೆಗಳಂತೆ ಹಾಗೂ ಲಗತ್ತಿಸಿರುವ ನಮ್ಮ ಲೆಕ್ಕ ಪರಿಶೋಧನಾ ವರದಿಯಲ್ಲಿ ವಿವರಿಸಿರುವ ವಿವರಗಳಿಗೊಳಪಟ್ಟ ದಿನಾಂಕ: 31-03-2025ಕ್ಕೆ ಇದ್ದಂತೆ ಬ್ಯಾಂಕಿನ ಆರ್ಥಿಕ ಪರಿಸ್ಥಿತಿಯ ನೈಜ ಹಾಗೂ ಸಮಂಜಸ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆಂದು ಅಭಿಪ್ರಾಯಪಡುತ್ತೇವೆ.

ಮೆ॥ ಸಿ.ಎಸ್.ಎಂ.ಆರ್. ಅಂಡ್ ಅಸೋಸಿಯೇಟ್ಸ್
ಸನ್ನದು ಲೆಕ್ಕ ಪರಿಶೋಧಕರು, ಸಂಸ್ಥೆಯ ನೋಂದಣಿ ಸಂಖ್ಯೆ 010106S
ಶ್ರೀ ಸಿ. ಶಿವಕುಮಾರ
ಪಾಲುದಾರರು, ಸದಸ್ಯತ್ವ ಸಂಖ್ಯೆ 219076

ಸೂರ್ಯೋದಯ: 5:54 ಸೂರ್ಯಾಸ್ತ : 6:48 | ಚಂದ್ರೋದಯ: ರಾ. 2:33 ಚಂದ್ರಾಸ್ತ: ಮ. 3:41 | ಭಾನುವಾರದ ಉಷ್ಣಾಂಶ : ಗರಿಷ್ಠ 30° ಕನಿಷ್ಠ 20°

ಸೋಮವಾರದ ಉಷ್ಣಾಂಶ 30° ಗರಿಷ್ಠ | 20° ಕನಿಷ್ಠ | ಮಂಗಳವಾರ 30° - 20° | ಬುಧವಾರ 30° - 20° | ಗುರುವಾರ 30° - 20°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ

ಕಾಮಗಾರಿ ವಿಳಂಬ; ಸಮಸ್ಯೆಗಳ ಬಿಂಬ

ಮೈಸೂರು ಬ್ಯಾಂಕ್ ಸರ್ಕಲ್–ಕೆ.ಆರ್ ಸರ್ಕಲ್ ನಡುವಿನ ರಸ್ತೆಯ ದುಃಸ್ಥಿತಿ

• ಗಾಣಧಾಳು ಶ್ರೀಕಂಠ

ಮುಖ್ಯಾಂಶಗಳು

- ಅಪಾಯ ತಂದೊಡ್ಡುವ ಗುಂಡಿಗಳು
- ರಾತ್ರಿ ಸಂಚಾರವಂತೂ ಇನ್ನೂ ದುಸ್ತರ
- ಹೆಚ್ಚುತ್ತಿರುವ ಅಪಘಾತಗಳ ಸಂಖ್ಯೆ

ಬೆಂಗಳೂರು: ನಗರದ ಮೈಸೂರು ಬ್ಯಾಂಕ್ ವೃತ್ತದಿಂದ ಕೆ.ಆರ್.ಸರ್ಕಲ್ ಸಂಪರ್ಕಿಸುವ ರಸ್ತೆ, ಪಾದಚಾರಿ ಮಾರ್ಗಗಳು ಅಧ್ವಾನವಾಗಿವೆ. ಇದರಿಂದಾಗಿ ಪಾದಚಾರಿಗಳು ವಾಹನದಟ್ಟಣೆ ಇದ್ದರೂ ಅನಿವಾರ್ಯವಾಗಿ ಮುಖ್ಯರಸ್ತೆಗಳಲ್ಲೇ ಸಂಚರಿಸುವಂತಾಗಿದೆ.

ಈ ರಸ್ತೆಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಇದಕ್ಕಾಗಿ ಬೆಸ್ಕಾಂನವರು ಭೂಗತ ಕೇಬಲ್ ಹಾಗೂ ಜಲಮಂಡಳಿಯವರು ಕೊಳವೆಗಳನ್ನು ಅಳವಡಿಸಲು ಎರಡೂ ಬದಿಯ ಪಾದಚಾರಿ ಮಾರ್ಗಗಳಲ್ಲಿ ಚರಂಡಿ ಮೇಲಿನ ಸ್ಲ್ಯಾಬ್‌ಗಳನ್ನು ತೆಗೆದಿದ್ದಾರೆ. ಕೆಲವು ಕಡೆ ಗುಂಡಿಗಳನ್ನು ತೆಗೆಯಲಾಗಿದೆ. ಗುಂಡಿ ತೆಗೆದಿರುವ ಹಾಗೂ ಸ್ಲ್ಯಾಬ್‌ಗಳನ್ನು ತೆಗೆದಿರುವ ಜಾಗದಲ್ಲಿ ಬ್ಯಾರಿಕೇಡ್‌ಗಳನ್ನು ಮುಚ್ಚಿದ್ದಾರೆ.

ಇನ್ನೊಂದು ಕಡೆ ರಸ್ತೆ ಬದಿಯಲ್ಲಿ (ಸೆಂಟ್ರಲ್ ಕಾಲೇಜು ಭಾಗದ) ಪಾದಚಾರಿ ಮಾರ್ಗವೂ ಸೇರಿದಂತೆ ಅಲ್ಲಲ್ಲಿ ಮರಳು, ಮಣ್ಣಿನ ರಾಶಿ ಹಾಕಲಾಗಿದೆ. ಹೀಗಾಗಿ ನಡೆದಾಡುವವರು ಪಾದಚಾರಿ ಮಾರ್ಗವನ್ನು ದಾಟಲಾಗದೇ ಮುಖ್ಯರಸ್ತೆಯನ್ನೇ ಬಳಸುತ್ತಾರೆ.

ಜನದಟ್ಟಣೆ ಪ್ರದೇಶ: ಈ ಭಾಗದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ (ಬಿಸಿಯು), ಸರ್ಕಾರಿ ಕಲಾ ಕಾಲೇಜು, ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು(ಯುವಿಸಿಇ), ಸಿಟಿ ಸಿವಿಲ್ ಕೋರ್ಟ್ ಮತ್ತು ಕೆಪಿಟಿಸಿಎಲ್ ಕಚೇರಿಗಳಿವೆ. ಸಾವಿರಾರು ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಕೋರ್ಟ್ ಕಾರ್ಯಗಳಿಗೆ ಬರುವ ಸಾರ್ವಜನಿಕರು ಓಡಾಡುವ ರಸ್ತೆ. ಮೆಟ್ರೊ ರೈಲಿನಲ್ಲಿ ಸಂಚರಿಸುವವರು, ಇಲ್ಲಿನ ನಿಲ್ದಾಣದಿಂದ ಕಾಲೇಜು, ಕಚೇರಿಗಳಿಗೆ ಹೋಗಿ–ಬರಲು ಪಾದಚಾರಿ ಮಾರ್ಗವನ್ನು ಬಳಸುತ್ತಾರೆ. ರಸ್ತೆ, ಪಾದಚಾರಿ ಮಾರ್ಗ ಎರಡೂ ಅಧ್ವಾನವಾಗಿರುವ ಕಾರಣ ಸಂಚಾರವೇ ದುಸ್ತರವಾಗಿದೆ ಎನ್ನುತ್ತಾರೆ ಕಾಲೇಜು ವಿದ್ಯಾರ್ಥಿಗಳು.

ಬೆಂಗಳೂರು ನಗರ ವಿಶ್ವ ವಿದ್ಯಾಲಯದ(ಬಿಸಿಯು) ಪ್ರವೇಶ ದ್ವಾರದ ಬದಿಯಲ್ಲೇ ದೊಡ್ಡ ಗುಂಡಿ ಇದೆ. ಅದನ್ನು ಬ್ಯಾರಿಕೇಡ್‌ನಿಂದ ಮುಚ್ಚಲಾಗಿದೆ. ಮೊನ್ನೆ ವಿದ್ಯಾರ್ಥಿನಿಯೊಬ್ಬರು ಗುಂಡಿಯೊಳಗೆ ಕಾಲಿಟ್ಟು ಬಿದ್ದರು. ಯಾರೋ ಅವರನ್ನು ಮೇಲೆತ್ತಿದ್ದ. ಸ್ವಲ್ಪ ಎಚ್ಚರ ತಪ್ಪಿದರೆ ಅಪಘಾತ ಖಚಿತ' ಎಂದು ನಿತ್ಯ ನ್ಯಾಯಾಲಯಕ್ಕೆ ಬರುವ ಪರಸಪ್ಪ ಮಾಳಗಿ ತಾವು ಕಂಡ ಘಟನೆಯೊಂದನ್ನು ವಿವರಿಸಿದರು.

ಈ ರಸ್ತೆಯಲ್ಲಿ ಬೆಳಗಿನ ಸಂಚಾರ ಒಂದು ರೀತಿ ದುಸ್ತರವಾದರೆ, ರಾತ್ರಿ ವೇಳೆಯಂತೂ ಪಾದಚಾರಿಗಳು ನಡೆದಾಡುವುದೇ ಕಷ್ಟ. ಮಳೆ ಬಂದಾಗ, ಈ ರಸ್ತೆಯಲ್ಲಿನ ಸಂಚಾರದ ಸಂಕಟವನ್ನು ಊಹಿಸುವುದೂ ಅಸಾಧ್ಯ ಎನ್ನುತ್ತಾರೆ ಸುತ್ತಮುತ್ತಲಿನ ವ್ಯಾಪಾರಸ್ಥರು.

'ವೈಟ್‌ಟಾಪಿಂಗ್ ಕಾಮಗಾರಿ ನಡೆಯುತ್ತಿರುವುದರಿಂದ, ಸಮಸ್ಯೆಯಾಗಿದೆ.

ಸ್ಲ್ಯಾಬ್ ತೆಗೆದ ಮೇಲೆ ಬ್ಯಾರಿಕೇಡ್‌ನಿಂದ ಚರಂಡಿ ಮುಚ್ಚಲಾಗಿದೆ

ಕಾಮಗಾರಿ ಪೂರ್ಣಗೊಂಡ ನಂತರ ಈ ಸಮಸ್ಯೆ ಸರಿ ಹೋಗುತ್ತದೆ' ಎಂದು ಬಿಬಿಎಂಪಿಯವರು ಹೇಳುತ್ತಾರೆ. ಹೀಗಿದ್ದಾಗ 'ಪಾದಚಾರಿಗಳು ಪರ್ಯಾಯ ಮಾರ್ಗ ಬಳಸಿ' ಎಂಬ ಮಾಹಿತಿ ಫಲಕವನ್ನಾದರೂ ರಸ್ತೆಗಳ ತುದಿಯಲ್ಲಿ ಹಾಕಬಹುದಲ್ಲವಾ' ಎಂದು ಹಿರಿಯ ನಾಗರಿಕರೊಬ್ಬರು ಪ್ರಶ್ನಿಸಿದರು.

'ಮೊದಲು ರಸ್ತೆಯ ಒಂದು ಬದಿಯನ್ನು ವೈಟ್‌ಟಾಪಿಂಗ್ ಮಾಡಿ, ನಂತರ ಇನ್ನೊಂದು ಬದಿಯ ಕಾಮಗಾರಿ ಕೈಗೆತ್ತಿಕೊಂಡಿದ್ದರೆ, ಈ ಸಮಸ್ಯೆ ಆಗುತ್ತಿರಲಿಲ್ಲ. ಎರಡೂ ಬದಿಯ ರಸ್ತೆಗಳನ್ನು ಒಟ್ಟಿಗೆ ಅಗೆದಿರುವುದರಿಂದ, ಪಾದಚಾರಿ ಮಾರ್ಗ ನಡೆಯಲಾರದಷ್ಟು ಹಾಳಾಗಿದೆ' ಎಂದು ಬಿಸಿಯು ಸಿಬ್ಬಂದಿಯೊಬ್ಬರು ಹೇಳಿದರು.

ವೈಟ್‌ಟಾಪಿಂಗ್ ಪೂರ್ಣಗೊಂಡಿರುವ ಈ ರಸ್ತೆಗೆ ಸಮನಾಂತರವಾಗಿರುವ ಅರಮನೆ ರಸ್ತೆಯ ಪಾದಚಾರಿ ಮಾರ್ಗದಲ್ಲೂ ಕೆಲವೆಡೆ ಕಲ್ಲುಗಳು ಕಿತ್ತುಹೋಗಿ ಗುಂಡಿಗಳಾಗಿವೆ. ಇದೇ ಮಾರ್ಗದಲ್ಲಿ ಕಸದ ರಾಶಿ ಹಾಕಲಾಗಿದೆ. ಮೂಗು ಮುಚ್ಚಿಕೊಂಡೇ ಪಾದಚಾರಿಗಳು ಓಡಾಡಬೇಕಿದೆ.

ಸ್ಲ್ಯಾಬ್ ತೆಗೆದು ಹಲವು ದಿನಗಳಾದರೂ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ

ನಗರದ ಮೈಸೂರು ಬ್ಯಾಂಕ್ ವೃತ್ತದಿಂದ ಕೆ. ಆರ್ ವೃತ್ತದವರೆಗೆ ಎರಡೂ ಬದಿಯಲ್ಲಿ ರಸ್ತೆ ಅಗೆದಿರುವುದರಿಂದ ದ್ವಿಚಕ್ರ ಸವಾರರೊಬ್ಬರು ಅಪಘಾತಕ್ಕೀಡಾಗಿದ್ದ ದೃಶ್ಯ

ಪ್ರಜಾವಾಣಿ ಚಿತ್ರಗಳು: ರಂಜು ಪಿ.

> ಸೆಂಟ್ರಲ್ ಕಾಲೇಜು ರಸ್ತೆಯುದ್ದಕ್ಕೂ ಫುಟ್‌ಪಾತ್‌ನಲ್ಲಿ ದೊಡ್ಡ ಗುಂಡಿಗಳಾಗಿವೆ. ಈ ರಸ್ತೆಯಲ್ಲಿ ನಡೆಯುತ್ತಿರುವ ವೈಟ್‌ಟಾಪಿಂಗ್ ಕಾಮಗಾರಿ ವಿಳಂಬವಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ರಸ್ತೆ ಮಧ್ಯೆ ಓಡಾಡುವುದು ಅನಿವಾರ್ಯವಾಗಿದೆ. ಪಾದಚಾರಿ ಮಾರ್ಗ ದುರಸ್ತಿ ಕಾರ್ಯವನ್ನು ತುರ್ತಾಗಿ ಕೈಗೊಳ್ಳಬೇಕು. ವೈಟ್‌ಟಾಪಿಂಗ್ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಬೇಕು
>
> **ಅಪೂರ್ವ,** ಜಿಲ್ಲಾಧ್ಯಕ್ಷೆ, ಎಐಡಿಎಸ್‌ಒ, ಬೆಂಗಳೂರು ಜಿಲ್ಲಾ ಸಮಿತಿ

> ಪಾದಚಾರಿ ಮಾರ್ಗದಲ್ಲಿ ಅಲ್ಲಲ್ಲಿ ಗುಂಡಿಗಳಾಗಿವೆ. ಜನರು ಗಡಿಬಿಡಿಯಲ್ಲಿ ಅರಿವಿಲ್ಲದೇ ಗುಂಡಿಗಳಲ್ಲಿ ಕಾಲಿಟ್ಟು ಬೀಳುತ್ತಾರೆ. ರಸ್ತೆ ಕಾಮಗಾರಿ ಬೇಗ ಮುಗಿಸಬೇಕು. ಅದಕ್ಕೂ ಮುನ್ನ ಪಾದಚಾರಿ ಮಾರ್ಗದ ಗುಂಡಿಗಳಿಗೆ ಸ್ಲ್ಯಾಬ್ ಜೋಡಿಸಿ, ಅಗತ್ಯವಿದ್ದರೆ ಬೇರೆ ಎಲ್ಲಾದರೂ ಓಪನ್ ಮಾಡಿಕೊಳ್ಳಲಿ
>
> **ಪರಸಪ್ಪ ಮಾಳಗಿ,** ಲಿಂಗಾನಾಯಕನಹಳ್ಳಿ

> ನಾನು ನಿತ್ಯ ವಿಧಾನಸೌಧ, ಹೈಕೋರ್ಟ್‌ಗೆ ಹೋಗಲು ಇದೇ ರಸ್ತೆ ಬಳಸುತ್ತೇನೆ. ಪಾದಚಾರಿ ಮಾರ್ಗ ಹಾಳಾಗಿದೆ. ರಸ್ತೆಯನ್ನೂ ಅಗೆದಿದ್ದಾರೆ. ವಯಸ್ಸಾದವರು ಓಡಾಡುವುದು ಕಷ್ಟ. ರಸ್ತೆ ಕಾಮಗಾರಿ ವಿಳಂಬವಾಗುತ್ತಿದೆ. ಶೀಘ್ರ ಪೂರ್ಣಗೊಳಿಸಿ, ಅಪಾಯ ತಪ್ಪಿಸಬೇಕು.
>
> **ಅಂಜನ್ ಕುಮಾರ್,** ವಡ್ನಾಳ್

> ಪಾದಚಾರಿ ಮಾರ್ಗದಲ್ಲಾಗಿರುವ ಗುಂಡಿಗಳನ್ನು ಮುಚ್ಚಿರುವ ಬ್ಯಾರಿಕೇಡ್‌ಗಳು ಭದ್ರವಿಲ್ಲ. ಅವುಗಳನ್ನು ತೆಗೆದು ಸ್ಲ್ಯಾಬ್ ಅಳವಡಿಸಬೇಕು. ಇಲ್ಲದಿದ್ದರೆ ಅಪಾಯ ಸಂಭವಿಸುತ್ತದೆ
>
> **ನಮ್ ಋಷಿ,** ಸಿನಿಮಾ ನಿರ್ದೇಶಕ

> ಪ್ರಸ್ತುತ ಯುಟಿಲಿಟಿ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಅದು ಒಂದು ತಿಂಗಳೊಳಗೆ ಮುಗಿಯಲಿದೆ. ಇನ್ನೊಂದು ತಿಂಗಳೊಳಗೆ ವೈಟ್ ಟಾಪಿಂಗ್, ನಂತರ ಒಂದು ತಿಂಗಳಲ್ಲಿ ಪಾದಚಾರಿ ಮಾರ್ಗ ಪೂರ್ಣಗೊಳ್ಳುತ್ತದೆ. ಮೂರು ತಿಂಗಳೊಳಗೆ ಎಲ್ಲ ಕಾಮಗಾರಿಗಳೂ ಪೂರ್ಣಗೊಳ್ಳುತ್ತವೆ.
>
> **ಎಂ.ಲೋಕೇಶ್,** ಮುಖ್ಯ ಎಂಜಿನಿಯರ್, ಬಿಬಿಎಂಪಿ

'ಪಕ್ಷಗಳ ಸುತ್ತ ಗಿರಕಿ ಹೊಡೆದವರೆ ದೊಡ್ಡ ಸಾಹಿತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಶಸ್ತಿ, ಸ್ಥಾನಮಾನಕ್ಕಾಗಿ ರಾಜಕೀಯ ಪಕ್ಷಗಳ ಸುತ್ತ ಗಿರಕಿ ಹೊಡೆದವರೆಲ್ಲ ಇಂದು ದೊಡ್ಡ ದೊಡ್ಡ ಸಾಹಿತಿಗಳಾಗಿ ಮೆರೆಯುತ್ತಿದ್ದಾರೆ' ಎಂದು ಕಥೆಗಾರ ಕೇಶವರೆಡ್ಡಿ ಹಂದ್ರಾಳ ಬೇಸರ ವ್ಯಕ್ತಪಡಿಸಿದರು.

ಅಂಕಿತ ಪುಸ್ತಕ ಪ್ರಕಾಶನ ಸಂಸ್ಥೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರ 'ಆಸ್ಕರ್ ವೈಲ್ಡನ ನೈಟಿಂಗೇಲ್ಸ್' ಮತ್ತು 'ವರ್ಣಭೇದ', ಗುರುರಾಜ ಕೊಡ್ಕಣಿ ಅವರ 'ಶ್...! ಇಲ್ಯಾರೋ ಇದ್ದಾರೆ..!!', 'ಪ್ಯಾರಾನಾರ್ಮಲ್' ಹಾಗೂ ಬಿ. ಜನಾರ್ದನ ಭಟ್ ಅವರ 'ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ?' ಪುಸ್ತಕಗಳು ಬಿಡುಗಡೆಯಾದವು.

ಈ ವೇಳೆ ಮಾತನಾಡಿದ ಕೇಶವರೆಡ್ಡಿ ಹಂದ್ರಾಳ, 'ಸಾಹಿತಿಗಳು ಶಕ್ತಿ ಕೇಂದ್ರದಿಂದ ದೂರವುಳಿದು, ಈ ಕೇಂದ್ರವನ್ನು ಬರವಣಿಗೆ ಮೂಲಕ ಎಚ್ಚರಿಸುತ್ತಾ ಇರಬೇಕು. ರಾಜಕೀಯ ಪಕ್ಷಗಳಿಂದಲೂ ಅಂತರ ಕಾಯ್ದುಕೊಳ್ಳಬೇಕು. ಇದು ಸಾಹಿತಿಗಳ ಧರ್ಮ ಕೂಡ. ಆದರೆ, ಕೆಲವರು ಪ್ರಶಸ್ತಿ, ಸ್ಥಾನಮಾನಕ್ಕೆ ಶಕ್ತಿ ಕೇಂದ್ರದ ಸುತ್ತ ಗಿರಕಿ ಹೊಡೆಯುತ್ತ, ರಾಜಕೀಯ ಪಕ್ಷಗಳಿಗೆ ಉಘೇ ಉಘೇ ಎನ್ನುತ್ತಿದ್ದಾರೆ. ನನ್ನ ಪ್ರಕಾರ ಇವರು ನಿಜವಾದ ಸಾಹಿತಿಗಳಲ್ಲ' ಎಂದು ಅಭಿಪ್ರಾಯಪಟ್ಟರು.

'ಸಾಹಿತಿಗಳು ರಾಜಕೀಯ ಪಕ್ಷ, ಧರ್ಮ, ಪ್ರಶಸ್ತಿಗಳ ಹಿಂದೆ ಹೋಗುತ್ತಿದ್ದಾರೆ. ಸಾಹಿತಿಯಾದವನು ಸಾಹಿತ್ಯದ ಜತೆಗೆ ಅರ್ಥಶಾಸ್ತ್ರ, ಸಮಾಜ ವಿಜ್ಞಾನ, ರಾಜ್ಯಶಾಸ್ತ್ರವನ್ನೂ ತಿಳಿದಿರಬೇಕು. ಕೇವಲ ಪಂಪ, ರನ್ನರನ್ನು ಓದಿದರೆ ಸಾಲದು. ಇವತ್ತಿನ ಸಂದರ್ಭಕ್ಕೆ ಅರ್ಥಶಾಸ್ತ್ರ ಬಹಳ ಮುಖ್ಯ. ದೇಶದಲ್ಲಿ ನಿರುದ್ಯೋಗ, ಬಡತನ, ಜನಸಂಖ್ಯಾ ಸ್ಫೋಟದಂತಹ ಸಮಸ್ಯೆಗಳಿವೆ. ಅವುಗಳನ್ನು ಕೇಂದ್ರೀಕರಿಸಿಯೂ ಸಾಹಿತಿಗಳು ಬರೆಯಬೇಕು' ಎಂದು ಹೇಳಿದರು.

ಪುಸ್ತಕಗಳನ್ನು ಬಿಡುಗಡೆ ಮಾಡಿದ ವಿಜಯನಗರ ಶಾಸಕ ಎಂ.ಕೃಷ್ಣಪ್ಪ, 'ಸಾಹಿತ್ಯ ಲೋಕವು ನಮ್ಮತನವನ್ನು ಹೇಗೆ ಕಾಪಾಡಿಕೊಂಡು ಬರಬೇಕು ಎಂಬುದನ್ನು ತಿಳಿಸಿದೆ. ಇಂದಿಗೂ ಆ ಕೆಲಸ ಮಾಡುತ್ತಲೇ ಬಂದಿದೆ. ಸಾಹಿತ್ಯ ನನ್ನ ಅಭಿರುಚಿಯಾಗಿದ್ದು, ಪುಸ್ತಕಗಳ ಓದು ನನ್ನನ್ನು ಸಾಕಷ್ಟು ಬದಲಾಯಿಸಿದೆ. ನನ್ನ ರಾಜಕೀಯ ಜೀವನಕ್ಕೂ ಸಾಹಿತ್ಯ ಬಹಳಷ್ಟು ಸಹಕಾರಿಯಾಗಿದೆ' ಎಂದು ಅಭಿಪ್ರಾಯಪಟ್ಟರು.

ಬಿಡುಗಡೆಯಾದ ಪುಸ್ತಕಗಳ ಬಗ್ಗೆ ಕಲಾವಿದ ಶ್ರೀನಿವಾಸ ಪ್ರಭು ಹಾಗೂ 'ಸುಧಾ' ವಾರ ಪತ್ರಿಕೆಯ ಮುಖ್ಯ ಉಪ ಸಂಪಾದಕಿ ರಶ್ಮಿ ಎಸ್. ಮಾತನಾಡಿದರು. ಕೃತಿಯ ಲೇಖಕರು ಉಪಸ್ಥಿತರಿದ್ದರು.

ಟಿಎಚ್‌ಇ ರ‍್ಯಾಂಕಿಂಗ್: ಕೆಐಐಟಿ–ಡೀಮ್ಡ್ ವಿ.ವಿ ಉತ್ತಮ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭುವನೇಶ್ವರದ ಪಾಟಿಯಾದಲ್ಲಿರುವ ಕೆಐಐಟಿ–ಡೀಮ್ಡ್ ವಿಶ್ವವಿದ್ಯಾಲಯ (ಕೆಐಐಟಿ–ಡಿಯು) 'ಟೈಮ್ಸ್ ಹೈಯರ್ ಎಜುಕೇಶನ್(ಟಿಎಚ್‌ಇ) ಇಂಪ್ಯಾಕ್ಟ್ ಗ್ಲೋಬಲ್ ರ‍್ಯಾಂಕ್–2025'ರಲ್ಲಿ ಉತ್ತಮ ಸಾಧನೆ ಮಾಡಿದೆ.

ಎಚ್‌ಟಿಇ ಇಂಪ್ಯಾಕ್ಟರ್ ಗ್ಲೋಬಲ್ ರ‍್ಯಾಂಕ್‌ನ 3 ವಿಭಾಗಗಳಲ್ಲಿ ಕೆಐಐಟಿ ಉತ್ತಮ ರ‍್ಯಾಂಕ್ ಪಡೆದಿದೆ. ಭಾರತದಲ್ಲಿ ಅಸಮಾನತೆ ಹೋಗಲಾಡಿಸುವ, ಶಾಂತಿ, ನ್ಯಾಯ ಮತ್ತು ಶಕ್ತಿಯುತ ಸಂಸ್ಥೆಗಳ ನಿರ್ಮಾಣ ಹಾಗೂ ಶುದ್ಧ ಇಂಧನ ನೀಡುವಲ್ಲಿ ಪ್ರಥಮ ಸ್ಥಾನ ಪಡೆದಿದೆ. ಗುಣಮಟ್ಟದ ಶಿಕ್ಷಣ ವಿಭಾಗದಲ್ಲಿ ಮೂರನೇ ಸ್ಥಾನ ಪಡೆದಿದೆ' ಎಂದು ವಿಶ್ವವಿದ್ಯಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

'ನಮ್ಮ ವಿಶ್ವವಿದ್ಯಾಲಯವು ಎಲ್ಲ ವಿಭಾಗಗಳಲ್ಲೂ ಉತ್ತಮ ಸಾಧನೆ ಮಾಡಿದೆ' ಎಂದು ಕೆಐಐಟಿ ಮತ್ತು ಕೆಐಎಸ್‌ಎಸ್‌ನ ಸಂಸ್ಥಾಪಕ ಡಾ. ಅಚ್ಯುತ ಸಮಂತ ಸಂತಸ ವ್ಯಕ್ತಪಡಿಸಿದ್ದಾರೆ.

ಟೈಮ್ಸ್ ಹೈಯರ್ ಎಜುಕೇಷನ್ ಈ ವರ್ಷ ನಡೆಸಿದ ಇಂಪ್ಯಾಕ್ಟ್ ರ‍್ಯಾಂಕಿಂಗ್ ಪ್ರಕ್ರಿಯೆಯಲ್ಲಿ 130 ದೇಶಗಳಿಂದ 2,400 ವಿ.ವಿ.ಗಳು ಭಾಗವಹಿಸಿದ್ದವು. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ವಿ.ವಿ.ಗಳ ಕೊಡುಗೆಗಳು, ಸಮಗ್ರ ಮೌಲ್ಯಮಾಪನ ಮತ್ತು ಸುಸ್ಥಿರತೆಗೆ ಸಂಶೋಧನೆ, ಮುಂದಾಳತ್ವ, ತಲುಪುವ ವ್ಯಾಪ್ತಿ, ಬೋಧನೆಗಳ ಬದ್ಧತೆಯನ್ನು ಆಧರಿಸಿ ರ‍್ಯಾಂಕ್ ನೀಡಲಾಗುತ್ತದೆ.

ಸರ್ಕಾರಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲಿಕಾ ಎಸ್. ಘಂಟಿ ಆಗ್ರಹ

'ಲೇಖಕಿಯರ ಸಂಘಕ್ಕೆ ಜಾಗ, ಅನುದಾನ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಲೇಖಕಿಯರ ಸಂಘಕ್ಕೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ನಗರದಲ್ಲಿ ಸೂಕ್ತ ಜಾಗ ಹಾಗೂ ಸಾಹಿತ್ಯಿಕ ಚಟುವಟಿಕೆಗಳಿಗೆ ವಾರ್ಷಿಕ ಅನುದಾನ ಒದಗಿಸಬೇಕು' ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲಿಕಾ ಎಸ್. ಘಂಟಿ ಸರ್ಕಾರಕ್ಕೆ ಆಗ್ರಹಿಸಿದರು.

ಕರ್ನಾಟಕ ಲೇಖಕಿಯರ ಸಂಘವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಲೇಖಕಿ ಶಿವಗಂಗಾ ರುಮ್ಮ ಹಾಗೂ ರೈತ ಮುಖಂಡೆ ನಂದಿನಿ ಜಯರಾಮ್ ಅವರಿಗೆ 'ಮಾತೋಶ್ರೀ ಶಂಕರಮ್ಮ ಪ. ಬಳಿಗಾರ್' ಪ್ರಶಸ್ತಿ ಪ್ರದಾನ ಮಾಡಿ, ಮಾತನಾಡಿದರು. ಈ ಪ್ರಶಸ್ತಿಯು ತಲಾ ₹10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

'ಲೇಖಕಿಯರ ಸಂಘ ಸ್ಥಾಪನೆಯಾಗಿ 47 ವರ್ಷ ಕಳೆದರೂ ಸಂಘವು ಬಾಡಿಗೆ ಕಟ್ಟಡದಲ್ಲಿಯೇ ಇದೆ. ಕನ್ನಡ ಸಾಹಿತ್ಯ ಪರಿಷತ್ತಿಗೆ ದೊಡ್ಡ ಜಾಗ ನೀಡಿ, ಪ್ರತಿ ವರ್ಷ ಅನುದಾನ ನೀಡಲಾಗುತ್ತಿದೆ. ಲೇಖಕಿಯರ ಸಂಘಕ್ಕೆ ಸಣ್ಣ ಜಾಗ ನೀಡುವುದಕ್ಕೆ ಅಧಿಕಾರಕ್ಕೆ ಬಂದ ಯಾವುದೇ ಸರ್ಕಾರದಿಂದ ಸಾಧ್ಯವಾಗಿಲ್ಲ. ಸರ್ಕಾರಕ್ಕೆ ಜಾಗ ನೀಡುವ ಮನಸ್ಸು ಇಲ್ಲವೋ ಅಥವಾ ಸಂಘಕ್ಕೆ ಜಾಗ ಪಡೆಯುವ ಶಕ್ತಿ ಇಲ್ಲವೋ ಅರ್ಥವಾಗುತ್ತಿಲ್ಲ. ಸಂಘಕ್ಕೆ ಒದಗಿಸಲು ಜಾಗ ಇರದಿದ್ದರೆ, ಕನ್ನಡ ಸಾಹಿತ್ಯ ಪರಿಷತ್ತು ಕಟ್ಟಡದಲ್ಲಿ ಅರ್ಧದಷ್ಟು ಸ್ಥಳಾವಕಾಶ ಒದಗಿಸಬೇಕು' ಎಂದು ಒತ್ತಾಯಿಸಿದರು.

'ಹೆಣ್ಣುಮಕ್ಕಳಿಗೆ ಮತ್ತು ಕನ್ನಡಕ್ಕೆ ವಿಶಿಷ್ಟವಾದ ಶಕ್ತಿ ಇದೆ. ಈ ಶಕ್ತಿಯನ್ನು ಹೊರಗೆ ಹಾಕಿದರೆ ಸರ್ಕಾರವೂ ಎಚ್ಚರಗೊಳ್ಳಲಿದೆ. ಲೇಖಕಿಯರ ಬೇಡಿಕೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಯನ್ನು ಅಡೆತಡೆ ಇಲ್ಲದೇ ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕು' ಎಂದರು.

ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ, 'ರಾಜ್ಯ ಸರ್ಕಾರವು ಸಂಘ–ಸಂಸ್ಥೆಗಳಿಗೆ ನೀಡುತ್ತಿದ್ದ ಅನುದಾನ ನಿಲ್ಲಿಸಿದೆ. ಅನುದಾನವೇ ಇಲ್ಲದ ಈ ಸಂದರ್ಭದಲ್ಲಿ ದತ್ತಿ ನಿಧಿ ಕಾರ್ಯಕ್ರಮಗಳನ್ನು ಮಾತ್ರ ನಡೆಸಬಹುದಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಹಾಗೂ ಅವರ ಸಹೋದರ ಎಸ್. ಪಿ. ಬಳಿಗಾರ್ ಅವರು ಸಂಘದಲ್ಲಿ ಈ ದತ್ತಿ ಪ್ರಶಸ್ತಿ ಸ್ಥಾಪಿಸಿದ್ದಾರೆ' ಎಂದು ಸ್ಮರಿಸಿಕೊಂಡರು.

ಗಂಗಮ್ಮ (ಅರುಂಧತಿ) ಬಳಿಗಾರ್, ಸಂಘದ ಕಾರ್ಯದರ್ಶಿ ಭಾರತಿ ಹೆಗಡೆ, ಸಹ ಕಾರ್ಯದರ್ಶಿ ಸುಮಾ ಸತೀಶ್, ಖಜಾಂಚಿ ಮಂಜುಳಾ ಶಿವಾನಂದ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ನಂದಿನಿ ಜಯರಾಮ್ ಹಾಗೂ ಶಿವಗಂಗಾ ರುಮ್ಮ ಅವರಿಗೆ 'ಮಾತೋಶ್ರೀ ಶಂಕರಮ್ಮ ಪ. ಬಳಿಗಾರ್' ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರೊ.ಎಂ.ಪಿ. ಬಳಿಗಾರ್, ಎಚ್.ಎಲ್. ಪುಷ್ಪ, ಮಂಜುಳಾ ಶಿವಾನಂದ, ಭಾರತಿ ಹೆಗಡೆ, ಗಂಗಮ್ಮ ಬಳಿಗಾರ್, ಸುಮಾ ಸತೀಶ್, ಮಲ್ಲಿಕಾ ಘಂಟಿ, ಉಮಾದೇವಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಸುಗಮ ಸಂಚಾರ: ಮಾರ್ಪಾಡು

ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೈಗ್ರೌಂಡ್ಸ್, ಶೇಷಾದ್ರಿಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕೆಲವು ರಸ್ತೆಗಳಲ್ಲಿ ಏಕಮುಖ ಸಂಚಾರ (ಒನ್‌ವೇ) ಸೇರಿದಂತೆ ಹಲವು ಮಾರ್ಪಾಡುಗಳನ್ನು ಮಾಡಲಾಗಿದೆ.

ಸುಗಮ ವಾಹನ ಸಂಚಾರಕ್ಕೆ ಅವಕಾಶ ಹಾಗೂ ಸಂಚಾರ ದಟ್ಟಣೆ ತಪ್ಪಿಸುವ ಸಲುವಾಗಿ ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಈ ಆದೇಶ ಹೊರಡಿಸಿದ್ದಾರೆ.

ಕಂಟೋನ್ಮೆಂಟ್ ರೈಲ್ವೆ ನಿಲ್ದಾಣ, ಶೇಷಾದ್ರಿಪುರಂ ರಸ್ತೆ, ಸುತ್ತಮುತ್ತಲ ಭಾಗಗಳಲ್ಲಿ ಸುಗಮ ಸಂಚಾರಕ್ಕೆ ತೊಂದರೆ ಆಗುತ್ತಿತ್ತು. ಈ ಸಂಬಂಧ ಅಧ್ಯಯನ ನಡೆಸಿ ಕೆಲ ರಸ್ತೆಗಳಲ್ಲಿ ಏಕಮುಖ ಸಂಚಾರ, ವಾಹನ ನಿಲುಗಡೆ ನಿರ್ಬಂಧ ಹಾಗೂ ನಿಲುಗಡೆಗೆ ಅವಕಾಶ ಸೇರಿ ಹಲವು ಮಾರ್ಪಾಡುಗಳನ್ನು ಮಾಡಲಾಗಿದ್ದು, ಸಾರ್ವಜನಿಕರು ಸಹಕರಿಸಬೇಕು ಎಂದು ಅವರು ಕೋರಿದ್ದಾರೆ.

ಹೈಗ್ರೌಂಡ್ಸ್ ವ್ಯಾಪ್ತಿ ದ್ವಿಚಕ್ರ ವಾಹನ ನಿಲುಗಡೆ: ಹೈಗ್ರೌಂಡ್ಸ್ ಸಮೀಪದ ರೈಲ್ವೆ ಸಮನಾಂತರ ರಸ್ತೆ (ಆರ್‌ಪಿ ರಸ್ತೆ) ಮತ್ತು ಹರೇಕೃಷ್ಣ ರಸ್ತೆ ರೈಲ್ವೆ ಕೆಳಸೇತುವೆಯಿಂದ, ಕೆ.ಪಿ ವೆಸ್ಟ್ 6ನೇ ಕ್ರಾಸ್‌ನ ಪೂರ್ವದಿಕ್ಕಿನವರೆಗೆ ದ್ವಿಚಕ್ರವಾಹನ ನಿಲುಗಡೆ ಮಾಡಬಹುದು.

ಕಾರು ಸೇರಿದಂತೆ ನಾಲ್ಕು ಚಕ್ರಗಳ ವಾಹನಗಳು ಆರ್.ಪಿ ರಸ್ತೆ ಮತ್ತು ಕೆ.ಪಿ ವೆಸ್ಟ್ 6ನೇ ಕ್ರಾಸ್ ರಸ್ತೆಯಿಂದ ಆರ್. ಪಿ ರಸ್ತೆ ಮತ್ತು ಬಿಡಿಎ ಕಚೇರಿವರೆಗೆ ಅವಕಾಶ ನೀಡಲಾಗಿದೆ.

ವಾಹನ ನಿಲುಗಡೆ ನಿರ್ಬಂಧ: ಆರ್.ಪಿ ರಸ್ತೆ ಮತ್ತು ಹರೇಕೃಷ್ಣ ರಸ್ತೆ ರೈಲ್ವೆ ಕೆಳಸೇತುವೆಯಿಂದ ಆರ್.ಪಿ ರಸ್ತೆ ಮತ್ತು ಬಿಡಿಎ ಕಚೇರಿವರೆಗಿನ ಪಶ್ಚಿಮ ದಿಕ್ಕಿನ ರಸ್ತೆಯಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಗೆ ನಿರ್ಬಂಧ ವಿಸಲಾಗಿದೆ.

ಏಕಮುಖ ಸಂಚಾರ: ನೆಹರೂ ಸರ್ಕಲ್‌ನಿಂದ ಎನ್.ಎಸ್ ಅಯ್ಯಂಗಾರ್ ಸ್ಟ್ರೀಟ್ (ದಕ್ಷಿಣದಿಂದ ಉತ್ತರ ಮಾರ್ಗ). ಎನ್.ಎಸ್ ಅಯ್ಯಂಗಾರ್ ಸ್ಟ್ರೀಟ್‌ನಿಂದ ನಾಗಪ್ಪ ಸ್ಟ್ರೀಟ್ ಹಾಗೂ 3ನೇ ಕ್ರಾಸ್‌ವರೆಗೆ (ಉತ್ತರಿಂದ ದಕ್ಷಿಣ ಮಾರ್ಗ)

ಶೇಷಾದ್ರಿಪುರ ವ್ಯಾಪ್ತಿಯ ಸಂಪಿಗೆ ರಸ್ತೆಯಿಂದ ಶಿರೂರು ಪಾರ್ಕ್ ರಸ್ತೆಯ ಪಶ್ಚಿಮದಿಂದ ಪೂರ್ವ ವಿಭಾಗದ ಮಾರ್ಗವನ್ನು ಏಕಮುಖ ಸಂಚಾರಕ್ಕೆ ಮಾತ್ರ ಅವಕಾಶ ನೀಡಲಾಗಿದೆ.

ಶೇಷಾದ್ರಿಪುರ ರಸ್ತೆಯಲ್ಲಿ ದ್ವಿಚಕ್ರ ವಾಹನ ನಿಲುಗಡೆ

ಶಿರೂರು ಪಾರ್ಕ್ ರಸ್ತೆ ಹಾಗೂ ಸೌತ್ ಎಂಡ್ ರಸ್ತೆ ಜಂಕ್ಷನ್‌ನಿಂದ ಎಸ್.ಪಿ ರಸ್ತೆ ನಟರಾಜ ಥಿಯೇಟರ್‌ವರೆಗಿನ ಪಶ್ಚಿಮ ದಿಕ್ಕಿನ ರಸ್ತೆ. ಸಂಪಿಗೆ ರಸ್ತೆ ಬಿಬಿಎಂಪಿ ಕಚೇರಿಯಿಂದ ಶಿರೂರು ಪಾರ್ಕ್ ರಸ್ತೆಯ ಉತ್ತರದ ದಿಕ್ಕಿನ ರಸ್ತೆಗಳಲ್ಲಿ ದ್ವಿಚಕ್ರ ವಾಹನ ನಿಲುಗಡೆ ಮಾಡಬಹುದು.

ನಿರ್ಬಂಧ: ಶಿರೂರು ಪಾರ್ಕ್ ರಸ್ತೆ ಮತ್ತು ಸೌತ್ ಎಂಡ್ ರಸ್ತೆ ಜಂಕ್ಷನ್‌ನಿಂದ ಎಸ್. ಸಿ ರಸ್ತೆ, ಸಂಪಿಗೆ ರಸ್ತೆ ತನಕದ ಪೂರ್ವ ಹಾಗೂ ದಕ್ಷಿಣ ದಿಕ್ಕಿನ ಕಡೆಯ ರಸ್ತೆಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆ ನಿರ್ಬಂಧಿಸಲಾಗಿದೆ.

ನಗರದಲ್ಲಿ ಇಂದು

'ಶ್ರೀಕೃಷ್ಣ ರಾಯಭಾರ' ನಾಟಕ ಪ್ರದರ್ಶನ: ಉದ್ಘಾಟನೆ: ವಿ. ನಾಗರಾಜು, ಅಧ್ಯಕ್ಷತೆ: ರಾಜು, ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ರಾಮಚಂದ್ರ ಜಲಮಂಡಳಿ, ಡಬ್ಲ್ಯು.ಎಚ್. ಶಾಂತಕುಮಾರ್, ಆಯೋಜನೆ: ಧನಸ್ಸು ಸಾಂಸ್ಕೃತಿಕ ಕಲಾ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3

ಬಿ.ಆರ್. ಮಲ್ಲಿಕಾರ್ಜುನಯ್ಯ ಅವರಿಗೆ ರಂಗ ನುಡಿನಮನ: ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಭಾಗವಹಿಸುವವರು: ಶ್ರೀನಿವಾಸ್ ಜಿ. ಕಪ್ಪಣ್ಣ, ಪಿಚ್ಚಳ್ಳಿ ಶ್ರೀನಿವಾಸ್, ಶಶಿಧರ್ ಅಡಪ, ಕೆಎಸ್‌ಡಿಎಲ್ ಚಂದ್ರು, ಮಲ್ಲಿಕಾರ್ಜುನ ಮಹಾಮನೆ, ಸಂಗಮೇಶ ಗೌಡಪ್ಪನವರ, ಊ.ಮ. ತಿಪ್ಪೇಸ್ವಾಮಿ, ಆಯೋಜನೆ: ಪ್ರಯೋಗರಂಗ, ರಂಗವರ್ಷ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

ಲಿಂಗಮ್ಮ, ಚಿಕ್ಕಕೊಮಾರಿಗೌಡ ಹಾರೋಕೊಪ್ಪ ದತ್ತಿ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಹನುಮಂತನಾಥ ಸ್ವಾಮೀಜಿ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಎ.ಬಿ. ಪಾಟೀಲ, ಉಪಸ್ಥಿತಿ: ಚಿಕ್ಕಕೊಮಾರಿಗೌಡ, ಪ್ರಶಸ್ತಿ ಸ್ವೀಕರಿಸುವವರು: ಸಂಪೂರ್ಣ ಸಾವಯವ ಕೃಷಿಕರ ಸಂಘದ ಎಂ.ಎನ್. ಮಹೇಶ್‌ಕುಮಾರ್, ಅನಿಲ್ ಬಳಂಜ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಎಚ್‌ಎಸ್‌ವಿ ನೆನಪು: ಎಚ್‌ಎಸ್‌ವಿ ಸಾಕ್ಷ್ಯಚಿತ್ರ ಪ್ರದರ್ಶನ: ನಿರ್ದೇಶನ: ಎಚ್.ವಿ. ಸಂಜಯ್, ಗಾಯನ: ಸತ್ಯನಾರಾಯಣ ರಾಜು, ಶ್ರಾವ್ಯ ವಸಿಷ್ಠ, ಭಾಗವಹಿಸುವವರು: 'ಮುಖ್ಯಮಂತ್ರಿ' ಚಂದ್ರು, ಟಿ.ಎನ್. ಸೀತಾರಾಮ್, ರಂಜನಿ ಪ್ರಭು, ಶಶಿಧರ್ ಬಾರಿಘಾಟ್, ಶ್ರೀನಿವಾಸ್ ಐ.ವಿ., 'ಪು.ತಿ.ನ' ರಂಗರೂಪ–ಒಂದು ಝಲಕ್, ರಚನೆ: ಎಚ್.ಎಸ್. ವೆಂಕಟೇಶಮೂರ್ತಿ, ನಿರ್ದೇಶನ: ಬಿ.ವಿ. ರಾಜಾರಾಂ, ಪ್ರಸ್ತುತಿ: ಕಲಾಗಂಗೋತ್ರಿ ತಂಡ, ಆಯೋಜನೆ: ಕಲಾಗಂಗೋತ್ರಿ, ಸ್ಥಳ: ಡಾ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 6



ಎಚ್.ಎಸ್. ವೆಂಕಟೇಶಮೂರ್ತಿ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

'ಹಂಸ ಜ್ಯೋತಿ ಸುವರ್ಣ ಸಂಭ್ರಮಾಚರಣೆ'ಯಲ್ಲಿ ಗೌರವ

10 ಮಂದಿಗೆ 'ಹಂಸ ಸಮ್ಮಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಂಸ ಜ್ಯೋತಿ ಟ್ರಸ್ಟ್ ನಗರದಲ್ಲಿ ಹಮ್ಮಿಕೊಂಡಿದ್ದ 'ಹಂಸ ಜ್ಯೋತಿ ಸುವರ್ಣ ಸಂಭ್ರಮಾಚರಣೆ' ಸಮಾರಂಭದಲ್ಲಿ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ರಂಗದಲ್ಲಿ ಅನನ್ಯ ಕೊಡುಗೆ ನೀಡಿದ ಹತ್ತು ಮಂದಿಗೆ 'ಹಂಸ ಸಮ್ಮಾನ್ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಭಾರತೀಯ ಭೂ ವೈಜ್ಞಾನಿಕ ಸಮೀಕ್ಷೆ ಮಹಾ ನಿರ್ದೇಶಕ ಕೆ.ವಿ. ಕೃಷ್ಣಮೂರ್ತಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದ ಆರ್.ಕೆ. ಪ್ರಸನ್ನ ಕುಮಾರ್, ಬೆಂಗಳೂರು ನಗರ ವಿಶ್ವವಿದ್ಯಾಲಯದ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್ಮೆಂಟ್ ಪ್ರಾಧ್ಯಾಪಕಿ ನಿರ್ಮಲಾ ಎಂ., ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಕೆ.ಶಶಿಕಲಾ, ರೂಪಕಲಾ ನೃತ್ಯ ಶಾಲೆಯ ನಿರ್ದೇಶಕಿ ರೂಪಶ್ರೀ ಅರವಿಂದ, ಕರ್ನಾಟಕ ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟದ ಮಹಿಳಾ ವಿಭಾಗದ ಅಧ್ಯಕ್ಷೆ ಉಮಾ ಜಗದೀಶ, ಓಂ ಯೋಗ ಮತ್ತು ಧ್ಯಾನ ತರಬೇತಿ ಕೇಂದ್ರದ ನಿರ್ದೇಶಕಿ ಕೆ.ಎಸ್. ಕೊಟ್ರಮ್ಮ ಅವರು ಪ್ರಶಸ್ತಿ ಸ್ವೀಕರಿಸಿದರು.

ಮಾರುತಿ ಸಿಲ್ಕ್ಸ್‌ನ ನಿರ್ವಾಹಕ ಎಚ್ .ಲೋಕೇಶ್, ಕರ್ನಾಟಕ ಯುವ ಸಂಸ್ಥೆಗಳ ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿ ಡಿ. ಫಣೇಂದ್ರ ಪ್ರಸಾದ್ ಹಾಗೂ ಮುಂಬೈನ ಆಲ್ ಇಂಡಿಯಾ ಪಿಕಲ್ ಬಾಲ್ ಸಂಸ್ಥೆಯ ಪ್ರತಿನಿಧಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿವೃತ್ತ ನಿರ್ದೇಶಕ ಡಾ.ಸಿ. ರಾಮಚಂದ್ರ, ಮಾಜಿ ಶಾಸಕ ಎಸ್. ಬಾಲರಾಜ್, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಎಂ. ಮುನಿನಾರಾಯಣಪ್ಪ, ಚಲನಚಿತ್ರ ನಿರ್ಮಾಪಕಿ ಸುಕನ್ಯಾ ಹಿರೇಮಠ, ಅಖಿಲ ಕರ್ನಾಟಕ ಸರ್ಕಾರಿ ಮಹಿಳಾ ನೌಕರರ ಸಂಘದ ರಾಜ್ಯಾಧ್ಯಕ್ಷೆ ರೋಷಣಿ ಗೌಡ, ಕರ್ನಾಟಕ ಪದ್ಮಶಾಲಿ ಸಂಘದ ಅಧ್ಯಕ್ಷ ಎನ್. ಜಗದೀಶ್ ಉಪಸ್ಥಿತರಿದ್ದರು.

ಪ್ರಶಸ್ತಿ ಪ್ರದಾನದ ಬಳಿಕ ಸಂಗೀತ–ನೃತ್ಯ ಕಾರ್ಯಕ್ರಮಗಳು ನಡೆದವು.

ಕಾರ್ಯಕ್ರಮದಲ್ಲಿ ಕೆ.ವಿ. ಕೃಷ್ಣಮೂರ್ತಿ, ಆರ್.ಕೆ. ಪ್ರಸನ್ನ ಕುಮಾರ್, ನಿರ್ಮಲಾ ಎಂ., ಕೆ.ಶಶಿಕಲಾ, ರೂಪಶ್ರೀ ಅರವಿಂದ, ಉಮಾ ಜಗದೀಶ, ಕೆ.ಎಸ್. ಕೊಟ್ರಮ್ಮ, ಎಚ್ .ಲೋಕೇಶ್, ಡಿ. ಫಣೇಂದ್ರ ಪ್ರಸಾದ್ ಹಾಗೂ ಮುಂಬೈನ ಆಲ್ ಇಂಡಿಯಾ ಪಿಕಲ್ ಬಾಲ್ ಸಂಸ್ಥೆಯ ಪ್ರತಿನಿಧಿಗೆ 'ಹಂಸ ಸಮ್ಮಾನ್ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಚಿತ್ರಕಲಾ ಪರಿಷತ್ ಅಧ್ಯಕ್ಷರಾಗಿ ಬಿ.ಎಲ್. ಶಂಕರ್ ಪುನರಾಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರಾಗಿ ಕಾಂಗ್ರೆಸ್ ಮುಖಂಡ ಬಿ.ಎಲ್. ಶಂಕರ್ ಅವರು ಪುನರಾಯ್ಕೆಆಗಿದ್ದಾರೆ.

ಈ ಸ್ಥಾನಕ್ಕೆ ಅವರು ಐದನೇ ಬಾರಿ ಆಯ್ಕೆಯಾಗಿದ್ದಾರೆ. ಪರಿಷತ್ತಿನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಯೂ ನಡೆದಿದೆ. ಈ ಹುದ್ದೆಗಳಿಗೆ ಇದೇ 29ಕ್ಕೆ ಚುನಾವಣೆ ನಿಗದಿಯಾಗಿತ್ತು. ಕೆಲವರು ನಾಮಪತ್ರವನ್ನು ವಾಪಸ್ ಪಡೆದಿದ್ದರಿಂದ ಉಳಿದ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಪ್ರಭಾಕರ್ ಟಿ. ಹಾಗೂ ಪ್ರೊ.ಕೆ.ಎಸ್. ಅಪ್ಪಾಜಯ್ಯ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಎಸ್. ಎನ್. ಶಶಿಧರ್, ಖಜಾಂಚಿಯಾಗಿ ಎನ್. ಲಕ್ಷ್ಮೀಪತಿ ಬಾಬು, ಜಂಟಿ ಕಾರ್ಯದರ್ಶಿಯಾಗಿ ತಾರಕೇಶ್ವರಿ ಟಿ.ವಿ., ಸುಬ್ರಮಣ್ಯ ಕುಕ್ಕೆ, ಬಿ.ಎಲ್. ಶ್ರೀನಿವಾಸ, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಟಿ. ಚಂದ್ರಶೇಖರ್, ಬಿ.ವೈ. ವಿನೋದ, ರಮಾ ಶರ್ಮಾ, ಅಮ್ರಿತ ವಿಮಲನಾಥನ್ ಎಸ್., ಲಕ್ಷ್ಮೀಪತಿ ಜಿ., ಬಾಳಾಸಾಬ ಸದಲಗೆ ಹಾಗೂ ಸಿ.ಪಿ. ಉಷಾರಾಣಿ ಆಯ್ಕೆಯಾಗಿದ್ದಾರೆ. ನೂತನ ಆಡಳಿತ ಮಂಡಳಿ 3 ವರ್ಷಗಳವರೆಗೆ ಕಾರ್ಯನಿರ್ವಹಿಸಲಿದೆ ಎಂದು ಚುನಾವಣಾಧಿಕಾರಿ ಪವನ್ ಕುಮಾರ್ ತಿಳಿಸಿದ್ದಾರೆ.

ಬಿ.ಎಲ್.ಶಂಕರ್

ಗಾಣಿಗರ ಮಠದ ಜ್ಞಾನಮಂದಿರ ಉದ್ಘಾಟನೆ

ನೆಲಮಂಗಲ: 'ಪೂರ್ಣಾನಂದಾಪುರಿ ಶ್ರೀಗಳು ಪೂರ್ವಾಶ್ರಮದಲ್ಲಿದ್ದಾಗ(ಬಿ.ಜೆ.ಪುಟ್ಟಸ್ವಾಮಿ) ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಂದ ಜಾಗ ಮತ್ತು ಅನುದಾನ ಪಡೆದು ಗಾಣಿಗ ಸಮಾಜದ ಏಳಿಗೆಗಾಗಿ ವಿನಿಯೋಗಿಸಿದ್ದರು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಸಮೀಪದ ನಗರೂರಿನ ಶ್ರೀಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನಮಠದಲ್ಲಿ ಆಯೋಜಿಸಿದ್ದ ಪೂರ್ಣಾನಂದ ಪುರಿ ಶ್ರೀಗಳ 4ನೇ ಪಟ್ಟಾಭಿಷೇಕ ಮಹೋತ್ಸವದಲ್ಲಿ, ನೂತನ ಜ್ಞಾನಮಂದಿರ ಹಾಗೂ ಟ್ರಸ್ಟ್ ಕಚೇರಿ ಉದ್ಘಾಟಿಸಿ ಅವರು ಮಾತನಾಡಿದರು. ಕೈಲಾಸಾಶ್ರಮದ ಜಯೇಂದ್ರಪುರಿ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿದರು.

ಸಚಿವ ಸೋಮಣ್ಣ ಕಾಲಿಗೆ ಬಿದ್ದ ಡಿ.ಸಿ

ಹಾಸನ: ಅರಸೀಕೆರೆ ತಾಲ್ಲೂಕಿನ ಕೋಡಿಮಠಕ್ಕೆ ಶನಿವಾರ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ಲತಾ ಕುಮಾರಿ, ಕೇಂದ್ರ ಸಚಿವ ವಿ.ಸೋಮಣ್ಣ ಅವರ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಜಿಲ್ಲಾಧಿಕಾರಿ ಅವರು ಸಚಿವರು ಬರುತ್ತಿದ್ದಂತೆಯೇ ಕಾಲಿಗೆ ಬಿದ್ದು ನಮಸ್ಕರಿಸಿದರು. 'ಸರ್ ನಿಮ್ಮನ್ನು ನೋಡಿ ಖುಷಿಯಾಯಿತು. ನೀವು ನಮಗೆ ಬಹಳ ಬೇಕಾದವರು' ಎಂದು ಹೇಳಿರುವುದು ವಿಡಿಯೊದಲ್ಲಿದೆ. ಸಸಿ ಮೊದಲಾದ ಉಡುಗೊರೆಯನ್ನೂ ಅವರು ನೀಡಿದ್ದಾರೆ.

ಪ್ರತಿಕ್ರಿಯಿಸಿದ ಸಚಿವರು, 'ನೀವು ಒಳ್ಳೆಯ ಕೆಲಸಗಾರರು. ಒಳ್ಳೆಯ ಕೆಲಸ ಮಾಡುತ್ತೀರಿ. ಯಾರ ಬಾಯಿಗೂ ಬೀಳುವುದು ಬೇಡ' ಎಂದಿದ್ದಾರೆ.

'ತಮಿಳರ ಭಾವನೆಗೆ ಬ್ರಿಟಿಷ್ ವಿದ್ವಾಂಸರು ಕಾರಣ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಕನ್ನಡ, ತೆಲುಗು ಇವೆಲ್ಲವೂ ತಮಿಳಿನಿಂದ ಹುಟ್ಟಿದವು ಎಂಬ ಭಾವನೆ ತಮಿಳು ಭಾಷಿಕರಲ್ಲಿ ಬೇರೂರಲು 200 ವರ್ಷಗಳ ಹಿಂದೆ ಮತಪ್ರಚಾರಕ್ಕೆ ಭಾರತಕ್ಕೆ ಬಂದಿದ್ದ ಬ್ರಿಟಿಷ್ ವಿದ್ವಾಂಸರು ತಮಿಳು ಅಧ್ಯಯನ ಮಾಡಿ, ನಂತರ ಕನ್ನಡ, ತೆಲುಗು ಇತರ ಭಾಷೆಗಳನ್ನು ಕಲಿತದ್ದೂ ಒಂದು ಕಾರಣ' ಎಂದು ಮದ್ರಾಸ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ತಮಿಳ್ ಸೆಲ್ವಿ ಹೇಳಿದರು.

ಪ್ರೊ.ತಮಿಳ್ ಸೆಲ್ವಿ

ನಗರದ ರಾ.ಹ. ದೇಶಪಾಂಡೆ ಸಭಾಂಗಣದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ವತಿಯಿಂದ ಭಾನುವಾರ ನಡೆದ 'ಕನ್ನಡ ಭಾಷೆಯ ಅಸ್ಮಿತೆ' ವಿಚಾರಸಂಕಿರಣದಲ್ಲಿ ಮಾತನಾಡಿದರು.

'ಭಾರತಕ್ಕೆ ಬಂದಿದ್ದ ಬ್ರಿಟಿಷ್ ವಿದ್ವಾಂಸರು ಇಲ್ಲಿನ ಭಾಷೆ ಕಲಿಯುತ್ತಾರೆ ಮತ್ತು ಸಾಹಿತ್ಯ ಅಧ್ಯಯನ ಮಾಡುತ್ತಾರೆ. ಅವರು ಕರ್ನಾಟಕಕ್ಕೂ ಮೊದಲು ತಮಿಳುನಾಡಿಗೆ ಭೇಟಿ ನೀಡಿರುತ್ತಾರೆ. ಈ ವಿದ್ವಾಂಸರು ಮೊದಲು ತಮಿಳು ಕಲಿತು, ತಮಿಳು ಕೃತಿಗಳನ್ನು ಓದುತ್ತಾರೆ. ನಂತರ ಕನ್ನಡ, ತೆಲುಗು ಮೊದಲಾದವುಗಳನ್ನು ಕಲಿಯುತ್ತಾರೆ. ತಮಿಳಿನಲ್ಲಿರುವ ಕೆಲ ಪದಗಳು ಕನ್ನಡ, ತೆಲುಗಿನಲ್ಲಿರುವುದನ್ನು ಕಲಿಕೆ ಸಂದರ್ಭದಲ್ಲಿ ಗಮನಿಸುತ್ತಾರೆ. ತಮಿಳಿನಿಂದ ಈ ಪದಗಳು ಬಂದಿವೆ ಎಂದುಕೊಳ್ಳುತ್ತಾರೆ' ಎಂದರು.

'ಸುಬ್ರಮಣ್ಯ ಭಾರತಿ ಅವರು ತಮಿಳಿನ ದೊಡ್ಡ ಕವಿ. ಈ ಕವಿ ಒಂದು ಪದ್ಯದಲ್ಲಿ ತಮಿಳಿನಿಂದ ಕನ್ನಡ, ತೆಲುಗು ಹುಟ್ಟಿವೆ ಎಂದು ಹೇಳಿದ್ದಾರೆ. ಮನೋನ್ಮಣಿ ಸುಂದರಂ ಪಿಳ್ಳೈ ಅವರು ರಚಿಸಿರುವ ತಮಿಳಿನ ನಾಡಗೀತೆಯಲ್ಲಿ ಕನ್ನಡ, ತೆಲುಗು, ಮಲಯಾಳಂ ಈ ಭಾಷೆಗಳ ತಾಯಿ ತಮಿಳು ಎಂದು ಇದೆ. ಶಾಲಾ ಪಠ್ಯಪುಸ್ತಕಗಳ ಮೊದಲಿಗೆ ನಾಡಗೀತೆ ಮುದ್ರಣವಾಗಿರುತ್ತದೆ. ಹೀಗಾಗಿ, ತಮಿಳುನಾಡಿನ ಜನ ತಮಿಳು ಕನ್ನಡ, ತೆಲುಗು, ಮಲಯಾಳಂನ ತಾಯಿ ತಮಿಳು ಎಂದು ನಂಬಿದ್ದಾರೆ' ಎಂದು ವಿಶ್ಲೇಷಿಸಿದರು.

ಭಾಷಾತಜ್ಞ ಗಣೇಶ್ ಎನ್.ದೇವಿ, ಭಾಷಾ ತಜ್ಞ ಸಂಗಮೇಶ ಸವದತ್ತಿಮಠ, ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಶಶಿಕಲಾ ಉಪಸ್ಥಿತರಿದ್ದರು.

ಪಾಟೀಲ ದೂರು ಕೊಟ್ಟರೆ ಕ್ರಮ

ಆರೋಪ ಗಂಭೀರವೇನಲ್ಲ ಗೃಹ ಸಚಿವ ಜಿ. ಪರಮೇಶ್ವರ ಹೇಳಿಕೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಹಣ ನೀಡಿದರಷ್ಟೇ ಮನೆ ಮಂಜೂರು ಮಾಡಲಾಗುತ್ತದೆ ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರೂ ಆಗಿರುವ ಶಾಸಕ ಬಿ.ಆರ್. ಪಾಟೀಲ ಹೇಳಿಕೆ ಕುರಿತು ಅವರು ದೂರು ನೀಡಿದರೆ ಪೊಲೀಸರು ಕ್ರಮ ಕೈಗೊಳ್ಳಲಿದ್ದಾರೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಪರಮೇಶ್ವರ

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ಪಾಟೀಲ ಅವರು ಮಾಡಿರುವುದು ಗಂಭೀರ ಆರೋಪವೇನಲ್ಲ. ಅವರು ಸಂಬಂಧಿಸಿದ ಸಚಿವರೊಂದಿಗೆ ಮಾತನಾಡಲಿ' ಎಂದರು.

ಸಚಿವ ಎಚ್.ಕೆ.ಪಾಟೀಲ ಅವರು ಗಣಿ ಅಕ್ರಮದ ಬಗ್ಗೆ ಪತ್ರ ಬರೆದಿದ್ದು 'ಗಣಿ ಅಕ್ರಮದಲ್ಲಿ ₹ 1.5 ಲಕ್ಷ ಕೋಟಿ ದುರ್ಬಳಕೆಯಾಗಿದೆ ಎಂದಿದ್ದಾರೆ. ಲೂಟಿ ಮಾಡಿದವರಿಂದಲೇ ಹಣ ವಸೂಲಿ ಮಾಡಬೇಕು ಹಾಗೂ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ. ಇದರ ಬಗ್ಗೆ ಕ್ರಮ ವಹಿಸಲಾಗುವುದು' ಎಂದು ತಿಳಿಸಿದರು.

'ಪೊಲೀಸರಿಗೆ ಮುಕ್ತವಾಗಿ ಕೆಲಸ ಮಾಡಲು ಹೇಳಿದ್ದೇವೆ, ಯಾರ ಮೇಲೂ ಒತ್ತಡ ಹೇರಿಲ್ಲ. ಹಿಂದೆ ಪಿಎಸ್ಐ ನೇಮಕಾತಿಯಲ್ಲಿ ಹಗರಣವಾಗಿದ್ದರಿಂದ ಖಾಲಿ ಉಳಿದ ಹುದ್ದೆಗಳನ್ನು ಐದು ವರ್ಷಗಳಿಂದ ಭರ್ತಿ ಮಾಡಲು ಸಾಧ್ಯವಾಗಿಲ್ಲ. ಈಗಾಗಲೇ ಪ್ರಕ್ರಿಯೆ ನಡೆಯುತ್ತಿದ್ದು, ಶೀಘ್ರದಲ್ಲಿಯೇ ಅರ್ಹರಿಗೆ ಆದೇಶ ಪ್ರತಿ ನೀಡಲಾಗುವುದು' ಎಂದು ಹೇಳಿದರು.

ಮುಜುಗರ ಇಲ್ಲ: 'ಬಿ.ಆರ್. ಪಾಟೀಲ ಹೇಳಿಕೆಯಿಂದ ಸರ್ಕಾರಕ್ಕೆ ಮುಜುಗರವಾಗುವಂಥದ್ದು ಏನೂ ಇಲ್ಲ. ಅವರು ಹಿರಿಯ ರಾಜಕಾರಣಿಯಾಗಿದ್ದು ನೇರವಾಗಿ ಮಾತನಾಡುವ ಸ್ವಭಾವ ರೂಢಿಸಿಕೊಂಡಿದ್ದಾರೆ' ಎಂದು ಸಣ್ಣ ನೀರಾವರಿ ಖಾತೆ ಸಚಿವ ಎನ್.ಎಸ್. ಭೋಸರಾಜು ಹೇಳಿದರು.

'ರಾಜ್ಯದ ಆಡಳಿತದಲ್ಲಿ ಹಿಂದೆ ಈ ರೀತಿ ಆಗಿವೆ. ಪಾಟೀಲರ ಹೇಳಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ನಿರ್ದಿಷ್ಟವಾಗಿ ಯಾವ ಪ್ರಕರಣದಲ್ಲಿ ಅನ್ಯಾಯವಾಗಿದೆ ಎನ್ನುವುದನ್ನು ದಾಖಲೆ ಸಮೇತ ದೂರು ನೀಡಲಿ' ಎಂದರು.

ಮುಖ್ಯಾಂಶಗಳು

- ಪಾಟೀಲರ ಹೇಳಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ
- ಸಂಬಂಧಿಸಿದ ಸಚಿವರ ಜೊತೆ ಮಾತನಾಡಲಿ; ದಾಖಲೆ ಸಮೇತ ದೂರು ನೀಡಲಿ
- ಸಚಿವ ಪರಮೇಶ್ವರ, ಭೋಸರಾಜು ಸಲಹೆ

'ಮಾಹಿತಿ ಇಲ್ಲದೆ ಬಿಆರ್‌ಪಿ ಸುಳ್ಳು ಆರೋಪ'

ಹಾರೋಹಳ್ಳಿ (ರಾಮನಗರ): 'ಹಣ ನೀಡಿದವರಿಗಷ್ಟೇ ಮನೆ ಮಂಜೂರು ಮಾಡಲಾಗುತ್ತಿದೆ ಎಂಬುದೆಲ್ಲ ಸುಳ್ಳು. ಯಾರೋ ಒಬ್ಬರು ಹೇಳಿದ ಮಾತ್ರಕ್ಕೆ ಇದೆಲ್ಲವೂ ಸತ್ಯ ಆಗುತ್ತದೆಯೇ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.

ಶಿವಕುಮಾರ್

ಬಿ.ಆರ್. ಪಾಟೀಲ ಆರೋಪಕ್ಕೆ ಭಾನುವಾರ ಇಲ್ಲಿ ಅವರು ಈ ರೀತಿ ಪ್ರತಿಕ್ರಿಯಿಸಿದರು.

'ನಾನು ಅಥವಾ ನೀವು ಬಂದು ಗ್ರಾಮಸಭೆಯಲ್ಲಿ ಮನೆ ಕೇಳಿದ ತಕ್ಷಣ ಕೊಡಲಾಗುತ್ತದೆಯೆ? ಯಾರಿಗೆ ಮನೆ ಕೊಡಬೇಕು ಎಂಬುದನ್ನು ಗ್ರಾಮ ಪಂಚಾಯಿತಿ, ಪುರಸಭೆ, ನಗರಸಭೆ ಸೇರಿದಂತೆ ಸ್ಥಳೀಯ ಆಡಳಿತ ಸಂಸ್ಥೆಗಳು ನಿರ್ಧರಿಸುತ್ತವೆ' ಎಂದು ಸಮರ್ಥಿಸಿಕೊಂಡರು.

'ವಸತಿ ನಿಗಮದಲ್ಲಿ ಯಾವುದೇ ರೀತಿಯ ಅಕ್ರಮ ನಡೆದಿಲ್ಲ. ಆದರೆ, ಶಾಸಕ ಬಿ.ಆರ್. ಪಾಟೀಲಗೆ ಪೂರ್ಣ ಮಾಹಿತಿ ಇದೆಯೋ ಇಲ್ಲವೊ ಗೊತ್ತಿಲ್ಲ' ಎಂದರು.

'ಪಾಟೀಲ ಹೇಳಿಕೆಯಲ್ಲಿ ಅಚ್ಚರಿ ಏನಿಲ್ಲ'

ಮಂಡ್ಯ: 'ವಿಧಾನಸೌಧದಲ್ಲಿ ಮಧ್ಯವರ್ತಿಗಳ ಅವಶ್ಯಕತೆ ಇಲ್ಲದಂತೆ ಸಚಿವರೇ ಎಲ್ಲವನ್ನೂ ಶುರು ಮಾಡಿಕೊಂಡು, ಎಷ್ಟು ಕೊಡಬೇಕೆಂದು ಆಯಾ ಇಲಾಖೆಗಳಲ್ಲಿ ಫಿಕ್ಸ್ ಮಾಡಿಕೊಂಡಿದ್ದಾರೆ. ಹೀಗಿರುವಾಗ ವಸತಿ ಇಲಾಖೆಯಲ್ಲಿ ಹಣ ಕೊಟ್ಟವರಿಗೆ ಮನೆ ಎಂದು ಶಾಸಕ ಬಿ.ಆರ್.ಪಾಟೀಲ ಅವರು ಹೇಳಿಕೆ ನೀಡಿರುವುದರಲ್ಲಿ ಆಶ್ಚರ್ಯವೇನಿಲ್ಲ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಕುಮಾರಸ್ವಾಮಿ

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸರ್ಕಾರದ ಹಲವು ಇಲಾಖೆಯಲ್ಲಿ ದುಡ್ಡು ಬಿಡುಗಡೆಗೆ ಶಾಸಕರೇ ಹಣ ಕೊಡಬೇಕು. ಕೆಲವರು ನಿಮ್ಮದೊಂದು ಲೆಟರ್ ಕೊಡಿ ಸರ್, ದುಡ್ಡು ತೆಗೆದುಕೊಂಡು ಬರುತ್ತೇವೆ ಎನ್ನುತ್ತಿದ್ದಾರೆ. ಹೆಸರಿಗೆ ಶಾಸಕರ ಲೆಟರ್, ಮಧ್ಯವರ್ತಿಗಳು ದುಡ್ಡು ಕೊಟ್ಟು ಹಣ ತರುತ್ತಾರೆ. ಬಹಳ ಮಂದಿ ನನ್ನ ಬಳಿಯೂ ಮನೆ ಮಂಜೂರು ಮಾಡಿಸಿಕೊಂಡು ತರಲು ಅಷ್ಟು ಕೊಟ್ಟಿದ್ದೇವೆ ಎಂದು ಚರ್ಚಿಸಿದ್ದಾರೆ' ಎಂದು ತಿಳಿಸಿದರು.

'ಈ ಸರ್ಕಾರದ ಬಗ್ಗೆ ಚರ್ಚೆಯ ಅವಶ್ಯಕತೆ ಇಲ್ಲ. 2028ಕ್ಕೆ ಮುಖ್ಯಮಂತ್ರಿ ಆಗುವ ಬಗ್ಗೆ ಡಿ.ಕೆ. ಶಿವಕುಮಾರ್ ಕನಸು ಕಾಣಬೇ ಕಷ್ಟೆ' ಎಂದರು.,

ಫಲಾನುಭವಿಗಳ ಆಯ್ಕೆ ಸಭೆಯಲ್ಲಿ ಹಣ ಹಂಚಿಕೆ ವಾಗ್ವಾದ

ಕಲಬುರಗಿ: ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಹಣ ನೀಡಿದವರಿಗಷ್ಟೇ ಮನೆಗಳು ಮಂಜೂರು ಆರೋಪ ಪ್ರಕರಣದಲ್ಲಿ ಶಾಸಕ ಬಿ.ಆರ್. ಪಾಟೀಲ ಅವರು ಆಳಂದ ತಾಲ್ಲೂಕಿನ ಧಂಗಾಪುರ ಗ್ರಾಮ ಪಂಚಾಯಿತಿ ಉಲ್ಲೇಖಿಸಿದ್ದರು. ಧಂಗಾಪುರ ಗ್ರಾ.ಪಂ.ನ ಫಲಾನುಭವಿಗಳ ಆಯ್ಕೆಯ ಸಭೆಯಲ್ಲಿ ಮನೆಗಳನ್ನು ಹಣ ಕೊಟ್ಟು ತಂದಿರುವುದಾಗಿ ಹೇಳಿಕೆ ನೀಡಿದ್ದರ ವಾಗ್ವಾದದ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ಮನೆಗಳ ಹಂಚಿಕೆ ಸಂಬಂಧ ಬಟ್ಟರ್ಗಾ ಗ್ರಾಮದಲ್ಲಿ ಜನವರಿ 21ರಂದು ಸಭೆ ಜರುಗಿತ್ತು. ಪಿಡಿಒ ಮಂಜೂರ್ ಪಟೇಲ್, ಅಧ್ಯಕ್ಷೆ ಕಾಶಿಬಾಯಿ ಭಿಮಶಾ ದೊಡ್ಡಮನಿ ಸೇರಿದಂತೆ ಸದಸ್ಯರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು. ಬಿಳಿಯ ಹಾಳೆಯ ಮೇಲೆ ಆಕಾಂಕ್ಷಿಗಳ ಹೆಸರು ಬರೆಯುವಂತೆ ಅಧ್ಯಕ್ಷೆಯ ಪುತ್ರ ಸೂಚಿಸಿದ್ದಕ್ಕೆ ಕೆಲವು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಪಂಚಾಯಿತಿಯ ಪುಸ್ತಕದಲ್ಲೇ ಹೆಸರುಗಳನ್ನು ಬರೆಯಬೇಕು ಎಂದು ತಾಕೀತು ಮಾಡಿದರು.

ಕೆಲ ನಿಮಿಷಗಳ ಬಳಿಕ ಅಧ್ಯಕ್ಷೆಯ ಪುತ್ರ, 'ಈ ಹಿಂದಿನ ಸರ್ಕಾರದ ಮನೆಗಳು ಎಲ್ಲಿ ಬಂದಿವೆ? ನಾವು ಹಾಕಿಕೊಂಡು (ದುಡ್ಡು) ತಂದಿದ್ದೇವೆ' ಎಂದರು. ಇದಕ್ಕೆ ಆಕ್ಷೇಪಿಸಿದ ಕೆಲವರು, 'ನೀವು ಹಾಕಿಕೊಂಡು ತಂದಿದ್ದರೆ ಗ್ರಾಮ ಸಭೆಯನ್ನು ಏಕೆ ಮಾಡುತ್ತಿದ್ದೀರಾ' ಎಂದು ಪ್ರಶ್ನಿಸಿದರು. ಶಾಂತಯ್ಯ ಎಂಬುವವರು ಮಧ್ಯ ಪ್ರವೇಶಿಸಿ, 'ದುಡ್ಡು ಕೊಟ್ಟು ಮಾಡುವುದಿದ್ದರೆ ಅದನ್ನು ಪತ್ರದಲ್ಲಿ ಬರೆದು ಕೊಡಬೇಕು' ಎಂದು ಏರು ಧ್ವನಿಯಲ್ಲಿ ಅಧ್ಯಕ್ಷೆಯ ಪುತ್ರನಿಗೆ ತಾಕೀತು ಮಾಡಿದರು. ಇದಕ್ಕೆ ಪ್ರತಿಯಾಗಿ 'ದುಡ್ಡು ಕೊಟ್ಟಿದ್ದೇನೆ ಎಂದು ನಾನು ಹೇಳಿಲ್ಲ' ಎನ್ನುವ ದೃಶ್ಯಗಳು ವಿಡಿಯೊದಲ್ಲಿ ಸೆರೆಯಾಗಿವೆ.

ಶಾಂತಯ್ಯ ಹಾಗೂ ಅಧ್ಯಕ್ಷೆಯ ಪುತ್ರನ ನಡುವೆ ವಾಗ್ವಾದ ಜೋರಾಗುತ್ತಿದ್ದಂತೆ ಸಭೆಯಲ್ಲಿ ಇದ್ದವರೂ ಪರಸ್ಪರ ಮಾತಿನ ಚಕಮಕಿಗೆ ಇಳಿದರು.
ಈ ನಡುವೆ ಗ್ರಾಮಸ್ಥರೊಬ್ಬರು ಮತ್ತೊಬ್ಬನಿಗೆ 'ಹಣ ಕೊಟ್ಟಿದ್ದೀಯಾ' ಎಂದು ಪ್ರಶ್ನಿಸಿದರು. 'ಹೌದು ₹ 10 ಸಾವಿರ ಕೊಟ್ಟಿದ್ದೇನೆ' ಎಂದು ಇಬ್ಬರೂ ನಗಾಡುವುದು ವಿಡಿಯೊದಲ್ಲಿದೆ.

ಪಾಟೀಲ ಆಕ್ಷೇಪ...

ಒಂದನೇ ಪುಟದಿಂದ...

'ಅಲ್ಪಸಂಖ್ಯಾತರ ಇಲಾಖೆಯು ಈ ಬಗ್ಗೆ ಮುಂಚಿತವಾಗಿ ಹೇಳಿದ್ದರೆ ಕೆಕೆಆರ್‌ಡಿಬಿ ಅನುದಾನವನ್ನು ಬೇರೆ ಕಡೆ ಖರ್ಚು ಮಾಡುತ್ತಿದ್ದೆವು. ನನ್ನ ಗಮನಕ್ಕೆ ತರದೆ ಈ ರೀತಿ ಮಾಡಿದರೆ ಕಾಮಗಾರಿ ಡುಪ್ಲಿಕೇಶನ್ ಆಗುತ್ತದೆ' ಎಂದರು.

'ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಬೆಂಗಳೂರು ದಕ್ಷಿಣ ತಾಲ್ಲೂಕು ಕಚೇರಿಗೆ ತೆರಳಿದ್ದರು. ಸಾರ್ವಜನಿಕರ ಬಗ್ಗೆ ಕಳಕಳಿ ಇರಿಸಿಕೊಂಡು, 'ತಾಲ್ಲೂಕು ಕಚೇರಿಯಲ್ಲಿ ಯಾವ ಕೆಲಸಕ್ಕೆ ಎಷ್ಟೆಷ್ಟು ಹಣ ಕೊಡಬೇಕು ಎಂದು ರೇಟ್‌ಬೋರ್ಡ್ ಹಾಕಿ' ಎಂದು ಹೇಳಿಕೆ ಕೊಟ್ಟಿದ್ದರು. ನಾನೂ ಅದೇ ಧಾಟಿಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮದ ಬಗ್ಗೆ ಸಚಿವ ಜಮೀರ್ ಅಹಮದ್ ಖಾನ್ ಅವರ ಪಿ.ಎ. ಬಳಿ ಮಾತನಾಡಿದ್ದೇನೆ. ಯಾವುದೇ ವ್ಯಕ್ತಿಯ ವಿರುದ್ಧ ಮಾತನಾಡಿಲ್ಲ. ಆದರೂ ನನ್ನ ಮಾತನ್ನು ಏಕೆ ಇಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದಾರೆ? ಜವಾಬ್ದಾರಿಯುತ ಸಚಿವ ಸ್ಥಾನದಲ್ಲಿರುವ ಕೃಷ್ಣ ಬೈರೇಗೌಡರು ತಮ್ಮದೇ ಖಾತೆಯ ಬಗ್ಗೆ ಮಾತನಾಡಿದ್ದಾರಲ್ಲವೆ' ಎಂದು ಪ್ರಶ್ನಿಸಿದರು.

'ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವ ದಿನೇಶ್ ಗುಂಡೂರಾವ್ ಅವರು ಮಾತನಾಡಿದ್ದನ್ನು ಮಾಧ್ಯಮಗಳಲ್ಲಿ ನೋಡಿದ್ದೇನೆ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರಿಗೆ ಖಂಡಿಸುವ ಸ್ವಾತಂತ್ರ್ಯ ಇದೆ. ನಾನು ಅದಕ್ಕೆ ಅಡ್ಡಿಪಡಿಸಲ್ಲ. ಪ್ರಜಾಪ್ರಭುತ್ವದಲ್ಲಿ ಸ್ವಾಗತ, ಖಂಡನೆ ಸಹಜ' ಎಂದು ಪ್ರತಿಕ್ರಿಯಿಸಿದರು.

ಕರಾಟೆ ಅಭ್ಯಾಸ...

ಪ್ರಜಾವಾಣಿ ಚಿತ್ರ: ಅನೂಪ್ ರಾಘ .ಟಿ..

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ 'ಕರಾಟೆ ಸಂಘ'ವು ವಿಶ್ವ ಕರಾಟೆ ದಿನದ ಪ್ರಯುಕ್ತ ಭಾನುವಾರ ಆಯೋಜಿಸಿದ್ದ 'ಸ್ವಯಂ ರಕ್ಷಣೆ ಅಭ್ಯಾಸ'ದಲ್ಲಿ ಪಾಲ್ಗೊಂಡ ಚಿಣ್ಣರು

'ಸಿದ್ದರಾಮಯ್ಯ ಭ್ರಷ್ಟರ ಚಾಂಪಿಯನ್'

ಪ್ರಜಾವಾಣಿ ವಾರ್ತೆ

ಮೈಸೂರು/ ಮಂಡ್ಯ: 'ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಿದ್ದ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದ ನಂತರ ಭ್ರಷ್ಟರ ಚಾಂಪಿಯನ್ ಆಗಿದ್ದಾರೆ. ಲೂಟಿ ಮಾಡುವವರಿಗೆ ಶ್ರೀರಕ್ಷೆಯಾಗಿದ್ದಾರೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್ ಹೈಕಮಾಂಡ್‌ಗೆ ಕಪ್ಪಕಾಣಿಕೆ ಸಲ್ಲಿಸಲು ರಾಜ್ಯ ಸರ್ಕಾರದಿಂದ ಲೂಟಿ ನಡೆಯುತ್ತಿದೆ. ಹೈಕಮಾಂಡ್ ವೀಕ್ ಆಗಿರುವುದರಿಂದ ರಾಜ್ಯ ಕಾಂಗ್ರೆಸ್ ತುಘಲಕ್ ಆಡಳಿತ ನಡೆಸುತ್ತಿದೆ' ಎಂದರು.

'ಈ ಸರ್ಕಾರದಲ್ಲಿ ಪ್ರತಿ ಇಲಾಖೆಯಲ್ಲೂ ಶೇಕಡಾ60ರಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ಬಡವರಿಗೆ ಮನೆ ಹಂಚಿಕೆಯಲ್ಲೂ ಹಣ ವಸೂಲಿ ಮಾಡುತ್ತಿದ್ದಾರೆ. ಹೈಕಮಾಂಡ್‌ಗೆ ಕಪ್ಪ ಕಾಣಿಕೆ ನೀಡಲು ನಾ ಮುಂದು ತಾ ಮುಂದು ಎಂದು ನಿಂತಿದ್ದಾರೆ. ಯಾರು ಜಾಸ್ತಿ ಕಪ್ಪ ನೀಡುತ್ತಾರೆಯೋ ಅವರಿಗೆ ಬೆಲೆಹೆಚ್ಚು' ಎಂದು ಟೀಕಿಸಿದರು.

ಡಿ.ಕೆ.ಶಿವಕುಮಾರ್ ಅವರು ಸಿದ್ದರಾಮಯ್ಯ ಅವರಿಂದ ಮುಖ್ಯಮಂತ್ರಿ ಸ್ಥಾನವನ್ನು ಒದ್ದು ಕಿತ್ತುಕೊಳ್ಳಲಿ. ಬಳಿಕ 2028ಕ್ಕೆ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮಾತನಾಡಲಿ
ಆರ್. ಅಶೋಕ
ವಿಧಾನಸಭೆ ವಿರೋಧ ಪಕ್ಷದ ನಾಯಕ

ನಿಧನ ವಾರ್ತೆ

ಕುಸುಮಾ ಶಾನಭಾಗ

ಬೆಂಗಳೂರು: ಪತ್ರಕರ್ತೆ ಕುಸುಮಾ ಶಾನಭಾಗ (78) ಅವರು ಅನಾರೋಗ್ಯದಿಂದಾಗಿ ಭಾನುವಾರ ಮಧ್ಯಾಹ್ನ ನಿಧನರಾಗಿದ್ದಾರೆ.

ಕುಸುಮಾ ಶಾನಭಾಗ

ಕುಸುಮಾ ಅವಿವಾಹಿತರಾಗಿದ್ದರು. ಅವರಿಗೆ ತಂಗಿ ಮತ್ತು ತಮ್ಮ ಇದ್ದಾರೆ. ಮೃತರ ಅಂತ್ಯಕ್ರಿಯೆ ಕೆಂಗೇರಿಯ ಚಿತಾಗಾರದಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಡಿಕೇರಿಯ ಕುಸುಮಾ ಶ್ಯಾನಭಾಗ ಅವರು, 'ಪ್ರಜಾವಾಣಿ'ಯಲ್ಲಿ ಕಾರ್ಯನಿರ್ವಹಿಸಿದ್ದರು.
ಅವರು ಕಾದಂಬರಿಕಾರ ದಿವಂಗತ ಭಾರತಿ ಸುತ ಅವರ ಪುತ್ರಿ.
'ಕಾಯಕ ಕಾರ್ಪಣ್ಯ', 'ಪುಟಗಳ ನಡುವಿನ ನವಿಲುಗರಿ', 'ಮಣ್ಣಿಂದ ಎದ್ದವರು' (ಕಾದಂಬರಿ) ಸೇರಿ ಹಲವು ಕೃತಿಗಳನ್ನು ಕುಸುಮಾ ರಚಿಸಿದ್ದಾರೆ.

ಕಂದಾಯ ಇಲಾಖೆ
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮತ್ತು 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು – 560001
ದೂರವಾಣಿ ಸಂಖ್ಯೆ: 080–29604556, 29566556, 29565353 ಇ–ಮೇಲ್: splocaima21@gmail.com

ಸಂಖ್ಯೆ: SPLOCA/ADM/CLM/03/2025-26 ದಿನಾಂಕ: 21–06–2025

ಸಾರ್ವಜನಿಕ ಪ್ರಕಟಣೆ M/S. I MARKET TRENDS ADVISORY LLP (MARKET TRENDS)

M/s. I Market Trends Advisory LLP (Market Trends) ದೂಷಿತ ಸಂಸ್ಥೆಗೆ ಸಂಬಂಧಿಸಿದಂತೆ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ (ಕೆ.ಪಿ.ಐ.ಡಿ.ಎಫ್.ಇ) ಕಾಯ್ದೆ, 2004 ರ ಕಲಂ 7(2) ರ ಅನ್ವಯ **ಭದ್ರತೆ ಸಾಲ ಕೊಟ್ಟವರಿಂದ ಮತ್ತು ಠೇವಣಿದಾರರಿಂದ** ಕ್ಲೇಮು ಅರ್ಜಿಗಳನ್ನು ಆಹ್ವಾನಿಸಲು ಸಾರ್ವಜನಿಕ ತಿಳಿವಳಿಕೆ.

ಕ್ಲೇಮು ಅರ್ಜಿಗಳನ್ನು **ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು), ವಿಶ್ವೇಶ್ವರಯ್ಯ ಗೋಪುರ, ಪೋಡಿಯಂ ಬ್ಲಾಕ್, 4ನೇ ಮಹಡಿ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು – 560001** ರವರ ಕಛೇರಿಯಲ್ಲಿ ಠೇವಣಿದಾರರು / ಅಧಿಕೃತ ಪ್ರತಿನಿಧಿ / ನಾಮಿನಿದಾರರಿಗೆ ವಿತರಿಸಲಾಗುವುದು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಅಧಿಕೃತ ಗುರುತಿನ ಚೀಟಿ ಹಾಗೂ ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್ / ಎ.ಓಯು) ಮತ್ತು ಅಧಿಕೃತ ಪತ್ರ / ಪಿ.ಒ.ಎ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿ ಕ್ಲೇಮ್ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ.

ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ	30-06-2025	10.00 AM
ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ	29-07-2025	5.30 PM

ಹಾಜರುಪಡಿಸಬೇಕಾದ ದಾಖಲೆಗಳು:

1) ಮೂಲ ಐಡಿ–ಆಧಾರ್, ಪ್ಯಾನ್ / ಎಪಿಕ್ ದೃಢೀಕರಣಕ್ಕಾಗಿ ಜೆರಾಕ್ಸ್‌ನೊಂದಿಗೆ.
2) ಬ್ಯಾಂಕ್ ಮ್ಯಾನೇಜರ್‌ನಿಂದ ದೃಢೀಕರಿಸಲಾದ ಬ್ಯಾಂಕ್ ಪಾಸ್ ಶೀಟ್ – M/s. I Market Trends Advisory LLP (Market Trends) ಕಂಪನಿಯಲ್ಲಿ ಹೂಡಿಕೆಯ ದಿನಾಂಕಕ್ಕೆ 2 ತಿಂಗಳ ಮುಂಚಿತವಾಗಿ ಇಲ್ಲಿಯವರೆಗೆ.
3) KYC ತೋರಿಸುವ ಪುಟಗಳ ಪ್ರತಿಯೊಂದಿಗೆ ಪಾಸ್‌ಬುಕ್‌ನ ಪ್ರತಿ.
4) ಮೂಲ ಬಾಂಡ್‌ಗಳು / ಒಪ್ಪಂದಗಳು / ನೋಟರೈಸ್ಡ್ ಅಫಿಡವಿಟ್‌ಗಳು / ಕಂಪನಿಯಿಂದ ಪಡೆದ ಇತರೆ ದಾಖಲೆಗಳನ್ನು ಸಲ್ಲಿಸತಕ್ಕದ್ದು.
5) ಅಧಿಕೃತ ಪ್ರತಿನಿಧಿಯಾಗಿದ್ದಲ್ಲಿ ಜನರಲ್ ಪವರ್ ಆಫ್ ಅಟಾರ್ನಿ ಮತ್ತು ಶಾಸನಾತ್ಮಕ ಮೂಲ ದಾಖಲೆಗಳನ್ನು ಹಾಜರುಪಡಿಸಬೇಕು.
6) ದೃಢೀಕರಿಸಿದ ಸ್ಪಷ್ಟವಾದ ಜೆರಾಕ್ಸ್ ಪ್ರತಿಯನ್ನು ಒದಗಿಸಬೇಕು ಅಥವಾ ಸಂಬಂಧಪಟ್ಟ ಅಧಿಕಾರಿಯಿಂದ ದೃಢೀಕರಣಕ್ಕಾಗಿ ಮೂಲವನ್ನು ಜೆರಾಕ್ಸ್ ಪ್ರತಿಯೊಂದಿಗೆ ಒದಗಿಸಬೇಕು. ಸ್ಕ್ಯಾನ್‌ಗಳು / WhatsApp ನಕಲುಗಳು ಸ್ವೀಕರಿಸುವುದಿಲ್ಲ.
7) ಎಫ್.ಇ ನೀಡಿದ ಪಾಸ್‌ಬುಕ್.
8) ಕಾಯ್ದೆಯ ಸೆಕ್ಷನ್ 7(4) ಮತ್ತು 7(5) ರ ಪ್ರಕಾರ, ಭದ್ರತೆ ಸಾಲ ನೀಡಿದವರು ಒಂದು ತಿಂಗಳ ಅವಧಿ ಮುಗಿಯುವ ಮೊದಲು ಭದ್ರತಾ ಪತ್ರದ ಮೌಲ್ಯಮಾಪನ ಮಾಡಿಸಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಸಕ್ಷಮ ಪ್ರಾಧಿಕಾರವೇ ಸ್ವತ ಮೌಲ್ಯ ಮಾಪನ ಮಾಡುತ್ತಾರೆ. ಇದಕ್ಕೆ ಭದ್ರತೆ ಸಾಲ ಕೊಟ್ಟವರು ಬದ್ದರಾಗಿರತಕ್ಕದ್ದು.

ಠೇವಣಿದಾರರು ಮರಣ ಹೊಂದಿದ್ದರೆ ಅಥವಾ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಅವರ ನಾಮ ನಿರ್ದೇಶಿತರು / ವಾರಸುದಾರರು ಅರ್ಜಿ ಸಲ್ಲಿಸುವಾಗ ಅದಕ್ಕೆ ಪುರಾವೆಯಾಗಿರುವ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ.

ಕ್ರ. ಸಂ	ಠೇವಣಿದಾರರು / ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಠೇವಣಿದಾರರು (Depositors)	ಠೇವಣಿದಾರರು ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿ / ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2	ನಾಮಿನಿದಾರರು (Nominee)	1) ಠೇವಣಿದಾರರ ಮರಣ ಪ್ರಮಾಣ ಪತ್ರ 2) ವಂಶ ವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು). 3) ನಾಮಿನಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
3	ವಾರಸುದಾರರು (Legal heirs)	1) ಠೇವಣಿದಾರರ ಮರಣ ಪ್ರಮಾಣ ಪತ್ರ. 2) ವಂಶ ವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು). 3) ನಿರ್ದಿಷ್ಟನಾಮಿನಿ (Nominee) ರವರ ಮರಣ ಪ್ರಮಾಣ ಪತ್ರ. 4) ವಾರಸುದಾರರ ಪ್ರಮಾಣ ಪತ್ರ – ನ್ಯಾಯಾಲಯದ ಆದೇಶ. 5) ವಾರಸುದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. 6) ಉಳಿದ ವಾರಸುದಾರರ ಒಪ್ಪಿಗೆ (Consent from other legal heirs).
4	PoA - (Power of Attorney)	1) ಠೇವಣಿದಾರರು ಆಸ್ಪತ್ರೆಗೆ ದಾಖಲಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳು. (ಗಂಭೀರ ಆರೋಗ್ಯ ಸಮಸ್ಯೆ ಇರುವವರು) ವೈದ್ಯರಿಂದ ವರದಿ ಪಡೆದು ಸಲ್ಲಿಸುವುದು. 2) ಹೊರದೇಶದಲ್ಲಿ ವಾಸಿಸುತ್ತಿರುವವರು Apostilled copy citizen card + Passport. 3) ಮೇಲಿನ ಕ್ರ.ಸಂ. 1 ಮತ್ತು 2 ಕ್ಕೆ ಸಂಬಂಧಪಟ್ಟವರು ಕಡ್ಡಾಯವಾಗಿ Notarized Power of Attorney Certificate ಸಲ್ಲಿಸತಕ್ಕದ್ದು. 4) PoA ಹೊಂದಿರುವವರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
5	ಅಪ್ರಾಪ್ತರ ಗಾರ್ಡಿಯನ್ (ಪೋಷಕರು)	1) ಠೇವಣಿದಾರರ ಮರಣ ಪತ್ರ. 2) ಗಾರ್ಡಿಯನ್ ನೇಮಕದ ದಾಖಲೆ. 3) ಸ್ವಯಂ ದೃಢೀಕೃತ ದಾಖಲೆ.

ಕ್ಲೇಮು ಅರ್ಜಿಯನ್ನು ಸಲ್ಲಿಸುವ ಅರ್ಜಿದಾರರು ಪ್ರತಿ ಸಹಕಾರಿಯ ಹೂಡಿಕೆಗೆ ಸಂಬಂಧಿಸಿದ ಈ ಕೆಳಕಂಡ ಎಲ್ಲಾ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.

ಕ್ರ. ಸಂ	ಠೇವಣಿದಾರರು / ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಉಳಿತಾಯ ಠೇವಣಿ (Savings Deposit)	1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2) ಉಳಿತಾಯ ಠೇವಣಿ ಪಾಸ್ ಪುಸ್ತಕ. 3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in pass book of claimed amount) * ಠೇವಣಿದಾರರು / ನಾಮಿನಿದಾರರು / ವಾರಸುದಾರರು / PoAದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2	ನಿಶ್ಚಿತ ಠೇವಣಿ (Fixed Deposit)	1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2) ಬಾಂಡ್ ಪ್ರಮಾಣ ಪತ್ರ / ನಿಶ್ಚಿತ ಠೇವಣಿ ಪ್ರಮಾಣ ಪತ್ರ / ಇತರೆ. 3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in pass book of claimed amount) * ಠೇವಣಿದಾರರು / ನಾಮಿನಿದಾರರು / ವಾರಸುದಾರರು / PoAದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
3	ಸಂಚಿತ ಠೇವಣಿ (Cumulative Deposit)	1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2) ಸಂಚಿತ ಠೇವಣಿ ಪ್ರಮಾಣ ಪತ್ರ. 3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in pass book of claimed amount) * ಠೇವಣಿದಾರರು / ನಾಮಿನಿದಾರರು / ವಾರಸುದಾರರು / PoAದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
4	ಆವರ್ತ ಠೇವಣಿ (Recurring Deposit)	1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2) ಹಣಕಾಸು ಸಂಸ್ಥೆಯಿಂದ ನೀಡಲಾದ ಆವರ್ತ ಠೇವಣಿ ಪಾಸ್ ಪುಸ್ತಕ. 3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in pass book of claimed amount) * ಠೇವಣಿದಾರರು / ನಾಮಿನಿದಾರರು / ವಾರಸುದಾರರು / PoAದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
5	MES Deposit	1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2) MES Deposit ಠೇವಣಿ ಪಾಸ್ ಪುಸ್ತಕ. 3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in pass book of claimed amount) * ಠೇವಣಿದಾರರು / ನಾಮಿನಿದಾರರು / ವಾರಸುದಾರರು / PoAದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

- ಕೆ.ಪಿ.ಐ.ಡಿ ಕಾಯ್ದೆಯ ಕಲಂ 7(3) ರ ಅನ್ವಯ ಕ್ಲೇಮು ಅರ್ಜಿ ಸಲ್ಲಿಸುವುದಕ್ಕೆ ನಿಗದಿಪಡಿಸಿರುವ ಕಡೆಯ ದಿನಾಂಕದ ನಂತರ ಬರುವ ಯಾವುದೇ ಅರ್ಜಿಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಸ್ವೀಕರಿಸಲಾಗುವುದಿಲ್ಲ.
- ಸುಳ್ಳು ದಾಖಲೆಗಳ ಆಧಾರದ ಅರ್ಜಿ ಅಥವಾ ಸ್ವಯಂ–ಸೃಷ್ಟಿತ ಕ್ಲೇಮು ಅರ್ಜಿಗಳನ್ನು ಸಲ್ಲಿಸಿದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದರೊಂದಿಗೆ ಅಂತಹ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸಲಾಗುವುದು.
- ಅರ್ಜಿಗಳನ್ನು ಸಲ್ಲಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು **ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು), ವಿಶ್ವೇಶ್ವರಯ್ಯ ಗೋಪುರ, ಪೋಡಿಯಂ ಬ್ಲಾಕ್, 4ನೇ ಮಹಡಿ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು** ಇವರ ಕಛೇರಿಯಲ್ಲಿ ಖುದ್ದು ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿರುತ್ತದೆ.
- ಅರ್ಜಿದಾರರು **M/s. I Market Trends Advisory LLP (Market Trends),** ಇದರಲ್ಲಿ ಒಂದಕ್ಕಿಂತ ಹೆಚ್ಚಿನ ಸ್ಕೀಮ್‌ಗಳಲ್ಲಿ ಹೂಡಿಕೆ ಮಾಡಿದ್ದಲ್ಲಿ, ಕಡ್ಡಾಯವಾಗಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಸಹಿ/–
ಸಹಾಯಕ ಆಯುಕ್ತರು–1 ಹಾಗೂ ಸಕ್ಷಮ ಪ್ರಾಧಿಕಾರಿಗಳು
M/s. I Market Trends Advisory LLP (Market Trends)

ವಾಸಾಸಂಇ/ವಾ.ಪ್ರ/1379/ಅಡ್ವರ್ಟೋರ್/2025–26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ–2ನೇ ಕರೆ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರವರ ಕಚೇರಿ (ತ್ಯಾಜ್ಯ ನೀರು ನಿರ್ವಹಣೆ–ಪೂರ್ವ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–09.

ಕ್ರ. ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/425/2025–26 ದಿನಾಂಕ: 21.06.2025	
1	ಕಾನಿಅ(ತ್ಯಾನೀನಿ–ಎಸ್‌ಟಿಪಿ–ಸಿವಿ) ವಿಭಾಗದ ವ್ಯಾಪ್ತಿಯಡಿ ಬರುವ ಚಲ್ಲಘಟ್ಟ ವ್ಯಾಲಿಯ 60 ಎಂಎಲ್‌ಡಿ ಎಸ್‌ಟಿಪಿಯಲ್ಲಿ ಸ್ಕ್ರಬರ್‌ನೊಂದಿಗೆ ಜೈವಿಕ ಇಂಧನ ಇಂಜಿನ್ (ಸ್ಟ್ಯಾಂಡ್ ಬೈ) ಅನ್ನು ಒದಗಿಸಿ, ಕಾರ್ಯಚಾಲನೆಗೊಳಿಸುವ ಕಾಮಗಾರಿ.	ರೂ. 408.56 ಲಕ್ಷಗಳು ರೂ. 6.13 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/423/2025–26 ದಿನಾಂಕ: 21.06.2025	
2	ಕಾನಿಅ(ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವಿಭಾಗದ ವ್ಯಾಪ್ತಿಯಡಿ ಬರುವ 05 ಎಂಎಲ್‌ಡಿ ಸಾರಕ್ಕಿ ಎಸ್‌ಟಿಪಿಯಲ್ಲಿ ಜಲ ಹೀ ಅಮೃತ್ ಯೋಜನೆಯಡಿ ವಿವಿಧ ಸುಧಾರಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಕಾಮಗಾರಿ.	ರೂ. 138.52 ಲಕ್ಷಗಳು ರೂ. 2.07 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/421/2025–26 ದಿನಾಂಕ: 21.06.2025	
3	ಕಾನಿಅ(ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವಿಭಾಗದ ವ್ಯಾಪ್ತಿಯಡಿ ಬರುವ 02 ಎಂಎಲ್‌ಡಿ ಹಲಸೂರು ಎಸ್‌ಟಿಪಿಯಲ್ಲಿ ಜಲ ಹೀ ಅಮೃತ್ ಯೋಜನೆಯಡಿ ವಿವಿಧ ಸುಧಾರಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಕಾಮಗಾರಿ.	ರೂ. 121.19 ಲಕ್ಷಗಳು ರೂ. 1.81 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/419/2025–26 ದಿನಾಂಕ: 21.06.2025	
4	ಕಾನಿಅ(ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವಿಭಾಗದ ವ್ಯಾಪ್ತಿಯಡಿ ಬರುವ 90 ಎಂಎಲ್‌ಡಿ ಬೆಳ್ಳಂದೂರು ಅಮಾನಿಕೆರೆ ಎಸ್‌ಟಿಪಿ, 35 ಎಂಎಲ್‌ಡಿ ಅಗರ ಎಸ್‌ಟಿಪಿ ಮತ್ತು 10 ಎಂಎಲ್‌ಡಿ ಹುಳಿಮಾವು ಎಸ್‌ಟಿಪಿಯಲ್ಲಿ ಜಲ ಹೀ ಅಮೃತ್ ಯೋಜನೆಯಡಿ ವಿವಿಧ ಸುಧಾರಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಕಾಮಗಾರಿ.	ರೂ. 252.46 ಲಕ್ಷಗಳು ರೂ. 3.78 ಲಕ್ಷಗಳು

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **07.07.2025ರ ಸಂಜೆ 4.00 ಗಂಟೆವರೆಗೆ.** ಬಿಡ್‌ಗಳನ್ನು ತೆರೆಯುವ ದಿನಾಂಕ: **08.07.2025ರ ಸಂಜೆ 5.00 ಗಂಟೆಗೆ.**

ಸಹಿ/–
ಮುಖ್ಯ ಅಭಿಯಂತರರು (ತ್ಯಾನೀನಿ–ಪೂರ್ವ)

ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು **https://kppp.karnataka.gov.in**ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲ್ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/YC/1396/2025-26

ಗ್ಯಾರೇಜ್‌ನಿಂದ ಐಐಟಿಯತ್ತ...

ಬಿ.ಟೆಕ್‌ಗಾಗಿ ಐಐಟಿ ಕಾನ್ಪುರಕ್ಕೆ ಪ್ರವೇಶ ಮೇಗರವಳ್ಳಿಯ ಸುಶಾಂತ್ ಸಾಧನೆ

• ನಿರಂಜನ ವಿ.

ತೀರ್ಥಹಳ್ಳಿ (ಶಿವಮೊಗ್ಗ): ಶಾಲಾ ದಿನಗಳಲ್ಲಿ ತಂದೆಯೊಂದಿಗೆ ಬೈಕ್‌ನ ನಟ್ಟು, ಬೋಲ್ಟ್ ತಿರುಗಿಸುತ್ತಿದ್ದ ತಾಲ್ಲೂಕಿನ ಮೇಗರವಳ್ಳಿಯ 18 ವರ್ಷದ ಯುವಕ ಸುಶಾಂತ್ ಎನ್. ಪ್ರಭು ಉತ್ತರ ಪ್ರದೇಶದಲ್ಲಿರುವ 'ಐಐಟಿ-ಕಾನ್ಪುರ'ಕ್ಕೆ ಆಯ್ಕೆಯಾಗಿದ್ದಾರೆ. ಅಲ್ಲಿ ಕೆಮಿಕಲ್ ಎಂಜಿನಿಯರಿಂಗ್‌ನಲ್ಲಿ ಬಿ-ಟೆಕ್ ವ್ಯಾಸಂಗ ಮಾಡಲಿದ್ದಾರೆ.

ಸುಶಾಂತ್, ಮೇಗರವಳ್ಳಿಯ ನರಸಿಂಹಮೂರ್ತಿ ಪ್ರಭು ಮತ್ತು ಸುಜಾತಾ ದಂಪತಿಯ ಪುತ್ರ. ನರಸಿಂಹಮೂರ್ತಿ ಸಣ್ಣ ಬೈಕ್ ಗ್ಯಾರೇಜ್ ನಡೆಸುತ್ತಿದ್ದಾರೆ.

ಮೇಗರವಳ್ಳಿಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದಿರುವ ಸುಶಾಂತ್, ಅಪ್ಪನನ್ನು ನೋಡಿ ಬೈಕ್ ರಿಪೇರಿ ಮಾಡುವ ಕೌಶಲ ಕರಗತ ಮಾಡಿಕೊಂಡಿದ್ದರು. ಬೈಕ್ ಚೈನ್‌ಗಳು ಏಕೆ ಹಾಳಾಗುತ್ತವೆ ಎಂಬ ಬಗ್ಗೆ ಗಂಭೀರವಾಗಿ ಯೋಚಿಸುತ್ತಿದ್ದರು. 8ನೇ ತರಗತಿಯಲ್ಲಿ ಓದುತ್ತಿದ್ದಾಗ ಪ್ರಾಯೋಗಿಕ ಕಲಿಕೆಯ ಆಧಾರದಲ್ಲಿ ನ್ಯಾಷನಲ್ ಇನೋವೇಷನ್ ಫೌಂಡೇಷನ್ ಆಯೋಜಿಸುವ ಇನ್‌ಸ್ಪೈರ್ ಅವಾರ್ಡ್–2022 ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ತಾನಾಗಿಯೇ ಚೈನ್ ಸರಿಪಡಿಸಿಕೊಳ್ಳುವ 'ಸೆಲ್ಫ್ ಚೈನ್ ಅಡ್ಜೆಸ್ಟ್‌ಮೆಂಟ್ ಸಿಸ್ಟಂ' ಎಂಬ ಮಾದರಿ ತಯಾರಿಸಿದ್ದರು. ಇದು ರಾಷ್ಟ್ರಮಟ್ಟಕ್ಕೂ ಆಯ್ಕೆಯಾಗಿತ್ತು.

ಸ್ಪರ್ಧೆಯ ಭಾಗವಾಗಿ ಸುಶಾಂತ್ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ (ಎನ್‌ಐಟಿಕೆ) ಭೇಟಿ ನೀಡಿದ್ದರು. ಈ ವೇಳೆ ಅವರಿಗೆ ಶಿಕ್ಷಕ ರಾಘವೇಂದ್ರ ಎ. ಭಟ್ ಮಾರ್ಗದರ್ಶನ ನೀಡಿದ್ದರು.

'ಎನ್‌ಐಟಿಕೆ ಕ್ಯಾಂಪಸ್‌ನಿಂದ ಪ್ರಭಾವಿತನಾಗಿದ್ದೆ. ಎಸ್‌ಎಸ್‌ಎಲ್‌ಸಿ ಓದುವಾಗ ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್ ನಡೆಸುವ ತಪಸ್ ಪರೀಕ್ಷೆಯ ಐದು ಸುತ್ತುಗಳನ್ನು ಯಶಸ್ವಿಯಾಗಿ ಪೂರೈಸಿದ್ದೆ. 14,000 ವಿದ್ಯಾರ್ಥಿಗಳ ಪೈಕಿ 40 ವಿದ್ಯಾರ್ಥಿಗಳು ಮಾತ್ರ ಪಿಯುಸಿ ಉಚಿತ ಶಿಕ್ಷಣಕ್ಕೆ ಆಯ್ಕೆಯಾಗಿದ್ದರು. ಅಲ್ಲಿ ಸೇರಿದ ನಂತರ ಐಐಟಿ ಅಥವಾ ಎನ್‌ಐಟಿ ಬಗ್ಗೆ ತಿಳಿದುಕೊಂಡೆ. ಪ್ರವೇಶ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದು ಐಐಟಿ-ಕಾನ್ಪುರಕ್ಕೆ ಆಯ್ಕೆಯಾಗಿರುವುದು ಖುಷಿ ಕೊಟ್ಟಿದೆ' ಎನ್ನುತ್ತಾರೆ ಸುಶಾಂತ್.

ಮುಖ್ಯಾಂಶಗಳು

- ಇನ್‌ಸ್ಪೈರ್ ಅವಾರ್ಡ್–2022ರ ಸ್ಪರ್ಧೆಯಲ್ಲಿ ಭಾಗಿ
- ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದ 'ಸೆಲ್ಫ್ ಚೈನ್ ಅಡ್ಜೆಸ್ಟ್‌ಮೆಂಟ್ ಸಿಸ್ಟಂ'
- ತಂದೆಯ ಜೊತೆ ಬೈಕ್ ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದ ಹುಡುಗ

ತಂದೆ ನರಸಿಂಹಮೂರ್ತಿ ಪ್ರಭು ಮತ್ತು ತಾಯಿ ಸುಜಾತಾ ಜೊತೆಗೆ ತೀರ್ಥಹಳ್ಳಿ ತಾಲ್ಲೂಕಿನ ಮೇಗರವಳ್ಳಿಯ ಸುಶಾಂತ್ ಎನ್. ಪ್ರಭು

'ಪೌರಕಾರ್ಮಿಕರ ಶ್ರಮ ತಗ್ಗಿಸುವ ಉದ್ದೇಶ'

'ಭಾರತದಲ್ಲಿ ಡ್ರೈನೇಜ್ ಸ್ವಚ್ಛಗೊಳಿಸಲು ಮಾನವ ಸಂಪನ್ಮೂಲ ಬಳಸಿಕೊಳ್ಳಲಾಗುತ್ತಿದೆ. ಇದರಿಂದ ಪೌರ ಕಾರ್ಮಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದ್ದು, ಹಲವಾರು ಸಮಸ್ಯೆಗಳೂ ಉದ್ಭವವಾಗುತ್ತಿವೆ. ಯಂತ್ರಗಳ ಸಹಾಯದಿಂದ ಈ ಕೆಲಸ ಮಾಡಿ, ಪೌರ ಕಾರ್ಮಿಕರ ಶ್ರಮ ತಗ್ಗಿಸಬಹುದು. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಹೊಸ ಆವಿಷ್ಕಾರ ಮಾಡುವ ಕನಸಿದೆ. ಜೊತೆಗೆ ಸ್ವಂತ ಕಂಪನಿ ಸ್ಥಾಪಿಸಬೇಕೆಂಬ ಬಯಕೆಯೂ ಇದೆ. ತಂದೆಯ ಆಸೆಯಂತೆ ನಾಗರಿಕ ಸೇವಾ ಪರೀಕ್ಷೆ ಬರೆಯುವ ಉದ್ದೇಶವಿದೆ' ಎನ್ನುತ್ತಾರೆ ಸುಶಾಂತ್.

ಉಳುವ ಯೋಗಿಯ ನೋಡಲ್ಲಿ...

ಚಿತ್ರ: ತಾಜುದ್ದೀನ್ ಆಜಾದ್

ಮುಂಗಾರು ಮಳೆ ಕೊಂಚ ಬಿಡುವು ಕೊಟ್ಟಿರುವುದರಿಂದ ಕಲಬುರಗಿ ಹೊರವಲಯದ ಆಳಂದ ರಸ್ತೆಯಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದ ರೈತರು

ಆಲಮಟ್ಟಿ; ಲಕ್ಷ ಕ್ಯೂಸೆಕ್ ಸಮೀಪಕ್ಕೆ ಒಳಹರಿವು

ಪ್ರಜಾವಾಣಿ ವಾರ್ತೆ

ಆಲಮಟ್ಟಿ: ಆಲಮಟ್ಟಿ ಜಲಾಶಯದ ಒಳಹರಿವು ಭಾನುವಾರ ಸಂಜೆ 99,805 ಕ್ಯೂಸೆಕ್‌ಗೆ ಏರಿಕೆಯಾಗಿದ್ದು, ಇದು ಈ ವರ್ಷದ ಅತಿ ಹೆಚ್ಚಿನ ಒಳಹರಿವಾಗಿದೆ.

'ಭಾನುವಾರ ಬೆಳಿಗ್ಗೆ 73,958 ಕ್ಯೂಸೆಕ್ ಇದ್ದ ಒಳಹರಿವು ಸಂಜೆಯ ವೇಳೆಗೆ ಹೆಚ್ಚಾಗಿದೆ. ಸೋಮವಾರ ಒಳ ಹರಿವಿನ ಪ್ರಮಾಣ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆಯಿದೆ. ಸದ್ಯ 50 ಸಾವಿರ ಕ್ಯೂಸೆಕ್ ನೀರನ್ನು ಜಲಾಶಯದಿಂದ ಹೊರಬಿಡಲಾಗುತ್ತಿದೆ' ಎಂದು ಜಲಾಶಯದ ಅಧಿಕಾರಿಗಳು ತಿಳಿಸಿದ್ದಾರೆ.

ಮಡಿಕೇರಿಯಲ್ಲಿ ಮಳೆ

ಮಡಿಕೇರಿ: ನಗರದಲ್ಲಿ ಭಾರಿ ಮಳೆ ಭಾನುವಾರವೂ ಮುಂದುವರಿಯಿತು.

ಮಧ್ಯಾಹ್ನ ಗುಡುಗು, ಸಿಡಿಲು ಇದ್ದು, ಜೋರುಗಾಳಿಯೊಂದಿಗೆ ಮಳೆ ಮುಂದುವರಿಯಿತು.

ಸುಂಟಿಕೊಪ್ಪ ಹಾಗೂ ಶನಿವಾರ ಸಂತೆಯಲ್ಲಿ ಭಾರಿ ಮಳೆ ಸುರಿದರೆ, ಸೋಮವಾರಪೇಟೆಯಲ್ಲಿ ಉತ್ತಮ ವರ್ಷಧಾರೆಯಾಯಿತು. ಕುಶಾಲನಗರ, ನಾಪೋಕ್ಲು ಹಾಗೂ ವಿರಾಜಪೇಟೆಯಲ್ಲಿ ಸಾಧಾರಣ ಮಳೆಯಾಯಿತು.

ದಾವಣಗೆರೆ ವರದಿ: ನಗರ ಹಾಗೂ ಜಿಲ್ಲೆಯ ವಿವಿಧೆಡೆ ಭಾನುವಾರ ಬಿರುಮಳೆಯಾಗಿದೆ. ನಗರದಲ್ಲಿ ಮಧ್ಯಾಹ್ನ ಹಾಗೂ ಸಂಜೆ ಬಿರುಗಾಳಿ ಸಹಿತ ಜೋರು ವರ್ಷಧಾರೆ ಯಾಯಿತು. ಜಿಲ್ಲೆಯ ಸಂತೇಬೆನ್ನೂರು, ಕಡರನಾಯ್ಕನಹಳ್ಳಿ, ಹರಿಹರ, ಚನ್ನಗಿರಿ ಹಾಗೂ ಮಲೇಬೆನ್ನೂರು ಸುತ್ತಮುತ್ತಲ ಪ್ರದೇಶಗಳಲ್ಲೂ ಉತ್ತಮ ಮಳೆ ಸುರಿದಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	119.80	13,359	1,664
ಹಾರಂಗಿ	2,859	2,850.81	2,287	1,000
ಕಬಿನಿ	2,284.00	2,277.92	11,932	12,000
ಹೇಮಾವತಿ	2,922	2,914	8,079	2,400
ಲಿಂಗನಮಕ್ಕಿ	1,819	1,774.20	14,816	6,131
ಸೂಪಾ (ಮೀ)	564	532.03	8,993.22	4,930.77
ಮಾಣಿ	595	580.82	2,679	-
ತುಂಗಭದ್ರಾ	1,633	1,613.28	30,594	192
ಮಲಪ್ರಭಾ	2,079.5	2,055.10	4,074	194
ಘಟಪ್ರಭಾ	2175	2,120.50	13,080	127
ಭದ್ರಾ *	186	151.7	9,877	1,278
ಆಲಮಟ್ಟಿ (ಮೀ)	519.6	515.82	99,805	50,440
ನಾರಾಯಣಪುರ (ಮೀ)	492.25	490.44	52,000	42,820

* ನೆಲಮಟ್ಟದಿಂದ

ಮುರುಡೇಶ್ವರದಲ್ಲಿ 'ವಸ್ತ್ರ ಸಂಹಿತೆ' ಜಾರಿ

ಭಟ್ಕಳ: 'ಮುರುಡೇಶ್ವರದ ಶಿವ ದೇವಸ್ಥಾನದ ದರ್ಶನಕ್ಕೆ ಬರುವ ಭಕ್ತರು ವಸ್ತ್ರ ಸಂಹಿತೆ ಪಾಲಿಸಬೇಕು' ಎಂದು ದೇವಸ್ಥಾನದ ವತಿಯಿಂದ ಭಾನುವಾರ ಸೂಚನೆ ಹೊರಡಿಸಲಾಗಿದೆ.

ಈ ಕುರಿತು, ಭಕ್ತರು ವಸ್ತ್ರಸಂಹಿತೆ ಪಾಲಿಸುವಂತೆ ವಿನಂತಿಸಿ ಸಾರ್ವಜನಿಕರ ಗಮನಕ್ಕೆ ಬರುವಂತೆ ಬ್ಯಾನರ್ ಹಾಕಲಾಗಿದೆ. ಪುರುಷರು–ಅಂಗಿ ಧೋತಿ, ಪ್ಯಾಂಟ್ ಮತ್ತು ಕುರ್ತಾ ಪೈಜಾಮ, ಮಹಿಳೆಯರು–ಸೀರೆ, ಚೂಡಿದಾರ ಧರಿಸಿ ದೇವರ ದರ್ಶನ ಮಾಡಬಹುದೆಂದು ತಿಳಿಸಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ದೇವಸ್ಥಾನದ ವ್ಯವಸ್ಥಾಪಕ ಮಂಜುನಾಥ ಶೆಟ್ಟಿ, 'ದೇಗುಲದ ಪಾವಿತ್ರ್ಯ ಕಾಪಾಡುವ ಉದ್ದೇಶದಿಂದ ದೇವರ ದರ್ಶನ ಮಾಡುವ ಭಕ್ತಾದಿಗಳಿಗೆ ವಸ್ತ್ರಸಂಹಿತೆ ನಿಯಮ ಪಾಲಿಸುವಂತೆ ವಿನಂತಿ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಭಕ್ತರ ಸ್ಪಂದನೆ ನೋಡಿ ಈ ನಿಯಮವನ್ನು ಕಡ್ಡಾಯಗೊಳಿಸಲಾವುದು' ಎಂದರು.

ಎಂಬಿಎ, ಎಂಸಿಎ ಪ್ರವೇಶ ಪರೀಕ್ಷೆ ಸುಗಮ

ಬೆಂಗಳೂರು: ಎಂಬಿಎ ಮತ್ತು ಎಂಸಿಎ ಕೋರ್ಸ್‌ಗಳ ಪ್ರವೇಶಕ್ಕೆ ಪಿಜಿಸಿಇಟಿ ಭಾನುವಾರ ಸುಗಮವಾಗಿ ನಡೆಯಿತು. ಎಂಬಿಎಗೆ ಶೇ 95.73 ಮತ್ತು ಎಂಸಿಎ ಕೋರ್ಸ್‌ಗೆ ಶೇ 93.85ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಬೆಂಗಳೂರು ಸೇರಿದಂತೆ ರಾಜ್ಯದ 12 ಜಿಲ್ಲೆಗಳ ಒಟ್ಟು 68 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು.

ಕೃಷಿ ಹೊಂಡದಲ್ಲಿ ಮುಳುಗಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಗೌತಮ್

ಚಿರಂಜೀವಿ

ಶಿವಮೊಗ್ಗ: ತಾಲ್ಲೂಕಿನ ಯಡವಾಲದಲ್ಲಿರುವ ಸ್ನೇಹಿತನ ತೋಟದ ಮನೆಗೆ ಪಾರ್ಟಿ ಮಾಡಲು ತೆರಳಿದ್ದ ಇಬ್ಬರು ಯುವಕರು, ಶನಿವಾರ ತಡರಾತ್ರಿ ಆಕಸ್ಮಿಕವಾಗಿ ಕೃಷಿ ಹೊಂಡಕ್ಕೆ ಬಿದ್ದು ಮೃತಪಟ್ಟಿದ್ದಾರೆ.

ಯಡವಾಲ ಗ್ರಾಮದ ಕುಮಾರ ನಾಯ್ಕ ಅವರ ಮಗ, ಬಿ.ಕಾಂ ವಿದ್ಯಾರ್ಥಿ ಗೌತಮ್ (22) ಹಾಗೂ ಶಿವಮೊಗ್ಗದ ಕುಂಬಾರಗುಂಡಿ ಚೌಡಮ್ಮನ ದೇವಸ್ಥಾನ ಸಮೀಪದ ನಿವಾಸಿ ವಿಜಯ್ ಅವರ ಪುತ್ರ ಚಿರಂಜೀವಿ (22) ಸಾವಿಗೀಡಾದವರು.

ಗೌತಮ್ ಅಕ್ಕನಿಗೆ ಹೆರಿಗೆ ಆಗಿತ್ತು. ತಾಯಿ-ಮಗುವನ್ನು ನೋಡಿಕೊಂಡು ಬರಲು ಚಿರಂಜೀವಿ ಸೇರಿದಂತೆ ಎಂಟು ಜನರು ಶಿವಮೊಗ್ಗದ ಸೀಗೆಹಟ್ಟಿಯಿಂದ ಯಡವಾಲಕ್ಕೆ ಬೈಕ್‌ನಲ್ಲಿ ತೆರಳಿದ್ದರು. ರಾತ್ರಿ ತೋಟದ ಮನೆಗೆ ತೆರಳಿ ಪಾರ್ಟಿ ಮಾಡಿದ್ದರು ಎನ್ನಲಾಗಿದೆ. ಈ ವೇಳೆ ಚಿರಂಜೀವಿ ಬಹಿರ್ದೆಸೆಗೆ ಹೋಗಲು ಮುಂದಾಗಿದ್ದು, ಆತನನ್ನು ಗೌತಮ್ ಕರೆದೊಯ್ದಿದ್ದ.

ತೋಟದ ಪಕ್ಕದಲ್ಲೇ ಗೌತಮ್ ಚಿಕ್ಕಪ್ಪನ ಜಮೀನಿದ್ದು, ಅಲ್ಲಿನ ಕೃಷಿ ಹೊಂಡದಿಂದ ನೀರು ತೆಗೆದುಕೊಳ್ಳುವಾಗ ಚಿರಂಜೀವಿ ಕಾಲು ಜಾರಿ ಹೊಂಡಕ್ಕೆ ಬಿದ್ದಿದ್ದಾನೆ. ಆತನನ್ನು ರಕ್ಷಿಸಲು ಹೋದ ಗೌತಮ್ ಕೂಡ ನೀರಿನಲ್ಲಿ ಮುಳುಗಿದ್ದಾನೆ ಎಂದು ತಿಳಿದುಬಂದಿದೆ.

ಭಾನುವಾರ ಶವಗಳನ್ನು ಕೃಷಿ ಹೊಂಡದಿಂದ ಮೇಲೆ ತೆಗೆದಿದ್ದಾರೆ. ಈ ಬಗ್ಗೆ ಕುಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಜೀನ್ಸ್ ಧರಿಸಿದ್ದಕ್ಕೆ ಪ್ರವೇಶ ಸಿಗದ ವಿದ್ಯಾರ್ಥಿನಿಯರಿಗೆ ಹೊಸ ಬಟ್ಟೆ ಖರೀದಿ

ಆಪದ್ಬಾಂಧವನಾದ ಆಟೊ ಚಾಲಕ

ಪ್ರಜಾವಾಣಿ ವಾರ್ತೆ

ತುಮಕೂರು: ಎಂಬಿಎ, ಎಂಸಿಎ ಕೋರ್ಸ್‌ಗಳ ಪ್ರವೇಶಕ್ಕೆ ಭಾನುವಾರ ನಡೆದ ಪಿಜಿ ಸಿಇಟಿ ಆರಂಭದಲ್ಲಿ ಕೆಲವು ಕೇಂದ್ರಗಳಲ್ಲಿ ಗೊಂದಲ ಉಂಟಾಯಿತು. ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ಕೇಂದ್ರಕ್ಕೆ ಜೀನ್ಸ್ ಧರಿಸಿ ಬಂದಿದ್ದ ಇಬ್ಬರು ವಿದ್ಯಾರ್ಥಿನಿಯರನ್ನು ಕೇಂದ್ರದ ಒಳಗಡೆ ಬಿಡಲಿಲ್ಲ.

ದೂರದ ಹಾಸ್ಟೆಲ್‌ಗಳಿಂದ ಪರೀಕ್ಷೆ ಬರೆಯಲು ಬಂದಿದ್ದ ಇಬ್ಬರು ವಿದ್ಯಾರ್ಥಿನಿಯರು ಕೇಂದ್ರದ ಒಳಗಡೆ ಹೋಗಲು ಸಾಧ್ಯ ಆಗದೆ ಸಪ್ಪೆ ಮೊರೆ ಹಾಕಿಕೊಂಡು ಕಾಲೇಜು ಗೇಟ್ ಬಳಿ ನಿಂತಿದ್ದರು. ಸಾಮಾಜಿಕ ಕಾರ್ಯಕರ್ತ, ಆಟೊ ಚಾಲಕ ಕೆ.ಎಂ.ಶಿವಕುಮಾರ್ ವಿದ್ಯಾರ್ಥಿನಿಯರನ್ನು ವಿಚಾರಿಸಿದರು.

'ಜೀನ್ಸ್ ಧರಿಸಿ ಬಂದಿದ್ದಕ್ಕೆ ಪ್ರವೇಶ ನೀಡುತ್ತಿಲ್ಲ. ಹಾಸ್ಟೆಲ್‌ಗಳು ಇಲ್ಲಿಂದ ನಾಲ್ಕೈದು ಕಿಲೋ ಮೀಟರ್ ದೂರದಲ್ಲಿವೆ. ಹಾಸ್ಟೆಲ್‌ಗೆ ಹೋಗಿ ಬಟ್ಟೆ ಬದಲಾಯಿಸಿಕೊಂಡು ಬರಲು ಸಮಯ ಸಾಕಾಗಲ್ಲ. ಹೊಸ ಬಟ್ಟೆ ಖರೀದಿಸಲು ಹಣವಿಲ್ಲ' ಎಂದು ವಿದ್ಯಾರ್ಥಿನಿಯರು ಅಳಲು ತೋಡಿಕೊಂಡರು.

ಶಿವಕುಮಾರ್ ಕೂಡಲೇ ಇಬ್ಬರನ್ನೂ ಸಮೀಪದ ಬಟ್ಟೆ ಅಂಗಡಿಗೆ ಕರೆದೊಯ್ದು ಹೊಸ ಬಟ್ಟೆ ಖರೀದಿಸಿ ಕೊಟ್ಟು, ಪರೀಕ್ಷಾ ಕೇಂದ್ರಕ್ಕೆ ತಂದು ಬಿಟ್ಟರು.

'ವಿದ್ಯಾರ್ಥಿನಿಯರು ತುಂಬಾ ಆತಂಕದಲ್ಲಿದ್ದರು. ವಿಚಾರಿಸಿದಾಗ ವಿಷಯ ತಿಳಿಯಿತು. ಕೂಡಲೇ ಇಬ್ಬರನ್ನೂ ಕರೆದೊಯ್ದು ಬಟ್ಟೆ ಖರೀದಿಸಿ ಕೊಟ್ಟು, ಪರೀಕ್ಷಾ ಕೇಂದ್ರಕ್ಕೆ ಬಿಟ್ಟು ಬಂದೆ' ಎಂದು ಶಿವಕುಮಾರ್ ಪ್ರತಿಕ್ರಿಯಿಸಿದರು.



'ಪರೀಕ್ಷೆಗೆ ಜೀನ್ಸ್ ಹಾಕಿಕೊಂಡು ಬರಬಾರದು ಎಂಬ ನಿರ್ಬಂಧ ಇರಲಿಲ್ಲ. ಇಲ್ಲಿಗೆ ಬಂದಾಗ ಪೊಲೀಸರು ಕೇಂದ್ರದ ಒಳಗಡೆ ಬಿಡಲಿಲ್ಲ. ಸಮಯಕ್ಕೆ ಸರಿಯಾಗಿ ಶಿವಕುಮಾರ್ ಅವರು ಬಂದಿದ್ದರಿಂದ ಪರೀಕ್ಷೆ ಬರೆಯಲು ಸಾಧ್ಯವಾಯಿತು. ವಸ್ತ್ರಸಂಹಿತೆ ಬಗ್ಗೆ ಮೊದಲೇ ತಿಳಿಸಿದರೆ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆ. ಮುಂದಿನ ದಿನಗಳಲ್ಲಿ ಪ್ರವೇಶ ಪತ್ರದಲ್ಲಿ ಎಲ್ಲ ಮಾಹಿತಿ ನೀಡಲಿ' ಎಂದು ವಿದ್ಯಾರ್ಥಿನಿಯರಾದ ಶ್ರೀಲಕ್ಷ್ಮಿ, ಕೀರ್ತನಾ ಒತ್ತಾಯಿಸಿದರು.

ಮುಖ್ಯಾಂಶಗಳು

- ಎಂಬಿಎ, ಎಂಸಿಎ ಪ್ರವೇಶಕ್ಕೆ ಪಿಜಿ–ಸಿಇಟಿ
- ಪ್ರವೇಶ ಪತ್ರದಲ್ಲಿ ವಸ್ತ್ರಸಂಹಿತೆ ನಿರ್ಬಂಧ ಕುರಿತು ಮಾಹಿತಿ ಇಲ್ಲ
- ಪರೀಕ್ಷಾ ಕೇಂದ್ರದ ಒಳಗೆ ಬಿಡದ ಪೊಲೀಸರು

‘ತಮಿಳುನಾಡಿಗೆ ಗೋದಾವರಿ ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೋದಾವರಿಯ ಹೆಚ್ಚುವರಿ ನೀರನ್ನು ತಮಿಳುನಾಡಿಗೆ ಹರಿಸಿದರೆ ಕುಡಿಯುವ ನೀರಿಗೂ ತೊಂದರೆ ಇರುವ ಕರ್ನಾಟಕಕ್ಕೆ ಅನ್ಯಾಯವಾಗಲಿದೆ. ಈ ಬಗ್ಗೆ ಪ್ರಧಾನಿಗೆ ಪತ್ರ ಬರೆದಿದ್ದೇನೆ. ಈ ಸಮಸ್ಯೆಯನ್ನು ಇತ್ಯರ್ಥ ಮಾಡುವ ಶಕ್ತಿ ನರೇಂದ್ರ ಮೋದಿಗಷ್ಟೇ ಇದೆ’ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹೇಳಿದರು.

ಎಚ್.ಡಿ. ದೇವೇಗೌಡ ಅಭಿನಂದನಾ ಸಮಿತಿ ವತಿಯಿಂದ ಭಾನುವಾರ ‘ಗಂಗ ಸಾಮ್ರಾಟ ಶ್ರೀಪುರುಷ ಪ್ರಶಸ್ತಿ’ ಸ್ವೀಕರಿಸಿ ಅವರು ಮಾತನಾಡಿದರು.

‘ಚಳ್ಳಕೆರೆ, ಮಧುಗಿರಿ, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಸಹಿತ ಹಲವು ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ನನಗೆ ಏನೂ ಆಗಬೇಕಿಲ್ಲ. ಆದರೆ, ಈ ನಾಡಿನ ಜನರು ಬವಣೆ ಪಡಬಾರದು’ ಎಂದರು.

‘ಎಲ್ಲರೂ ಈ ವಿಚಾರದಲ್ಲಿ ಧ್ವನಿ ಎತ್ತಬೇಕು. ಎಲ್ಲ ಕಡೆ ನೀರಿನ ಬಗ್ಗೆ ಚರ್ಚೆಗಳಾಗಬೇಕು. ಸಂಸತ್ತಿನಲ್ಲಿ ನಾನು ಹೋರಾಟ ಮಾಡುತ್ತೇನೆ’ ಎಂದು ತಿಳಿಸಿದರು.

‘ಏಳು ದಶಕಗಳ ರಾಜಕೀಯದಲ್ಲಿ ಯಾವುದೋ ಒಂದು ಸಮುದಾಯ ನನ್ನನ್ನು ಬೆಳೆಸಿದ್ದಲ್ಲ. ಎಲ್ಲ ಸಮುದಾಯಗಳು ಸೇರಿ ಬೆಳೆಸಿವೆ. ಎಲ್ಲ ಜನರ ಋಣ ನನ್ನ ಮೇಲಿದೆ. 16 ಸಂಸದರನ್ನು ಜನರು ಆಯ್ಕೆ ಮಾಡದೇ ಹೋಗಿದ್ದರೆ ನಾನೆಲ್ಲಿ ಪ್ರಧಾನಿಯಾಗುತ್ತಿದ್ದೆ. ಜನರಿಗಾಗಿ ಕೆಲಸ ಮಾಡಿದೆ’ ಎಂದರು.

ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ‘ದೇವೇಗೌಡರು ದೊಡ್ಡ ಆಲದಮರ. ರಾಜಕಾರಣಿಯಾಗಿ ಅವರು ಬೆಳೆದ ಎತ್ತರ ಬಹಳ ದೊಡ್ಡದು. ಅದರ ಆಳ, ಅಗಲ, ಹರವು ನಮಗೆ ನಿಲುಕದು. ಭಕ್ತಿ, ಶ್ರದ್ಧೆ ಮತ್ತು ಒಳನೋಟದಿಂದ ಮಾಡುವ ಕೆಲಸಗಳೇ ಅವರ ಶಕ್ತಿ’ ಎಂದು ತಿಳಿಸಿದರು.

ಲೇಖಕ ಸುಗತ ಶ್ರೀನಿವಾಸರಾಜು ಅಭಿನಂದನಾ ನುಡಿಗಳನ್ನಾಡಿ, ‘ಯಾರ ಮುಲಾಜಿಗೂ ಸಿಗದ ರಾಜಕಾರಣಿಯಾಗಿರುವ ದೇವೇಗೌಡರು ಪ್ರಜಾಪ್ರಭುತ್ವದ ಶ್ರೀಪುರುಷ, ಪ್ರಜಾಪ್ರಭುತ್ವದ ಪುರುಷೋತ್ತಮ. ದೇಶದ ಮೂಲೆ ಮೂಲೆಗಳಿಗೆ ತಲುಪಿದ ಕರ್ನಾಟಕದ ಏಕೈಕ ರಾಜಕಾರಣಿ ಅವರು. ಅಧ್ಯಯನ, ರಾಜಕಾರಣ, ಅಭಿವೃದ್ಧಿ..ಈ ಮೂರನ್ನೇ ದೇವೇಗೌಡರು ಜೀವನಪೂರ್ತಿ ಮಾಡಿಕೊಂಡು ಬಂದವರು’ ಎಂದು ಹೇಳಿದರು.

ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾದ ಸಿದ್ಧಲಿಂಗ ಸ್ವಾಮೀಜಿ, ಚಿತ್ರದುರ್ಗದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಸ್ಫಟಿಕ ಪುರಿಯ ನಂಜಾವಧೂತ ಸ್ವಾಮೀಜಿ, ತುಮಕೂರು ರಾಮಕೃಷ್ಣ ಆಶ್ರಮದ ವೀರೇಶಾನಂದ ಸರಸ್ವತಿ ಸ್ವಾಮೀಜಿ, ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ, ವಿಶ್ವ ಒಕ್ಕಲಿಗರ ಸಂಸ್ಥಾನಮಠದ ನಿಶ್ಚಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ, ಅಭಿನಂದನಾ ಸಮಿತಿಯ ಅಧ್ಯಕ್ಷ ಅ. ದೇವೇಗೌಡ ಉಪಸ್ಥಿತರಿದ್ದರು. ವಿವಿಧ ಕ್ಷೇತ್ರಗಳ 93 ಸಾಧಕರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ‘ಮಾಜಿ ಪ್ರಧಾನಮಂತ್ರಿ ಎಚ್.ಡಿ. ದೇವೇಗೌಡ ಅವರ ಬದುಕು ಮತ್ತು ಸಾಧನೆ’ ಪುಸ್ತಕ ಬಿಡುಗಡೆ ಮಾಡಲಾಯಿತು.

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರಿಗೆ ‘ಗಂಗ ಸಾಮ್ರಾಟ ಶ್ರೀಪುರುಷ’ ಪ್ರಶಸ್ತಿ ನೀಡಲಾಯಿತು ಪ್ರಜಾವಾಣಿ ಚಿತ್ರ

‘ನನ್ನ ತಲೆ ಇನ್ನೂ ಚುರುಕಾಗಿದೆ’

‘ಜೀವನದ ಕೊನೆಯ ಹಂತದಲ್ಲಿ ನಾನಿದ್ದೇನೆ. ಕಾಲಿಗೆ ನೋವಾಗಿರಬಹುದು. ಆದರೆ, ತಲೆ ಇನ್ನೂ ಚುರುಕಾಗಿದೆ’ ಎಂದು ಎಚ್.ಡಿ. ದೇವೇಗೌಡ ಮಾನಸಿಕವಾಗಿ ಆರೋಗ್ಯವಾಗಿರುವುದನ್ನು ತಿಳಿಸಿದರು.

‘ಈ ಇಳಿ ವಯಸ್ಸಿನಲ್ಲಿ ಸನ್ಮಾನ ಮಾಡಿರುವುದು ಸಮಾಧಾನ ತಂದಿದೆ’ ಎಂದು ಕೃತಜ್ಞರಾದರು.

‘ನನ್ನ ತಂದೆಗೆ ನಾಲ್ಕು ಎಕರೆ ಜಮೀನು ಇತ್ತು. ಸಣ್ಣ ಕೃಷಿಕ ಕುಟುಂಬ ನಮ್ಮದು. ತಂದೆಯ ಮೊದಲ ಪತ್ನಿಗೆ ಮೂವರು ಗಂಡು ಮಕ್ಕಳಾದರೂ ಉಳಿಯಲಿಲ್ಲ. ಕೊನೆಗೆ ಮೊದಲ ಪತ್ನಿಯೂ ಮೃತಪಟ್ಟರು. ಎರಡನೇ ಪತ್ನಿಯೇ ನನ್ನ ತಾಯಿ. ಸೋಮವಾರ ಈಶ್ವರನ ದೇವಸ್ಥಾನಕ್ಕೆ, ಶನಿವಾರ ಆಂಜನೇಯನ ದೇವಸ್ಥಾನಕ್ಕೆ ಹೋಗಿ ನಮಗೊಂದು ಮಗುವನ್ನು ಕರುಣಿಸು ಎಂದು ಯಾವಾಗಲೂ ಪ್ರಾರ್ಥನೆ ಮಾಡುತ್ತಿದ್ದರು. ಹಾಗೆ ಹುಟ್ಟಿದವನು ನಾನು. ತಾಯಿ ಎಂಥ ಹಾಲನ್ನು ಕುಡಿಸಿದಳೋ? 93 ವರ್ಷ ಬದುಕಿದ್ದೇನೆ’ ಎಂದು ಹೆತ್ತವರನ್ನು ಸ್ಮರಿಸಿಕೊಂಡರು.

‘ನನಗೆ ಬೆಂಬಲವಾಗಿ, ಬೆನ್ನೆಲುಬಾಗಿ ಚೆನ್ನಮ್ಮ ನಿಂತರು. ಕಷ್ಟ ಕಾಲದಲ್ಲಿ ನಮ್ಮ ಮನೆಯ ಗೌರವ ಕಾಪಾಡಿದರು. ನನ್ನ ಬೆಳವಣಿಗೆಯಲ್ಲಿ ದೊಡ್ಡ ಕೊಡುಗೆಯನ್ನು ಚೆನ್ನಮ್ಮ ನೀಡಿದರು’ ಎಂದು ಪತ್ನಿಗೆ ಕೃತಜ್ಞತೆ ಸಲ್ಲಿಸಿದರು.

ಬಿಜೆಪಿ ಅಧ್ಯಕ್ಷ ಸ್ಥಾನ • ಹಿಂದುಳಿದ ಸಮುದಾಯದ ನಾಯಕರ ಬೇಡಿಕೆ

ಬದಲಾವಣೆಗೆ ಮುಂದುವರಿದ ಅತೃಪ್ತರ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಬಿ.ವೈ.ವಿಜಯೇಂದ್ರ ಅವರನ್ನು ಬದಲಿಸಬೇಕು. ಬೇರೊಬ್ಬರನ್ನು ಆ ಸ್ಥಾನಕ್ಕೆ ಆಯ್ಕೆ ಮಾಡಬೇಕು ಎಂದು ಬಿಜೆಪಿಯಲ್ಲಿನ ಅತೃಪ್ತರ ಬಣ ಮತ್ತೊಮ್ಮೆ ಒತ್ತಾಯಿಸಿದ್ದು, ಇದಕ್ಕಾಗಿ ಹೋರಾಟ ಮುಂದುವರಿಸಲು ತೀರ್ಮಾನಿಸಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇತ್ತೀಚೆಗೆ ಬೆಂಗಳೂರಿಗೆ ಬಂದಾಗ ಅತೃಪ್ತ ಬಣದ ನಾಯಕರು ತಮ್ಮ ಸಂದೇಶವನ್ನು ಶಾ ಅವರಿಗೆ ಮುಟ್ಟಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಅಮಿತ್ ಶಾ ಬೆಂಗಳೂರಿಗೆ ಬಂದ ದಿನವೇ ಶಾಸಕ ರಮೇಶ ಜಾರಕಿಹೊಳಿ ನೇತೃತ್ವದಲ್ಲಿ ಅತೃಪ್ತರ ಬಣ ಕೇಂದ್ರದ ಮಾಜಿ ಸಚಿವ ಜಿ.ಎಂ.ಸಿದ್ದೇಶ್ವರ ಅವರ ನಿವಾಸದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ವಿಸ್ತೃತ ಸಭೆ ನಡೆಸಿತ್ತು. ಈ ಸಭೆಯಲ್ಲಿ ಕೇಂದ್ರ ಸಚಿವ ವಿ.ಸೋಮಣ್ಣ ಅವರು ಭಾಗವಹಿಸಿದ್ದು ಚರ್ಚೆಗೆ ಗ್ರಾಸವಾಗಿತ್ತು.

ಈ ಕುರಿತು ಅತೃಪ್ತ ಬಣದ ನಾಯಕರೊಬ್ಬರು ‘ಪ್ರಜಾವಾಣಿ’ ಜತೆ ಮಾತನಾಡಿ,‘ಶಾಸಕ ಬಸವರಾಜ ಪಾಟೀಲ ಯತ್ನಾಳ ಅವರ ಉಚ್ಚಾಟನೆಯಿಂದ ನಮ್ಮ ಹೋರಾಟಕ್ಕೆ ಹಿನ್ನಡೆಯಾಗಿಲ್ಲ. ನಮ್ಮದು ಪಕ್ಷ ವಿರೋಧಿ ಚಟುವಟಿಕೆಯೂ ಅಲ್ಲ, ಪಕ್ಷವನ್ನು ಬಲಪಡಿಸುವ ಮತ್ತು ಹೊಂದಾಣಿಕೆ ರಾಜಕಾರಣಕ್ಕೆ ವಿದಾಯ ಹೇಳುವ ಉದ್ದೇಶದ ಹೋರಾಟವಾಗಿದೆ. ಇದರಲ್ಲಿ ಫಲ ಸಿಕ್ಕರೆ ಪಕ್ಷದ ಹಿತದೃಷ್ಟಿಯಿಂದ ಒಳ್ಳೆಯದು. ಇಲ್ಲವಾದರೆ ಪಕ್ಷದ ಬಹುತೇಕ ನಾಯಕರು ವಿಜಯೇಂದ್ರ ಅವರಿಗೆ ಸಾಥ್ ನೀಡುವ ಸಾಧ್ಯತೆ ತುಂಬಾ ಕಡಿಮೆ’ ಎಂದು ತಿಳಿಸಿದರು.

‘ನಮ್ಮ ಹೋರಾಟದ ವಿಚಾರ ವರಿಷ್ಠರಿಗೆ ಗೊತ್ತಿದ್ದು, ಸೂಕ್ತ ಕಾಲದಲ್ಲಿ ಸೂಕ್ತ ನಿರ್ಣಯ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ. ರಾಜ್ಯದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಅಕ್ಟೋಬರ್– ನವೆಂಬರ್ ವೇಳೆಗೆ ಚುನಾವಣೆ ಆಗಬಹುದು. 2028 ರ ವಿಧಾನಸಭಾ ಚುನಾವಣೆಗೆ ಪೂರಕವಾಗಿ ನೇಮಕ ಮಾಡುವ ಸಾಧ್ಯತೆ ಇದೆ. ಲಿಂಗಾಯತ ಮತ್ತು ಹಿಂದುಳಿದ ವರ್ಗದ ಸಮುದಾಯದಿಂದ ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ಇದೆ. ಲಿಂಗಾಯತ ಸಮುದಾಯದಿಂದ ವಿ.ಸೋಮಣ್ಣ, ಬಸವರಾಜ ಬೊಮ್ಮಾಯಿ, ಮುರುಗೇಶ ನಿರಾಣಿ ಅವರ ಹೆಸರು ಚಾಲ್ತಿಯಲ್ಲಿವೆ. ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದ ನಾಯಕರು ತಮ್ಮನ್ನೂ ಪರಿಗಣಿಸುವಂತೆ ಒತ್ತಾಯಿಸುತ್ತಿದ್ದಾರೆ’ ಎಂದು ಅವರು ಹೇಳಿದರು.

‘ವಕ್ಫ್ ಆಸ್ತಿ ಮತ್ತು ಬಾಂಗ್ಲಾ ಅಕ್ರಮ ವಲಸಿಗರ ಕುರಿತು ಅಧ್ಯಯನ ಮತ್ತು ಹೋರಾಟಕ್ಕೆ ವರಿಷ್ಠರು ಯಾವ ಆಕ್ಷೇಪವನ್ನೂ ವ್ಯಕ್ತಪಡಿಸಿಲ್ಲ. ಉತ್ತಮ ಕೆಲಸ ಮಾಡಿದ್ದೀರಿ ಎಂದು ಬೆನ್ನು ತಟ್ಟಿದ್ದಾರೆ. ಪಕ್ಷದ ಹಲವು ಮುಂಚೂಣಿ ನಾಯಕರ ಹೊಂದಾಣಿಕೆ ರಾಜಕಾರಣದ ಬಗ್ಗೆ ಆರೆಸ್ಸೆಸ್ ನಾಯಕರಿಗೂ ಬೇಸರ ಇದೆ’ ಎಂದು ಅವರು ತಿಳಿಸಿದರು.

‘ಕಾಂಗ್ರೆಸ್ ಸರ್ಕಾರದಲ್ಲಿ ಸಾಕಷ್ಟು ಹಗರಣಗಳು ನಡೆಯುತ್ತಿದ್ದರೂ, ಪಕ್ಷದಿಂದ ಶಕ್ತಿಶಾಲಿ ಹೋರಾಟ ನಡೆಯುತ್ತಿಲ್ಲ. ನಾಮಕಾವಸ್ತೆ ಎಂಬಂತೆ ಹೋರಾಟಗಳು ನಡೆಯುತ್ತಿವೆ. ಸುದ್ದಿವಾಹಿನಿಗಳ ಕ್ಯಾಮೆರಾ ಬೈಟ್‌ಗಷ್ಟೇ ಬಹುತೇಕ ಹೋರಾಟ, ಪ್ರತಿಭಟನೆಗಳು ಸೀಮಿತವಾಗಿದೆ. ಅಂಕಿ– ಅಂಶ, ದಾಖಲೆ ಇಟ್ಟುಕೊಂಡು ಯಾರೂ ಮಾತನಾಡುತ್ತಿಲ್ಲ. ಇದಕ್ಕೆ ಹೊಂದಾಣಿಕೆ ರಾಜಕಾರಣ ಬಿಟ್ಟು ಬೇರೆ ಯಾವುದೇ ಕಾರಣಗಳಿಲ್ಲ’ ಎಂದು ಅವರು ಹೇಳಿದರು.

‘ಈ ವಿಷಯಕ್ಕೆ ಸಂಬಂಧಿಸಿದಂತೆ ನಾವಾಗಿಯೇ ದೆಹಲಿಗೆ ಹೋಗುವುದಿಲ್ಲ. ವರಿಷ್ಠರೇ ಕರೆಸಿಕೊಂಡರೆ ಹೋಗಲು ತೀರ್ಮಾನಿಸಿದ್ದೇವೆ. ರಾಜ್ಯದ ಎಲ್ಲ ಹಿರಿಯ ನಾಯಕರು ನಮ್ಮ ಜತೆ ಇದ್ದಾರೆ. ಬಹುತೇಕ ನಾಯಕರು ನಮ್ಮ ಜತೆ ಬಹಿರಂಗವಾಗಿ ಗುರುತಿಸಲು ಇಷ್ಟ ಪಡುತ್ತಿಲ್ಲ. ಆದರೆ, ನಾಯಕತ್ವದ ಬದಲಾವಣೆಯ ಪರ ಇದ್ದಾರೆ. ನಮ್ಮ ಹೋರಾಟ ಮುಂದುವರೆಸುವಂತೆ ಹೇಳಿದ್ದಾರೆ’ ಎಂದರು.

‘ಪುರುಷರಿಗೆ ಬಸ್‌ನಲ್ಲಿ ಹೋಗಲು ಆಗುತ್ತಿಲ್ಲ’

ಪ್ರಜಾವಾಣಿ ವಾರ್ತೆ



ಕುಕನೂರು (ಕೊಪ್ಪಳ ಜಿಲ್ಲೆ): ‘ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ ‘ಶಕ್ತಿ’ ಬಳಸಿಕೊಂಡು ಮಹಿಳೆಯರು ರಾಜ್ಯದ ಎಲ್ಲ ಭಾಗದಲ್ಲಿಯೂ ಓಡಾಡುತ್ತಿದ್ದಾರೆ. ಗಂಡುಮಕ್ಕಳಿಗೆ ಬಸ್‌ನಲ್ಲಿ ಹತ್ತಲು ಸಾಧ್ಯವಾಗುತ್ತಿಲ್ಲ. ದೇಶಪಾಂಡೆ ಪುರುಷರ ಪರಿಸ್ಥಿತಿ ಕೆಟ್ಟದಾಗಿದೆ’ ಎಂದು ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರೂ ಆದ ಶಾಸಕ ಆರ್.ವಿ. ದೇಶಪಾಂಡೆ ಹೇಳಿದರು.

ತಾಲ್ಲೂಕಿನ ಶಿರೂರು ಗ್ರಾಮದಲ್ಲಿ ಭಾನುವಾರ ನಡೆದ ಕೆ.ಎಚ್. ಪಾಟೀಲ ಅವರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ‘ಆಡಳಿತದಲ್ಲಿ ಸಾಕಷ್ಟು ಬದಲಾವಣೆಗಳು ಆಗಬೇಕಿದೆ. ಎಷ್ಟು ಬೇಗ ನಿರ್ಧಾರಗಳು ಆಗುತ್ತವೆಯೊ ಅಷ್ಟು ಬೇಗ ಜನರ ಕಷ್ಟಗಳು ಪರಿಹಾರವಾಗುತ್ತವೆ’ ಎಂದು ಹೇಳಿದರು.

ರಾಷ್ಟ್ರಪತಿಯ ಅಂಕಿತಕ್ಕೆ ಕಾದಿರಿಸಿದ್ದ ಮಸೂದೆಗಳ ವಿಚಾರ

ರಾಜ್ಯಪಾಲರ ಜೊತೆ ಸಿ.ಎಂ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭಾನುವಾರ ಸಂಜೆ ಭೇಟಿ ಮಾಡಿ ಕೆಲಹೊತ್ತು ಚರ್ಚೆ ನಡೆಸಿದರು.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಅವರೂ ಮುಖ್ಯಮಂತ್ರಿಯವರ ಜೊತೆಗೆ ಇದ್ದರು.

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ನಾಮಫಲಕ ಅನಾವರಣ ಮತ್ತು ವಿವಿಧ ಕಾರ್ಯಕ್ರಮಗಳ ಅಡಿಗಲ್ಲು ಕಾರ್ಯಕ್ರಮದಲ್ಲಿ ಭಾಗವಹಿಸಲು ಸೋಮವಾರ (ಜೂನ್ 23) ಮುಖ್ಯಮಂತ್ರಿ ರಾಯಚೂರಿಗೆ ತೆರಳಲಿದ್ದಾರೆ. ಬಳಿಕ ಸಚಿವ ಸಂಪುಟದ ಸದಸ್ಯರ ಜೊತೆ ದೆಹಲಿಗೆ ಪ್ರಯಾಣ ಬೆಳೆಸಲಿರುವ ಮುಖ್ಯಮಂತ್ರಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಕೇಂದ್ರ ಸಚಿವರನ್ನು ಭೇಟಿ ಮಾಡಲಿದ್ದಾರೆ.

ರಾಷ್ಟ್ರಪತಿಯ ಅಂಕಿತಕ್ಕೆ ರಾಜ್ಯಪಾಲರು ಕಾದಿರಿಸಿದ ಐದು ಮಸೂದೆಗಳನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ ರಾಷ್ಟ್ರಪತಿ ಭವನಕ್ಕೆ ಕಳುಹಿಸಿದೆ. ರಾಷ್ಟ್ರಪತಿ ಭೇಟಿ ವೇಳೆ ಈ ಮಸೂದೆಗಳಿಗೆ ಅಂಗೀಕಾರ ನೀಡುವಂತೆ ಮುಖ್ಯಮಂತ್ರಿ ಮನವಿ ಮಾಡಲಿದ್ದಾರೆ. ರಾಷ್ಟ್ರಪತಿಯನ್ನು ಭೇಟಿಯಾಗಲಿರುವ ಕಾರಣ ರಾಜ್ಯಪಾಲರನ್ನು ಭೇಟಿ ಮಾಡಿ ಕೆಲ ಕಾಲ ಚರ್ಚೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

‘ರಾಷ್ಟ್ರಪತಿಯ ಅಂಕಿತಕ್ಕೆ ಕಾದಿರಿಸಿದ ಐದು ಮಸೂದೆಗಳಿಗೆ ಸಂಬಂಧಿಸಿದ ಕಡತದಲ್ಲಿ ರಾಜ್ಯಪಾಲರು ನೀಡಿರುವ ಕಾರಣಗಳು, ನಮೂದಿಸಿರುವ ಅಂಶಗಳ ಕುರಿತು ರಾಜ್ಯಪಾಲರಿಂದ ಮುಖ್ಯಮಂತ್ರಿ ಮಾಹಿತಿ ಪಡೆದರು. ರಾಜ್ಯ ಸರ್ಕಾರ ರೂಪಿಸಿರುವ ಮಸೂದೆಗಳನ್ನು ಹೇಗೆ ಸಮರ್ಥಿಸಿಕೊಳ್ಳಬೇಕು, ಅವುಗಳ ಜಾರಿಯ ಅವಶ್ಯಕತೆ ಕುರಿತು ರಾಷ್ಟ್ರಪತಿಗೆ ಮುಖ್ಯಮಂತ್ರಿ ಮನವರಿಕೆ ಮಾಡಲಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

ಯಾವೆಲ್ಲ ಮಸೂದೆಗಳು: ಒಂದರಿಂದ ಐದನೇ ತರಗತಿವರೆಗೆ ಮಾತೃ ಭಾಷೆ ಮಾಧ್ಯಮದಲ್ಲೇ ಶಿಕ್ಷಣ ಕಡ್ಡಾಯವಾಗಿ ಕಲಿಸುವ ಕುರಿತ ‘ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು (ಕರ್ನಾಟಕ ತಿದ್ದುಪಡಿ) ಮಸೂದೆ’, ಸರ್ಕಾರಿ ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ 4 ಮೀಸಲಾತಿ ಕಲ್ಪಿಸಲು ಅವಕಾಶ ನೀಡುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ತಿದ್ದುಪಡಿ (ಕೆಟಿಪಿಪಿ) ಮಸೂದೆ’, ರಾಜ್ಯದ ಮುಜರಾಯಿ ಇಲಾಖೆಯ ವ್ಯಾಪ್ತಿಯ ‘ಎ’ ವರ್ಗದ ದೇವಾಲಯಗಳಲ್ಲಿ ಸಂಗ್ರಹವಾಗುವ ‘ಸಾಮಾನ್ಯ ಸಂಗ್ರಹಣಾ ನಿಧಿ’ಯ ಶೇ 5ರಿಂದ ಶೇ 10ರಷ್ಟು ಆದಾಯವನ್ನು ‘ಸಿ’ ವರ್ಗದ ದೇವಸ್ಥಾನಗಳ ಅಭಿವೃದ್ಧಿಗೆ ಬಳಸುವುದನ್ನು ಕಡ್ಡಾಯಗೊಳಿಸುವ ‘ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಮಸೂದೆ’, ‘ಕರ್ನಾಟಕ ನೋಂದಣಿ ತಿದ್ದುಪಡಿ ಮಸೂದೆ’ ಮತ್ತು ‘ನೋಟರಿ ಕರ್ನಾಟಕ ತಿದ್ದುಪಡಿ ಮಸೂದೆ.

ಮಠದಲ್ಲಿ ಮಹಿಳೆ: ಸ್ವಾಮೀಜಿಗೆ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ಮೂಡಲಗಿ (ಬೆಳಗಾವಿ ಜಿಲ್ಲೆ): ‘ಮಹಿಳೆಯೊಬ್ಬರನ್ನು ಮಠದಲ್ಲಿ ಉಳಿಸಿಕೊಂಡಿದ್ದಾರೆ’ ಎಂದು ಆರೋಪಿಸಿ, ತಾಲ್ಲೂಕಿನ ಶಿವಾಪುರ (ಹ) ಗ್ರಾಮದ ಅಡವಿಸಿದ್ದೇಶ್ವರ ಮಠದ ಅಡವಿಸಿದ್ಧರಾಮ ಸ್ವಾಮೀಜಿ ಅವರನ್ನು ಗ್ರಾಮದ ಕೆಲವರು ಶನಿವಾರ ರಾತ್ರಿ ಮಠದಿಂದ ಹೊರಹಾಕಿದ್ದಾರೆ.

ವಿಜಯಪುರ ಜಿಲ್ಲೆಯ ತಾಳಿಕೋಟಿಯ ಮಹಿಳೆ ಹಾಗೂ ಅವರ 15 ವರ್ಷದ ಪುತ್ರಿ ಶನಿವಾರ ಮಠಕ್ಕೆ ಬಂದಿದ್ದರು. ರಾತ್ರಿ 10ರ ಸುಮಾರಿಗೆ ಮಠದ ಒಂದು ರೂಮಿನಲ್ಲಿ ಮಲಗಿದ್ದರು. ಆಗ ಮಠಕ್ಕೆ ಬಂದ ಕೆಲವರು, ತಾಯಿ– ಮಗಳನ್ನು ತರಾಟೆ ತೆಗೆದುಕೊಂಡರು. ‘ಮಠದಲ್ಲಿ ನಿಮಗೇನು ಕೆಲಸ? ರಾತ್ರಿ ಏಕೆ ಉಳಿದುಕೊಂಡಿದ್ದೀರಿ’ ಎಂದು ಪ್ರಶ್ನಿಸಿದರು.

ಶಿವಾಪುರ (ಹ) ಗ್ರಾಮದ ಅಡವಿ ಸಿದ್ಧೇಶ್ವರ ಮಠದ ಧ್ಯಾನಮಂದಿರ

ಸ್ವಾಮೀಜಿ ಅವರನ್ನೂ ತರಾಟೆ ತೆಗೆದುಕೊಂಡು. ಇದು ಅಕ್ರಮ ಸಂಬಂಧ ಎಂದು ಆರೋಪಿಸಿ ಕಿಡಿ ಕಾರಿದರು. ವಿಷಯ ತಿಳಿದು ಮೂಡಲಗಿ ಸಿಪಿಐ ಶ್ರೀಶೈಲ ಬ್ಯಾಕೂಡ, ಪಿಎಸ್‌ಐ ರಾಜು ಪೂಜೇರಿ ಮಠಕ್ಕೆ ಭೇಟಿ ನೀಡಿದರು. ಜನರನ್ನು ಸ್ಥಳದಿಂದ ಕಳುಹಿಸಿ, ಮಹಿಳೆ ಹಾಗೂ ಮಗಳನ್ನು ಮೂಡಲಗಿಯ ಮಹಿಳಾ ಸಾಂತ್ವನ ಕೇಂದ್ರಕ್ಕೆ ಸೇರಿಸಿದರು.

ಘಟನೆ ಬಗ್ಗೆ ಭಾನುವಾರ ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದ ಅಡವಿಸಿದ್ಧರಾಮ ಸ್ವಾಮೀಜಿ, ‘ಗ್ರಾಮದ ಕೆಲವರು ನನ್ನ ಮೇಲೆ ಹುನ್ನಾರ ನಡೆಸಿ ಈ ರೀತಿ ಮಾಡಿದ್ದಾರೆ. ಮಹಿಳೆ ಹಾಗೂ ಅವರ ಪುತ್ರಿ ಮಾತ್ರವಲ್ಲ; ಅವರ ಕುಟುಂಬದವರೆಲ್ಲ ಕಳೆದ 15 ವರ್ಷಗಳಿಂದ ನಮ್ಮ ಭಕ್ತರಿದ್ದಾರೆ. ನಾನು ಅಂಕಲಗಿ ಮಠದಲ್ಲಿ ಇದ್ದಾಗಲೂ ಬರುತ್ತಿದ್ದರು, ಈಗ ಶಿವಾಪುರಕ್ಕೂ ಬರುತ್ತಾರೆ. ಶನಿವಾರ ಸಂಜೆಯಾಗಿದ್ದರಿಂದ ದೂರದ ತಾಳಿಕೋಟೆಗೆ ಹೋಗಲು ಸಾಧ್ಯವಿರಲಿಲ್ಲ. ಹೀಗಾಗಿ, ಮಠದಲ್ಲಿ ವಸತಿಗೆ ಅವಕಾಶ ನೀಡಿದೆ. ರಾತ್ರಿ ಪ್ರಸಾದ ಮುಗಿಸಿ ಅವರು ಕೋಣೆಗೆ ಮಲಗಲು ಹೋದರು. ಅಷ್ಟರೊಳಗೆ ಒಂದು ಗುಂಪು ಹಲ್ಲೆ ಮಾಡಿದೆ. ಮಠದ ಅಭಿವೃದ್ಧಿ ಸಹಿಸದೇ ನನ್ನನ್ನು ಊರು ಬಿಡಿಸುವ ಹುನ್ನಾರ ನಡೆಸಿದ್ದಾರೆ. ನನ್ನ ಮೇಲಿನ ದ್ವೇಷಕ್ಕೆ ಮಹಿಳೆಗೆ ಅನ್ಯಾಯ ಮಾಡಬಾರದು. ನನ್ನ ತಪ್ಪು ಕಂಡುಬಂದರೆ ಶಿಕ್ಷೆ ಅನುಭವಿಸುತ್ತೇನೆ. ಆರೋಪ ಮಾಡಿದವರು ಸಾಕ್ಷ್ಯ ನೀಡಬೇಕು’ ಎಂದು ಆಗ್ರಹಿಸಿದರು.

ಪಿಯುಸಿ ಭೌತವಿಜ್ಞಾನ ವಿಷಯದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಟೊಮೆಟೊ ಒಂದು ಹಣ್ಣು ಎಂದು ತಿಳಿದಿರುವುದು ಜ್ಞಾನ. ಆದರೆ, ಹಣ್ಣು ಎಂಬ ಕಾರಣಕ್ಕೆ ಅದನ್ನು ಫ್ರೂಟ್‌ಸಲಾಡ್‌ಗೆ ಹಾಕಬಾರದು ಎಂಬ ಅರಿವು ಹೊಂದಿರುವುದು ವಿವೇಕ.
–ಮೈಲ್ಸ್ ಕಿಂಗ್‌ಟನ್

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಸಮಾಜವಿಜ್ಞಾನ

ಅಧ್ಯಾಯ–2 ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

2) ಸಹಾಯಕ ಸೈನ್ಯ ಪದ್ಧತಿ ನಿಬಂಧನೆಗಳು ಯಾವುವು?

ಉತ್ತರ: (......ಹಿಂದಿನ ಸಂಚಿಕೆಯಿಂದ)

2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೇ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.

3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.

4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ

5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.

6. ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

3) ಸಹಾಯಕ ಸೈನ್ಯ ಪದ್ಧತಿಗೆ ಒಳಗಾದ ಮೊದಲ ರಾಜ್ಯ ಯಾವುದು?

ಉತ್ತರ:– ಸಹಾಯಕ ಸೈನ್ಯ ಪದ್ಧತಿಗೆ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ ಹೈದರಾಬಾದ್ ಸಂಸ್ಥಾನ.

4) ಸಹಾಯಕ ಸೈನ್ಯ ಪದ್ಧತಿಗೆ ಒಳಗಾದ ರಾಜ್ಯಗಳನ್ನು ಹೆಸರಿಸಿ

ಉತ್ತರ:– ಮೈಸೂರು, ಔದ್, ತಂಜಾವೂರು, ಮರಾಠ, ಆರ್ಕಾಟ್, ಪೂನಾ, ಬಿರಾರ್, ಗ್ವಾಲಿಯರ್ ಮೊದಲಾದ ರಾಜ್ಯಗಳು ಈ ಒಪ್ಪಂದಕ್ಕೆ ಒಳಪಟ್ಟವು

5) ಎರಡನೇ ಆಂಗ್ಲೋ–ಮರಾಠ ಯುದ್ಧದ ಬಗ್ಗೆ ಬರೆಯಿರಿ

ಉತ್ತರ: ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ ಈ ಯುದ್ಧಕ್ಕೆ ಕಾರಣವಾಯಿತು. ಹೋಳ್ಕರ್ ಮನೆತನದ ಯಶವಂತರಾವ್ ಒಂದು ಕಡೆಯಾದರೆ ಸಿಂಧಿಯಾ ಮನೆತನದ ದೌಲತ್ ರಾವ್ ಹಾಗೂ ಪೇಶ್ವೆ ಎರಡನೇ ಬಾಜಿರಾವ್ ಇನ್ನೊಂದು ಕಡೆಗಿದ್ದರು. 1802ರಲ್ಲಿ ಹೋಳ್ಕರ್ ಸೈನ್ಯವು ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು ಸೋಲಿಸಿತು. ಪೇಶ್ವೆ ಬ್ರಿಟಿಷರ ಸಹಾಯ ಯಾಚಿಸಿದನು. ಲಾರ್ಡ್ ವೆಲ್ಲೆಸ್ಲಿಗೆ ಮರಾಠರ ಆಂತರಿಕ ವಿಚಾರದಲ್ಲಿ ಪ್ರವೇಶಿಸಲು ಅವಕಾಶ ಸಿಕ್ಕಿತು. ಪೇಶ್ವೆಯು ಬೆಸ್ಸಿನ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು. ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನ್ನು ವಿರೋಧಿಸಿ ಹೋಳ್ಕರ್, ಭೋಂಸ್ಲೆ, ಸಿಂಧಿಯಾ ಮೊದಲಾದ ಮರಾಠ ಮನೆತನಗಳು ಒಗ್ಗೂಡಿದರು

1803–1805ರವರೆಗೆ ಮರಾಠ ಮನೆತನಗಳ ಸೇನೆಯನ್ನು ವೆಲ್ಲೆಸ್ಲಿಯು ಅನೇಕ ಯುದ್ಧಗಳಲ್ಲಿ ಮಣಿಸಿದನು. ಆದರೆ ಅವನ ಯುದ್ಧಪ್ರಿಯ ನೀತಿಯಿಂದ ಕಂಪನಿಗೆ ಸಾಲದ ಹೊರೆ ಹೆಚ್ಚಿತು. ಇದರಿಂದ ತೀವ್ರ ಟೀಕೆಗೆ ಒಳಗಾದ ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಸ್ವದೇಶಕ್ಕೆ ಮರಳಿದನು. ಇದರಿಂದ ಆ ಪ್ರದೇಶದಲ್ಲಿ ತಾತ್ಕಾಲಿಕ ಶಾಂತಿ ನೆಲೆಸಿತು.

6) ಮೂರನೇ ಆಂಗ್ಲೋ–ಮರಾಠ ಯುದ್ಧದ ಬಗ್ಗೆ ಬರೆಯಿರಿ

ಉತ್ತರ: ಮರಾಠ ಮನೆತನಗಳು ತಮ್ಮ ಘನತೆ ಮತ್ತು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ನಡೆಸಿದವು. ಪೇಶ್ವೆ ಕೂಡ ಬ್ರಿಟಿಷರ ನಿಯಂತ್ರಣದಿಂದ ಮುಕ್ತಗೊಳ್ಳಲು ಹವಣಿಸುತ್ತಿದ್ದನು. 1817ರಲ್ಲಿ ಪೇಶ್ವೆಯು ಪೂನಾದಲ್ಲಿ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ನಡೆಸಿ ಸುಟ್ಟನು. ನಾಗಪುರದ ಅಪ್ಪಾ ಸಾಹೇಬ ಮತ್ತು ಮಲ್ಹಾರ ರಾವ್ ಹೋಳ್ಕರ್ ಕೂಡ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸೋತರು. ಅಂತಿಮವಾಗಿ ಪೇಶ್ವೆ ಎರಡನೇ ಬಾಜಿರಾಯನು ಬ್ರಿಟಿಷರ ವಿರುದ್ಧ 1818ರಲ್ಲಿ ಕೋರೇಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋತು ಶರಣಾದನು. ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ ಬಾಜಿರಾಯನಿಗೆ ವಿಶ್ರಾಂತಿ ವೇತನ ನೀಡಿದರು. ಬದಲಿಗೆ ಶಿವಾಜಿಯ ವಂಶಸ್ಥ ಪ್ರತಾಪ ಸಿಂಹನನ್ನು ಸಣ್ಣ ರಾಜ್ಯ ಸತಾರಾದಲ್ಲಿ ಪ್ರತಿಷ್ಠಾಪಿಸಿ, ಮರಾಠರ ಸಾಂಪ್ರದಾಯಿಕ ಮುಖಂಡನಾಗಿಸುವ ಮೂಲಕ ಮರಾಠರ ಪ್ರತಿರೋಧವನ್ನು ನಿಗ್ರಹಿಸಿದರು.

7) ಆಂಗ್ಲೋ–ಸಿಖ್ ಯುದ್ಧಗಳ ಕುರಿತು

ಉತ್ತರ: 1839ರಲ್ಲಿ ರಣಜಿತ್ ಸಿಂಗನು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು. 1809ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು. 1845ರ ಡಿಸೆಂಬರ್‌ನಲ್ಲಿ ಬ್ರಿಟಿಷರಿಗೂ ಪಂಜಾಬ್ ಸೈನ್ಯಕ್ಕೂ ಯುದ್ಧ ಆರಂಭವಾಯಿತು. ವಿದೇಶಿಯರಿಂದ ಇರಬಹುದಾದ ಅಪಾಯವನ್ನರಿತ ಹಿಂದೂ, ಮುಸಲ್ಮಾನ ಹಾಗೂ ಸಿಖ್ಖರೆಲ್ಲರೂ ಬ್ರಿಟಿಷರನ್ನು ಮಣಿಸಲು ಒಂದಾದರು. ಅಂತಿಮವಾಗಿ ಕೆಲವು ದೇಶದ್ರೋಹಿ ನಾಯಕರಿಂದ ಸೋಲೊಪ್ಪಬೇಕಾಯಿತು. ಅವಮಾನಕರ ಲಾಹೋರ್ ಒಪ್ಪಂದಕ್ಕೆ 1846ರಲ್ಲಿ ಸಹಿ ಹಾಕಬೇಕಾಯಿತು. ಅಂದಿನಿಂದ ಬ್ರಿಟಿಷ್ ರೆಸಿಡೆಂಟನು ಪಂಜಾಬಿನ ನಿಜವಾದ ಆಡಳಿತಗಾರನಾದನು ಹೀಗೆ ಪಂಜಾಬ್ ಬ್ರಿಟಿಷ್ ಆಶ್ರಿತ ರಾಜ್ಯವಾಯಿತು. 1848ರಲ್ಲಿ ಪಂಜಾಬಿನ ಮೇಲೆ ನೇರ ಬ್ರಿಟಿಷ್ ಆಳ್ವಿಕೆಯನ್ನು ಹೇರಲು ಹೊರಟಾಗ ಸಿಖ್ಖರು ಪ್ರತಿಭಟಿಸಿದರು. ಈ ಪ್ರತಿಭಟನೆಗಳ ನೇತೃತ್ವವನ್ನು 'ಚಟ್ಟಾರ್ ಸಿಂಗ್ ಅಟ್ಟಾರಿವಾಲ' ಮತ್ತು 'ಮೂಲರಾಜ್' ಅವರು ಕ್ರಮವಾಗಿ ಲಾಹೋರ್ ಮತ್ತು ಮುಲ್ತಾನ್‌ಗಳಲ್ಲಿ ವಹಿಸಿದ್ದರು. ಮತ್ತೆ ಸಿಖ್ಖರಿಗೆ ಸೋಲಾಯಿತು. ಅಂತಿಮವಾಗಿ ಲಾರ್ಡ್ ಡಾಲ್‌ಹೌಸಿಯು ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡನು.

8) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಕುರಿತು ಬರೆಯಿರಿ

ಉತ್ತರ:– 1848ರಲ್ಲಿ ಭಾರತಕ್ಕೆ ಗವರ್ನರ್ ಜನರಲ್ ಆಗಿ ಬಂದ ಡಾಲ್‌ಹೌಸಿಯು ಭಾರತದ ಎಲ್ಲ ದೇಶೀಯ ಸಂಸ್ಥಾನಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸುವ ಅಂತಿಮ ಪ್ರಯತ್ನವನ್ನು ನಡೆಸಿದ. ಡಾಲ್‌ಹೌಸಿಯು ತನ್ನ ವಿಸ್ತರಣಾ ನೀತಿಯನ್ನು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯ ಮೂಲಕ ಸಾಧಿಸಿದನು.

ಈ ನೀತಿಯ ಪ್ರಕಾರ: 'ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ'. ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು. ಈ ನೀತಿಗೆ ಒಳಪಟ್ಟ ರಾಜ್ಯಗಳಲ್ಲಿ ಸತಾರ, ಜೈಪುರ, ಸಂಬಲ್‌ಪುರ, ಉದಯಪುರ, ಝಾನ್ಸಿ, ನಾಗಪುರ ಮೊದಲಾದಗಳು ಪ್ರಮುಖವಾದವುಗಳಾಗಿವೆ. ಈ ರಾಜ್ಯಗಳ ರಾಜರಿಗೆ ಮಕ್ಕಳಿಲ್ಲದಿರುವುದನ್ನು ಮೊದಲೇ ಅರಿತಿದ್ದ ಬ್ರಿಟಿಷ್ ಗವರ್ನರ್ ಜನರಲ್‌ನು ಈ ನೀತಿಯನ್ನು ರಾಜಕೀಯ ಅಸ್ತ್ರವಾಗಿ ಜಾರಿಗೊಳಿಸಿದನು. ಡಾಲ್‌ಹೌಸಿಯ ತಡೆಯಿಲ್ಲದ ರಾಜ್ಯಾಕ್ರಮಣದ ನಡೆಯಿಂದ ಭಾರತೀಯ ರಾಜರು ಮಾತ್ರವಲ್ಲ, ಅವರ ಬಗೆಗೆ ಸಹಾನುಭೂತಿಯುಳ್ಳ ಸಾಮಾನ್ಯ ಜನವರ್ಗವು ಕೂಡ ಬ್ರಿಟಿಷ್‌ರ ವಿರುದ್ಧ ಮಲೆತು ನಿಂತಿತು.

ಬಹು ಆಯ್ಕೆ ಪ್ರಶ್ನೆಗಳು

1) 1839ರಲ್ಲಿ ಯಾರು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು?

ಎ) ರಣಜಿತ್ ಸಿಂಗನು (ಮುಂದುವರಿಯುವುದು)

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಜಾಗತಿಕ ಸ್ಕಾಲರ್ ಚ್ಯಾಲೆಂಜ್

ವಿದ್ಯಾರ್ಥಿವೇತನ ಕೈಪಿಡಿ

ಗ್ಲೋಬಲ್ ಸ್ಕಾಲರ್ ಚ್ಯಾಲೆಂಜ್- ಪವರ್ಡ್ ಬೈ TOEFL (3ನೇ ಆವೃತ್ತಿ) ಆರಂಭಗೊಂಡಿದೆ. ಇದು, ವಿದೇಶದಲ್ಲಿ ಅಧ್ಯಯನ ಮಾಡಲು ಬಯಸುವ ಭಾರತೀಯ ವಿದ್ಯಾರ್ಥಿಗಳಿಗೆ ಆನ್‌ಲೈನ್ ರಸಪ್ರಶ್ನೆಯಾಗಿದೆ. ಜಾಗತಿಕ ಶಿಕ್ಷಣ, ಇಂಗ್ಲಿಷ್ ಪ್ರಾವೀಣ್ಯ ಮತ್ತು ವಿದೇಶದಲ್ಲಿ ಅಧ್ಯಯನ ಮಾಡಲು ಕೈಗೊಳ್ಳಬೇಕಾದ ಸಿದ್ಧತೆಯ ಕುರಿತು ಅಭ್ಯರ್ಥಿಗಳಿಗೆ ಇರುವ ಜ್ಞಾನದ ಬಗ್ಗೆ ತಿಳಿದುಕೊಳ್ಳುವ ಪರೀಕ್ಷೆಯಾಗಿದೆ.

ಅರ್ಹತೆ: ಭಾರತದಾದ್ಯಂತ ಯಾವುದೇ ಮಾನ್ಯತೆ ಪಡೆದ ಕಾಲೇಜಿನಲ್ಲಿ 11 ಮತ್ತು 12ನೇ ತರಗತಿ ಅಥವಾ ತತ್ಸಮಾನ ತರಗತಿಗೆ ದಾಖಲಾಗಿರಬೇಕು. ಅರ್ಜಿದಾರರು ಭಾರತೀಯ ಪ್ರಜೆಗಳಾಗಿರಬೇಕು. ಈ ಮೊದಲು TOEFL (ಟೆಸ್ಟ್ ಆಫ್ ಇಂಗ್ಲಿಷ್ ಆ್ಯಸ್ ಫಾರಿನ್ ಲ್ಯಾಂಗ್ವೇಜ್) ಪರೀಕ್ಷೆಯನ್ನು ತೆಗೆದುಕೊಂಡಿರಬಾರದು.

ಆರ್ಥಿಕ ಸಹಾಯ: ₹1.30 ಲಕ್ಷ

ಅರ್ಜಿ ಸಲ್ಲಿಸಲು ಕೊನೇ ದಿನ: 20-08-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್.

ಮಾಹಿತಿಗೆ: Short Url: www.b4s.in/praja/TGSC1

CREATIVE NEET ACADEMY
Sapthagiri Campus, Kanangi Road, Hirgana, Karkala - 576 117
Ph: +91 96069 97383 | www.creativeedu.in
ಪ್ರತೀ ವರ್ಷವೂ ಅತೀ ಹೆಚ್ಚು ವಿದ್ಯಾರ್ಥಿಗಳು ಸರಕಾರಿ ವೈದ್ಯಕೀಯ ಸಂಸ್ಥೆಗಳಿಗೆ ಆಯ್ಕೆಯಾಗುತ್ತಿರುವ ಹೆಗ್ಗಳಿಕೆಯ ಸಂಸ್ಥೆ ಕ್ರಿಯೇಟಿವ್
NEET 1 YEAR LONG TERM COURSE (REPEATERS' BATCH)
NEET - 2025
ALL INDIA RANK 1623 – 596 – SUMANTAGOUDA S D – AIR 927 CATEGORY – 99.923686 PERCENTILE
ALL INDIA RANK 2483 – 588 – PRAJWAL S N – AIR 872 CATEGORY – 99.886435 PERCENTILE
ALL INDIA RANK 3025 – 583 – H A RAJESH – AIR 1098 CATEGORY – 99.857286 PERCENTILE
ALL INDIA RANK 8422 – 560 – SATHVIK BHANDARI – AIR 3469 CATEGORY – 99.614315 PERCENTILE
551 HEMANTH KUMAR · 541 PRAPTHI SHETTY · 539 BHUVAN GOWDA K S · 536 SANGEETHA B. M · 531 SRINIDHI D · 523 VINAY S (632 AIR)
521 SNEHA B BOMBLE · 521 YUVARAJ P PATIL · 519 GANESH G · 519 SHAKTHI S GOWDA · 515 SRUSHTI V PATIL · 514 SHRINIDHI P U
513 NINAD H MALALI · 512 PRATHAM S P · 509 DHRUVA · 509 MEGHANA U Y · 504 ABHINANDAN B T · 500 BHARAT KOORGER
CREATIVE's NEET ACCOMPLISHERS - 2024
132 Appeared - 344
Proud Creative Students Joined the Prestigious Medical Colleges...
STORY OF SUCCESS is NEVER ENDING...
2022: 25/91 · 2023: 54/219 · 2024: 132/344
AIIMS NEHA K UDAPUDI · AIIMS UDBHAV M R · JIPMER JAAGRUTHI K P · BMC KARTHIK A S · BMC CHAMAN G · BMC ADITYA SHET · BMC FARHAN T P
BMC SATVIK S HEGDE · BMC SATHWIK D · KMC SWEEKRUTHI SHETTY · MMC RAGHAVENDRA T · MMC SATEESHAGOUDA · MMC PRIYANKA K B · MMC AANYA D J GOWDA
KIMS PREMSAGAR PATIL · KIMS SNEHA VASTRAD · KIMS TANUSHREE K N · KIMS SOHAN S N · KSHEMA PRASHIN SHETTY · KSHEMA PANKAJ BHAT · SIMS SINCHANA R H
SIMS ARYA RAO T P · SIMS B E HITHAISH · SIMS PREETHAM S G · SIMS JNANADEEP K R · SIMS SAKSHITH SHETTY · SIMS PRAKYATH SHETTY · SIMS MANOJA PALANKAR
WE ARE AT
Scan for Location – HKS PU COLLEGE HASSAN – Ph: +91 91410 46517
CREATIVE PU COLLEGE KARKALA – Scan for Location – Ph: +91 96069 97383


CMR UNIVERSITY
Private University Estd in Karnataka State by Act No. 45 of 2013
BENGALURU | RECOGNISED BY UGC
APPLY NOW!
CREATE THE FUTURE
ADMISSIONS OPEN FOR AY 2025-26
RANKED
• 69 among top engineering institutes in India
• 44 among top private institutes for placement in India
Source: Times All India Engineering Institutes Ranking Survey 2025
MBA | School of Management
MBA with Dual Specialisation in
• Marketing • HR • Finance • Business Analytics
• Digital Marketing • Supply Chain Management
MBA | Business Analytics & Business Intelligence
MBA | Technology Management NEW
MBA | Product Leadership
Executive MBA | Product Leadership
MBA PGCET CODES:
City Campus - B150 | OMBR - B149 | Lakeside - B395
MCA | School of Science & Computer Studies
Master of Computer Application
Postgraduate program focused on advanced study in computer applications and software development. Covers subjects such as advanced programming languages, software engineering, database management, networking, and mobile application development.
MCA PGCET CODES:
OMBR Campus - C527 | Lakeside Campus - C521
M.Tech | School of Engineering & Technology
M.Tech (For Regular & Professionals)
• Computer Science & Engineering
• Artificial Intelligence
M.Tech PGCET CODE:
Lakeside Campus - T987
200+ recruiters
BOSCH KPMG Capgemini EY IBM zomato amazon Deloitte.
and many more..

Up to 100% Scholarship available for eligible candidates*
*T&C apply
LIMITED SEATS AT CONCESSIONAL FEE
• Semester-wise payment option
• Interest-free education loan (EMI option*)
• Hostel facility for boys & girls
*T&C apply
We honour all National-level and state level entrance tests.
Direct admission for CUET students
PROVIDING OPPORTUNITIES TO GET SCHOLARSHIPS WORTH ₹12 CRORES*
*T&C apply
93429 00666
admissions@cmr.edu.in
www.cmr.edu.in
Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043

ಅಧಿಕಾರಿಗಳ ವಿಚಾರಣೆ ಇಂದು?

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತ ಪ್ರಕರಣದ ತನಿಖೆ ನಡೆಸುತ್ತಿರುವ ವಿಚಾರಣಾಧಿಕಾರಿಯಾಗಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಎದುರು ಅಮಾನತುಗೊಂಡಿರುವ ಅಧಿಕಾರಿಗಳು ಸೋಮವಾರ ವಿಚಾರಣೆಗೆ ಹಾಜರಾಗುವ ಸಾಧ್ಯತೆಯಿದೆ.

ಕಬ್ಬನ್ ಪಾರ್ಕ್ ಠಾಣೆ ಉಪ ವಿಭಾಗದ ಎಸಿಪಿಯಾಗಿದ್ದ ಬಾಲಕೃಷ್ಣ ಈಗಾಗಲೇ ವಿಚಾರಣೆಗೆ ಹಾಜರಾಗಿ, ಹೇಳಿಕೆ ನೀಡಿದ್ದಾರೆ. ನಗರ ಪೊಲೀಸ್ ಆಯುಕ್ತರಾಗಿದ್ದ ಬಿ.ದಯಾನಂದ, ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತರಾಗಿದ್ದ ವಿಕಾಸ್ ಕುಮಾರ್ ವಿಕಾಸ್, ಕೇಂದ್ರ ವಿಭಾಗದ ಡಿಸಿಪಿಯಾಗಿದ್ದ ಶೇಖರ್ ಟೆಕ್ಕಣ್ಣನವರ ಹಾಗೂ ಕಬ್ಬನ್ ಪಾರ್ಕ್ ಠಾಣೆ ಇನ್‌ಸ್ಪೆಕ್ಟರ್ ಗಿರೀಶ್ ಅವರು ತನಿಖಾಧಿಕಾರಿಗಳ ಮುಂದೆ ವಿಚಾರಣೆಗೆ ಹಾಜರಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಮಾಜಿ ಕಾರ್ಯದರ್ಶಿ ಶಂಕರ್ ಹಾಗೂ ಮಾಜಿ ಖಜಾಂಚಿ ಇ.ಎಸ್.ಜೈರಾಮ್ ಅವರು ತನಿಖಾಧಿಕಾರಿ ಜಿ.ಜಗದೀಶ್ ಎದುರು ಶನಿವಾರ ಹಾಜರಾಗಿ, ಸುಮಾರು ಮೂರು ತಾಸು ವಿಚಾರಣೆ ಎದುರಿಸಿದರು.

ಅಹಮದಾಬಾದ್‌ನಲ್ಲಿ ನಡೆದ ಐಪಿಎಲ್ ಫೈನಲ್ ಪಂದ್ಯದ ಆರಂಭಕ್ಕೆ ಮುನ್ನವೇ ವಿಜಯೋತ್ಸವ ಆಚರಣೆಗಾಗಿ ಪೂರ್ವಾನುಮತಿ ಪಡೆಯಲು ಸೂಚಿಸಿದ್ದು ಯಾರು? ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗರಿಷ್ಠ 35 ಸಾವಿರ ಆಸನಗಳಿದ್ದರೂ ಲಕ್ಷಾಂತರ ಮಂದಿ ಅಭಿಮಾನಿಗಳು ಬರುವ ಬಗ್ಗೆ ನಿರೀಕ್ಷೆ ಹೊಂದಿರಲಿಲ್ಲವೇ? ಕಬ್ಬನ್ ಪಾರ್ಕ್ ಪೊಲೀಸರು ಕಾರ್ಯಕ್ರಮ ಆಯೋಜನೆಗೆ ಅನುಮತಿ ನೀಡದಿದ್ದರೂ ಸಂಭ್ರಮಾಚರಣೆಗೆ ಹೇಳಿದವರು ಯಾರು ಎಂಬುದು ಸೇರಿದಂತೆ ಹತ್ತಾರು ಪ್ರಶ್ನೆಗಳನ್ನು ತನಿಖಾಧಿಕಾರಿಗಳು ಕೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದುರಂತದಲ್ಲಿ 11 ಮಂದಿ ಸಾವು ಹಾಗೂ 50ಕ್ಕಿಂತ ಹೆಚ್ಚು ಮಂದಿ ಗಾಯಗೊಂಡ ಹಿನ್ನೆಲೆಯಲ್ಲಿ ನೈತಿಕ ಹೊಣೆ ಹೊತ್ತು ಶಂಕರ್ ಹಾಗೂ ಜೈರಾಮ್ ಈಗಾಗಲೇ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ.

ಆರ್‌ಸಿಬಿ ತಂಡದ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆ ಹೊರತುಪಡಿಸಿ ಡಿಎನ್‌ಎ ಇವೆಂಟ್ ಮ್ಯಾನೇಜ್‌ಮೆಂಟ್ ಸಿಬ್ಬಂದಿ ಸುನೀಲ್ ಮ್ಯಾಥ್ಯು, ಕಿರಣ್ ಕುಮಾರ್ ಹಾಗೂ ಶಮಂತ್ ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ.

ಮೊದಲ ಬಾರಿಗೆ ನೋಟಿಸ್ ನೀಡಿ ವಿಚಾರಣೆಗೊಳಪಡಿಸಿದಾಗ ಲಿಖಿತ ಹೇಳಿಕೆ ದಾಖಲಿಸಿಕೊಳ್ಳಲಾಗಿತ್ತು. ಲಿಖಿತ ಹೇಳಿಕೆಗೆ ಪೂರಕವಾಗಿ ಅಗತ್ಯ ದಾಖಲಾತಿ ನೀಡುವಂತೆ ಹೇಳಲಾಗಿತ್ತು. ಅದರಂತೆ ಶನಿವಾರ ಹಾಜರಾಗಿ ಕ್ರೀಡಾಂಗಣದ ಭದ್ರತೆಗಿದ್ದ ಸಿಬ್ಬಂದಿಯ ವಿವರ, ವಿಜಯೋತ್ಸವಕ್ಕೆ ಕೈಗೊಂಡಿದ್ದ ಮುಂಜಾಗ್ರತಾ ಕ್ರಮಗಳ ಕುರಿತಂತೆ ದಾಖಲಾತಿಗಳನ್ನು ಪಡೆಯಲಾಗಿದೆ ಎಂದು ಗೊತ್ತಾಗಿದೆ.

ಮುಖ್ಯಾಂಶಗಳು

- ಬೆಂಗಳೂರು ಜಿಲ್ಲಾಧಿಕಾರಿ ಜಗದೀಶ್‌ರಿಂದ ವಿಚಾರಣೆ
- ಪೊಲೀಸ್ ಆಯುಕ್ತರಾಗಿದ್ದ ದಯಾನಂದ ಅವರ ವಿಚಾರಣೆ
- ಕಾಲ್ತುಳಿತ ಘಟನೆಯಲ್ಲಿ 11 ಮಂದಿ ಸಾವೀಡಾಗಿದ್ದರು

ಮಕ್ಕಳ ಶಿಕ್ಷಣಕ್ಕೆ ಸಾಲ ಮಾಡಿದ್ದ ಹಣ ಕಳ್ಳತನ

ಬೆಂಗಳೂರು: ಸದಾಶಿವನಗರ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯ ಬೀಗ ಒಡೆದು ₹65 ಸಾವಿರ ನಗದು ಹಾಗೂ 5 ಗ್ರಾಂ ಚಿನ್ನ ದೋಚಿ ಕಳ್ಳರು ಪರಾರಿಯಾಗಿದ್ದಾರೆ.

ಪ್ಯಾಲೆಸ್ ಆವರಣದಲ್ಲಿನ ಗಾರ್ಡನರ್ ಶ್ರೀನಿವಾಸ್ ದೂರು ನೀಡಿದ್ದರು. ಪತ್ನಿ ಶನಿವಾರ ಕೆಲಸಕ್ಕೆ ತೆರಳಿದ್ದರು. ಮಕ್ಕಳು ಕಾಲೇಜಿಗೆ ಹೋಗಿದ್ದರು. ಮನೆಯಲ್ಲಿ ಯಾರೂ ಇಲ್ಲದ ವೇಳೆ ಅಪರಿಚಿತರು ಬೀರುವಿನಲ್ಲಿದ್ದ ನಗದು ಹಾಗೂ ಚಿನ್ನ ಕಳ್ಳತನ ಮಾಡಿದ್ದಾರೆ.

‘ಮೂವರು ಹೆಣ್ಣುಮಕ್ಕಳ ಕಾಲೇಜು ಶುಲ್ಕ ಪಾವತಿಸಲು ₹65 ಸಾವಿರ ಸಾಲ ಮಾಡಿದ್ದ ಹಣ ಕಳ್ಳತನವಾಗಿದೆ’ ಎಂದು ಶ್ರೀನಿವಾಸ್ ದೂರಿನಲ್ಲಿ ತಿಳಿಸಿದ್ದಾರೆ.

ಕೇಂದ್ರೀಯ ವಿದ್ಯಾಲಯ ಭಾ.ವಿ.ಸಂ, ಬೆಂಗಳೂರು-560012
केंद्रीय विद्यालय भा.वि.सं. बेंगलूरु- 560012
KENDRIYA VIDYALAYA INDIAN INSTITUTE OF SCIENCE BENGALURU - 560012
E-mail: principal.kviisc@gmail.com
Website: https://iiscbangalore.kvs.ac.in Ph: 080-23371316
ಗುತ್ತಿಗೆ ಆಧಾರದ ಮೇಲೆ PGT- ಭೌತಶಾಸ್ತ್ರ ಹುದ್ದೆಗೆ ನೇರ ಸಂದರ್ಶನ
ಸ್ನಾತಕೋತ್ತರ ಶಿಕ್ಷಕರು (ಭೌತಶಾಸ್ತ್ರ) ಹುದ್ದೆಗೆ ನೇರ ಸಂದರ್ಶನ
28.06.2025 ರಂದು (ಶನಿವಾರ) ಬೆಳಿಗ್ಗೆ 9.00 ರಿಂದ ಬೆಳಿಗ್ಗೆ 11.00 ರವರೆಗೆ ನಡೆಯಲಿದೆ.
ಗಮನಿಸಿ:
ಅರ್ಹತೆ, ಶೈಕ್ಷಣಿಕ ಅರ್ಹತೆ, ಸಂಭಾವನೆ ಮತ್ತು ಸಂದರ್ಶನ ದಿನಾಂಕ ಮತ್ತು ಸಮಯದ ವಿವರಗಳನ್ನು ಶಾಲಾ ವೆಬ್‌ಸೈಟ್: https://iiscbangalore.kvs.ac.in ನಲ್ಲಿ ಪ್ರಕಟಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ನೀಡಲಾದ ವೇಳಾಪಟ್ಟಿಯ ಪ್ರಕಾರ ವಿದ್ಯಾಲಯಕ್ಕೆ ಹಾಜರಾಗಬೇಕು, ಜೊತೆಗೆ ಎಲ್ಲಾ ಮೂಲ ದಾಖಲೆಗಳು / ಪ್ರಮಾಣಪತ್ರಗಳು ಮತ್ತು ಎಲ್ಲಾ ದಾಖಲೆಗಳ ಒಂದು ಸೆಟ್ ಸ್ವಯಂ-ದೃಢೀಕೃತ ಜೆರಾಕ್ಸ್ ಪ್ರತಿಗಳೊಂದಿಗೆ ಭರ್ತಿ ಮಾಡಿದ ಬಯೋಡೇಟಾ ಫಾರ್ಮ್ ಅನ್ನು ಸಲ್ಲಿಸಬೇಕು. ಸಂದರ್ಶನಕ್ಕೆ ಹಾಜರಾಗಲು ಯಾವುದೇ ಟಿಎ / ಡಿಎ ಪಾವತಿಸಲಾಗುವುದಿಲ್ಲ.
ಸಹಿ/- ಪ್ರಾಂಶುಪಾಲರು

₹ 23 ಲಕ್ಷ ಸಾಲಕ್ಕೆ ₹ 80 ಲಕ್ಷ ಮೀಟರ್ ಬಡ್ಡಿ: ಆರೋಪಿಗಳು ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಉದ್ಯಮಿಯೊಬ್ಬರಿಗೆ ₹23 ಲಕ್ಷ ಸಾಲ ನೀಡಿ, ₹80 ಲಕ್ಷ ಬಡ್ಡಿ ವಸೂಲು ಮಾಡಿರುವ ಆರೋಪ ಕೇಳಿ ಬಂದಿದೆ.

ಮೀಟರ್ ಬಡ್ಡಿ ದಂಧೆಕೋರರಿಂದ ತೊಂದರೆಗೆ ಒಳಗಾದ ಉದ್ಯಮಿ ಅಕ್ಷಯ್ ಅಳವಂಡಿ ಅವರ ದೂರಿನ ಮೇರೆಗೆ ಸಿಸಿಬಿ ಪೊಲೀಸರು ಪ್ರದೀಪ್ ಗೌಡ, ಭಾಸ್ಕರ್ ಗೌಡರ ವಿರುದ್ಧ ಕರ್ನಾಟಕ ಲೇವಾದೇವಿದಾರರ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಬನಶಂಕರಿ ಎರಡನೇ ಹಂತದ ನಿವಾಸಿ ಅಕ್ಷಯ್, ಉದ್ಯಮ ಸ್ಥಾಪನೆಗಾಗಿ 2024ರಲ್ಲಿ ಪ್ರದೀಪ್ ಗೌಡ ಮತ್ತು ಭಾಸ್ಕರ್ ಗೌಡ ಬಳಿ ₹25 ಲಕ್ಷ ಸಾಲ ಪಡೆದಿದ್ದರು. ‘ಸಾಲ ನೀಡಿ ಬಳಿಕ ವಾರದ ಬಡ್ಡಿ ಲೆಕ್ಕದಲ್ಲಿ ಹಣ ವಸೂಲಿಗೆ ನಿಂತ ಆರೋಪಿಗಳು, ನನ್ನ ಬಳಿ ₹80 ಲಕ್ಷ ಕಟ್ಟಿಸಿಕೊಂಡಿದ್ದಾರೆ. ಅಲ್ಲದೇ ಇನ್ನೂ ₹70 ಲಕ್ಷ ನೀಡುವಂತೆ ಜೀವ ಬೆದರಿಕೆ ಹಾಕಿದ್ದಾರೆ.

ಹಣ ನೀಡದ್ದಕ್ಕೆ ಪತ್ನಿ ಹೆಸರಿನಲ್ಲಿದ್ದ ಟಾಟಾ ನೆಕ್ಸಾನ್ ಕಾರು ತೆಗೆದುಕೊಂಡು ಹೋಗಿದ್ದಾರೆ. ಜೊತೆಗೆ ಫಾರ್ಮ್ 29, 30ಕ್ಕೆ ಬಲವಂತದಿಂದ ಸಹಿ ಹಾಕಿಸಿಕೊಂಡು ಕಿರುಕುಳ ನೀಡುತ್ತಿದ್ದಾರೆ’ ಎಂದು ಅಕ್ಷಯ್ ದೂರಿನಲ್ಲಿ ತಿಳಿಸಿದ್ದಾರೆ.

ಆರೋಪಿಗಳು ಪರವಾನಗಿ ಪಡೆಯದೇ ಬಡ್ಡಿ ವ್ಯವಹಾರ ನಡೆಸುತ್ತಿರುವುದು ಗೊತ್ತಾಗಿದೆ. ಬಂಧನಕ್ಕೆ ಶೋಧ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಪರಾಧ ಸುದ್ದಿ

ಬೈಕ್ ಸವಾರನ ಸೆರೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿ, ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಬೈಕ್ ಸವಾರರೊಬ್ಬರನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜ್ಞಾನಭಾರತಿ ನಿವಾಸಿ ನವೀನ್ ಗೌಡ ಎಂಬಾತನನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ. ಜೂನ್ 21ರಂದು ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣೆಯ ಪಿಎಸ್‌ಐಗಳಾದ ಸಿ.ಕುಮಾರ್ ಮತ್ತು ದ್ವಾರಕಾನಾಥ್ ಅವರು ಕೃಷ್ಣ ಅರಮನೆ ಹೋಟೆಲ್ ಸಮೀಪದ ಎಸ್‌ಬಿಐ ಬ್ಯಾಂಕ್ ಬಳಿ ವಾಹನ ತಪಾಸಣೆ ಕೈಗೊಂಡಿದ್ದರು. ಉಲ್ಲಾಳ ಕಡೆಯಿಂದ ಬೈಕ್‌ನಲ್ಲಿ ಹೆಲ್ಮೆಟ್ ಧರಿಸದೆ ಬರುತ್ತಿದ್ದ ಆರೋಪಿಯ ವಾಹನ ತಡೆದು, ತಪಾಸಣೆ ನಡೆಸಿದರು.

‘ದಂಡ ಪಾವತಿಸುವಂತೆ ಸೂಚಿಸಲಾಯಿತು. ನವೀನ್ ಗೌಡ, ‘ದಂಡ ಹಾಕಲು ಹೇಳಿದವರು ಯಾರು? ಹೆಲ್ಮೆಟ್ ಧರಿಸುವುದಿಲ್ಲ, ದಂಡ ಕಟ್ಟಲ್ಲ. ಉದ್ದೇಶಪೂರ್ವಕವಾಗಿ ಹೆಲ್ಮೆಟ್ ಧರಿಸದೇ ಬಂದಿದ್ದೇನೆ. ನನ್ನ ಮೇಲೆ ದೌರ್ಜನ್ಯ ಮಾಡುತ್ತೀರಾ ಎಂದು ಏರುದನಿಯಲ್ಲಿ ಮಾತನಾಡಿದ್ದಾನೆ’ ಎಂದು ಪಿಎಸ್‌ಐ ಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ. ‘ಅಲ್ಲದೇ ಜೆಡಿಎಸ್‌ನ ಸ್ಥಳೀಯ ಘಟಕದ ಅಧ್ಯಕ್ಷ ನಾನು ಎಂದು ಹೇಳಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾನೆ. ಬಳಿಕ ನಾವು ನೀಡಿದ ನಿರ್ದೇಶನಗಳನ್ನು ಪಾಲಿಸದೇ ಬೈಕ್ ತೆಗೆದುಕೊಂಡು ಹೋಗಿದ್ದಾನೆ. ಕಾನೂನು ಪ್ರಕಾರ ಆರೋಪಿ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ಹೇಳಿದ್ದಾರೆ. ಆರೋಪಿಯನ್ನು ಬಂಧಿಸಿ, ಬೈಕ್ ವಶಪಡಿಸಿಕೊಳ್ಳಲಾಗಿದೆ. ಆತ ಸ್ಥಳೀಯ ಘಟಕದ ಜೆಡಿಎಸ್ ಅಧ್ಯಕ್ಷ ಅಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

‘ರಸ್ತೆ ಗುಂಡಿ ಮುಚ್ಚಿ’

ಅತ್ತಿಗುಪ್ಪೆ ಮೆಟ್ರೊ ನಿಲ್ದಾಣದ ಹತ್ತಿರ ಇರುವ ಶ್ರೀಹರಿ ಪ್ಯಾಲೆಸ್ ಪಿ.ಜಿ. ಮುಂಭಾಗದ ರಸ್ತೆಯನ್ನು ಬೆಂಗಳೂರು ಜಲಮಂಡಳಿ ಅಗೆದುಹಾಕಿದೆ. ಇದರಿಂದ ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಕೊಳವೆ ಜೋಡಿಸಲು ಈ ಮುಖ್ಯರಸ್ತೆಯ ಮಧ್ಯ ಭಾಗದಲ್ಲಿ ಅಗೆದು ಗುಂಡಿ ತೊಡಲಾಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಅಗೆದ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದೆ. ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಆದ್ದರಿಂದ ಕೂಡಲೇ ಈ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಭರತ್, ವಿಜಯನಗರ

‘ಪಾದಚಾರಿ ಮಾರ್ಗ ಸರಿಪಡಿಸಿ’

ಕೆಂಗೇರಿ ಬಸ್ ತಂಗುದಾಣದಿಂದ ಮೈಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್ ಕಿತ್ತುಹೋಗಿದೆ. ಇದರಿಂದ ಪಾದಚಾರಿಗಳ ಓಡಾಟಕ್ಕೆ ಅನನುಕೂಲವಾಗಿದೆ. ಪಾದಚಾರಿ ಮಾರ್ಗ ಹಾಳಾಗಿರುವುದರಿಂದ ಸಾರ್ವಜನಿಕರು ಮುಖ್ಯರಸ್ತೆಯಲ್ಲಿ ಸಂಚರಿಸಬೇಕಾಗಿದೆ. ಇದರಿಂದ ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಬಿಬಿಎಂಪಿ ಅಧಿಕಾರಿಗಳು ಕೂಡಲೇ ಪಾದಚಾರಿ ಮಾರ್ಗ ದುರಸ್ತಿಗೊಳಿಸಬೇಕು.

ವೆಂಕಟೇಶ್ ಮೂರ್ತಿ, ನಾಗರಬಾವಿ

‘ತ್ಯಾಜ್ಯ ವಿಲೇವಾರಿಗೆ ಆಗ್ರಹ’

ಕೆ.ಆರ್. ಪುರ ಮಾರುಕಟ್ಟೆಯಿಂದ ನೇತ್ರಾವತಿ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ತರಕಾರಿ ತ್ಯಾಜ್ಯವನ್ನು ಸುರಿಯಲಾಗಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ತ್ಯಾಜ್ಯವನ್ನು ವಿಲೇವಾರಿ ಮಾಡುವಂತೆ ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಸ್ಪಂದಿಸುತ್ತಿಲ್ಲ. ತ್ಯಾಜ್ಯ ವಿಲೇವಾರಿಗೆ ಕೂಡಲೇ ಕ್ರಮ ಕೈಗೊಳ್ಳಬೇಕು.

ಗೌರಮ್ಮ, ನೇತ್ರಾವತಿ ಬಡಾವಣೆ

‘ಒಣಗಿದ ಕೊಂಬೆಗಳನ್ನು ಕತ್ತರಿಸಿ’

ಬಸವನಗುಡಿ ಮತ್ತು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಗಾಂಧಿಬಜಾರ್‌ನ ಮುಖ್ಯರಸ್ತೆಯ ಹೋಟೆಲ್ ಆತಿಥ್ಯ ಸುತ್ತಮುತ್ತಲಿನಲ್ಲಿ ಬೃಹತ್ ಗಾತ್ರದ ಮರಗಳ ರೆಂಬೆ-ಕೊಂಬೆಗಳು ಒಣಗಿವೆ. ಮಳೆ ಬಂದರೆ, ಗಾಳಿ ಬೀಸಿದರೆ ಈ ಕೊಂಬೆಗಳು ಬೀಳುವ ಸಾಧ್ಯತೆ ಇದೆ. ಗಾಂಧಿಬಜಾರ್‌ನಲ್ಲಿ ನಿತ್ಯ ಜನಸಂದಣಿ ಇರುತ್ತದೆ. ಯಾರ ಮೇಲಾದರೂ ಈ ಕೊಂಬೆಗಳು ಬಿದ್ದು, ಅನಾಹುತ ಸಂಭವಿಸುವ ಮುನ್ನ ಕತ್ತರಿಸಬೇಕು. ಈ ಬಗ್ಗೆ ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ಕೆ.ಎನ್. ಚಂದ್ರಶೇಖರ, ಶಂಕರಪುರ

ವರದಿ ಪರಿಣಾಮ

ಕೆಂಗೇರಿಯಿಂದ ಉತ್ತರಹಳ್ಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಪಟಾಲಮ್ಮ ದೇವಸ್ಥಾನ ಹತ್ತಿರದ ರಸ್ತೆಯಲ್ಲಿ ಬಿದ್ದಿದ್ದ ಗುಂಡಿಗಳನ್ನು ಡಾಂಬರು ಹಾಕಿ ಮುಚ್ಚಲಾಗಿದೆ. ‘ಪ್ರಜಾವಾಣಿ’ಯ ಕುಂದು-ಕೊರತೆ ವಿಭಾಗದಲ್ಲಿ ಜೂನ್ 16ರಂದು ‘ರಸ್ತೆ ಸರಿಪಡಿಸಿ’ ಎಂಬ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು. ಇದಿರಂದ ಎಚ್ಚೆತ್ತ ಬಿಬಿಎಂಪಿ ಸಿಬ್ಬಂದಿ ರಸ್ತೆ ದುರಸ್ತಿಗೊಳಿಸಿದ್ದಾರೆ.

ಮಗು ಅಪಹರಣ: 24 ತಾಸಿನಲ್ಲಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನಭಾರತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದಾಖಲಾಗಿದ್ದ 5 ವರ್ಷದ ಮಗು ಅಪಹರಣ ಪ್ರಕರಣವನ್ನು 24 ತಾಸಿನಲ್ಲಿ ಪೊಲೀಸರು ಭೇದಿಸಿದ್ದಾರೆ.

ನಗರದ ವಿಶ್ವೇಶ್ವರಯ್ಯ ಲೇಔಟ್‌ನಲ್ಲಿ ವಾಸವಾಗಿರುವ ರಾಯಚೂರು ಮೂಲದ ಸಿದ್ದಪ್ಪ, ವೀರಮ್ಮ ದಂಪತಿ ಅವರ ಐದು ವರ್ಷದ ಮಗು ಜೂನ್ 21 ರಂದು ನಾಪತ್ತೆಯಾಗಿತ್ತು.

ಸುತ್ತಲಿನ ಪ್ರದೇಶದಲ್ಲಿ ಹುಡುಕಾಟ ನಡೆಸಿದ್ದರೂ ಮಗುವಿನ ಸುಳಿವು ದೊರೆಯದ ಕಾರಣ ಪಾಲಕರು ಪೊಲೀಸ್ ಠಾಣೆಗೆ ದೂರು ನೀಡಿದರು. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಆದರೆ, ಅಂದು ಬೆಸ್ಕಾಂ ಕಾಮಗಾರಿ ನಡೆಯುತ್ತಿರುವ ಕಾರಣ ಬೆಳಿಗ್ಗೆಯಿಂದ ಸಂಜೆವರೆಗೆ ಆ ಪ್ರದೇಶದಲ್ಲಿ ವಿದ್ಯುತ್ ಇಲ್ಲದ ಪರಿಣಾಮ ಸಿಸಿಟಿವಿ ಕ್ಯಾಮೆರಾಗಳು ಕಾರ್ಯ ನಿರ್ವಹಿಸಿರಲಿಲ್ಲ.

ಶ್ವಾನದಳದ ನೆರವಿನೊಂದಿಗೆ ಪೊಲೀಸರು ಪತ್ತೆ ಕಾರ್ಯ ಆರಂಭಿಸಿದರು. ಮಗುವಿನ ಬಟ್ಟೆಯ ವಾಸನೆಯ ಜಾಡು ಹಿಡಿದು ಶೋಧಕಾರ್ಯ ಕೈಗೊಳ್ಳಲಾಯಿತು. ಶ್ವಾನವು ಮಗು ನಾಪತ್ತೆಯಾದ ಸ್ಥಳದಿಂದ ಅರ್ಧ ಕಿ.ಮೀ. ದೂರದ ಬಸಮ್ಮ ಎಂಬುವರ ಮನೆ ಬಳಿ ಕರೆದುಕೊಂಡು ಹೋಗಿತ್ತು.

‘ಬಸಮ್ಮಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಮಗು ಕಳ್ಳತನದ ವಿಚಾರ ತಿಳಿಸಿದಳು. ರಾಯಚೂರು ಜಿಲ್ಲೆಯ ಬಸಮ್ಮ, ಮಗುವಿನ ತಂದೆ-ತಾಯಿ ಪರಿಚಿತಳು. ವಿಚಾರಣೆ ವೇಳೆ ಮಗು ಅಪಹರಿಸಿಕೊಂಡು ಹೋಗಿರುವ ವಿಷಯ ತಿಳಿಸಿದಳು. ಸದ್ಯ ರಾಯಚೂರಿನಲ್ಲಿ ಆರೋಪಿಗಳನ್ನು ಬಂಧಿಸಿ, ಮಗು ರಕ್ಷಣೆ ಮಾಡಲಾಗಿದೆ. ಪೊಲೀಸ್ ಸಿಬ್ಬಂದಿ ಮಗುವನ್ನು ನಗರಕ್ಕೆ ಕರೆತರುತ್ತಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಆರೋಪಿಗಳನ್ನು ನಗರಕ್ಕೆ ಕರೆತಂದ ಬಳಿಕ ವಿಚಾರಣೆಗೆ ಒಳಪಡಿಸಲಾಗುವುದು. ಬಳಿಕ ಕಾರಣ ಗೊತ್ತಾಗಲಿದೆ. ತನಿಖೆ ಪ್ರಗತಿಯಲ್ಲಿರುವ ಕಾರಣ ಹೆಚ್ಚಿನ ಮಾಹಿತಿ ನೀಡುವುದಿಲ್ಲ ಎಂದು ಹೇಳಿದ್ದಾರೆ.

ಅಪಘಾತ: ಟೆಕಿ ಸೇರಿ ಇಬ್ಬರ ಸಾವು



ಬೆಂಗಳೂರು: ನಗರದ ಮುರುಗೇಶ್‌ಪಾಳ್ಯ ಹಾಗೂ ಕಲ್ಯಾಣ ನಗರದಲ್ಲಿ ಶನಿವಾರ ಸಂಜೆ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಸೇರಿ ಇಬ್ಬರು ಮೃತಪಟ್ಟಿದ್ದಾರೆ.

ಕಲ್ಯಾಣ ನಗರದ ಬಳಿಯ ವರ್ತುಲ ರಸ್ತೆಯಲ್ಲಿ ಅಪರಿಚಿತ ವಾಹನ ಬೈಕ್‌ಗೆ ಡಿಕ್ಕಿ ಹೊಡೆದು, ಸಾಫ್ಟ್‌ವೇರ್ ಎಂಜಿನಿಯರ್ ಸಲ್ಲಗುಣ ಪ್ರದೀಪ್ (25) ಮೃತಪಟ್ಟಿದ್ದಾರೆ. ಆಂಧ್ರಪ್ರದೇಶದ ಪ್ರದೀಪ್, ಕಲ್ಕೆರೆಯಲ್ಲಿ ವಾಸವಾಗಿದ್ದರು. ಬೈಕ್‌ನಲ್ಲಿ ಹೋಗುತ್ತಿದ್ದಾಗ ಹಿಂದಿನಿಂದ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಕೆಳಗೆ ಬಿದ್ದು ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

‘ಅಪಘಾತದ ಬಳಿಕ ಚಾಲಕ ವಾಹನ ನಿಲ್ಲಿಸದೆ ಪರಾರಿಯಾಗಿದ್ದಾನೆ. ಘಟನಾ ಸ್ಥಳದ ಸುತ್ತಮುತ್ತಲಿನ ಸಿ.ಸಿ. ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಾವಳಿ ಆಧರಿಸಿ ವಾಹನದ ಪತ್ತೆ ಕಾರ್ಯ ಮುಂದುವರಿಸಿದ್ದೇವೆ’ ಎಂದು ಪೊಲೀಸರು ಹೇಳಿದ್ದಾರೆ. ಬಾಣಸವಾಡಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವಕ ಸಾವು: ಮುರುಗೇಶ್‌ಪಾಳ್ಯದ ವಿಂಡ್ ಟನಲ್ ರಸ್ತೆಯಲ್ಲಿ ಬೈಕ್‌ನಿಂದ ನಿಯಂತ್ರಣ ತಪ್ಪಿ ಬಿದ್ದು ಸವಾರ ಸುಹೇಲ್ ಮೃತಪಟ್ಟಿದ್ದು, ಗಾಯಗೊಂಡಿರುವ ಹಿಂಬದಿ ಸವಾರ ಅಜಯ್‌ಕುಮಾರ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಲಬುರಗಿ ಜಿಲ್ಲೆಯ ಸುಹೇಲ್, ಬ್ಲಿಂಕ್‌ಇಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಚಲ್ಲಘಟ್ಟದಲ್ಲಿ ವಾಸವಾಗಿದ್ದ ಅವರು, ಕೆಲಸ ಮುಗಿಸಿಕೊಂಡು ಸ್ನೇಹಿತ ಅಜಯ್‌ಕುಮಾರ್ ಜತೆ ಬೈಕ್‌ನಲ್ಲಿ ಮನೆಗೆ ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ.

ಅತಿ ವೇಗವಾಗಿ ಬೈಕ್ ಚಾಲನೆ ಮಾಡುತ್ತಿದ್ದ ಸುಹೇಲ್ ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದು, ತಲೆಗೆ ಪೆಟ್ಟಾಗಿ ತೀವ್ರ ರಕ್ತಸ್ರಾವವಾಗಿದೆ. ನಂತರ ಸ್ಥಳೀಯರು ಅವರನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ಆದರೆ, ಮಾರ್ಗ ಮಧ್ಯೆಯೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸುಹೇಲ್ ಹಾಗೂ ಅಜಯ್‌ಕುಮಾರ್, ಹೆಲ್ಮೆಟ್ ಧರಿಸಿರಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ. ಜೆ.ಬಿ.ನಗರ ಸಂಚಾರ ಠಾಣೆಯಲ್ಲಿ ದೂರು ದಾಖಲಾಗಿದೆ.

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ. 10/2025/SBC, ದಿನಾಂಕ: 13.06.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್8255797	ಡಬ್ಲ್ಯೂಎಜಿ9ಹೆಚ್‌ಸಿ ಎಲೆಕ್ಟ್ರಿಕ್ ಲೋಕೊಗಾಗಿ ಪಿನಿಯನ್ ಸೇರಿದಂತೆ ಮತ್ತು ಆಕ್ಟಿವ್ ಸ್ಪೀಡ್ ಸೆನ್ಸರ್ ರಹಿತ 3-ಫೇಸ್ ಅಸಿಂಕ್ರೋನಸ್ ಟ್ರ್ಯಾಕ್ಷನ್ ಮೋಟರ್ ಟೈಪ್6ಎಫ್‌ಆರ್‌ಎ-6068 (ಪರಿಮಾಣ: 6 ಸಂ.).

ಬಿಡ್‌ಗಳನ್ನು ಸಲ್ಲಿಸಲು/ಟೆಂಡರು ಕೊನೆಯ ದಿನಾಂಕ: 07.07.2025, 10:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/196/AAMO/PRB/SWR/2025-26 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRRLY

ಭಾರತ ಸರಕಾರ
ವಿತ್ತ ಸಚಿವಾಲಯ, ಹಣಕಾಸು ಸೇವೆಗಳ ವಿಭಾಗ
ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು(ಡಿಆರ್‌ಟಿ -2)
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು - 560 001.
ಫಾರಂ ನಂ. 14 (ನೋಡಿ ರೆಗ್ಯುಲೇಶನ್ 33(2))
ಡಿಮ್ಯಾಂಡ್ ನೋಟೀಸು
ಸಾಲ ವಸೂಲಾತಿ ಮತ್ತು ದಿವಾಳಿತನ ಕಾಯಿದೆ 1993ರ ಸೆಕ್ಷನ್ 25ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲಿನ ನಿಯಮ 2ರ ಅನ್ವಯ ನೋಟೀಸ್
ಆರ್‌ಸಿ ನಂ. 253/2024. ಒ ಎ. ನಂ. 152/2021
ಕರ್ನಾಟಕ ಬ್ಯಾಂಕ್ ಲಿಮಿಟೆಡ್ V/s ಮೆ. ಲಿಯೊ ಗೌರ್‌ಮೆಟ್ ಪ್ರೈ. ಲಿ., ಮತ್ತು ಇತರರು
ಇವರಿಗೆ: (ಸಿಹೆಚ್) ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕೋರಮಂಗಲ ಶಾಖೆ, ನಂ. 653, 17ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಬೆಂಗಳೂರು - 560 034, ಕರ್ನಾಟಕ ...... ಸರ್ಟಿಫಿಕೇಟ್ ಹೋಲ್ಡರ್
ವಿರುದ್ಧ
(ಸಿಡಿ 1) ಮೆ. ಲಿಯೊ ಗೌರ್‌ಮೆಟ್ ಪ್ರೈ. ಲಿ., ಕಂಪನಿ ಆಕ್ಟ್ ಅಡಿಯಲ್ಲಿ ನೋಂದಾಯಿತ ಕಂಪನಿ, ನಂ. 22, ಸೈಲಗಿರಿ ಟಾಪ್ ಫ್ಲೋರ್, ಎಲ್‌ಜಿ ಅಂಗಡಿ ಹಿಂಭಾಗ, ಕೋರಮಂಗಲ ವರ್ತುಲ ರಸ್ತೆ, ಬೆಂಗಳೂರು -560 047.
(ಸಿಡಿ 2) ಶ್ರೀ ಲಿಯೊ ಪೆರೀರ, ನಿರ್ದೇಶಕರು, S/o. ಶ್ರೀ ರೀಥಸ್, ನಂ. 131, 3ನೇ ಅಡ್ಡ ರಸ್ತೆ, ಮಲ್ಲಪ್ಪ ಲೇಔಟ್, ಬಾಬುಸಾಪಾಳ್ಯ, ಕಲ್ಯಾಣ ನಗರ, ಬೆಂಗಳೂರು - 560 043.
ಮತ್ತೊಂದು ವಿಳಾಸ : ಶ್ರೀ ಲಿಯೊ ಪೆರೀರ, ನಿರ್ದೇಶಕರು, S/o. ಶ್ರೀ ರೀಥಸ್, ನಂ. 29, ಹೌಸಿಂಗ್ ಕಾಲೋನಿ, ಕೊನಂ, ನಾಗರಕೊಯಿಲ್, ತಮಿಳುನಾಡು - 620 004.
(ಸಿಡಿ 3) ಶ್ರೀಮತಿ ಶೆರ್ಲಿ ಲಿಯೊ ಪೆರೀರ, W/o. ಶ್ರೀ ಲಿಯೊ ಪೆರೀರ, ನಂ. 131, 3ನೇ ಅಡ್ಡ ರಸ್ತೆ, ಮಲ್ಲಪ್ಪ ಲೇಔಟ್, ಬಾಬುಸಾಪಾಳ್ಯ, ಕಲ್ಯಾಣ ನಗರ, ಬೆಂಗಳೂರು - 560 043.
ಮತ್ತೊಂದು ವಿಳಾಸ : ಶ್ರೀಮತಿ ಶೆರ್ಲಿ ಲಿಯೊ ಪೆರೀರ, W/o. ಶ್ರೀ ಲಿಯೊ ಪೆರೀರ, ನಂ. 29, ಹೌಸಿಂಗ್ ಕಾಲೋನಿ, ಕೊನಂ, ನಾಗರಕೊಯಿಲ್, ತಮಿಳುನಾಡು - 620 004.
(ಸಿಡಿ 4) ಶ್ರೀ ಅಬ್ದುಲ್ ರಫೀಕ್ ಕುನ್ನನ್ ಕವಿಲ್ S/o. ಹಸನ್ ಕುಮ್ಮಲಿ ಕುನ್ನಕವಿಲ್, ಕುಮ್ಮಲಿ ಕುನ್ನಕವಿಲ್ ಮನೆ, ಚೆಲಂಬ್ರ, ಮಲ್ಲಪುರಂ, ಚೆಲಂಬ್ರ, ಕೇರಳ- 673 634. ... ಸರ್ಟಿಫಿಕೇಟ್ ಡೆಟರ್ಸ್
ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕರಣ ಬೆಂಗಳೂರು (ಡಿಆರ್‌ಟಿ-2) ಇವರು, ಒ.ಎ. ನಂ./152/2021ರಂತೆ ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ ರೂ.8180647.17/- (ರೂಪಾಯಿ ಎಂಬತ್ತೊಂದು ಲಕ್ಷ ಎಂಬತ್ತು ಸಾವಿರದ ಆರು ನೂರ ನಲವತ್ತೇಳು ಮತ್ತು ಪೈಸೆ ಹದಿನೇಳು ಮಾತ್ರ) ಜೊತೆಗೆ ದಿನಾಂಕ 24.12.2020 ರಿಂದ ಪೂರ್ತಿ ಪಾವತಿಯ ದಿನಾಂಕದ ವರೆಗೆ ಶೇ.14.15% ರಂತೆ ವಾರ್ಷಿಕ ಚಕ್ರಬಡ್ಡಿ ಬಡ್ಡಿ, ಮತ್ತು ವೆಚ್ಚ ರೂ.84010.00 (ರೂಪಾಯಿ ಎಂಬತ್ತ ನಾಲ್ಕು ಸಾವಿರದ ಹತ್ತು ಮಾತ್ರ) ನಿಮ್ಮಿಂದ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಬಾಕಿ ಇರುತ್ತದೆ. ಜೊತೆಗೆ ವಾರ್ಷಿಕ 2% ದಂಡ ಬಡ್ಡಿ ಆನ್ವಯವಾಗುವ/ಪಾವತಿಸಬೇಕಾಗಿದೆ. (2) ನೀವು ಸದರಿ ಮೊತ್ತವನ್ನು ಈ ನೋಟಿಸನ್ನು ನೀಡಿದ 15 ದಿನಗಳ ಒಳಗೆ ಪಾವತಿಸ ಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ರಿಕವರಿ ಆಫ್ ಡೆಟ್ಸ್ ಡ್ಯೂ ಬ್ಯಾಂಕ್ಸ್ ಅಂಡ್ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ ಆಕ್ಟ್ 1993ರ ನಿಯುಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. 3. ಮುಂದಿನ ವಿಚಾರಣೆಯ ದಿನಾಂಕ ಅಥವಾ ಮೊದಲು ನಿಮ್ಮ ಸ್ವತುಗಳ ವಿವರಗಳನ್ನು ಅಫಿಡವಿಟ್‌ನಲ್ಲಿ ಘೋಷಿಸಲು ನಿಮಗೆ ಈ ಮೂಲಕ ಆದೇಶಿಸಲಾಗಿದೆ.4. ನಿಮಗೆ ಈ ಮೂಲಕ ಆದೇಶಿಸುವುದೇನೆಂದರೆ ಮುಂದಿನ ಪ್ರಕ್ರಿಯೆಗಳಿಗಾಗಿ ಈ ನೋಟೀಸು ನೀಡಿದ 15 ದಿನಗಳ ಒಳಗೆ ಕೆಳಸಹಿದಾರರ ಮುಂದೆ ಹಾಜರಾಗಬೇಕು.5. ಮೇಲೆ ಹೇಳಿದ ಮೊತ್ತಕ್ಕೆ ಹೆಚ್ಚುವರಿಯಾಗಿ ನೀವು ಪಾವತಿಸಬೇಕಾಗುತ್ತದೆ. (ಎ) ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನು ಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ (ಬಿ) ಈ ನೋಟೀಸನ್ನು ಜಾರಿ ಮಾಡಲು ಮತ್ತು ವಾರಂಟ್‌ಗಳಿಗೆ ಮತ್ತು ಇತರ ಪ್ರಕ್ರಿಯೆಗಳಿಗೆ ಮತ್ತು ಇತರ ಎಲ್ಲಾ ನಡಾವಳಿಗಳಿಗೆ ಸಾಲ ವಸೂಲಾತಿ ಮಾಡುವಲ್ಲಿ ತಗಲುವ ಎಲ್ಲಾ ಖರ್ಚು ಮತ್ತು ವೆಚ್ಚಗಳು.
ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ 24.04.2024 ರಂದು ಕೊಡಲ್ಪಟ್ಟಿದೆ.
ಸಹಿ/- ವಸೂಲಾತಿ ಅಧಿಕಾರಿ
ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು (ಡಿಆರ್‌ಟಿ-2)
ಸೂಚನೆ : ಸದರಿ ಸಾಲಕ್ಕೆ ಸಂಬಂಧಿಸಿದಂತೆ ಅಡಮಾನ ಮಾಡಿರುವ ಆಸ್ತಿಯನ್ನು ಈಗಾಗಲೇ ಸರ್ಫೇಸಿ ಪ್ರಕ್ರಿಯೆಯಲ್ಲಿ ಮಾರಾಟಮಾಡಲಾಗಿದ್ದು, ಈ ಡಿಮ್ಯಾಂಡ್ ನೋಟೀಸನ್ನು ಬರಬೇಕಾಗಿರುವ ಉಳಿದ ಬಾಕಿ ಮೊತ್ತ ಮತ್ತು ಬಡ್ಡಿ, ವೆಚ್ಚಗಳ ವಸೂಲಾತಿಗಾಗಿ ಮಾತ್ರ ನೀಡಲಾಗಿದೆ.
ಗಮನಿಸಿ : ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ : 16 (1)ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ.

ಕ್ಲಾಸಿಫೈಡ್ಸ್
ADMISSION CORNER

ST ALOYSIUS (DEEMED TO BE UNIVERSITY)
AIMIT CENTRE Mangalore
MBA ADMISSION
CAT,XAT,C-MAT,K MAT OR MAT
AIU NAAC A++ nirf
OPEN FOR 2025 -2026
DUAL SPECIALIZATION
- Finance
- Data Analytics
- Marketing
- HR
- Operations
ENROLL NOW!
Legacy and Impressive Heritage Spanning 145 years

MCM
MQI COLLEGE OF MANAGEMENT
Recognised by Govt. of Karnataka | Approved by AICTE, New Delhi | Affiliated to Bengaluru City University
PGCET CODE: B388MB
OFFERS SCHOLARSHIP IN MBA ADMISSIONS TO GRADUATES from Medical, Engineering, Science, Commerce and Art Stream
ADMISSION OPEN FOR 2025-2027
Avail Merit SCHOLARSHIP* IN MBA
Day & Date of Examination: Saturday, 12th July 2025 Time: 10.30 - 11.30 am. Venue : MCM Campus
*Merit in MBA Admission Test- MCMAT
LAST DATE: 09-07-2025
REGISTER NOW
The Management Congratulates The Director, Faculty and Students for Continuously Securing
MBA 100% Result
(All First Class and First-Class Distinctions) In the 4th Semester Results of 2022 – 24 batch
Campus Address: #8, Bore Bank Road, Benson Town, Bengaluru- 560046.
ROUNAQH
mqicollegeofmanagement@gmail.com
Website: www.mcm.edu.in
080-48904713 +91 7975961901

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE
PUBLIC NOTICE
This is to inform the general public that our client has negotiated to purchase the Schedule Property from its present owner Mrs. NIKHAT AFREEN ASKIRI, D/o. Mr. Thajuddin Showkath Askiri, who had acquired the same under a Gift Deed Dated 31-05-2025 from his father Mr. THAJUDDIN SHOWKATH ASKIRI
The owner represents that her father has lost/misplaced the original document of the Schedule Property ie., Sale Deed Dated 19-09-2015, Registered as Document No.HLS-1-02732-2015-16 of Book-I, Stored in CD No.HLSD121 in the Office of the Sub-Registrar, Shivajinagar (Ulsoor), Bangalore and connected documents.
E-complaint for loss of documents has been lodged on 05-06-2025 and acknowledge has been issued bearing No.1629385/2025. If any person finds the same or is in possession of the same, may return the same to the undersigned. Any person's having or claiming any manner of right, title, lien or interest in respect of the Schedule Property or the said lost documents may intimate the same in writing to the undersigned along with documentary evidence in support of their claim within 2 (Two) Weeks from the date of this publication, failing which, it will be presumed that the said Documents are lost and our Client will proceed with the transaction.
SCHEDULE PROPERTY
All that piece and parcel of Two Bedroom Residential Apartment bearing Flat No.103. Khata No.07/39/6/FF103, E-PID No.9921044455 in the First Floor in the Apartment Building known as "SS RIDA RESIDENCY" constructed in the Schedule 'A' Property with a Super Built-up Area of 1100 Square Feet (which is inclusive of proportionate share of common areas) with One Covered Car Park No.103 in the Basement Floor, along with An undivided share, right, title and interest in the land measuring 201 Square Feet comprised in composite Schedule 'A' Property bearing Corporation No.39, Situated in Harris Road, Ward No.91, New Ward No.61, Unique PID No.91-35-39, Bangalore.
Sd/-(S.A.H. RAZVI & ARIF PASHA) Advocates
No. 60, 2nd floor, M.M. Complex, Chick Bazaar Road Tasker Town, Bangalore - 560001
Mob: 9845340766, 8243132714
Dated: 18-06-2025 Bangalore

REAL ESTATE BUYING
Sites
Jayanagar
WANTED 30X40,40X60 & above, Sites or House for Purchase in Jayanagar, Basavangudi, BSK 1st & 2nd Stage. for Doctors & NRI immediate settlement. Verna Developers Barton Center MG Road 9353128035/ 9916310226 brokers excuse

EDUCATIONAL
Correspondence Courses
PASS DIRECT 2nd PUC within 4 months eligible for NEET and CET also for Admission Contact: 9880498484/ 9900004099.

PERSONAL
Change of Name
CHANGE OF NAME
We, Narasimha Murthy Rangaraju & N Shobha Residing at No. 1409, 5th Main, D Group Layout, Annapoorneshwari Nagar, Near Agastya School, Bengaluru- 560091 have changed our daughter's name from GODHAVARI N to SPOORTHI N Vide affidavit dated 17.06.2025 sworn before Notary Neha Baddi, Bangalore

I, SHIBIMOL THRESIAMMA Residing at #08, 2nd cross, 2nd main, Maruthi Layout Chokkasandra, Peenya Post, Bangalore-560058 have changed my name as SHIBI JOLLY, vide affidavit dated 16/06/2025 before Notary V.Anjanappa, Bangalore

CHANGE OF NAME
I, Micky Neelam Menezes Resident of Flat 301, 2nd floor, Chowriappa Grazia Apartment, 1st main 2nd cross, L N Reddy Layout, Kariyanapalya, Bangalore – 560084 Have changed my name to MICKY NEELAM KACHHAP, vide affidavit dated 19.06.2025, sworn before Notary L. Gopalakrishna, Bangalore.

BUSINESS
Business Offers
Finance
MSME LOANS Available for any start up company,any existing Companies avail this opportunity contact-7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

DH Classifieds ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
9731810277
9886213331
9845114560
*Conditions apply

DH
To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

ಚಿಟಿಕೆ ಸುದ್ದಿ

ನೇಮಕಾತಿ: ಮೆರಿಟ್ ಪಟ್ಟಿ ಪ್ರಕಟ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ 310 ಪ್ರಾಚಾರ್ಯರ ನೇಮಕಾತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಹರಾದವರ ಮೆರಿಟ್ ಪಟ್ಟಿಯನ್ನು ಕಾಲೇಜು ಶಿಕ್ಷಣ ಇಲಾಖೆಯ ಜಾಲತಾಣದಲ್ಲಿ(https://dce.karnataka.gov.in)ಪ್ರಕಟಿಸಲಾಗಿದೆ.

ಪಟ್ಟಿ ಕುರಿತು ಆಕ್ಷೇಪಣೆಗಳಿದ್ದರೆ, ಅಭ್ಯರ್ಥಿಗಳು 15 ದಿನಗಳ ಒಳಗಾಗಿ ಇಮೇಲ್: dceprincipals@gmail.com ಮೂಲಕ ಸಲ್ಲಿಸಲು ಅವಕಾಶವಿದೆ' ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ(ಕೆಎಸ್‌ಒಯು) ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಿಂದ ಯುಜಿಸಿ-ನೆಟ್ ಮತ್ತು ಕೆ-ಸೆಟ್, ಜೆಆರ್‌ಎಫ್ ಪರೀಕ್ಷೆಗಳಿಗೆ ಮೈಸೂರಿನ ಕೇಂದ್ರ ಕಚೇರಿಯಲ್ಲಿ ತರಬೇತಿ ನೀಡಲಾಗುತ್ತಿದೆ.

ತರಬೇತಿ ಅವಧಿ 45 ದಿನಗಳು. ಆಸಕ್ತರು ಜೂನ್ 30ರೊಳಗಾಗಿ ಕಚೇರಿ ಅವಧಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಸರು ನೋಂದಾಯಿಸಲು ಹಾಗೂ ಹೆಚ್ಚಿನ ಮಾಹಿತಿಗೆ 0821-2515944ಕ್ಕೆ ಸಂಪರ್ಕಿಸಬಹುದು ಎಂದು ಕೆಎಸ್‌ಒಯು ಕುಲಸಚಿವ ಪ್ರೊ. ನವೀನ್‌ಕುಮಾರ ಎಸ್.ಕೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೆಬ್‌ಸೈಟ್‌ನಲ್ಲಿ ಪ್ರವೇಶಪತ್ರ ಲಭ್ಯ

ಬೆಂಗಳೂರು: ಸಾರಿಗೆ ಇಲಾಖೆಯಲ್ಲಿನ ಮೋಟಾರು ವಾಹನ ನಿರೀಕ್ಷಕರ (ಹೈದರಾಬಾದ್ ಕರ್ನಾಟಕ ವೃಂದದ ಹುದ್ದೆಗಳ) ನೇಮಕಾತಿ ಸಂಬಂಧ ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರವೇಶ ಪತ್ರಗಳು ಕರ್ನಾಟಕ ಲೋಕ ಸೇವಾ ಆಯೋಗದ(ಕೆಪಿಎಸ್‌ಸಿ) ಜಾಲತಾಣದಲ್ಲಿ ಲಭ್ಯವಿವೆ.

ಇದೇ 25ರಂದು ಕನ್ನಡ ಭಾಷೆ ಪರೀಕ್ಷೆ ಮತ್ತು 26ರಂದು ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಅಭ್ಯರ್ಥಿಗಳು ಆಯೋಗದ ವೆಬ್‌ಸೈಟ್ http://kpsc.kar.nic.in ನಿಂದ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಆಯೋಗವು ಪ್ರಕಟಣೆಯಲ್ಲಿ ತಿಳಿಸಿದೆ.

ಜುಲೈ 26-27ಕ್ಕೆ 'ಕುಂದಾಪ್ರ' ಕನ್ನಡ ಹಬ್ಬ

ಬೆಂಗಳೂರು: ಕುಂದಾಪ್ರ ಕನ್ನಡ ಪ್ರತಿಷ್ಠಾನವು ವಿಶ್ವ ಕುಂದಾಪ್ರ ಕನ್ನಡ ದಿನಾಚರಣೆ ಪ್ರಯುಕ್ತ ಜುಲೈ 26 ಮತ್ತು 27ರಂದು ಹೊಸಕೆರೆಹಳ್ಳಿಯ ನೈಸ್ ರೋಡ್ ಜಂಕ್ಷನ್ ಬಳಿಯ ನಂದಿ ಲಿಂಕ್ ಗ್ರೌಂಡ್‌ನಲ್ಲಿ 'ಕುಂದಾಪ್ರ ಕನ್ನಡ ಹಬ್ಬ' ಹಮ್ಮಿಕೊಂಡಿದೆ.

ಈ ಬಗ್ಗೆ ನಗರದಲ್ಲಿ ಭಾನುವಾರ ಮಾಹಿತಿ ನೀಡಿದ ಪ್ರತಿಷ್ಠಾನದ ಅಧ್ಯಕ್ಷ ದೀಪಕ್ ಶೆಟ್ಟಿ, 'ಈ ಹಬ್ಬವನ್ನು ಹಲವು ವಿಶೇಷತೆಗಳೊಂದಿಗೆ ಆಚರಿಸಲಾಗುತ್ತಿದೆ. ವೇದಿಕೆ ಕಾರ್ಯಕ್ರಮಗಳಲ್ಲದೆ, ಹೊರಾಂಗಣದಲ್ಲಿ ಹುಲಿವೇಷ, ಕೊರಗರ ಡೋಲು ವಾದನ, ನವರಾತ್ರಿ ವೇಷದ ಜತೆಗೆ ಹಗ್ಗಜಗ್ಗಾಟ ಸೇರಿ ವಿವಿಧ ಕ್ರೀಡೆ ಆಯೋಜಿಸಲಾಗುವುದು. ಕುಂದಾಪುರದ ಬಹುತೇಕ ಎಲ್ಲ ವಸ್ತುಗಳು ಸಿಗುವ 'ಕುಂದಾಪ್ರ ಸಂತೆ' ಕೂಡ ಇರಲಿದೆ' ಎಂದು ತಿಳಿಸಿದರು.

ಕುಂದಾಪ್ರ ಕನ್ನಡ ಪ್ರತಿಷ್ಠಾನದ ಗೌರವಾಧ್ಯಕ್ಷ ಉದಯ ಹೆಗ್ಡೆ, ಉಪಾಧ್ಯಕ್ಷ ನರಸಿಂಹ ಬೀಜಾಡಿ, ಕೋಶಾಧಿಕಾರಿ ವಿಜಯ್ ಶೆಟ್ಟಿ ಹಾಲಾಡಿ, ಕಾರ್ಯದರ್ಶಿ ರಾಘವೇಂದ್ರ ಕಾಂಚನ್, ಜಂಟಿ ಕಾರ್ಯದರ್ಶಿ ಅಜಿತ್ ಶೆಟ್ಟಿ ಉಳ್ತೂರು, ಉದ್ಯಮಿ ಶಿವರಾಮ ಹೆಗ್ಡೆ, ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ ಜಿ.ಕೆ.ಶೆಟ್ಟಿ ಉಪಸ್ಥಿತರಿದ್ದರು.

'ಪರಿಶಿಷ್ಟ ಜಾತಿ ಸಮೀಕ್ಷೆ: ಮನೆ ಮನೆಗೆ ಸ್ಟಿಕ್ಕರ್'

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷಾ ಕಾರ್ಯ ನಡೆಸುತ್ತಿರುವುದನ್ನು ಖಾತರಿಪಡಿಸಿಕೊಳ್ಳಲು ಜೂನ್ 23ರಿಂದ ಪ್ರತಿ ಮನೆಗೆ ಸ್ಟಿಕ್ಕರ್ ಅಂಟಿಸಬೇಕು ಎಂದು ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಮತ್ತು ಸರ್ಕಾರಿ ಸೇವೆಗಳಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿನ 101 ಜಾತಿಗಳಿಗೆ ಸೇರಿದವರ ಪ್ರಾತಿನಿಧ್ಯ ಕುರಿತು ವೈಜ್ಞಾನಿಕ ದತ್ತಾಂಶವನ್ನು ಸಂಗ್ರಹಿಸಲು ಮೇ 5ರಿಂದ ಸಮೀಕ್ಷೆ ನಡೆಯುತ್ತಿದೆ. ಹಲವು ಬಾರಿ ಅವಧಿ ವಿಸ್ತರಿಸಲಾಗಿದ್ದು, ಜೂನ್ 30ರವರೆಗೆ ವಿಸ್ತರಿಸಲಾಗಿದೆ ಎಂದಿದ್ದಾರೆ.

ಶೇ 100ರಷ್ಟು ಸಮೀಕ್ಷೆ ನಡೆಯಬೇಕು. ಅದಕ್ಕಾಗಿ ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್, ಬಾಪೂಜಿ ಸೇವಾ ಕೇಂದ್ರಗಳು, ಪ್ರತಿ ವಾರ್ಡ್ ಕಚೇರಿಯಲ್ಲಿ ಪ್ರತ್ಯೇಕ ವ್ಯವಸ್ಥೆ, https://schedulecastesurvey.karnataka.gov.in/selfd eclaration ಲಿಂಕ್ ಮೂಲಕ ಘೋಷಣೆ ಮಾಡಿಕೊಳ್ಳಬಹುದು ಎಂದು ತಿಳಿಸಿದರು.

'ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಿ'

ಕೆ.ಆರ್. ಮಾರುಕಟ್ಟೆ: ತ್ಯಾಜ್ಯ ಬಿಸಾಡುವವರ ಮೇಲೆ ನಿಗಾ ಇಡಲು ಸುರಳ್ಕರ್ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಮಾರುಕಟ್ಟೆಯಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಬೇಕು ಎಂದು ಪಶ್ಚಿಮ ವಲಯ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕೆ.ಆರ್ ಮಾರುಕಟ್ಟೆಯಲ್ಲಿ ಶನಿವಾರ ಪರಿಶೀಲನೆ ನಡೆಸಿದ ಅವರು, 'ಮಾರುಕಟ್ಟೆಯಲ್ಲಿ ಸದಾ ಸ್ವಚ್ಛತೆ ಕಾಪಾಡಬೇಕಿದೆ. ಆದರೆ, ವ್ಯಾಪಾರಸ್ಥರು ಎಲ್ಲೆಂದರಲ್ಲಿ ತ್ಯಾಜ್ಯ ಬಿಸಾಡುವುದರಿಂದ ಸ್ವಚ್ಛತೆ ಕಾಪಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ತ್ಯಾಜ್ಯ ಬಿಸಾಡುವಂತಹ ಸ್ಥಳಗಳನ್ನು ಗುರುತಿಸಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ತ್ಯಾಜ್ಯ ಬಿಸಾಡುವವರಿಗೆ ದಂಡ ವಿಧಿಸಬೇಕು' ಎಂದರು.

ಮಾರುಕಟ್ಟೆಯಲ್ಲಿ ವ್ಯಾಪಾರಸ್ಥರಿಗೆ ಮಾರ್ಕಿಂಗ್ ಮಾಡಿ ಅದೇ ಸ್ಥಳದಲ್ಲಿ ವ್ಯಾಪಾರ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ಬೇರೆಡೆ ವ್ಯಾಪಾರ ಮಾಡಲು ಅವಕಾಶ ನೀಡಬಾರದು. ಮಾರುಕಟ್ಟೆ ಹೊರಭಾಗದಲ್ಲಿ ಅನಧಿಕೃತವಾಗಿ ವ್ಯಾಪಾರ ಮಾಡುವುದನ್ನು ನಿಯಂತ್ರಿಸಲು ಸೂಚಿಸಿದರು.

ಮುಖ್ಯಾಂಶಗಳು

- ತ್ಯಾಜ್ಯ ಬಿಸಾಡುವಂತಹ ಸ್ಥಳಗಳನ್ನು ಗುರುತಿಸಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಿ
- ಹೊರಭಾಗದಲ್ಲಿ ಅನಧಿಕೃತವಾಗಿ ವ್ಯಾಪಾರ ಮಾಡುವುದನ್ನು ನಿಯಂತ್ರಿಸಿ
- ಅವಶ್ಯಕತೆಯಿದ್ದರೆ ಹೆಚ್ಚಿನ ಮಾರ್ಷಲ್ ನಿಯೋಜಿಸಲು ಸೂಚನೆ

ಕೆ.ಆರ್.ಮಾರುಕಟ್ಟೆಯಲ್ಲಿ ಪ್ರೆಷರ್ ವಾಷರ್ ಮೂಲಕ ಸ್ವಚ್ಛತೆಗೆ ಸುರಳ್ಕರ್ ವಿಕಾಸ್ ಕಿಶೋರ್ ಚಾಲನೆ ನೀಡಿದರು

ಕೆ.ಆರ್. ಮಾರುಕಟ್ಟೆಯಲ್ಲಿ ಸ್ವಚ್ಛತೆ ಕಾಪಾಡಲು ಒಬ್ಬ ಮಾರ್ಷಲ್ ಮೇಲ್ವಿಚಾರಕರನ್ನು ನಿಯೋಜಿಸಿದ್ದು, ಏಳು ಮಾರ್ಷಲ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನೂ ಹೆಚ್ಚಿನ ಮಾರ್ಷಲ್‌ಗಳನ್ನು ಅವಶ್ಯ ಇದ್ದಲ್ಲಿ ನಿಯೋಜಿಸಬೇಕು ಎಂದರು.

ವ್ಯಾಪಾರಿಗಳು ಎಲ್ಲೆಂದರಲ್ಲಿ ತ್ಯಾಜ್ಯ ಬಿಸಾಡುವುದನ್ನು ತಪ್ಪಿಸಲು ಪ್ರಮುಖ ನಾಲ್ಕು ಸ್ಥಳಗಳಲ್ಲಿ ತ್ಯಾಜ್ಯ ಸಂಗ್ರಹ ಬುಟ್ಟಿಗಳನ್ನು ಅಳವಡಿಸಬೇಕು. ಎಲ್ಲ ವ್ಯಾಪಾರಿಗಳಿಗೆ ಪ್ರತ್ಯೇಕವಾಗಿ ಬುಟ್ಟಿಗಳನ್ನು ಇಟ್ಟುಕೊಂಡು ಅದರಲ್ಲಿಯೇ ತ್ಯಾಜ್ಯ ಹಾಕಿ, ಪಾಲಿಕೆ ನಿಗದಿಪಡಿಸಿರುವ ಸ್ಥಳದಲ್ಲಿ ತಂದು ಸುರಿಯಲು ಸೂಚನೆ ನೀಡಲು ತಿಳಿಸಿದರು.

ಕೆ.ಆರ್. ಮಾರುಕಟ್ಟೆಯಲ್ಲಿ ಹೆಚ್ಚು ಗಲೀಜಿದ್ದ ಸ್ಥಳಗಳಲ್ಲಿ ಪ್ರೆಷರ್ ವಾಷರ್ ಬಳಸಿ ಸ್ವಚ್ಛಗೊಳಿಸಬೇಕು. ಐದು ಎಚ್‌ಪಿ ಪ್ರೆಷರ್ ವಾಷರ್ ಖರೀದಿಸಿದ್ದು, ಅದರ ಮೂಲಕ ಪ್ರತಿನಿತ್ಯ ಸ್ವಚ್ಛಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಪಾರ್ಕಿಂಗ್ ಟೆಂಡರ್

ಕೆ.ಆರ್. ಮಾರುಕಟ್ಟೆಯ ನೆಲ ಮಹಡಿ ಹಾಗೂ ಇತರೆ ಜಾಗಗಳಲ್ಲಿ ಹೊಸದಾಗಿ ಪಾರ್ಕಿಂಗ್ ಟೆಂಡರ್ ಕರೆದು, ಒಳಗೆ ಹಾಗೂ ಹೊರಗೆ ಹೋಗುವ ಮಾರ್ಗಗಳನ್ನು ಸರಿಯಾಗಿ ನಿಗದಿಪಡಿಸಿಕೊಳ್ಳಬೇಕು ಎಂದರು.

ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿ ವಸಂತ್ ಕುಮಾರ್ ಅವರು ತರಬೇತಿ ಪಡೆದ ಮಹಿಳೆಯರಿಗೆ ಪ್ರಮಾಣಪತ್ರ ವಿತರಿಸಿದರು

ಜೂಟ್ ಬ್ಯಾಗ್ ತಯಾರಿಕೆ ಶಿಬಿರ ಸಂಪನ್ನ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸಮೀಪದ ಮಂಡೂರಿನ ತಾಲ್ಲೂಕು ಪಂಚಾಯಿತಿ ಹಾಗೂ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಜೂಟ್ ಬ್ಯಾಗ್ ತಯಾರಿಕೆ ತರಬೇತಿ ಪೂರ್ಣಗೊಳಿಸಿದವರಿಗೆ ಪೂರ್ವ ತಾಲ್ಲೂಕು ಕಾರ್ಯನಿರ್ವಾಹಣಾಧಿಕಾರಿ ವಸಂತ್ ಕುಮಾರ್ ಅವರು ಪ್ರಮಾಣಪತ್ರ ವಿತರಿಸಿದರು.

14 ದಿನಗಳು ನಡೆದ ತರಬೇತಿಯಲ್ಲಿ 28 ಮಹಿಳೆಯರು ಪಾಲ್ಗೊಂಡಿದ್ದರು. ಸಂಪನ್ಮೂಲ ವ್ಯಕ್ತಿಗಳು ಜೂಟ್ ಬ್ಯಾಗ್ ತಯಾರಿಕೆ ಕುರಿತು ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ವಸಂತ್ ಕುಮಾರ್, 'ತರಬೇತಿ ಪಡೆದ ಮಹಿಳೆಯರು ಸ್ವಯಂ ಉದ್ಯೋಗ ಆರಂಭಿಸಬೇಕು, ಇದರಿಂದ ಸರ್ಕಾರದ ಉದ್ದೇಶ ಸಫಲವಾಗುತ್ತದೆ' ಎಂದರು.

ಕೆನರಾ ಬ್ಯಾಂಕ್ ವ್ಯವಸ್ಥಾಪಕ ಅಂಬರೀಶ್ ಮಾತನಾಡಿ, 'ಯಾರ ಹಂಗೂ ಇಲ್ಲದೆ ಧೈರ್ಯವಾಗಿ ಜೀವನ ನಡೆಸಲು ಇಂಥ ಸ್ವ ಉದ್ಯೋಗ ತರಬೇತಿಗಳು ಪ್ರಯೋಜನಕಾರಿ. ಉಚಿತ ತರಬೇತಿ ನೀಡುವುದು ನಮ್ಮ ಬ್ಯಾಂಕ್‌ನ ಧ್ಯೇಯವಾಗಿದೆ' ಎಂದರು.

ಈ ವೇಳೆ ಬಿದರಹಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ಲೋಹಿತ್, ಅಧ್ಯಕ್ಷೆ ಕವಿತಾ, ತಾಲ್ಲೂಕು ಪಂಚಾಯಿತಿ ವ್ಯವಸ್ಥಾಪಕ ರಾಜೇಶ್, ಕಾರ್ಯದರ್ಶಿ ಗೀತಾ ಇದ್ದರು.

ನಾಗವಾರದ ರಸ್ತೆಯಲ್ಲಿ ಮಳೆ ನೀರು

ಬೆಥೆಲ್ ಚರ್ಚ್ ಬಳಿ ರಸ್ತೆಯೇ ಕಾಲುವೆಯಂತಾಗಿತ್ತು

ಬಿರುಸಿನ ಮಳೆ: ರಸ್ತೆಯಲ್ಲೇ ಹರಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಲವು ಪ್ರದೇಶಗಳಲ್ಲಿ ಭಾನುವಾರ ಸಂಜೆ ಬಿರುಸಿನ ಮಳೆಯಾಗಿದೆ. ಚರಂಡಿ ವ್ಯವಸ್ಥೆ ಸರಿ ಇಲ್ಲದ ಕಾರಣ ಕೆಲವೆಡೆ ರಸ್ತೆಯಲ್ಲೇ ನೀರು ಹರಿಯಿತು. ಇದರಿಂದ ವಾಹನಗಳ ಸಂಚಾರಕ್ಕೆ ತೊಡಕುಂಟಾಯಿತು.

ಫೀನಿಕ್ಸ್ ಮಾಲ್ ಬಳಿ ಮಳೆ ನೀರು ನಿಂತಿದ್ದರಿಂದ ಹೂಡಿ ಕಡೆಗೆ ವಾಹನ ಸಂಚಾರ ನಿಧಾನಗೊಂಡಿತು. ಕಸ್ತೂರಿನಗರದಿಂದ ರಾಮಮೂರ್ತಿನಗರದ ಕಡೆಗಿನ ರಸ್ತೆ ಜಲಾವೃತವಾಯಿತು. ನಾಗವಾರದಿಂದ ವೀರಣ್ಣಪಾಳ್ಯ ಕಡೆಗೆ ಹೋಗುವ ರಸ್ತೆ ಕಾಲುವೆಯಂತಾಯಿತು. ಸಿಬಿಐ ಕೆಳಸೇತುವೆ ಬಳಿ ನೀರು ನಿಂತಿದ್ದರಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕಡೆಗೆ ಸಂಚರಿಸುವ ವಾಹನಗಳು ನಿಧಾನಗತಿಯಲ್ಲಿ ಸಾಗಿದವು.

ಪೀಣ್ಯ ಮೇಲ್ಸೇತುವೆ ಬಳಿ ನೀರು ನಿಂತಿದ್ದರಿಂದ ತುಮಕೂರು ರಸ್ತೆಯಲ್ಲಿ ಸಾಗುವ ವಾಹನಗಳು ಸಾಲುಗಟ್ಟಿ ನಿಲ್ಲುವಂತಾಯಿತು. ಪುಲಕೇಶಿನಗರದ ಜಿಕೆ ವೇಲ್ ರಸ್ತೆಯಿಂದ ಹೈನ್ಸ್ ರಸ್ತೆಯ ಕಡೆಗೆ ಸಾಗುವ ವಾಹನಗಳಿಗೆ ಮಳೆ ನೀರು ಅಡ್ಡಿಯಾಯಿತು. ಸಿ.ಎಲ್. ಕ್ರಾಸ್‌ನಿಂದ ಜಯಮಹಲ್ ಕಡೆಗೆ ಸಾಗುವ ರಸ್ತೆಗಳ ಪರಿಸ್ಥಿತಿಯೂ ಇದೇ ರೀತಿ ಇತ್ತು. ಹೆಬ್ಬಾಳ ಕೆಳ ರ್‍ಯಾಂಪ್‌ನಿಂದ ವಿಮಾನ ನಿಲ್ದಾಣ ರಸ್ತೆಯ ಕಡೆಗೆ ಸಾಗುವಲ್ಲಿಯೂ ಮಳೆ ನೀರು ನಿಂತು ತೊಂದರೆ ಉಂಟಾಯಿತು. ಬೆಥೆಲ್ ಚರ್ಚ್‌ನಿಂದ ವೆಂಕಟಮ್ ಕೆಫೆ ಕಡೆಗೆ ಇರುವ ಸರ್ವಿಸ್ ರಸ್ತೆ ನೀರಿನಿಂದ ಆವೃತವಾಯಿತು. ಲೊಟ್ಟೆಗೊಲ್ಲಹಳ್ಳಿ ರೈಲ್ವೆ ಸೇತುವೆ ಬಳಿ ನೀರು ನಿಂತಿದ್ದರಿಂದ ಹೆಬ್ಬಾಳ ಕಡೆಗೆ ಸರಾಗ ಸಂಚಾರಕ್ಕೆ ಅಡ್ಡಿಯಾಯಿತು.

ಮಳೆ ವಿವರ: ಅಂಜನಾಪುರದಲ್ಲಿ 1.7 ಸೆಂ.ಮೀ., ವಿಶ್ವನಾಥ ನಾಗೇನಹಳ್ಳಿಯಲ್ಲಿ 1.6 ಸೆಂ.ಮೀ., ಬಾಣಸವಾಡಿಯಲ್ಲಿ 1.5 ಸೆಂ.ಮೀ., ಗೊಟ್ಟಿಗೆರೆಯಲ್ಲಿ 1.4 ಸೆಂ.ಮೀ., ಪುಲಕೇಶಿ ನಗರದಲ್ಲಿ 1.3 ಸೆಂ.ಮೀ., ಚೊಕ್ಕಸಂದ್ರದಲ್ಲಿ 1.1 ಸೆಂ.ಮೀ., ಬಾಗಲಗುಂಟೆಯಲ್ಲಿ 1.1 ಸೆಂ.ಮೀ., ಮನೋರಾಯನಪಾಳ್ಯದಲ್ಲಿ 1 ಸೆಂ.ಮೀ. ಮಳೆ ದಾಖಲಾಗಿದೆ.

ಮಲ್ಲೇಶ್ವರದಲ್ಲಿ ಮಳೆಯ ನಡುವೆ ಜನರು ಸಾಗಿದರು ಪ್ರಜಾವಾಣಿ ಚಿತ್ರ

ಬೈಕ್ ಟ್ಯಾಕ್ಸಿ ನಿಷೇಧ: ವಿಧಾನಸೌಧದ ಎದುರು ಪ್ರತಿಭಟನೆ

ಹತ್ತಕ್ಕೂ ಅಧಿಕ ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್ ಟ್ಯಾಕ್ಸಿ ನಿಷೇಧ ವಿರೋಧಿಸಿ ವಿಧಾನಸೌಧದ ಬಳಿ ಕಾನೂನುಬಾಹಿರವಾಗಿ ಪ್ರತಿಭಟನೆ ಮಾಡಿದ ಆರೋಪದಡಿ 10ಕ್ಕೂ ಅಧಿಕ ಮಂದಿ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಧಾನಸೌಧ ಪೊಲೀಸ್ ಠಾಣೆಯ ಪಿಎಸ್‌ಐ ಪುಟ್ಟಸ್ವಾಮಯ್ಯ ಅವರು ನೀಡಿದ ದೂರಿನ ಮೇರೆಗೆ ಲಕ್ಷ್ಮೀ ಸಾಗರ್, ಚಂದ್ರಶೇಖರ್, ಪವನ್ ಕುಮಾರ್, ಜಾನ್‌ಪಾಷಾ, ಮನೋಜ್, ಶಶಿಕಾಂತ್, ಕುಮಾರಸ್ವಾಮಿ ಸೇರಿ 10ಕ್ಕೂ ಅಧಿಕ ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ರಾಜ್ಯದಲ್ಲಿ ಬೈಕ್ ಟ್ಯಾಕ್ಸಿಗಳಿಗೆ ನಿಯಮ ರೂಪಿಸುವಂತೆ ಹಾಗೂ ಬೈಕ್ ಟ್ಯಾಕ್ಸಿ ಸೇವೆ ಮುಂದುವರಿಸುವಂತೆ ಆಗ್ರಹಿಸಿ ಬೆಂಗಳೂರು, ಮೈಸೂರು, ಹಾಸನ ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಐದು ಸಾವಿರಕ್ಕೂ ಅಧಿಕ ಬೈಕ್ ಟ್ಯಾಕ್ಸಿ ಚಾಲಕರು ಜೂನ್ 21ರಂದು ವಿಧಾನಸೌಧದ ಎದುರು ರ್‍ಯಾಲಿ ಮಾಡುತ್ತಿರುವ ಬಗ್ಗೆ ಸಾಮಾಜಿಕ ಜಾಲತಾಣದಿಂದ ಮಾಹಿತಿ ಸಿಕ್ಕಿತು. ಬಳಿಕ ನಾನು ಹಾಗೂ ಸಿಬ್ಬಂದಿ ಮುಂಜಾಗ್ರತಾ ಕ್ರಮವಾಗಿ ವಿಧಾನಸೌಧ ಅಂಬೇಡ್ಕರ್ ಪ್ರತಿಮೆ ಬಳಿ ಬಂದೋಬಸ್ತ್ ಮಾಡಿದ್ದೆವು. ಮಧ್ಯಾಹ್ನ ಸುಮಾರು 2.20ಕ್ಕೆ 15-20 ಮಂದಿ ಕಾಲ್ನಡಿಗೆಯಲ್ಲಿ ವಿಧಾನಸೌಧದ ಎದುರಿನ ಕೆಂಪೇಗೌಡ ಪ್ರತಿಮೆ ಬಳಿಗೆ ಬಂದು, ಪ್ರತಿಭಟನೆ ಮಾಡಿದ್ದಾರೆ' ಎಂದು ಪಿಎಸ್‌ಐ ಪುಟ್ಟಸ್ವಾಮಯ್ಯ ದೂರಿನಲ್ಲಿ ತಿಳಿಸಿದ್ದಾರೆ.

'ಅನುಮತಿ ಪಡೆದು ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರ ಪ್ರತಿಭಟನೆ ಮಾಡುವಂತೆ ಹೈಕೋರ್ಟ್ ಆದೇಶಿಸಿದೆ. ಆದರೂ ಪ್ರತಿಭಟನಕಾರರು ಅನುಮತಿ ಇಲ್ಲದೇ ವಿಧಾನಸೌಧದ ಆವರಣದಲ್ಲಿ ಗುಂಪು ಸೇರಿ ಪ್ರತಿಭಟನೆ ಮಾಡಿದ್ದಾರೆ. ಹೀಗಾಗಿ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಸ್ಪತ್ರೆ ಕಾಮಗಾರಿ ಪರಿಶೀಲನೆ

ಸಿಂಗಾಪುರ: 60 ಹಾಸಿಗೆಗಳ ಆಸ್ಪತ್ರೆ ಶೀಘ್ರದಲ್ಲೇ ಆರಂಭ

ಪ್ರಜಾವಾಣಿ ವಾರ್ತೆ

ಯಲಹಂಕ: ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಆರೋಗ್ಯ ಇಲಾಖೆ ಮತ್ತು ಬಿಬಿಎಂಪಿ ಅಧಿಕಾರಿಗಳೊಂದಿಗೆ ಬ್ಯಾಟರಾಯನಪುರ ಕ್ಷೇತ್ರದ ಕುವೆಂಪುನಗರ ವಾರ್ಡ್ ವ್ಯಾಪ್ತಿಯ ಸಿಂಗಾಪುರದಲ್ಲಿ ನಿರ್ಮಾಣವಾಗುತ್ತಿರುವ ಸರ್ಕಾರಿ ಆಸ್ಪತ್ರೆ ಕಟ್ಟಡ ಕಾಮಗಾರಿಯ ಪ್ರಗತಿ ಪರಿಶೀಲನೆ ನಡೆಸಿದರು.

ನಂತರ ಮಾತನಾಡಿದ ಅವರು, 'ಆಸ್ಪತ್ರೆಯ ಕಟ್ಟಡ ನಿರ್ಮಾಣ ಕಾಮಗಾರಿಯು ಅಂತಿಮ ಹಂತದಲ್ಲಿದೆ. ಈಗಾಗಲೇ ₹10 ಕೋಟಿ ಅನುದಾನ ಖರ್ಚು ಮಾಡಲಾಗಿದೆ. ಇನ್ನೂ ₹10 ಕೋಟಿ ಅನುದಾನದಲ್ಲಿ ವೈದ್ಯಕೀಯ ಸಲಕರಣೆಗಳನ್ನು ಖರೀದಿಸಿ, ಅಗತ್ಯವಿರುವ ಸಿಬ್ಬಂದಿಯನ್ನು ನಿಯೋಜಿಸಲಾಗುವುದು. 60 ಹಾಸಿಗೆಗಳ ಈ ಆಸ್ಪತ್ರೆ ಶೀಘ್ರದಲ್ಲೇ ಕಾರ್ಯಾರಂಭ ಮಾಡಬೇಕು. ಇದೇ ಉದ್ದೇಶದಿಂದ ಕಾಮಗಾರಿಯ ಪ್ರಗತಿ ಪರಿಶೀಲನೆ ನಡೆಸಲಾಗಿದೆ' ಎಂದು ತಿಳಿಸಿದರು.

'ಇಲ್ಲಿ ಆಸ್ಪತ್ರೆ ನಿರ್ಮಾಣವಾಗುವುದರಿಂದ ಸುತ್ತಮುತ್ತಲ ಜನರಿಗೆ ಸಮೀಪದಲ್ಲೇ ವೈದ್ಯಕೀಯ ಸೇವೆ ಪಡೆಯಲು ಅನುಕೂಲವಾಗುತ್ತದೆ. ಜೊತೆಗೆ ಯಲಹಂಕ ಸರ್ಕಾರಿ ಆಸ್ಪತ್ರೆಯ ಮೇಲಿನ ಒತ್ತಡವೂ ಕಡಿಮೆಯಾಗಲಿದೆ' ಎಂದರು.

ಈ ಸಂದರ್ಭದಲ್ಲಿ ಪಾಲಿಕೆ ಮಾಜಿ ಸದಸ್ಯ ವಿ.ವಿ.ಪಾರ್ತಿಬರಾಜನ್, ಬೆಂಗಳೂರು ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ರವೀಂದ್ರನಾಥ ಮೇಟಿ, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಶೈಲಕುಮಾರ್.ಎಚ್.ಕೆ, ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಸುರೋಳ್ಕರ್ ವಿಕಾಸ್ ಕಿಶೋರ್, ಮುಖ್ಯ ಆರೋಗ್ಯ ಅಧಿಕಾರಿ ಡಾ.ಸೈಯದ್ ಸಿರಾಜ್ ಉದ್ದೀನ್ ಮದನಿ, ಬಿಬಿಎಂಪಿ ಯಲಹಂಕ ವಲಯದ ಆರೋಗ್ಯ ಅಧಿಕಾರಿ ಸಿದ್ದಪ್ಪಾಜಿ, ಕಾರ್ಯನಿರ್ವಾಹಕ ಎಂಜಿನಿಯರ್ ರಘುನಾಥ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕೆ.ಜಿ.ಸುಂದರೇಶ್ ಮತ್ತಿತರರು ಉಪಸ್ಥಿತರಿದ್ದರು.

ಬ್ಯಾಟರಾಯನಪುರ ಕ್ಷೇತ್ರದ ಕುವೆಂಪುನಗರ ವಾರ್ಡ್ ವ್ಯಾಪ್ತಿಯ ಸಿಂಗಾಪುರದಲ್ಲಿ ನಿರ್ಮಾಣವಾಗುತ್ತಿರುವ ಸರ್ಕಾರಿ ಆಸ್ಪತ್ರೆ ಕಟ್ಟಡ ಕಾಮಗಾರಿಯ ಪ್ರಗತಿ ಪರಿಶೀಲನೆಯನ್ನು ಕಂದಾಯ ಸಚಿವ ಕೃಷ್ಣಬೈರೇಗೌಡ, ಆರೋಗ್ಯ ಇಲಾಖೆ ಹಾಗೂ ಬಿಬಿಎಂಪಿ ಅಧಿಕಾರಿಗಳೊಂದಿಗೆ ನಡೆಸಿದರು

> **ಡಯಾಲಿಸಿಸ್‌ಗಾಗಿಯೇ ಆಸ್ಪತ್ರೆಯಲ್ಲಿ 30 ಬೆಡ್‌ಗಳನ್ನು ಅಳವಡಿಸಲು ಸೂಚಿಸಲಾಗಿದೆ. ಇದಲ್ಲದೇ ಎರಡನೇ ಹಂತದಲ್ಲಿ ತಾಯಿ-ಮಗುವಿನ ಚಿಕಿತ್ಸೆಗಾಗಿ 30 ಬೆಡ್‌ಗಳ ಕೇಂದ್ರ ತೆರೆಯಲು ಚಿಂತನೆ ನಡೆಸಲಾಗಿದೆ**
> **ಕೃಷ್ಣಬೈರೇಗೌಡ,** ಕಂದಾಯ ಸಚಿವ

'ತಂಬಾಕು ಉತ್ಪನ್ನಗಳ ನಿಯಂತ್ರಣಕ್ಕೆ ಕಠಿಣ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ತಂಬಾಕು ಉತ್ಪನ್ನಗಳ ನಿಯಂತ್ರಣಕ್ಕೆ ಸರ್ಕಾರ ಹಲವು ಕಠಿಣ ಕ್ರಮಗಳನ್ನು ಕೈಗೊಂಡಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ತಂಬಾಕು ಉತ್ಪನ್ನಗಳ ಬಳಕೆಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ವಿಶ್ವ ಆರೋಗ್ಯ ಸಂಸ್ಥೆಯ ಆಗ್ನೇಯ ಏಷ್ಯಾ ವಲಯ ನೀಡುವ 'ಅತ್ಯುತ್ತಮ ತಂಬಾಕು ನಿಯಂತ್ರಣ ಪ್ರಶಸ್ತಿ'ಗೆ ಆರೋಗ್ಯ ಇಲಾಖೆಯ ರಾಜ್ಯ ತಂಬಾಕು ನಿಯಂತ್ರಣ ಕೋಶ ಭಾಜನವಾಗಿದ್ದು, ನಗರದಲ್ಲಿ ನಡೆದ ವಿಶ್ವ ತಂಬಾಕು ರಹಿತ ದಿನ ಕಾರ್ಯಕ್ರಮದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಪ್ರತಿನಿಧಿ ಯುಟಾರೊ ಸೆಟೋಯಾ ಅವರು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಪ್ರಶಸ್ತಿ ಹಸ್ತಾಂತರಿಸಿದರು.

ಈ ವೇಳೆ ಮಾತನಾಡಿದ ಸಚಿವರು, 'ತಂಬಾಕು ಉತ್ಪನ್ನಗಳ ಸೇವನೆಗೆ ಕಡಿವಾಣ ಹಾಕಲು ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ (ಕೋಟ್ಪಾ) ಕಾಯ್ದೆಗೆ ತಿದ್ದುಪಡಿ ತಂದು, ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನಕ್ಕೆ ವಿಧಿಸುವ ದಂಡವನ್ನು ₹1 ಸಾವಿರಕ್ಕೆ ಏರಿಕೆ ಮಾಡಲಾಗಿದೆ. ತಂಬಾಕು ಉತ್ಪನ್ನಗಳನ್ನು ಖರೀದಿಸಲು ಗೊತ್ತುಪಡಿಸಲಾದ ವಯೋಮಿತಿಯನ್ನು 18ರಿಂದ 21 ವರ್ಷಗಳಿಗೆ ಹೆಚ್ಚಿಸಲಾಗಿದೆ. ಹುಕ್ಕಾ ಬಾರ್‌ಗಳನ್ನು ಸಂಪೂರ್ಣ ನಿಷೇಧಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳ ಬಳಕೆ, ಉತ್ಪನ್ನಗಳ ಉಗುಳುವಿಕೆಯನ್ನು ನಿಷೇಧಿಸಲಾಗಿದೆ' ಎಂದರು.

ಯುಟಾರೊ ಸೆಟೋಯಾ, 'ಕರ್ನಾಟಕದ ಆರೋಗ್ಯ ಇಲಾಖೆಯ ತಂಬಾಕು ನಿಯಂತ್ರಣ ಕೋಶವು ತಂಬಾಕು ಉತ್ಪನ್ನಗಳ ನಿಯಂತ್ರಣಕ್ಕೆ ಗಮನಾರ್ಹವಾಗಿ ಕಾರ್ಯನಿರ್ವಹಿಸಿದೆ. ಆದ್ದರಿಂದ ಈ ಬಾರಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ' ಎಂದು ಹೇಳಿದರು.

ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ಆರೋಗ್ಯ ಇಲಾಖೆ ಆಯುಕ್ತ ಶಿವಕುಮಾರ್ ಕೆ.ಬಿ., ಜಂಟಿ ನಿರ್ದೇಶಕಿ ರಜನಿ ಎಂ. ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಯುಟಾರೊ ಸೆಟೋಯಾ ಅವರು ದಿನೇಶ್ ಗುಂಡೂರಾವ್ ಅವರಿಗೆ 'ಅತ್ಯುತ್ತಮ ತಂಬಾಕು ನಿಯಂತ್ರಣ ಪ್ರಶಸ್ತಿ' ಹಸ್ತಾಂತರಿಸಿದರು. ಶಿವಕುಮಾರ್ ಕೆ.ಬಿ., ರಜನಿ ಎಂ. ಹಾಗೂ ಡಾ. ಪ್ರತಿಮಾ ಮೂರ್ತಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ಮಿಸಾಕಾ ಯುನೈಟೆಡ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಘಿಕ ಆಟವಾಡಿದ ಮಿಸಾಕಾ ಯುನೈಟೆಡ್ ಎಫ್‌ಸಿ ತಂಡವು, ಬಿಡಿಎಫ್‌ಎ 'ಸಿ' ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ 4-0 ಅಂತರದಿಂದ ಅಂಬೇಡ್ಕರ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ, ಮಿಸಾಕಾ ಯುನೈಟೆಡ್ ಎಫ್‌ಸಿ ತಂಡದ ಮೊಹಮ್ಮದ್ ಹಫ್ಸಲ್ ಎಂ. (14ನೇ ನಿ.), ಹಾರಿಮನ್ ಎ.ಕೆ. (28ನೇ ನಿ.), ಜೈಶಾದ್ ಪಿ. (35ನೇ ನಿ.) ಹಾಗೂ ಮುಷರಫ್ ಎ.ಪಿ. (50ನೇ ನಿ.) ತಲಾ ಒಂದು ಗೋಲು ಗಳಿಸಿದರು. ಕಳಪೆ ಪ್ರದರ್ಶನ ತೋರಿದ ಅಂಬೇಡ್ಕರ್ ಎಫ್‌ಸಿ ತಂಡದ ಆಟಗಾರರು ಗೋಲು ಗಳಿಸಲು ವಿಫಲರಾದರು.

ಮತ್ತೊಂದು ಪಂದ್ಯದಲ್ಲಿ, ಹಿಂದೂ ಸೋಷಿಯಲ್ಸ್ ಎಫ್‌ಸಿ ತಂಡವು 6-0ರಿಂದ ಬಿಎಚ್‌ಇಎಲ್ (ಇಡಿಎನ್) ಎದುರು ಗೆಲುವು ಸಾಧಿಸಿತು. ಹಿಂದೂ ಸೋಷಿಯಲ್ಸ್ ತಂಡದ ಎಸ್.ಎಂ. ಕೌರವ್ ರಿತ್ವಿಕ್ (4ನೇ, 11ನೇ ಹಾಗೂ 49ನೇ ನಿ.) ಮೂರು ಗೋಲು ಗಳಿಸಿ ಮಿಂಚಿದರು. ಪ್ರಿಯಾನ್ ವಿ. (5ನೇ ನಿ.), ಸೋಲಮಲೈ (47ನೇ ನಿ.) ಹಾಗೂ ಮ್ಯಾಸ್ಟ್ರೋ ಎಸ್. ಥಾಮಸ್ (50ನೇ ನಿ.) ತಲಾ ಒಂದು ಗೋಲು ಹೊಡೆದರು.

ಸೋಮವಾರ ನಾಕ್‌ಔಟ್ ಪಂದ್ಯಗಳು ನಡೆಯಲಿದ್ದು, ಹಂಪಿನಗರ ಎಫ್‌ಸಿ- ಯೂನಿವರ್ಸಲ್ ಎಫ್‌ಸಿ, ಬೆಂಗಳೂರು ವಾಂಡರರ್ಸ್- ಜೈ ಭಾರತ್ ನಗರ ಎಫ್‌ಸಿ, ಈಸ್ಟ್‌ವೆಸ್ಟ್ ಎಫ್‌ಸಿ- ಎಂಪೈರ್ ಎಫ್‌ಸಿ ಹಾಗೂ ಯಂಗ್‌ಬಾಯ್ಸ್ ಎಫ್‌ಸಿ- ಬೆಂಗಳೂರು ಬಾಯ್ಸ್ ಎಫ್‌ಸಿ ತಂಡಗಳ ನಡುವೆ ಪೈಪೋಟಿ ನಡೆಯಲಿದೆ.

ರಾಜ್ಯ ಸರ್ಕಾರಕ್ಕೆ ಸಾಮಾಜಿಕ ನ್ಯಾಯ ಜಾಗೃತ ವೇದಿಕೆ ಒತ್ತಾಯ ● ಕೇಂದ್ರದ ಜಾತಿಗಣತಿಗೆ ಸಹಕಾರ ನೀಡಲಿ

'ಪ್ರತ್ಯೇಕ ಜಾತಿಗಣತಿ ತಕ್ಷಣವೇ ನಿಲ್ಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರವು ಪ್ರತ್ಯೇಕವಾಗಿ ಜಾತಿ ಗಣತಿ ನಡೆಸುವುದನ್ನು ತಕ್ಷಣವೇ ಕೈಬಿಡಬೇಕು' ಎಂದು ಸಾಮಾಜಿಕ ನ್ಯಾಯ ಜಾಗೃತಿ ವೇದಿಕೆ ಒತ್ತಾಯಿಸಿದೆ.

ನಗರದಲ್ಲಿ ಭಾನುವಾರ ಆಯೋಜಿಸಲಾಗಿದ್ದ ದುಂಡುಮೇಜಿನ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ವಿಷ್ಣುಕಾಂತ ಚಟಪಳ್ಳಿ, 'ಜಾತಿಗಣತಿ ಹೆಸರಿನಲ್ಲಿ ಕರ್ನಾಟಕ ಸರ್ಕಾರವು ಈಗಾಗಲೇ 10 ವರ್ಷ ವ್ಯರ್ಥ ಮಾಡಿದೆ. ಮತ್ತೆ ಜಾತಿಗಣತಿ ನಡೆಸಲು ಜನರ ತೆರಿಗೆ ಹಣ ಮತ್ತು ಸಮಯ ವ್ಯರ್ಥಮಾಡಬಾರದು ಎಂದು ಸರ್ಕಾರವನ್ನು ಒತ್ತಾಯಿಸಲು ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ' ಎಂದರು.

'ಕೇಂದ್ರ ಸರ್ಕಾರವು ಜನಗಣತಿ ಜತೆಗೆ ಜಾತಿಗಣತಿ ನಡೆಸಲಿದೆ. ಜಾತಿ ಗಣತಿಯಲ್ಲಿ ಸಾಮಾಜಿಕ, ಶೈಕ್ಷಣಿಕ ಅಂಶಗಳ ಜತೆಗೆ ಸಾಂಸ್ಕೃತಿಕ ವಿವರಗಳನ್ನೂ ಕಲೆ ಹಾಕಲಿದೆ. ಇದಕ್ಕಾಗಿ ಕೇಂದ್ರವು ₹13,000 ಕೋಟಿ ವೆಚ್ಚಮಾಡಲಿದೆ' ಎಂದರು.

'ಕೇಂದ್ರ ಸರ್ಕಾರವು ನಡೆಸುವ ಜಾತಿಗಣತಿಯ ಮೂಲಕ ಸಂಗ್ರಹಿಸುವ ದತ್ತಾಂಶಗಳಿಗೆ ಮಾತ್ರವೇ ಸಂವಿಧಾನದ ಮಾನ್ಯತೆ ಇರಲಿದೆ. ಹೀಗಾಗಿ ಕೇಂದ್ರದ ಜಾತಿಗಣತಿಗೆ ರಾಜ್ಯ ಸರ್ಕಾರವು ಸಂಪೂರ್ಣ ಸಹಕಾರ ನೀಡಬೇಕು. ಕಾಂತರಾಜ ಆಯೋಗದ ವರದಿಯನ್ನು ಸಾರ್ವಜನಿಕರ ಅವಗಾಹನೆಗೆ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದರು.

'ರಾಜ್ಯ ಸರ್ಕಾರವು ಪ್ರತ್ಯೇಕವಾಗಿ ಜಾತಿಗಣತಿ ನಡೆಸುವುದನ್ನು ನಿಲ್ಲಿಸದೇ ಇದ್ದರೆ, ಕಾನೂನು ಹೋರಾಟ ನಡೆಸಬೇಕು ಎಂದೂ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ' ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

ವಿವಿಧ ವಿಶ್ವವಿದ್ಯಾಲಯಗಳ ವಿಶ್ರಾಂತ ಕುಲಪತಿಗಳು, ಶಿಕ್ಷಕರು, ವಕೀಲರು, ಬಿಜೆಪಿ ಶಾಸಕ ವಿ.ಸುನಿಲ್ ಕುಮಾರ್, ಸಂಸದ ಕೋಟ ಶ್ರೀನಿವಾಸ ಪೂಜಾರಿ ಸಭೆಯಲ್ಲಿ ಭಾಗಿಯಾಗಿದ್ದರು.

ಮುಖ್ಯಾಂಶಗಳು

- ಜಾತಿಗಣತಿ ಹೆಸರಿನಲ್ಲಿ ಈಗಾಗಲೇ 10 ವರ್ಷ ವ್ಯರ್ಥ
- ಮತ್ತೆ ಜಾತಿಗಣತಿಗೆ ಹಣ, ಸಮಯ ವ್ಯರ್ಥ ಮಾಡುವುದು ಬೇಡ
- ಸಭೆಯಲ್ಲಿ ನಿರ್ಣಯ

'ಸಿಎಂಗೆ ಒತ್ತಡ ಹೇರಿದವರು ಯಾರು?'

'ಎಷ್ಟೇ ಒತ್ತಡ ಬಂದರೂ ಜಯಪ್ರಕಾಶ ಹೆಗ್ಡೆ ಅವರ ವರದಿಯನ್ನು ಸ್ವೀಕರಿಸುವುದೇ ಇರುವುದಿಲ್ಲ. ಆ ವರದಿಯ ಶಿಫಾರಸುಗಳನ್ನು ಜಾರಿ ಮಾಡಿಯೇ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪದೇ-ಪದೇ ಹೇಳುತ್ತಿದ್ದರು. ಆದರೆ ದೆಹಲಿಗೆ ಹೋಗಿ ವಾಪಸ್ ಬರುವ ವೇಳೆಗೆ, ಅವರು ನಿಲುವು ಬದಲಿಸಿದ್ದು ಏಕೆ' ಎಂದು ಬಿಜೆಪಿ ಶಾಸಕ ವಿ.ಸುನಿಲ್ ಕುಮಾರ್ ಪ್ರಶ್ನಿಸಿದರು.

ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಜಯಪ್ರಕಾಶ ಹೆಗ್ಡೆ ಅವರ ವರದಿಯನ್ನು ಕೈಬಿಡುವಂತೆ ತಮ್ಮ ಮೇಲೆ ಒತ್ತಡ ಹೇರಿದವರು ಯಾರು ಎಂಬುದನ್ನು ಸಿದ್ದರಾಮಯ್ಯ ಅವರು ಬಹಿರಂಗಪಡಿಸಬೇಕು. ಸರ್ಕಾರ ವರದಿಯನ್ನು ಸ್ವೀಕರಿಸುವುದು ಅಥವಾ ಜಾರಿ ಮಾಡುವುದು ಎರಡನೇ ವಿಚಾರ. ಮೊದಲಿಗೆ ಅದನ್ನು ಸಾರ್ವಜನಿಕರ ಅವಗಾಹನೆಗೆ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದರು.

ಸಾಮಾಜಿಕ ನ್ಯಾಯ ಜಾಗೃತಿ ವೇದಿಕೆಯುನಗರದಲ್ಲಿ ಭಾನುವಾರ ಆಯೋಜಿಸಿದ್ದ ದುಂಡುಮೇಜಿನ ಸಭೆಯಲ್ಲಿ ವಿಷ್ಣುಕಾಂತ ಚಟಪಳ್ಳಿ ಮಾತನಾಡಿದರು

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಪರೋಪಕಾರ ಮಾಡುವುದು ಪುಣ್ಯದ ಕೆಲಸ. ಪರಪೀಡನೆ ಪಾಪ.
–ವ್ಯಾಸ ಮಹರ್ಷಿ

ಸಂಪಾದಕೀಯ

ದೇಶದಲ್ಲಿ ಲಿಂಗತ್ವ ಅಂತರ ಪ್ರಗತಿಯ ಗುರಿ ಸಾಧನೆಗೆ ಅಡ್ಡಿ

ವಿಶ್ವ ಆರ್ಥಿಕ ವೇದಿಕೆಯು ಕಳೆದ ವಾರ ಬಿಡುಗಡೆ ಮಾಡಿದ ಜಾಗತಿಕ ಲಿಂಗತ್ವ ಅಂತರ ಸೂಚ್ಯಂಕದಲ್ಲಿ ಭಾರತ ಎರಡು ಸ್ಥಾನ ಕೆಳಕ್ಕೆ ಕುಸಿದಿದೆ. ಕಳೆದ ವರ್ಷವೂ ಭಾರತವು ಎರಡು ಸ್ಥಾನ ಹಿಂದಕ್ಕೆ ಹೋಗಿತ್ತು. 148 ದೇಶಗಳ ಈ ಪಟ್ಟಿಯಲ್ಲಿ ನಮ್ಮ ದೇಶವು 131ನೇ ಸ್ಥಾನ ಪಡೆದಿದೆ. ದಕ್ಷಿಣ ಏಷ್ಯಾದಲ್ಲಿ ಅತ್ಯಂತ ಕೆಳಗೆ ಇರುವ ದೇಶ ಭಾರತ. ಬಾಂಗ್ಲಾದೇಶವು 24ನೇ ಸ್ಥಾನ ಪಡೆದಿದೆ. ಭೂತಾನ್, ನೇಪಾಳ ಮತ್ತು ಶ್ರೀಲಂಕಾಕ್ಕಿಂತಲೂ ಭಾರತ ಹಿಂದೆ ಇದೆ. ಜಾಗತಿಕ ಮಟ್ಟದಲ್ಲಿ ಲಿಂಗತ್ವ ಸಮತೆ ಸಾಧನೆ ಪ್ರಮಾಣವು ಉತ್ತಮವಾಗಿದ್ದರೂ ನಮ್ಮಲ್ಲಿ ಕಳಪೆಯಾಗಿಯೇ ಇದೆ. ಸೂಚ್ಯಂಕವು ಮಾನದಂಡವಾಗಿ ಇರಿಸಿಕೊಂಡಿರುವ ಎಲ್ಲ ಅಂಶಗಳಲ್ಲಿಯೂ ಜಾಗತಿಕ ಮಟ್ಟದಲ್ಲಿ ಸುಧಾರಣೆ ಕಂಡು ಬಂದಿದೆ. ಜಾಗತಿಕ ಮಟ್ಟದಲ್ಲಿ ಲಿಂಗತ್ವ ಸಮಾನತೆ ಸಾಧಿಸಲು 123 ವರ್ಷಗಳು ಬೇಕು ಎಂದು ವರದಿಯಲ್ಲಿ ಹೇಳಲಾಗಿದೆ. ಕಳೆದ ವರ್ಷ 143 ವರ್ಷ ಬೇಕಾಗಬಹುದು ಎಂದು ಅಂದಾಜು ಮಾಡಲಾಗಿತ್ತು. ಕಡಿಮೆ ವರಮಾನದ ಕೆಲವು ದೇಶಗಳೇ ಹೆಚ್ಚು ವರಮಾನದ ದೇಶಗಳಿಗಿಂತ ಲಿಂಗತ್ವ ಅಂತರ ಕಡಿಮೆ ಮಾಡುವಲ್ಲಿ ಹೆಚ್ಚು ಯಶಸ್ಸು ಕಂಡಿವೆ. ಲಿಂಗತ್ವ ಸಮಾನತೆಯು ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುವುದರಿಂದ ಇದೊಂದು ಸ್ವಾಗತಾರ್ಹ ವಿಚಾರ.

ಸೂಚ್ಯಂಕವು ನಾಲ್ಕು ಮಾನದಂಡಗಳನ್ನು ಬಳಸಿಕೊಂಡು ಲಿಂಗತ್ವ ಸಮತೆಯನ್ನು ಮೌಲ್ಯಮಾಪನ ಮಾಡುತ್ತದೆ: ಆರ್ಥಿಕ ಭಾಗವಹಿಸುವಿಕೆ ಮತ್ತು ಅವಕಾಶ, ಶೈಕ್ಷಣಿಕ ಸಾಧನೆ, ಆರೋಗ್ಯ ಮತ್ತು ಬದುಕುಳಿಯುವಿಕೆ ಹಾಗೂ ರಾಜಕೀಯ ಸಶಕ್ತತೆ. ಭಾರತದ ಸಾಧನೆಯು ಮೂರು ಮಾನದಂಡಗಳಲ್ಲಿ ಸ್ಥಿರವಾಗಿದೆ ಅಥವಾ ಉತ್ತಮಗೊಂಡಿದೆ. ರಾಜಕೀಯ ಸಶಕ್ತೀಕರಣದಲ್ಲಿ ಭಾರತವು ಹಿಂದೆ ಬಿದ್ದಿದೆ. ಆರ್ಥಿಕ ಭಾಗವಹಿಸುವಿಕೆ ಮತ್ತು ಅವಕಾಶಗಳಲ್ಲಿ ಶೇ 0.9ರಷ್ಟು ಸುಧಾರಣೆ ಕಂಡಿದೆ. ಕಾರ್ಮಿಕ ಭಾಗವಹಿಸುವಿಕೆಯಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಸಲ ಯಾವುದೇ ವ್ಯತ್ಯಾಸ ಆಗಿಲ್ಲ. ಲಿಂಗತ್ವ ಆಧಾರದಲ್ಲಿ ಪ್ರತ್ಯೇಕಿಸುವಿಕೆ ಎಲ್ಲ ಕ್ಷೇತ್ರಗಳಲ್ಲಿಯೂ ಇದೆ. ಆರೋಗ್ಯ ಸೇವೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕೂಡ ಕಡಿಮೆ ವೇತನದ ಕೆಲಸಗಳನ್ನು ಮಾತ್ರ ಮಹಿಳೆಯರಿಗೆ ನೀಡಲಾಗುತ್ತಿದೆ. ಪುರುಷ ಮತ್ತು ಮಹಿಳಾ ಕಾರ್ಮಿಕರ ನಡುವೆ ವೇತನದಲ್ಲಿ ಗಣನೀಯವಾದ ಅಂತರ ಇದೆ. ಮಹಿಳೆಯರ ದೊಡ್ಡ ವರ್ಗವು ವೇತನರಹಿತವಾಗಿ ಕೆಲಸ ಮಾಡಬೇಕಾಗಿದೆ. ಶಿಕ್ಷಣ, ಆರೋಗ್ಯ ಮತ್ತು ಬದುಕುಳಿಯುವಿಕೆ ವರ್ಗಗಳಲ್ಲಿ ಸುಧಾರಣೆ ಆಗಿದ್ದರೂ ಅದು ಇನ್ನಷ್ಟು ವೇಗ ಪಡೆಯಬೇಕಿದೆ.

ನಿರ್ಣಾಯಕ ಕ್ಷೇತ್ರಗಳಲ್ಲಿ ಇರುವ ಲಿಂಗತ್ವ ಅಂತರವನ್ನು ಸರಿಪಡಿಸದೇ ಇದ್ದರೆ ಅಭಿವೃದ್ಧಿ ಹೊಂದಿದ ದೇಶವಾಗುವ ಭಾರತದ ಕನಸು ದೂರವೇ ಉಳಿಯಬಹುದು

ರಾಜಕೀಯ ಸಶಕ್ತೀಕರಣ ವರ್ಗದಲ್ಲಿ ಕಳೆದ ವರ್ಷದಿಂದ ಭಾರಿ ಹಿನ್ನಡೆ ಆಗಿದೆ. ಸಂಸತ್ತಿನಲ್ಲಿ ಮಹಿಳಾ ಪ್ರಾತಿನಿಧ್ಯವು ಶೇ 14.7ರಿಂದ ಶೇ 13.8ಕ್ಕೆ ಇಳಿದಿದೆ. ಪರಿಣಾಮವಾಗಿ ಸತತ ಎರಡನೇ ವರ್ಷವೂ ಈ ವರ್ಗದಲ್ಲಿ ಹಿನ್ನಡೆ ಆಗಿದೆ. ಸಚಿವ ಸ್ಥಾನದಲ್ಲಿ ಇರುವ ಮಹಿಳೆಯರ ಪ್ರಮಾಣವು ಶೇ 6.5ರಿಂದ ಶೇ 5.6ಕ್ಕೆ ಕುಸಿದಿದೆ. ಇವೆಲ್ಲವೂ ದೇಶದ ಒಟ್ಟಾರೆ ಸ್ಥಾನ ಗಳಿಕೆಯಲ್ಲಿ ಹಿಂದೆ ಬೀಳಲು ಕಾರಣವಾಗಿವೆ. 2023ರಲ್ಲಿ ಅಂಗೀಕರಿಸಲಾದ ಮಹಿಳಾ ಮೀಸಲು ಕಾಯ್ದೆಯು ಜಾರಿಗೆ ಬಂದರೆ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಲೋಕಸಭೆಗೆ 2029ರಲ್ಲಿ ನಡೆಯಲಿರುವ ಚುನಾವಣೆಗೂ ಮುನ್ನ ಈ ಕಾಯ್ದೆ ಜಾರಿಗೆ ಬರುವ ಸಾಧ್ಯತೆ ಇಲ್ಲ. ಮಹಿಳೆಯರ ಭಾಗೀದಾರಿಕೆಯು ಎಲ್ಲ ಕ್ಷೇತ್ರಗಳಲ್ಲಿಯೂ ಹೆಚ್ಚಳ ಆಗಬೇಕಿದೆ. ವಿಶೇಷವಾಗಿ ಆರ್ಥಿಕ ಚಟುವಟಿಕೆಗಳಲ್ಲಿ ಅವರ ಭಾಗೀದಾರಿಕೆಯು ಉತ್ತಮಗೊಳ್ಳಬೇಕು. ಸಣ್ಣ ಪ್ರಮಾಣದ ಹೆಚ್ಚಳ ಕೂಡ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ದೊಡ್ಡ ಬದಲಾವಣೆ ತರಬಹುದು. ನಿರ್ಣಾಯಕ ಕ್ಷೇತ್ರಗಳಲ್ಲಿ ಇರುವ ಲಿಂಗತ್ವ ಅಂತರವನ್ನು ಸರಿಪಡಿಸದೇ ಇದ್ದರೆ ಅಭಿವೃದ್ಧಿ ಹೊಂದಿದ ದೇಶವಾಗುವ ಕನಸು ದೂರವೇ ಉಳಿಯಬಹುದು.

ಚಾಲ್ತಿ

ಜಾಗತಿಕ ಬೆದರಿಕೆ...



ಜಾಗತಿಕ ಭದ್ರತೆಗೆ ಇರಾನ್ ಆಡಳಿತವು ಬಹಳ ಹಿಂದಿನಿಂದಲೂ ಬೆದರಿಕೆಯಾಗಿದೆ. ಆ ದೇಶವು ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವುದು ಸ್ವೀಕಾರಾರ್ಹವಲ್ಲ. ಈ ಬೆದರಿಕೆಯನ್ನು ಎದುರಿಸಲು ಇಸ್ರೇಲ್, ಅಮೆರಿಕವು ನಿರ್ಣಾಯಕ ಕ್ರಮ ಕೈಗೊಂಡಿವೆ. ಈ ದೇಶಗಳ ಪ್ರಯತ್ನಗಳು ನಮ್ಮ ಬೆಂಬಲ, ಕೃತಜ್ಞತೆಗೆ ಅರ್ಹವಾಗಿವೆ...

ರಿಷಿ ಸುನಕ್, ಬ್ರಿಟನ್ ಮಾಜಿ ಪ್ರಧಾನಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಯಾವ ಮಾನದಂಡದ ಆಧಾರದ ಮೇಲೆ ಅವರು (ಬಿಜೆಪಿ ನಾಯಕರು) ದೇಶದಲ್ಲಿ ಭ್ರಷ್ಟಾಚಾರ ಇಲ್ಲ ಎನ್ನುತ್ತಿದ್ದಾರೆ? ಭಾರತವನ್ನು ವಿಶ್ವಗುರು ಎಂದು ಬಿಂಬಿಸಲಾಗುತ್ತಿದೆ. ಆದರೆ, ಅಕ್ಕಪಕ್ಕದ ಯಾವ ದೇಶದ ಜೊತೆಗೆ ನಾವು ಚೆನ್ನಾಗಿದ್ದೇವೆ?

ಸಂತೋಷ್ ಲಾಡ್, ಕಾರ್ಮಿಕ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 23-6-2000

• ಏಕರೂಪ ಕನಿಷ್ಠ ತೆರಿಗೆ: ಕೃಷ್ಣ ಆಗ್ರಹ

ನವದೆಹಲಿ, ಜೂನ್ 22– ಕೃಷಿ ಉತ್ಪನ್ನಗಳು ಮತ್ತು ಕಂಪ್ಯೂಟರ್‌ಗಳ ಮೇಲಿನ ಕನಿಷ್ಠ ತೆರಿಗೆಯಲ್ಲಿ ಏಕರೂಪದ ನೀತಿ ರೂಪಿಸಲು ಕರ್ನಾಟಕದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು, ಇಂದು ಇಲ್ಲಿ ಕರೆ ನೀಡಿದರು.

ಇಲ್ಲಿ ನಡೆದ ಮಾರಾಟ ತೆರಿಗೆಗೆ ಸಂಬಂಧಿಸಿದ ರಾಜ್ಯ ಮುಖ್ಯಮಂತ್ರಿಗಳ ಮತ್ತು ಹಣಕಾಸು ಸಚಿವರ ಸಮ್ಮೇಳನದಲ್ಲಿ ಅವರು ಮಾತನಾಡುತ್ತಿದ್ದರು.

'ವ್ಯಾಪಾರ ವಿಮುಖತೆ ತಪ್ಪಿಸಲು ಮತ್ತು ಸ್ಥಳೀಯ ಉತ್ಪನ್ನಗಳಿಗೆ ನೆರವಾಗಲು ಕಾಫಿ ಹಾಗೂ ರೇಷ್ಮೆಯೂ ಸೇರಿದಂತೆ ಕೃಷಿ ಉತ್ಪನ್ನಗಳ ಮೇಲಿನ ಕನಿಷ್ಠ ತೆರಿಗೆಯಲ್ಲಿ ಏಕರೂಪತೆ ಸಾಧಿಸುವುದು ಅಗತ್ಯ' ಎಂದು ಕೃಷ್ಣ ಅಭಿಪ್ರಾಯಪಟ್ಟರು.

• 'ಅರಳೂರು ಹಳ್ಳಿಗರ ಮೇಲೆ ಸೈನಿಕರಿಂದ ಹಲ್ಲೆ'

ಬೆಂಗಳೂರು, ಜೂನ್ 22– ನಗರ ಹೊರವಲಯದಲ್ಲಿರುವ ಅರಳೂರು ಗ್ರಾಮಕ್ಕೆ ನುಗ್ಗಿದ ಎಎಸ್‌ಪಿ ಮಿಲಿಟರಿ ತರಬೇತಿ ಕೇಂದ್ರದ ಯೋಧರು, ಗ್ರಾಮಸ್ಥರ ಮೇಲೆ ಹಲ್ಲೆ ಮಾಡಿದರೆನ್ನಲಾದ ಘಟನೆ ಇಂದು ಇಲ್ಲಿ ನಡೆದಿದೆ.

ಬೆಳಿಗ್ಗೆ ಎಂಟು ಗಂಟೆಗೆ ನಡೆದಿರುವ ಈ ಘಟನೆಯಲ್ಲಿ 14 ಮಂದಿ ಗ್ರಾಮಸ್ಥರು ಹಾಗೂ ಇಬ್ಬರು ಮಿಲಿಟರಿ ಗಾರ್ಡ್‌ಗಳು ಗಾಯಗೊಂಡಿದ್ದು, ಅವರ ಪೈಕಿ ಮೂವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

75 ವರ್ಷಗಳ ಹಿಂದೆ

ಶುಕ್ರವಾರ, 23-6-1950

• ಬರ್ಮಾ– ಭಾರತ ಸಾಮರಸ್ಯ ಸಾಧಕರಾಗಿ

ರಂಗೂನ್, ಜೂನ್ 22– ಭಾರತದ ಪ್ರಧಾನಿ ಪಂಡಿತ ಜವಾಹರಲಾಲ್ ನೆಹರೂ ಈ ದಿನ ಬರ್ಮಾದಲ್ಲಿ ಇರುವ ಭಾರತೀಯರನ್ನು ಉದ್ದೇಶಿಸಿ ಮಾತನಾಡುತ್ತ, 'ನೀವುಗಳು ಭಾರತದ ರಾಯಭಾರಿಗಳಂತೆ ವರ್ತಿಸಿ, ಉಭಯ ದೇಶಗಳ ಸಾಮರಸ್ಯ ಹೆಚ್ಚುವಂತೆ ಮಾಡಬೇಕು' ಎಂದು ಹೇಳಿದರು.

ಅರ್ಧಕಾಲ ಹಿಂದಿಯಲ್ಲೂ, ಅರ್ಧಕಾಲ ಇಂಗ್ಲಿಷ್‌ನಲ್ಲೂ ಭಾಷಣ ಮಾಡಿದ ನೆಹರೂ, ಸ್ವಾತಂತ್ರ್ಯ ತನ್ನ ಜೊತೆಯಲ್ಲಿ ಹೊತ್ತು ತಂದಿರುವ ಜವಾಬ್ದಾರಿಗಳ ಅರಿವು ಮಾಡಿಕೊಳ್ಳಬೇಕೆಂದು ಜನತೆಗೆ ಒತ್ತು ಹೇಳುತ್ತ, ಹೊಸದಾಗಿ ಸ್ವಾತಂತ್ರ್ಯಗಳಿಸಿಕೊಂಡಿರುವ ರಾಷ್ಟ್ರಗಳಲ್ಲಿ ಸಂಪೂರ್ಣ ಐಕಮತ್ಯ ಅಗತ್ಯ ಎಂದರು.

• ಮುಂಬೈಯಲ್ಲಿ ಬಂದರು ಕಾರ್ಮಿಕರ ಮುಷ್ಕರ

ಮುಂಬೈ, ಜೂನ್ 22– ಬೋನಸ್ ಪ್ರಶ್ನೆಯನ್ನು ಕುರಿತ ಸಂಭಾಷಣೆ ಫಲಪ್ರದವಾಗದ್ದರಿಂದ ಮುಂಬೈ ಬಂದರು ಕಟ್ಟೆ ಕೆಲಸಗಾರರ ಸಂಘದ ಆರು ಸಹಸ್ರ ಮಂದಿ ಸದಸ್ಯರು ನಾಳೆಯಿಂದ ಅನಿಶ್ಚಿತಾವಧಿಯವರೆಗೆ ಮುಷ್ಕರ ಹೂಡಬೇಕೆಂದು ಈ ದಿನ ನಿರ್ಧರಿಸಿದರು.

ಅಧಿಕಾರೇತರ ರೀತಿಯಲ್ಲಿ ಮುಷ್ಕರದ ವಿಚಾರ ಗೊತ್ತಾದ್ದರಿಂದ ಶಸ್ತ್ರಸಜ್ಜಿತ ಪೊಲೀಸ್ ಪಡೆಗಳು, 4 ಮೈಲಿ ಉದ್ದದ ಮುಂಬೈ ಜಲತಟದ ಮುಖ್ಯ ಸ್ಥಳಗಳಲ್ಲೂ ಪಹರೆ ನಿಂತರು.

ಬೆಂಕಿಯೊಡನೆ ಸರಸದ 'ದೇಶ–ಕಾಲ'

ವಿಶ್ಲೇಷಣೆ

ಸಬಿತಾ ಬನ್ನಾಡಿ

ರಾಜಕೀಯ ಮಹತ್ವಾಕಾಂಕ್ಷೆ ಇರುವ ಧಾರ್ಮಿಕ ಮುಖಂಡನೊಬ್ಬನಿಗೆ, ತನ್ನ ಧರ್ಮದ ಅನಾಥನೊಬ್ಬನ ಹೆಣವನ್ನು ಬೇರೆ ಧರ್ಮದವರ ಸ್ಮಶಾನದಲ್ಲಿ ಹೂಳಲಾಗಿದೆ ಎನ್ನುವ ಸುದ್ದಿ ಮುಟ್ಟುತ್ತದೆ. ಹಲವು ಗೋಜಲುಗಳಲ್ಲಿ ಸಿಲುಕಿದ್ದ ಅವನಿಗೆ ಅದೊಂದು ಸುವರ್ಣಾವಕಾಶವೆನಿಸುತ್ತದೆ. ಇದನ್ನು ಧಾರ್ಮಿಕ ವಿಷಯವಾಗಿಸಿ, ತಾನು ಧರ್ಮ ರಕ್ಷಕನೆಂದು ಬಿಂಬಿಸಿಕೊಂಡು ಮೇಲೇರಬೇಕು ಎಂದು ಯೋಜನೆ ಹಾಕುತ್ತಾನೆ.

ಇಷ್ಟಾದರೂ, ಎದುರಿನ ಧರ್ಮದ ನಾಯಕ ತನ್ನ ಲೆಕ್ಕಾಚಾರದಂತೆ ಹೆಚ್ಚು ಗಲಾಟೆ ಮಾಡದ ಬಗ್ಗೆ ಇವನಿಗೆ ಬೇಸರ ಇದೆ! ಸುದ್ದಿ ಪ್ರಕಾರ ಸತ್ತವನು ಮಹಾನ್ ಕುಡುಕ, ಮೋಸಗಾರ. ಬದುಕಿದ್ದಾಗ ಬೆಲೆಯಿರಲಿಲ್ಲ. ಆದರೇನು? ಅವನ ಹೆಣಕ್ಕೆ ಬಹಳ ಬೆಲೆ! ಈಗ ಅವನ ಹೆಣ ಎತ್ತಿಸಿ ಖಬರಸ್ಥಾನದಲ್ಲಿ ಧಾರ್ಮಿಕ ಆಚರಣೆಯೊಂದಿಗೆ ಪುನಃ ಮಣ್ಣು ಮಾಡಿದರೆ ಆ ಅನಾಥನಿಗೂ, ಅವನು ಹುಟ್ಟಿದ ಧರ್ಮಕ್ಕೂ ನ್ಯಾಯ ದೊರೆತಂತೆ ಎಂದು ಎಲ್ಲರೂ ಭಾವಿಸುತ್ತಾರೆ. ನಾಯಕ ತಮ್ಮ ಕಷ್ಟ ಪರಿಹರಿಸದಿದ್ದರೂ ಪರವಾಗಿಲ್ಲ, ಧರ್ಮಕ್ಕಾಗಿ ಸೆಣಸುತ್ತಿದ್ದಾನಲ್ಲ ಎಂದು ಆದರಿಸುವ ಜನಬೆಂಬಲ ಹುಟ್ಟಿಕೊಂಡಿತು. ಹೀಗಿರುವಾಗ ಒಂದು ಹೆಣಕ್ಕೆ ಎಷ್ಟು ಹಣ ಬೀಳುತ್ತಿತ್ತೋ ಏನೋ.

ತಮಾಷೆಯೆಂದರೆ, ಸಮಾಧಿಯಿಂದ ಹೊರತೆಗೆದ ಕೊಳೆತು ನಾರುತ್ತಿದ್ದ ಹೆಣದ ಮೆರವಣಿಗೆ ಹೋಗುತ್ತಿರುವಾಗಲೇ ಓಣಿಯ ತುದಿಯಲ್ಲಿ ಒಂದು ದೃಶ್ಯ ಎಲ್ಲರನ್ನೂ ಚಕಿತಗೊಳಿಸುತ್ತದೆ. ಸತ್ತಿದ್ದ ಎಂದು ತಿಳಿದಿದ್ದ ಕುಡುಕ ಸತ್ತಿಲ್ಲ. ಕುಡಿದು ಮತ್ತನಾಗಿದ್ದ ಅವನು ಪ್ರತ್ಯಕ್ಷನಾಗಿ ಅಷ್ಟೇ ವೇಗದಲ್ಲಿ ಮರೆಯಾಗಿಬಿಟ್ಟ. ಕೊಳೆತ ಹೆಣ ಯಾರದ್ದೋ? ಸದ್ಯ, ಯಾರದ್ದೋ ರಾಜಕೀಯದಿಂದ ಇನ್ಯಾರದೋ ಒಂದಿಷ್ಟು ಹೆಣ ಬೀಳುವುದು ತಪ್ಪಿತು.

ಇದು ಸಾಹಿತಿ ಬಾನು ಮುಷ್ತಾಕ್ ಅವರ 'ಬೆಂಕಿ ಮಳೆ' ಕತೆಯೊಳಗಿನ ಒಂದು ಆಯಾಮ. ಇಂತಹ ವ್ಯಂಗ್ಯಗಳು, ವೈರುಧ್ಯಗಳು ಅಂತರರಾಷ್ಟ್ರೀಯ ಮಟ್ಟದಲ್ಲೂ ನಡೆಯುತ್ತಿರುತ್ತವೆ. ತಮಗೆ ಬೇಕಾದಂತೆ ಕತೆ ಕಟ್ಟಿ ಜನರನ್ನು ನಂಬಿಸುವ, ಅನುಯಾಯಿಗಳನ್ನು ಸೃಷ್ಟಿಸುವ, ಯುದ್ಧದ ಹೆಸರಿನಲ್ಲಿ ಮಾರಣಹೋಮ ನಡೆಸುವ ದುರಂತಗಳು ಕಣ್ಮುಂದೆ ಇವೆ.

'ಆಸ್ಪತ್ರೆಯೆಂದೂ ನೋಡದೆ ಇರಾನ್ ಬಾಂಬ್ ದಾಳಿ ನಡೆಸುತ್ತಿದೆ' ಎಂದು ಇಸ್ರೇಲ್ ಹೇಳುತ್ತದೆ. ಗಾಜಾದಲ್ಲಿ ಹಗಲು ರಾತ್ರಿಯೆನ್ನದೆ ಶಾಲೆ, ಆಸ್ಪತ್ರೆ, ನಿರಾಶ್ರಿತರ ಟೆಂಟ್, ಮನೆಗಳ ಮೇಲೆ ಬಾಂಬ್ ದಾಳಿ ಮಾಡಿ ಹೆಂಗಸರು, ಮಕ್ಕಳೆಂಬ ಭೇದವಿಲ್ಲದೆ ನರಮೇಧ ಮಾಡುತ್ತಿರುವುದಲ್ಲದೆ, ಅವರಿಗೆ ಆಹಾರ, ಔಷಧವೂ ಸಿಗದಂತೆ ನಿರ್ಬಂಧ ಹೇರಿ ಕೊಲ್ಲುತ್ತಿರುವ ಇಸ್ರೇಲ್ ಯಾವ ಬಾಯಲ್ಲಿ ಈ ಮಾತು ಹೇಳುತ್ತಿದೆಯಪ್ಪಾ ಎಂದು ಆಶ್ಚರ್ಯ ಆಗುತ್ತದೆ. ಸ್ವತಃ ತಾನು ಪರಮಾಣು ಶಸ್ತ್ರಾಸ್ತ್ರ ಹೊಂದಿದ್ದರೂ ಇರಾನ್ ಮೊದಲಾದವು ಅದನ್ನು ಇರಿಸಿಕೊಂಡಿವೆ, ರೂಪಿಸುತ್ತಿವೆ ಎಂದು ಆರೋಪಿಸುತ್ತಾ ಅಮೆರಿಕ ಮತ್ತದರ ಮಿತ್ರ ರಾಷ್ಟ್ರಗಳು ದಾಳಿ ಮಾಡುತ್ತವೆ. ಸದಾ ಮಾನವ ಹಕ್ಕುಗಳ ಬಗ್ಗೆ ಮಾತಾಡುವ ಈ ದೇಶಗಳು ಪ್ಯಾಲೆಸ್ಟೀನ್ ಮಕ್ಕಳ ಸಾವಿನ ವಿಚಾರಕ್ಕೆ ಬಾಯಿಗೆ ಬೀಗ ಜಡಿದುಕೊಳ್ಳುತ್ತವೆ.

'ಕದನ ವಿರಾಮಕ್ಕೆ ಒತ್ತಾಯಿಸುತ್ತೇವೆ' ಎನ್ನುತ್ತಲೇ ಅಂದು ಬೈಡನ್, ಇಂದು ಟ್ರಂಪ್ ಮಾರಣಾಂತಿಕ ಶಸ್ತ್ರಾಸ್ತ್ರಗಳನ್ನು ಇಸ್ರೇಲ್‌ಗೆ ಕಳಿಸಿ ಕೊಟ್ಟಿದ್ದಾರೆ. 'ಭಯೋತ್ಪಾದನೆಯ ವಿರುದ್ಧ ನಾವಿದ್ದೇವೆ' ಎನ್ನುವ ಅಮೆರಿಕ, ಭಾರತದಲ್ಲಿ ಭಯೋತ್ಪಾದನೆಗೆ ಕುಮ್ಮಕ್ಕು ನೀಡುವ ಪಾಕಿಸ್ತಾನವನ್ನು ತನ್ನ ಗೆಳೆಯ ಎನ್ನುತ್ತದೆ ಹಾಗೂ ಪಾಕಿಸ್ತಾನಕ್ಕೆ ಹಣಕಾಸು ನೆರವು ನೀಡಲು ತುದಿಗಾಲಲ್ಲಿ ನಿಲ್ಲುತ್ತದೆ.

ಅಮೆರಿಕದ ಇಬ್ಬಗೆ ನೀತಿ ನೋಡಿಯೂ ಯುರೋಪ್‌ಯೇತರ ದೇಶಗಳಲ್ಲಿ ಒಮ್ಮತದ ನಿಲುವು ಮೂಡದಿರುವುದು ಅಚ್ಚರಿಯ ಸಂಗತಿ. ಹೀಗೆ ಒಮ್ಮತ ಮೂಡದಂತೆ ಮಾಡಲು ವಸಾಹತುಗೊಂಡ ಮನಸ್ಸುಗಳನ್ನು ಇವು ಪಳಗಿಸಿಬಿಟ್ಟಿವೆ. ಆ ಮೂಲಕ ತಮ್ಮ ಯಜಮಾನಿಕೆಯನ್ನು ಮತ್ತು ಆರ್ಥಿಕ ಹಿಡಿತವನ್ನು ನಿರಂತರಗೊಳಿಸಿಕೊಂಡಿವೆ. ತಾವು ಎಂದೆಂದಿಗೂ ಯಜಮಾನರಾಗಿರಬೇಕು ಮತ್ತು ಉಳಿದವರೆಲ್ಲ ತಮ್ಮ ಇಶಾರೆಗೆ ತಕ್ಕಂತೆ ಕುಣಿಯಬೇಕು; ಹಾಗೆ ಕುಣಿಯದವರನ್ನು ಸರ್ವನಾಶ ಮಾಡಬೇಕು ಎಂಬುದರ ಬಗೆಗೆ ಅವರಿಗೆ ಯಾವ ಅನುಮಾನವೂ ಇಲ್ಲ.

ಎರಡನೆಯ ಮಹಾಯುದ್ಧಕ್ಕೂ ಮೊದಲು ಸಾಮ್ರಾಜ್ಯಶಾಹಿ ಇತ್ತು, ಈಗ ಇರುವುದು 'ಮಹಾ ಸಾಮ್ರಾಜ್ಯಶಾಹಿ' ಎಂದು ಇತಿಹಾಸಕಾರ ಹಾಗೂ ಪತ್ರಕರ್ತ ವಿಜಯ ಪ್ರಸಾದ್ ಹೇಳುತ್ತಾರೆ.

ತಮ್ಮೊಳಗಿನ ಕೆಲವು ತಕರಾರುಗಳನ್ನು ಗೌಣಗೊಳಿಸಿಕೊಂಡು 'ಜಿ 7' ದೇಶಗಳು ಮಿಲಿಟರಿ, ಇಂಟೆಲಿಜೆನ್ಸ್ ಯೋಜನೆಗಳನ್ನು ಒಟ್ಟಾಗಿ ರೂಪಿಸಿಕೊಂಡು ಕೆಲಸ ಮಾಡುತ್ತಿವೆ. 'ಗ್ಲೋಬಲ್ ನಾರ್ತ್' ಎಂದು ಕರೆಸಿಕೊಳ್ಳುವ ಈ ದೇಶಗಳು ಜಾಗತಿಕ ಮಿಲಿಟರಿ ಖರ್ಚಿನಲ್ಲಿ ಶೇ 74ರಷ್ಟು ಪಾಲು ಹೊಂದಿವೆ. ಮೂಲತಃ ರೇಸಿಸ್ಟ್ ಆಗಿರುವುದೇ ಇವುಗಳೊಳಗಿನ ಬಾಂಧವ್ಯದ ಸೂತ್ರವಾಗಿದ್ದು, ಇವುಗಳು ಅಂತರರಾಷ್ಟ್ರೀಯವಾಗಿ ಮಾನವಕುಲವನ್ನು ವಿಭಜನೆ ಮಾಡಿವೆ ಎಂದು ವಿಜಯ ಅವರು ಹೇಳುತ್ತಾರೆ.

> ಹಿಂದೊಮ್ಮೆ ತಾನು ಬೆಂಬಲಿಸಿದ 'ಹಮಾಸ್' ವಿರುದ್ಧ ಈಗ ತಿರುಗಿಬಿದ್ದಿರುವ ಇಸ್ರೇಲ್ ತನ್ನ ಯುದ್ಧಕೋರ ಮನೋಭಾವ ಪ್ರದರ್ಶಿಸುತ್ತಿದೆ. ಶಾಂತಿ, ಸೌಹಾರ್ದವನ್ನು ಬಯಸುವ ಯಾವ ಸಮಾಜವೂ ಇಸ್ರೇಲ್‌ನಂತೆ 'ಮಿಲಿಟರಿ ಸಮಾಜ' ಆಗಬಾರದು.

ಬಿಳಿ ಶ್ರೇಷ್ಠತೆಯನ್ನು ಈಗಲೂ ನಂಬಿರುವ ಈ ದೇಶಗಳು, ಜಾನ್ ಲಾಕ್ ತನ್ನ 'ಟೂ ಟ್ರೀಟಿಸಸ್ ಆಫ್ ಗವರ್ನಮೆಂಟ್' ಕೃತಿಯಲ್ಲಿ ಹೇಳುವ, 'ದೇವರು ಮನುಷ್ಯರಿಗೆ ಪ್ರಕೃತಿಯನ್ನು ಅಭಿವೃದ್ಧಿಪಡಿಸಲು ನೀಡಿರುತ್ತಾನೆ. ಅಭಿವೃದ್ಧಿಪಡಿಸಿದವರಿಗೆ ಮಾತ್ರ ಅದರಲ್ಲಿ ಹಕ್ಕಿದೆ. ಮತ್ತು ಅಭಿವೃದ್ಧಿ ಮಾಡದವರನ್ನು ಅಲ್ಲಿಂದ ಕಿತ್ತುಹಾಕಿ ತಾವು ಅದನ್ನು ವಶಪಡಿಸಿಕೊಳ್ಳಬೇಕು' ಎಂಬ ಮಾತನ್ನು ಅನುಸರಿಸುತ್ತಿದ್ದಾರೆ. ಇದಕ್ಕಾಗಿ ಅವರು ತಮ್ಮನ್ನು ಬಿಟ್ಟು ಉಳಿದವರೆಲ್ಲ ಅನಾಗರಿಕರು ಎನ್ನುತ್ತಾ, ಅವರ ಸ್ಥಳೀಯ ಜ್ಞಾನ ಹಾಗೂ ಜೀವನಕ್ರಮಗಳನ್ನು ಅಮಾನ್ಯಗೊಳಿಸುವ ತಂತ್ರವನ್ನು ಹೆಣೆಯುತ್ತಲೇ ಬಂದಿದ್ದಾರೆ.

ಪ್ಯಾಲೆಸ್ಟೀನ್ ಬಹಳ ಹಿಂದಿನಿಂದಲೂ ಶ್ರೀಮಂತ ಸಂಸ್ಕೃತಿ ಮತ್ತು ಅಭಿವೃದ್ಧಿ ಹೊಂದಿದ ದೇಶವಾಗಿತ್ತು. ಅದನ್ನು ಮರೆಮಾಚಿ, ಅದೊಂದು ರೆಫ್ಯೂಜಿ ಕ್ಯಾಂಪ್ ಎಂಬಂತೆ ಲೋಕಕ್ಕೆ ಬಿಂಬಿಸಲಾಗಿದೆ. ಅಲ್ಲಿನ ಸುಂದರ ಬೀಚ್ ನಗರದಲ್ಲಿನ ಆರ್ಟ್ ಗ್ಯಾಲರಿಗಳನ್ನು ನಾಶ ಮಾಡಿರುವ ಇಸ್ರೇಲ್, ಈಗ ತನಗಾಗಿ ಮಲ್ಟಿನ್ಯಾಷನಲ್ ಹೋಟೆಲ್ ಚೈನ್, ರೆಸಾರ್ಟ್ ಮಾಡಲು ಬಯಸುತ್ತದೆ ಮತ್ತು ಅದನ್ನು ಅಭಿವೃದ್ಧಿ ಎಂದು ಟ್ರಂಪ್ ನಿರ್ಲಜ್ಜೆಯಿಂದ ಟ್ವೀಟ್ ಮಾಡುತ್ತಾರೆ. ಉಳಿದ ಎಲ್ಲರ ಸಂಸ್ಕೃತಿ ಮತ್ತು ಪ್ರತಿರೋಧವನ್ನು ತಮಗೆ ಒಡ್ಡಿದ ಸವಾಲು ಎಂದು ಭಾವಿಸುವ ಈ 'ಗ್ಲೋಬಲ್ ನಾರ್ತ್', ಇಸ್ರೇಲ್ ಅನ್ನು ಅರಬ್ ನಾಡಿನ ನಡುವೆ ಇರುವ ಬಿಳಿಯರ ಪಟ್ಟಣ ಎಂದು ಭಾವಿಸುವುದೇ ಅವರ ವಿಶೇಷ ಪ್ರೀತಿಗೆ ಕಾರಣ ಎಂದು ವಿಜಯ ಪ್ರಸಾದ್ ವಿಶ್ಲೇಷಿಸುತ್ತಾರೆ.

ಗಾಜಾದಲ್ಲಿ ಸೇವೆ ಸಲ್ಲಿಸಿರುವ ಅಮೆರಿಕದ ಡಾ.ಫಿರೋಜ್ ಸಿದ್ವ ಅವರ ಅನುಭವದ ಮಾತುಗಳು ಹೀಗಿವೆ: 'ಅವರ ಜೀವ ಉಳಿಸುವುದಕ್ಕೆ ಹೋರಾಡುವುದಕ್ಕಿಂತಲೂ ಮಿಗಿಲಾಗಿ ಅವರಿಗೊಂದು ತುಂಡು ಬ್ರೆಡ್ ಒದಗಿಸಬಹುದೇ ಎಂದು ನಾವು ಹೋರಾಡುತ್ತಿದ್ದೆವು. ಅವರು ಹಸಿದ ಹೊಟ್ಟೆಯಲ್ಲಿ ಸಾಯದಿರಲಿ ಎನ್ನುವುದು ನಮ್ಮ ಉದ್ದೇಶವಾಗಿತ್ತು. ನಮ್ಮವರನ್ನು ಕಳೆದುಕೊಂಡು ನಾವ್ಯಾಕೆ ಬದುಕಿದ್ದೇವೆ ಎಂದು ಪ್ರಶ್ನಿಸುವ ಐದಾರು ವರ್ಷದ ಮಕ್ಕಳು, ರಾತ್ರಿಯ ಬಾಂಬ್ ದಾಳಿಗೆ ತುತ್ತಾಗಿ ಸಾಯುವ ಮೊದಲು ಕೊನೆಯಪಕ್ಷ ಅರೆಹೊಟ್ಟೆಯನ್ನಾದರೂ ತುಂಬಿಸಿಕೊಂಡಿರಲಿ ಎಂದು ಒದ್ದಾಡುತ್ತಿದ್ದೆವು. ಡಾಕ್ಟರ್‌ಗಳಾಗಿ ಅಲ್ಲಿ ಸೇವೆ ಸಲ್ಲಿಸಲು ಹೋಗಿದ್ದೆವು. ಅಲ್ಲಿ ಜೀವರಕ್ಷಕ ಔಷಧ, ರಕ್ತ, ವಿದ್ಯುತ್, ಅತ್ಯಂತ ಪ್ರಾಥಮಿಕ ಸವಲತ್ತುಗಳು... ಜಗತ್ತಿನ ಅತಿ ಬಡ ದೇಶದಲ್ಲಿಯೂ ಸಿಗಬಹುದಾದ ಈ ಯಾವ ಸೌಲಭ್ಯಗಳೂ ಅಲ್ಲಿರಲಿಲ್ಲ'.

'ಅಲ್ಲಿನ ವೈದ್ಯಕೀಯ ವ್ಯವಸ್ಥೆಯೇನೂ ಸೋತು ಕೈಚೆಲ್ಲಿರಲಿಲ್ಲ; ಅದನ್ನು ವ್ಯವಸ್ಥಿತವಾಗಿ ಒಡೆದು ಹಾಕಲಾಗಿತ್ತು. ಅಲ್ಲಿನ ಡಾಕ್ಟರ್‌ಗಳನ್ನು ಬಂಧಿಸಿ ಹಿಂಸಿಸಲಾಗುತ್ತಿತ್ತು. ಗೊತ್ತಿದ್ದೇ ಎಲ್ಲ ಅಂತರ ರಾಷ್ಟ್ರೀಯ ಕಾನೂನುಗಳನ್ನು ಗಾಳಿಗೆ ತೂರಲಾಗಿತ್ತು. ಆರು ತಿಂಗಳ ಹಸುಗೂಸಿನಿಂದ ಹಿಡಿದು ಹನ್ನೆರಡು ವರ್ಷಗಳೊಳಗಿನ ಹದಿನೆಂಟು ಸಾವಿರ ಮಕ್ಕಳನ್ನು ಕೆಲವೇ ತಿಂಗಳುಗಳ ಅಂತರದಲ್ಲಿ ಕೊಲ್ಲಲಾಗಿದೆ. ಅವರ ಶಾಲೆ, ಆಸ್ಪತ್ರೆ, ಮನೆ, ಆಶ್ರಯತಾಣ ಎಲ್ಲದರ ಮೇಲೆ ಬಾಂಬ್ ದಾಳಿ ಆಗಿದೆ. ಆರು ವರ್ಷದ ಹುಡುಗಿ ಆ ಬೆಂಕಿ ಮಳೆಯಿಂದ ತಪ್ಪಿಸಿಕೊಂಡು ಓಡುವುದನ್ನು, ಒಂದೇ ಬೆಳಗಿನಲ್ಲಿ ಇನ್ನೂರಕ್ಕೂ ಹೆಚ್ಚು ಹೆಂಗಸರು, ಮಕ್ಕಳು ಮಾನಸಿಕ ಆಘಾತಕ್ಕೆ ಒಳಗಾಗಿ ಆಸ್ಪತ್ರೆಗೆ ನುಗ್ಗುವುದನ್ನು ನೋಡಿಯೂ ನಾನು ಏನನ್ನೂ ನೋಡಿಲ್ಲ ಎಂದು ನಟಿಸಲಾರೆ...' ಫಿರೋಜ್ ಅವರ ಈ ಮಾತುಗಳನ್ನು ಕೇಳುತ್ತಾ ಕೇಳುತ್ತಾ ವಿಶ್ವಸಂಸ್ಥೆಯ ಸಭೆಯೊಂದರ ನಿರ್ವಹಣೆ ಮಾಡುತ್ತಿದ್ದ ವ್ಯಕ್ತಿಗೆ ದುಃಖ ತಡೆದುಕೊಳ್ಳಲಾಗದೆ ಬಿಕ್ಕಿ ಬಿಕ್ಕಿ ಅತ್ತಿದ್ದರು.

ಯಾವ ದೇಶವಾದರೇನು? ಸತ್ತವರು ಯಾವ ಧರ್ಮದವರಾದರೇನು? ಪ್ರತ್ಯಕ್ಷ ನರಮೇಧಕ್ಕೆ ಯಾವ ಸಮರ್ಥನೆಯಾದರೂ ಇದೆಯೇ?

ಪ್ಯಾಲೆಸ್ಟೀನ್‌ನಲ್ಲಿ ನಡೆಯುತ್ತಿರುವ ನರಮೇಧವನ್ನು ವಿರೋಧಿಸುವ ಭಾರತೀಯರನ್ನು ಉಗ್ರವಾಗಿ ಟೀಕಿಸುವ, ಟ್ರೋಲ್ ಮಾಡುವ ದೊಡ್ಡ ಪಡೆಯೊಂದು ಜನಸಾಮಾನ್ಯರಲ್ಲಿ ಇದೆ. ಪ್ಯಾಲೆಸ್ಟೀನ್ ನರಮೇಧದ ಬಗ್ಗೆ ಮಾತನಾಡಿದ ಕೂಡಲೇ ಅವರು, ಅಕ್ಟೋಬರ್ 23ರ ಹಮಾಸ್ ದಾಳಿಯನ್ನು ನೆನಪಿಸುತ್ತಾರೆ. ಹೀಗೆ ವಿತಂಡವಾದ ಮಾಡುವವರು, 1948ರಿಂದ ಪ್ಯಾಲೆಸ್ಟೀನ್ ಭೂಪ್ರದೇಶವನ್ನು ಇಸ್ರೇಲ್ ಒತ್ತುವರಿ ಮಾಡುತ್ತಿರುವುದು ಹಾಗೂ ಇಸ್ರೇಲ್ ದಾಳಿಗಳ ಪರಿಣಾಮವಾಗಿ 1980ರಲ್ಲಿ ಹಮಾಸ್‌ನಂತಹ ಉಗ್ರಗಾಮಿ ಸಂಘಟನೆಗಳು ಹುಟ್ಟಿದ್ದನ್ನು ಮರೆಯುತ್ತಾರೆ.

ಯಾಸೆರ್ ಅರಾಫತ್ ಎಂಬ ಶಾಂತಿದೂತ ನಾಯಕನ ಜನಪ್ರಿಯತೆಯ ವಿರುದ್ಧ ಇದೇ ಇಸ್ರೇಲ್, ಹಮಾಸ್ ಅನ್ನು ಬೆಂಬಲಿಸಿತು. ನಂತರ ಅದು ಪ್ರಬಲವಾಗಿ ಬೆಳೆದು 2005ರಲ್ಲಿ ಚುನಾವಣೆ ಗೆದ್ದಿತು. ಅಲ್ಲಿಂದ 2022ರ ತನಕ ಬಿಡದೆ ಇಸ್ರೇಲ್ ಪ್ಯಾಲೆಸ್ಟೀನ್ ಮೇಲೆ ದಾಳಿ ಮಾಡುತ್ತಲೇ ಬಂದಿದೆ. ಆದರೆ, 2023ರಲ್ಲಿ ಹಮಾಸ್ ಮಾಡಿದ ದಾಳಿಯನ್ನೇ ನೆಪವಾಗಿಸಿಕೊಂಡು ಇಸ್ರೇಲ್ ಈಗ ನರಮೇಧ ನಡೆಸುತ್ತಿದೆ. ಜಾಗತಿಕ ಬೆಂಬಲದಿಂದ ಕೊಬ್ಬಿ ಇರಾನ್ ಮೇಲೂ ದಾಳಿ ನಡೆಸಿದೆ. ಭವಿಷ್ಯ ಏನೋ ತಿಳಿದಿಲ್ಲ. ಆದರೆ ಸುಡುವುದು ಬೆಂಕಿಯ ಗುಣ. ಆ ಬೆಂಕಿ ಇಂದು ಇಸ್ರೇಲನ್ನೂ ಬಿಡುತ್ತಿಲ್ಲ.

ಯಾವುದೇ ಸಮಾಜ ಸಾಂಸ್ಕೃತಿಕ ಸಮಾಜವಾಗಿ, ಸಹಬಾಳ್ವೆ, ಸೌಹಾರ್ದದ ಸಮಾಜವಾಗಿ ರೂಪುಗೊಳ್ಳುವುದೊಂದೇ ಇವುಗಳಿಗೆಲ್ಲ ಪರಿಹಾರ. ಯಾವ ಸಮಾಜವೂ ಇಸ್ರೇಲ್‌ನಂತೆ ಮಿಲಿಟರಿ ಸಮಾಜ ಆಗಬಾರದು.

ವಾಚಕರ ವಾಣಿ

ಶಿಕ್ಷಕರ ನೇಮಕಾತಿಗೆ ವಿಳಂಬ ಸಲ್ಲ

ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 60 ಸಾವಿರಕ್ಕೂ ಹೆಚ್ಚು ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಅವು ಕಾಲಕಾಲಕ್ಕೆ ಭರ್ತಿ ಆಗುತ್ತಿಲ್ಲ. ಇದು ಬಡಮಕ್ಕಳ ಶಿಕ್ಷಣದ ಬಗ್ಗೆ ಸರ್ಕಾರ ತಳೆದಿರುವ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ. ಪೂರ್ಣಾವಧಿ ಶಿಕ್ಷಕರಿಗೆ ನೀಡುವ ಸಂಬಳದಲ್ಲಿ ಐವರು ಅತಿಥಿ ಶಿಕ್ಷಕರು ಕಾರ್ಯ ನಿರ್ವಹಿಸುತ್ತಾರೆ ಎಂಬುದು ಸರ್ಕಾರದ ಧೋರಣೆಯಾಗಿರಬಹುದು.

ರಾಜ್ಯದಲ್ಲಿ ಡಿ.ಇಡಿ ಮತ್ತು ಬಿ.ಇಡಿ ಓದಿರುವ ಲಕ್ಷಾಂತರ ಮಂದಿ ನಿರುದ್ಯೋಗಿಗಳಾಗಿದ್ದಾರೆ. ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳುವ ಪರಿಪಾಟ ಮುಂದುವರಿದರೆ, ಸರ್ಕಾರಿ ಶಾಲೆಗಳು ಉಳಿಯುವುದೇ ಕಷ್ಟಕರ. ಶಿಕ್ಷಕರ ನೇಮಕಕ್ಕೆ ಗಮನ ಹರಿಸಬೇಕಿದೆ.

ಲಕ್ಷ್ಮೀಕಾಂತ ತುಕ್ಕನ್ನವರ, ಬೆಳಗಾವಿ

ಕುಸ್ತಿಪಟುಗಳಿಗೆ ಭತ್ಯೆ ಬೇಡವೇ?

ರಾಷ್ಟ್ರೀಯ ಶಿಬಿರದಲ್ಲಿರುವ ಹಾಕಿ ಆಟಗಾರರು ಮತ್ತು ಆಟಗಾರ್ತಿಯರಿಗೆ ತಿಂಗಳ ಭತ್ಯೆ ನೀಡಲು ಮುಂದಾಗಿರುವ ಕೇಂದ್ರ ಕ್ರೀಡಾ ಸಚಿವಾಲಯದ ನಿರ್ಧಾರವು ಸ್ವಾಗತಾರ್ಹ (ಪ್ರ.ವಾ., ಜೂನ್ 21). ಈ ಸೌಲಭ್ಯವನ್ನು ಕುಸ್ತಿ ಸೇರಿ ಇತರ ಕ್ರೀಡೆಗಳಿಗೂ ವಿಸ್ತರಿಸಬೇಕಿದೆ.

ಕುಸ್ತಿಯು ಶಕ್ತಿಯುತ ಆಟ. ಪ್ರತಿ ದಿನವೂ ಕುಸ್ತಿ ಆಡುತ್ತಲೇ ಶಕ್ತಿ ಪ್ರದರ್ಶನ ಮಾಡಬೇಕು. ಅದಕ್ಕೆ ತಕ್ಕಂತೆ ಪೌಷ್ಟಿಕ ಆಹಾರದ ಅಗತ್ಯವಿದೆ. ಪೌಷ್ಟಿಕ ಆಹಾರದ ಕೊರತೆಯಿಂದ ಎಷ್ಟೋ ಆಟಗಾರರು ಕುಸ್ತಿ ಆಡುವುದನ್ನೇ ನಿಲ್ಲಿಸಿದ್ದಾರೆ. ಸರ್ಕಾರ ಕ್ರಿಕೆಟ್, ಫುಟ್‌ಬಾಲ್, ಹಾಕಿ ಕ್ರೀಡೆಗೆ ಮಾತ್ರ ಹೆಚ್ಚು ಪ್ರೋತ್ಸಾಹ ನೀಡುತ್ತಿದೆ. ಕುಸ್ತಿಗೂ ಪ್ರಾಧಾನ್ಯ ನೀಡಿದರೆ ಒಲಿಂಪಿಕ್ಸ್‌ನಲ್ಲಿ ಹೆಚ್ಚು ಪದಕಗಳು ಭಾರತದ ಬತ್ತಳಿಕೆ ಸೇರಲಿವೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಸಚಿವರ ಕಾಲಿಗೆ ಎರಗುವುದು ಸರಿಯೇ?

ಹಾಸನದ ಜಿಲ್ಲಾಧಿಕಾರಿ ಲತಾಕುಮಾರಿ ಅವರು, ಸಾರ್ವಜನಿಕವಾಗಿ ಕೇಂದ್ರ ಸಚಿವ ವಿ. ಸೋಮಣ್ಣ ಅವರ ಕಾಲಿಗೆ ನಮಸ್ಕರಿಸಿರುವುದು, ಸಚಿವರನ್ನು ಗುಣಗಾನ ಮಾಡಿರುವುದು ವರದಿಯಾಗಿದೆ. ಸರ್ಕಾರದ ಸೇವಾ ನಿಯಮಗಳಲ್ಲಿ ಈ ಕುರಿತು ಸ್ಪಷ್ಟತೆ ಇಲ್ಲ. ಆದರೆ, ಜಿಲ್ಲೆಯ ಕಾರ್ಯಾಂಗದ ಮುಖ್ಯಸ್ಥರಾದ ಅವರು, ಸಚಿವರ ಕಾಲಿಗೆ ನಮಸ್ಕರಿಸಿರುವುದು ಅವರ ಅಧೀನ ಅಧಿಕಾರಿಗಳ ಮೇಲೆ ಪರಿಣಾಮ ಬೀರಬಹುದಲ್ಲವೆ?

ಲಕ್ಷ್ಮೀಕಾಂತರಾಜು ಎಂ.ಜಿ., ಗುಬ್ಬಿ

ಸುಳ್ಳು ಸುದ್ದಿಗೆ ಶಿಕ್ಷೆ ಸ್ವಾಗತಾರ್ಹ

ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಮತ್ತು ತಪ್ಪು ಮಾಹಿತಿ ಹಂಚಿಕೊಂಡಿದ್ದು ಸಾಬೀತಾದರೆ ಗರಿಷ್ಠ 7 ವರ್ಷ ಜೈಲು ಶಿಕ್ಷೆ ಹಾಗೂ ₹10 ಲಕ್ಷ ದಂಡ ವಿಧಿಸಲು ಅವಕಾಶ ನೀಡುವ ಮಸೂದೆ ರೂಪಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ (ಪ್ರ.ವಾ., ಜೂನ್ 21). ಸಾಮಾಜಿಕ ಜಾಲತಾಣದಂತೆಯೇ ರಾಜಕೀಯ ಪಕ್ಷಗಳ ಜಾಲತಾಣದಲ್ಲಿ ಸುಳ್ಳು ಸುದ್ದಿ ಹಬ್ಬಿಸುವವರಿಗೂ ಜೈಲು- ದಂಡ ವಿಧಿಸುವ ಕಾನೂನು ರೂಪಿಸಬೇಕಿದೆ.

ಪಿ.ಜೆ. ರಾಘವೇಂದ್ರ, ಮೈಸೂರು

ಬೇಕು ಆರ್ಥಿಕ ಸಾಕ್ಷರತೆ

ರಾಜ್ಯ ಸರ್ಕಾರದ ನಿಗಮವೊಂದರ ಸಿಬ್ಬಂದಿಯು ಸಾಲ ಪಡೆದಿದ್ದ ಫಲಾನುಭವಿಯಿಂದ ಸಾಲ ವಸೂಲಾತಿಗಾಗಿ ಬಂದಿದ್ದರು. 'ನಾನು ಹಣ ಕಟ್ಟುವುದಿಲ್ಲ. ಸಾಲ ಮನ್ನಾ ಆಗುತ್ತದೆ. ನಮ್ಮ ಪಕ್ಷದ ಕಾರ್ಯಕರ್ತರು ಹೇಳಿದ್ದಾರೆ' ಎಂದು ಫಲಾನುಭವಿಯು ವಾದಿಸುತ್ತಿದ್ದರು.

'ನೀವು ಕಾರ್ಯಕರ್ತರ ಮಾತು ಕೇಳಿಕೊಂಡು ಹಣ ಕಟ್ಟದಿದ್ದರೆ ಬಡ್ಡಿ ಮೊತ್ತ ಹೆಚ್ಚಾಗುವುದಿಲ್ಲವೆ? ನೀವು ಸಾಲ ಮರುಪಾವತಿ ಮಾಡುವುದರಿಂದ ನಿಮ್ಮಂತೆ ಅಗತ್ಯವಿರುವವರಿಗೆ ನಿಗಮದಿಂದ ಮತ್ತಷ್ಟು ನೆರವು ಸಿಗಲಿದೆ' ಎಂದು ಫಲಾನುಭವಿಗೆ ಸಿಬ್ಬಂದಿ ಮನವರಿಕೆ ಮಾಡಿಕೊಟ್ಟರು. ಬಳಿಕ ಸಾಲ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡರು. ನಿಗಮದ ಸಾಲದಿಂದ ಅನುಕೂಲ ಪಡೆದು ಆರ್ಥಿಕವಾಗಿ ಸಬಲರಾದಾಗಲೂ ಮರುಪಾವತಿ ಮಾಡದೆ ಸತಾಯಿಸುವುದನ್ನು ನೋಡಿದರೆ ಆರ್ಥಿಕ ಸಾಕ್ಷರತೆಯ ಅಗತ್ಯವಿದೆ ಎನಿಸುತ್ತದೆ.

ಭೀಮಾನಂದ ಮೌರ್ಯ, ಮೈಸೂರು

ಮತ್ತೆ ನೆನಪಾದ ಗಾಂಧಿ

ಜಗತ್ತಿನ ಎಲ್ಲಾ ಯುದ್ಧಗಳು ಶಾಂತಿ ಸ್ಥಾಪನೆಯ ನೆಪದಲ್ಲೇ ನಡೆದಿವೆ. ಎಲ್ಲಾ ಹಿಂಸೆಯೂ ಜನರ ಪಾಲಿಗೆ ನೆಮ್ಮದಿ ಸೃಜಿಸುವ ನೆಪದಲ್ಲೇ ಘಟಿಸಿವೆ. ಆಧುನಿಕ ನಾಗರಿಕತೆಯ ನೈತಿಕ ಸಮರ್ಥನೆ ನಿಂತಿರುವುದೇ ಹಿಂಸೆಯ ಮೇಲೆ ಎನ್ನುವುದು ಗಾಂಧೀಜಿಗೆ ಬಹಳ ಹಿಂದೆಯೇ ಅರ್ಥವಾಗಿತ್ತು. ಆ ಕಾರಣಕ್ಕೆ ಸುಸ್ಥಿರ ಬದುಕಿಗೆ ಅಗತ್ಯವೆಂದು ಅವರು ಪ್ರತಿಪಾದಿಸಿದ, 'ಅಹಿಂಸೆ'ಯ ತತ್ವ ಉತ್ತಮ ಜಗತ್ತಿನ ಪಾಲಿಗೆ ಸಾಧನ ಮಾತ್ರವಲ್ಲ ದಾರಿಯೂ ಆಗಿತ್ತು.

ಪ್ರಸ್ತುತ ಜಗತ್ತು ಮೂರನೆಯ ಮಹಾಯುದ್ಧದ ಕಡೆಗೆ ಚಲಿಸುತ್ತಿದೆ ಅನ್ನುವ ಚರ್ಚೆಗಳು ನಡೆಯುತ್ತಿರುವ ಹೊತ್ತಿಗೆ ಗಾಂಧಿ ನೆನಪಾಗುತ್ತಿದ್ದಾರೆ. ಯುದ್ಧೋನ್ಮಾದ ಪ್ರದರ್ಶಿಸುತ್ತಿರುವ ಜಗತ್ತಿನ ನಾಯಕರ ಎದುರಿಗೆ ಭಾರತವು ಗಾಂಧಿಯನ್ನು; ಅವರ ಅಹಿಂಸಾ ತತ್ವವನ್ನು ಮಂಡಿಸಬಲ್ಲದೇ? ಜಗತ್ತು ಸಂದಿಗ್ಧತೆಗೆ ಸಿಲುಕಿದೆ. ಇದರಿಂದ ಪಾರಾಗುವ ಹಾದಿಯನ್ನು ನಮ್ಮ 'ರಾಜಕೀಯ ನಾಯಕತ್ವ'ವು ಗಾಂಧಿಯ ಆಲೋಚನೆಗಳನ್ನು ಆಧರಿಸಿ ಪ್ರತಿಪಾದಿಸಬೇಕಿದೆ.

ಕಿರಣ್ ಎಂ. ಗಾಜನೂರು, ಕಲಬುರಗಿ

ಚುರುಮುರಿ



ಅಂತಿಮ ತೀರ್ಪು

• ಸುಮಂಗಲಾ

ಬೆಕ್ಕಣ್ಣ ಏನೋ ಓದುತ್ತ ಪಕಪಕನೆ ನಕ್ಕಿತು.

'ಮೂವತ್ತು ವರ್ಷದ ಹಿಂದೆ ವಿಲೇಜ್ ಅಕೌಂಟೆಂಟ್ ಒಬ್ಬರು ಬರೇ 500 ರೂಪಾಯಿ ಲಂಚ ತಗಂಡಿದ್ದಕ್ಕೆ ಈಗ ಹಿಡಿದು ಜೈಲಿಗೆ ಹಾಕ್ಯಾರಂತೆ!'

'ಲಂಚಾವತಾರಕ್ಕೆ ಶಿಕ್ಷೆ ಕೊಡೋದಕ್ಕೆ ಮೂವತ್ತು ವರ್ಷ ಬೇಕಾಯಿತಾ!' ಎಂದು ನಾನೂ ಅಚ್ಚರಿಗೊಂಡೆ.

'ಕೊನೆಗೂ ಕೇಸು ತೀರ್ಮಾನ ಆಗಿದ್ದು ಸುಪ್ರೀಂ ಕೋರ್ಟಿನಲ್ಲಿ! ಪಾಪದ ಆ ದೂರುದಾರ ಸತ್ತೇ ಐದು ವರ್ಷ ಆಗ್ಯೆತಂತೆ'.

'ನ್ಯಾಯ ದೇಗುಲದಲ್ಲಿ ತಡವಾದರೂ, ನ್ಯಾಯ ಸಿಕ್ಕೇ ಸಿಗತೈತೆ ಕಣಲೇ' ಎಂದೆ.

'ಜುಜುಬಿ 500 ರೂಪಾಯಿ ಲಂಚ ಪ್ರಕರಣದ ತೀರ್ಪು ಕೊಡಕ್ಕೂ ಸುಪ್ರೀಂ ಕೋರ್ಟ್ ಬೇಕು ಅಂದ್ರೆ ಜಿಲ್ಲಾ ಕೋರ್ಟ್‌ಗಳು, ಹೈಕೋರ್ಟ್‌ಗಳಿಗೆ ಬರೋ ಕೇಸುಗಳ ಗತಿ ಏನು...' ಬೆಕ್ಕಣ್ಣ ರಾಗವೆಳೆಯಿತು.

'ಹಂಗೆಲ್ಲ ಕೋರ್ಟ್ ಬಗ್ಗೆ ಹಗುರಾಗಿ ಮಾತನಾಡಬ್ಯಾಡಲೇ... ನ್ಯಾಯಾಂಗ ನಿಂದನೆಯಾಗತೈತೆ' ಎಂದು ನಾನು ಎಚ್ಚರಿಸಿದೆ.

'ಆ ವಿಚಾರ ಬಿಡೂಣು. 500 ರೂಪಾಯಿ ಲಂಚ ಪ್ರಕರಣದ ತೀರ್ಪು ಬರೋದಕ್ಕೆ ಮೂವತ್ತು ವರ್ಷವಾದರೆ, ಲಕ್ಷಗಟ್ಟಲೆ ರೂಪಾಯಿಯ ಲಂಚ ಪ್ರಕರಣಗಳ ತೀರ್ಮಾನಕ್ಕೆ ಎಷ್ಟು ವರ್ಷಬೇಕಾಗಬೌದು ಲೆಕ್ಕ ಹಾಕು'.

'ಹಂಗೇ ವಿಜಯ್ ಮಲ್ಯ, ನೀರವ್ ಮೋದಿ ಇಂಥ ಹೈಪ್ರೊಫೈಲ್ ವಂಚನೆ ಪ್ರಕರಣಗಳಲ್ಲಿ, ತೀರ್ಪು ಕೊಡಕ್ಕೆ ಎಷ್ಟ್ ವರ್ಷ ಬೇಕಾಗಬೌದು?'

'ನೀ ಬರೇ ನೀರವ್ ಅನ್ನು, ಅವನ ಅಡ್ಡಹೆಸರು ಮೋದಿ ಅಂತ ಉಲ್ಲೇಖ ಮಾಡೂ ಅಗತ್ಯವೇ ಇಲ್ಲ'. ಬೆಕ್ಕಣ್ಣ ಜೋರಾಗಿ ಗುರ್ರೆಂದಿತು.

'ಹೆಸರಿನಾಗೆ ಏನೈತಿ ಅಂತ ಷೇಕ್ಸ್‌ಪಿಯರ್ ಹೇಳ್ಯಾನಲ್ಲ... ಅಡ್ಡಹೆಸರು ಬಿಟ್ಟಾಕಿ, ಬರೇ ನೀರವ್ ಅನ್ನೂಣು. ಇವರಿಬ್ಬರ ವಂಚನೆ ಪ್ರಕರಣದ ತೀರ್ಪಿಗೆ ಎಷ್ಟ್ ವರ್ಷ ಆಗತೈತೆ ಲೆಕ್ಕ ಹಾಕು' ಬೆಕ್ಕಣ್ಣ ಲೆಕ್ಕದ ಮಾತು ಮುಂದುವರೆಸಿತು.

'ನಮ್ಮ ರಾಜ್ಯದ ಕೋರ್ಟ್‌ಗಳಲ್ಲಿ ಸುಮಾರು ಇಪ್ಪತ್ತು ಲಕ್ಷ ಕೇಸುಗಳು ಬಾಕಿ ಅದಾವಂತೆ... ಅಲ್ಲದೇ ನ್ಯಾಯಾಂಗ ಸಿಬ್ಬಂದಿ ಕೊರತೆ ಬೇರೆ... ಹಿಂಗಾಗಿ ಕೇಸುಗಳು 20-30 ವರ್ಷ ಜಗ್ಗತಾವು' ನಾನು ಸಮರ್ಥಿಸಿದೆ.

'ಕೊನೆಗೂ ತೀರ್ಪು ಬರಕ್ಕೆ ಎಷ್ಟು ವರ್ಷ ಹಿಡೀಬೌದು ಅನ್ನೋ ಅಂದಾಜು ಕೇಸಿನ ಪರ, ವಿರೋಧ ವಾದ ಮಾಡೋ ವಕೀಲರಿಗಷ್ಟೇ ಗೊತ್ತಿರತೈತಿ' ಎಂದು ಬೆಕ್ಕಣ್ಣ ಸತ್ಯ ನುಡಿಯಿತು!

ಸಂಗತ

ಪ್ರದರ್ಶನಪ್ರಿಯತೆ: ಔಚಿತ್ಯಪ್ರಜ್ಞೆ ಮರೆ

ವೈಯಕ್ತಿಕ ಸಂಗತಿಗಳನ್ನು ಪ್ರಚಾರಕ್ಕೆ ಬಳಸಿಕೊಳ್ಳುವ ಖಯಾಲಿ ಹೆಚ್ಚುತ್ತಿದೆ. ಅಸಹಾಯಕರಿಗೆ ನೀಡುವ ನೆರವೂ ಪ್ರಚಾರಪ್ರಿಯತೆಯ ಭಾಗವಾಗಬಾರದು

• ಹರೀಶ್ ಕುಮಾರ್ ಕುಡ್ತಡ್ಕ

'ಇಂದು ನನ್ನ ಮಗನ ಹುಟ್ಟುಹಬ್ಬ. ಅವನ ಬರ್ತ್ ಡೇಗೆ ಎಷ್ಟೊಂದು ಮಂದಿ ವಿಶ್ ಮಾಡಿದ್ದಾರೆ ನೋಡಿ' ಎಂದು ಗೆಳೆಯರೊಬ್ಬರು ಮೊಬೈಲ್ ಫೋನ್ ತೆಗೆದು ತೋರಿಸಿದರು. 'ನಿಮ್ಮ ಮಗನ ಬರ್ತ್ ಡೇ ವಿಷಯ ಅವರಿಗೆಲ್ಲ ಹೇಗೆ ಗೊತ್ತು?' ಎನ್ನುವ ಪ್ರಶ್ನೆಗೆ ಅವರ ಉತ್ತರ: 'ನಾನು ವಾಟ್ಸ್‌ಆ್ಯಪ್‌ನಲ್ಲಿ ಸ್ಟೇಟಸ್ ಹಾಕಿದ್ದೆ'.

ಜನರೊಂದಿಗೆ ಹೆಚ್ಚಿನ ಒಡನಾಟವಿರುವ ಹಾಗೂ ಸ್ವಂತ ಉದ್ಯಮ ಹೊಂದಿರುವ ಗೆಳೆಯರ ಸಂಭ್ರಮ ವಿಚಿತ್ರವಾಗಿ ಕಾಣಿಸಿತು. ಹುಟ್ಟುಹಬ್ಬ ಖಾಸಗಿ ವಿಚಾರ. ಮಕ್ಕಳ ಹುಟ್ಟುಹಬ್ಬವನ್ನು ಮನೆಯಲ್ಲಿ ಆಚರಿಸಿ, ಶುಭ ಹಾರೈಸಿದರೆ ಸಾಕು. ಮಕ್ಕಳು ದೂರದಲ್ಲಿದ್ದರೆ ದೂರವಾಣಿ ಮೂಲಕ ಶುಭಾಶಯ ಹೇಳಬಹುದು. ಸಮೀಪದ ಬಂಧುಮಿತ್ರರು ಹುಟ್ಟುಹಬ್ಬದಂತಹ ವೈಯಕ್ತಿಕ ವಿಷಯಗಳನ್ನು ನೆನಪಿಟ್ಟುಕೊಂಡು ಶುಭಾಶಯ ಹೇಳಿದಾಗ ಸಂತೋಷಪಡುವುದರಲ್ಲಿ ತಪ್ಪೇನೂ ಇಲ್ಲ.

ಆದರೆ, ಫೇಸ್‌ಬುಕ್ ಅಥವಾ ವಾಟ್ಸ್‌ಆ್ಯಪ್ ಮೂಲಕ ತಾವೇ ಪ್ರಚಾರ ಕೊಟ್ಟುಕೊಳ್ಳುವುದು, ಆ ಪೋಸ್ಟ್‌ಗಳನ್ನು ನೋಡಿದವರು ಔಪಚಾರಿಕವಾಗಿ ಹಾರೈಸಿದಾಗ ಸಂಭ್ರಮಿಸುವುದು ಹುಸಿ ಸಂಭ್ರಮದಂತೆ ಕಾಣಿಸುತ್ತದೆ.

ಮದುವೆಯ ವಾರ್ಷಿಕೋತ್ಸವ, ಪರೀಕ್ಷೆಗಳಲ್ಲಿ ಮಕ್ಕಳ ಸಾಧನೆಯಂತಹವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡು ಸಂಭ್ರಮಿಸುವವರೂ ಇದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಫಲಿತಾಂಶ ಪ್ರಕಟಗೊಂಡ ಸಂದರ್ಭದಲ್ಲಂತೂ ಸಾಮಾಜಿಕ ಜಾಲತಾಣಗಳು ಮಕ್ಕಳ ಅಂಕಪಟ್ಟಿಗಳಿಂದ ತುಂಬಿ ಹೋಗಿರುತ್ತವೆ. ವೈಯಕ್ತಿಕ ಸಂಭ್ರಮವನ್ನು ಹೀಗೆ ಸಾರ್ವಜನಿಕವಾಗಿ ಜಾಹೀರುಗೊಳಿಸುವುದೂ ಪ್ರಚಾರಪ್ರಿಯತೆಯ ಭಾಗವೇ. ಪ್ರದರ್ಶನ, ಪ್ರಚಾರಕ್ಕಾಗಿ ಹಣ ಕೊಟ್ಟು ಪ್ರಾಯೋಜಿತ ಸೇವೆಗಳನ್ನು ಬಳಸಿಕೊಳ್ಳುವವರೂ ಇದ್ದಾರೆ.

ವೈಯಕ್ತಿಕ ಕಷ್ಟ– ಸುಖಗಳನ್ನು ಹಂಚಿಕೊಳ್ಳುವುದು ಮನುಷ್ಯ ಸಹಜ ಗುಣ. ನೋವು, ದುಗುಡವನ್ನು ಹಂಚಿಕೊಂಡಾಗ ಮನಸ್ಸು ಹಗುರವಾಗುತ್ತದೆ. ಆದರೆ, ನೋವು– ನಲಿವಿನ ಹಂಚಿಕೊಳ್ಳುವಿಕೆಯು ಆತ್ಮೀಯ ವಲಯಕ್ಕೆ ಸೀಮಿತವಾಗಿದ್ದರೆ ಚೆನ್ನ. ಉಳಿದವರಿಗೆ ಪ್ರೇರಣೆ ಆಗಲೆನ್ನುವ ಸದುದ್ದೇಶದಿಂದ ಅಪರೂಪದ ವೈಯಕ್ತಿಕ ಸಾಧನೆಯನ್ನು ಸಾರ್ವಜನಿಕವಾಗಿ ಹಂಚಿಕೊಂಡರೆ ತಪ್ಪೇನಿಲ್ಲ.

ಸ್ವಯಂ ಪ್ರಚಾರ ಮಾಡಿಕೊಳ್ಳುವುದರಲ್ಲಿ ಸರಿ– ತಪ್ಪು ಪ್ರಶ್ನೆ ಉದ್ಭವಿಸುವುದೇ ಇಲ್ಲ ಎಂದು ಹೇಳುವವರೂ ಇದ್ದಾರೆ. ಸ್ವಯಂ ಪ್ರದರ್ಶನವನ್ನು ಪ್ರಶ್ನಿಸಿದಾಗ, 'ನಾವು ಹೇಗಾದರೂ ಇರುತ್ತೇವೆ, ಏನಾದರೂ ಮಾಡಿಕೊಳ್ಳುತ್ತೇವೆ, ನಿಮಗೇನು ಕಷ್ಟ?' ಎಂದು ಮರುಪ್ರಶ್ನೆ ಹಾಕುವವರೂ ಇದ್ದಾರೆ. ನಿಜ, ಇವೆಲ್ಲ ಅವರವರ ಇಷ್ಟಕ್ಕೆ ಸಂಬಂಧಿಸಿದ ವಿಚಾರಗಳು. ನಾವು ಯೋಚಿಸಬೇಕಾದುದು ಔಚಿತ್ಯದ ಪ್ರಶ್ನೆಯನ್ನು. ಯಾವುದು ಸಾರ್ವಜನಿಕ ಪ್ರಚಾರಕ್ಕೆ ಅರ್ಹ, ಯಾವುದು ಅಲ್ಲ ಎಂಬ ವಿವೇಕ ನಮ್ಮಲ್ಲಿ ಇರಬೇಕು. ಸಾರ್ವಜನಿಕ ಮಹತ್ವವಿರುವಂತಹ ವಿದ್ಯಮಾನ, ಘಟನೆಗಳು ಬೆಳಕಿಗೆ ಬರುವುದಕ್ಕೆ ಅವಕಾಶ ಕಲ್ಪಿಸುವುದರಲ್ಲಿ ಅರ್ಥವಿದೆ ಎನ್ನುವುದನ್ನು ಅರಿತುಕೊಂಡಾಗ 'ಯಾವುದು ಖಾಸಗಿ' ಎನ್ನುವುದೂ ನಮ್ಮ ಅರಿವಿಗೆ ತಾನಾಗಿಯೇ ಬರುತ್ತದೆ.

ಪ್ರಸ್ತುತ ಕಾಲಘಟ್ಟದಲ್ಲಿ ಮನುಷ್ಯ ಒಳಗಿನಿಂದ ತಬ್ಬಲಿಯಾಗುತ್ತಿದ್ದಾನೆ. ಮನುಷ್ಯ ಸಂಬಂಧ, ಒಡನಾಟ, ಆತ್ಮೀಯತೆ ಕಡಿಮೆ ಆಗುತ್ತಿರುವಾಗ, ಖಾಸಗಿ ಸಂಗತಿಗಳ ಮೂಲಕ ಜನರ ಗಮನ ಸೆಳೆದು ಒಳಗಿನ ಖಾಲಿತನ ತುಂಬಿಕೊಳ್ಳುವ ಪ್ರಯತ್ನ ಪ್ರದರ್ಶನಪ್ರಿಯತೆ ಆಗಿರಬಹುದೇ? ಏನೇ ಇರಲಿ, ಸಣ್ಣ ಪುಟ್ಟ ವೈಯಕ್ತಿಕ ವಿಷಯಗಳನ್ನು ಮುಂದಿಟ್ಟುಕೊಂಡು ಪ್ರಚಾರ ಪಡೆಯಲು ಬಯಸುವುದು ವ್ಯಕ್ತಿತ್ವದ ಘನತೆಯನ್ನು ಕುಗ್ಗಿಸುತ್ತದೆ; ಕೆಲವೊಮ್ಮೆ ಅಪಹಾಸ್ಯಕ್ಕೂ ಆಸ್ಪದ ಕಲ್ಪಿಸುತ್ತದೆ.

ಸಾರ್ವಜನಿಕ ಮಹತ್ವವಿರುವ ಘಟನೆಗಳಿಗೆ ಪ್ರಚಾರ ದೊರೆಯುವುದು ಅಗತ್ಯ. ಆದರೆ ಇಲ್ಲಿಯೂ ಸಂವೇದನೆ, ವಿವೇಕ, ಔಚಿತ್ಯಪ್ರಜ್ಞೆ ಮುಖ್ಯ. ಉದಾಹರಣೆ ನೋಡಿ: ಅಂಗವಿಕಲ ಯುವಕನೊಬ್ಬನಿಗೆ ಗಾಲಿಕುರ್ಚಿ ದಾನ ಮಾಡುವ ಒಂದು ಗುಂಪು, ಆ ಅಸಹಾಯಕನನ್ನು ಕುರ್ಚಿಯಲ್ಲಿ ಕೂರಿಸಿ, ಸೂಟುಬೂಟಿನಲ್ಲಿ ಅವನ ಹಿಂದೆ ನಗುತ್ತಾ ನಿಂತು ಫೋಟೊ ತೆಗೆಸಿಕೊಳ್ಳುತ್ತದೆ. ಇಂಥ ಫೋಟೊ– ವರದಿಗಳು ಮಾಧ್ಯಮಗಳಲ್ಲೂ ಪ್ರಕಟಗೊಳ್ಳುತ್ತವೆ.

ಬಡ ಕುಟುಂಬವೊಂದಕ್ಕೆ ₹10 ಸಾವಿರ ನೆರವು ನೀಡುವ ಹತ್ತು ಮಂದಿ ವ್ಯಾಪಕ ಪ್ರಚಾರಕ್ಕೆ ಮುಂದಾಗುತ್ತಾರೆ. ಇಂತಹ ಸಣ್ಣಪುಟ್ಟ ಸಹಾಯಗಳಿಗೆ ಮೀತಿ ಮೀರಿದ ಪ್ರಚಾರ ಅಗತ್ಯವೇ? ಅಸಹಾಯಕರು, ದುರ್ಬಲರನ್ನು ನೆರವಿನ ನೆಪದಿಂದ ಪ್ರಚಾರಕ್ಕೆ ಬಳಸಿಕೊಳ್ಳುವುದು ನ್ಯಾಯೋಚಿತವೇ? ಇಂತಹ ಮನೋಭಾವವನ್ನು ಗಮನಿಸಿಯೇ ನಮ್ಮ ಹಿರಿಯರು, 'ಬಲಗೈಯಲ್ಲಿ ನೀಡಿದ್ದು ಎಡಗೈಗೆ ಗೊತ್ತಾಗಬಾರದು' ಎಂದು ಹೇಳಿರುವುದು.

ಕೊರೊನಾ ಕಾಲದಲ್ಲಿ ಪ್ರಚಾರಪ್ರಿಯರನ್ನು ಗಮನದಲ್ಲಿಟ್ಟುಕೊಂಡ ಒಂದು ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಜನರ ಗಮನಸೆಳೆದಿತ್ತು. 'ಸಮಾಜ ಸೇವೆಗೆ ಹೊರಡುವಾಗ ಕ್ಯಾಮೆರಾವನ್ನು ಮನೆಯಲ್ಲಿಯೇ ಬಿಟ್ಟು ಹೋಗಿ' ಎನ್ನುವ ಆ ವಿಡಿಯೊದಲ್ಲಿನ ಮಾತು ಪ್ರಚಾರಕ್ಕೆ ಹಾತೊರೆಯುವವರನ್ನು ಎಚ್ಚರಿಸುವಂತಿತ್ತು.

ಪ್ರಚಾರ– ಪ್ರದರ್ಶನಗಳ ಅಬ್ಬರದ ನಡುವೆಯೂ ಯಾವುದೇ ಅತಿರೇಕ, ಆಡಂಬರವಿಲ್ಲದೆ ಸಮಾಜಮುಖಿ ಚಟುವಟಿಕೆಗಳಲ್ಲಿ ಸದ್ದಿಲ್ಲದೆ ತೊಡಗಿಕೊಂಡಿರುವ ಸಂಘಟನೆಗಳು ಬಹಳಷ್ಟಿವೆ. ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡೂ ಎಲೆ ಮರೆಯ ಕಾಯಿಗಳಂತೆ ಇರುವವರೂ ಇದ್ದಾರೆ. ಜನರ ಹೃದಯ ಗೆಲ್ಲುವುದು ಇದೇ ವರ್ಗವೆಂದು ಬಿಡಿಸಿ ಹೇಳಬೇಕಾಗಿಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತದಲ್ಲಿ ಎಲೆಕ್ಟ್ರಿಕ್ ವಾಹನ ತಯಾರಿಕೆ, ಎಲೆಕ್ಟ್ರಾನಿಕ್ಸ್ ಸೇರಿದಂತೆ ವಿವಿಧ ಉದ್ಯಮಗಳಿಗೆ ಅಗತ್ಯವಾಗಿ ಬೇಕಾಗಿರುವ ವಿರಳ ಲೋಹಗಳ ಕೊರತೆ ಉಂಟಾಗಿದ್ದು, ಉದ್ಯಮ ರಂಗದಲ್ಲಿ ಆತಂಕ ವ್ಯಕ್ತವಾಗಿದೆ. ಅಮೆರಿಕದೊಂದಿಗಿನ ಸುಂಕ ಸಮರದ ಭಾಗವಾಗಿ ಚೀನಾವು ಏಪ್ರಿಲ್‌ನಿಂದ ವಿರಳ ಲೋಹಗಳ ರಫ್ತಿನ ಮೇಲೆ ನಿಯಂತ್ರಣ ಹೇರಿದೆ. ಭಾರತವು ಈ ಲೋಹಗಳಿಗಾಗಿ ಚೀನಾವನ್ನು ಅವಲಂಬಿಸಿದೆ. ಭಾರತದಲ್ಲೂ ಅಪರೂಪದ ಲೋಹಗಳ ನಿಕ್ಷೇಪ ಇದೆ. ಆದರೆ, ಇಲ್ಲಿ ಅವುಗಳ ಉತ್ಪಾದನೆ, ಸಂಸ್ಕರಣೆ ಕಡಿಮೆ. ಚೀನಾದ ಮೇಲೆ ಅವಲಂಬನೆ ತಪ್ಪಿಸಲು ಈ ವಿರಳ ಲೋಹಗಳ ಉತ್ಪಾದನೆ ಹೆಚ್ಚಿಸಲು ಭಾರತ ಮುಂದಾಗಿದೆ

ವಿರಳ ಲೋಹಗಳ ಕೊರತೆ

ಉದ್ಯಮಕ್ಕೆ ಹೊಡೆತ

ಪ್ರಜಾವಾಣಿ ವಾರ್ತೆ

ವಿರಳ ಲೋಹಗಳ ಲಭ್ಯತೆಯಲ್ಲಿನ ಸಮಸ್ಯೆಯಿಂದಾಗಿ ಎಲೆಕ್ಟ್ರಿಕ್ ವಾಹನಗಳ ತಯಾರಿಕೆಯಲ್ಲಿ ಕಡಿತ ಮಾಡಲಾಗುವುದು ಎಂದು ಭಾರತದ ಪ್ರಸಿದ್ಧ ಕಾರು ತಯಾರಿಕಾ ಸಂಸ್ಥೆ ಮಾರುತಿ ಸುಜುಕಿ ಕಳೆದ ವಾರ ಹೇಳಿದ್ದು ಭಾರಿ ಸುದ್ದಿಯಾಗಿತ್ತು. ಅಮೆರಿಕದೊಂದಿಗಿನ ಸುಂಕ ಸಮರ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿನ ಬೆಳವಣಿಗೆಗಳಿಂದಾಗಿ 17 ವಿರಳ ಲೋಹಗಳು ಮತ್ತು ಅವುಗಳ ಮೌಲ್ಯವರ್ಧಿತ ಉತ್ಪನ್ನಗಳ ರಫ್ತಿನ ಮೇಲೆ ಚೀನಾ ಏಪ್ರಿಲ್‌ನಿಂದ ಕೆಲವು ನಿರ್ಬಂಧಗಳನ್ನು ಹೇರಿದೆ. ಅದು ಜಾಗತಿಕ ವಿರಳ ಲೋಹಗಳ ಪೂರೈಕೆ ಸರಪಳಿಯ ಮೇಲೆ ಪರಿಣಾಮ ಬೀರಿದ್ದು, ಭಾರತದ ವಾಹನ ತಯಾರಿಕಾ ವಲಯ ಮತ್ತು ನವೀಕರಿಸಬಹುದಾದ ಇಂಧನ ವಲಯದ ಮೇಲೂ ವ್ಯತಿರಿಕ್ತ ಪರಿಣಾಮ ಉಂಟುಮಾಡಿದೆ.

ಅಪರೂಪದ ಲೋಹಗಳು ಹೆಸರಿಗೆ ವಿರಳವಾಗಿದ್ದರೂ ಜಗತ್ತಿನ ವಿವಿಧೆಡೆ ಲಭ್ಯ ಇವೆ. ಆದರೆ, ಭೂಮಿಯಲ್ಲಿ ಕಬ್ಬಿಣ, ಚಿನ್ನ ಅಥವಾ ಇತರ ಖನಿಜಗಳ ಮಾದರಿಯಲ್ಲಿ ಇವುಗಳ ನಿಕ್ಷೇಪ ಇಲ್ಲ. ಭೂಮಿಯ ಹೊರ ಪದರದಲ್ಲಿ ಅಲ್ಲಲ್ಲಿ ಕಡಿಮೆ ಪ್ರಮಾಣದಲ್ಲಿ ತೆಳುವಾಗಿ ಹರಡಿಕೊಂಡಿವೆ. ಇತರ ಖನಿಜಗಳೊಂದಿಗೆ ಬೆರೆತಿವೆ. ಹೀಗಾಗಿ ಇವುಗಳ ಗಣಿಗಾರಿಕೆ, ಸಂಸ್ಕರಣೆ ತುಂಬಾ ದುಬಾರಿ. ಖನಿಜಗಳಿಂದ ಅವುಗಳನ್ನು ಪ್ರತ್ಯೇಕಿಸುವುದು ಮತ್ತು ಸಂಸ್ಕರಣೆ ಮಾಡುವುದು ಭಾರಿ ಕೌಶಲಯುಕ್ತ ಕೆಲಸವಾಗಿದೆ.

ವಿರಳ ಲೋಹಗಳ ಗಣಿಗಾರಿಕೆ ಮತ್ತು ಸಂಸ್ಕರಣೆಯಲ್ಲಿ ಚೀನಾ ಏಕಸ್ವಾಮ್ಯ ಸಾಧಿಸಿದೆ. ಒಂದು ಮೂಲದ ಪ್ರಕಾರ, ಜಾಗತಿಕವಾಗಿ ವಿರಳ ಲೋಹಗಳ ಗಣಿಗಾರಿಕೆಯಲ್ಲಿ ಶೇ 60ರಷ್ಟು ಮತ್ತು ಅವುಗಳ ಒಟ್ಟಾರೆ ಮಾರುಕಟ್ಟೆಯಲ್ಲಿ ಶೇ 90ರಷ್ಟು ಚೀನಾ ಹಿಡಿತದಲ್ಲಿದೆ. ಇವಿ ವಾಹನಗಳು, ರಕ್ಷಣೆ, ವಾಯುಸೇವೆ ಮತ್ತಿತರ ವಲಯಗಳಲ್ಲಿ ವಿರಳ ಲೋಹಗಳನ್ನು ಬಳಸಲಾಗುತ್ತಿದ್ದು, ಅವುಗಳಿಗೆ ಜಗತ್ತಿನಾದ್ಯಂತ ಬೇಡಿಕೆ ಹೆಚ್ಚಿದೆ. ಆದರೆ, ಚೀನಾ ಅವುಗಳ ಪೂರೈಕೆಯನ್ನು ತನಗೆ ಬೇಕಾದಂತೆ ನಿಯಂತ್ರಿಸುತ್ತಿರುವುದರಿಂದ ವಿವಿಧ ದೇಶಗಳ ನಡುವೆ ಅವುಗಳ ಲಭ್ಯತೆಯಲ್ಲಿ ವ್ಯತ್ಯಾಸಗಳಾಗುತ್ತಿವೆ.

ಭಾರತವು ಆಮದು ಮಾಡಿಕೊಳ್ಳುತ್ತಿರುವ ವಿರಳ ಲೋಹಗಳ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಆಮದಿನಲ್ಲಿ ಸಿಂಹಪಾಲು ಚೀನಾದಿಂದ ಬರುತ್ತಿದೆ. ಚೀನಾ ಬಿಟ್ಟು ಹಾಂಕಾಂಗ್, ಅಮೆರಿಕ, ಬ್ರಿಟನ್, ರಷ್ಯಾ, ಆಸ್ಟ್ರಿಯಾ ದಕ್ಷಿಣ ಕೊರಿಯಾ, ಫ್ರಾನ್ಸ್‌ನಿಂದ ಆಮದು ಮಾಡಿಕೊಳ್ಳುತ್ತಿದೆ. ಚೀನಾದಿಂದ ಆಗುತ್ತಿರುವ ಪೂರೈಕೆಯಲ್ಲಿ ಇದೇ ರೀತಿಯ ಸಮಸ್ಯೆ ಮುಂದುವರಿದರೆ, ಭಾರತದಲ್ಲಿ ಇವಿ ಉತ್ಪಾದನೆಗೆ ಪೆಟ್ಟು ಬೀಳಲಿದೆ ಎನ್ನುವ ಆತಂಕವನ್ನೂ ಕೆಲವು ಉದ್ಯಮಿಗಳು ವ್ಯಕ್ತಪಡಿಸಿದ್ದಾರೆ. ಮಾಧ್ಯಮ ವರದಿಗಳ ಪ್ರಕಾರ, ಭಾರತದಲ್ಲಿ ಇವಿಗಳ ಉತ್ಪಾದನೆಗೆ ಬಳಸುವ ವಿರಳ ಲೋಹಗಳು ಎರಡು–ಮೂರು ವಾರಗಳಿಗೆ ಆಗುವಷ್ಟು ಮಾತ್ರ ದಾಸ್ತಾನಿದೆ. ಈ ಕಾರಣಕ್ಕಾಗಿಯೇ ವಾಹನ ಉದ್ಯಮದ ನಿಯೋಗವೊಂದು ಚೀನಾಕ್ಕೆ ತೆರಳಲು ಯೋಚನೆಯನ್ನೂ ಮಾಡಿದೆ.

ಭಾರತವು ವಿರಳ ಲೋಹಗಳ ನಿಕ್ಷೇಪವನ್ನು ಹೊಂದಿರುವ ಜಗತ್ತಿನ ಮೂರನೇ ದೊಡ್ಡ ರಾಷ್ಟ್ರವಾಗಿದೆ. ಐಆರ್‌ಇಎಲ್ (ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್) ಭಾರತದ ಸರ್ಕಾರಿ ಸ್ವಾಮ್ಯದ ವಿರಳ ಲೋಹಗಳ ಗಣಿಗಾರಿಕಾ ಸಂಸ್ಥೆ. ದೇಶೀಯ ಬಳಕೆಗೆ ವಿರಳ ಲೋಹಗಳನ್ನು ಪೂರೈಸುವ ಸಲುವಾಗಿ ಅಣುಶಕ್ತಿ ಕಾಯ್ದೆಯ ಅನುಸಾರ ಈ ಸಂಸ್ಥೆಯನ್ನು 1950ರಲ್ಲಿ ಸ್ಥಾಪಿಸಲಾಗಿತ್ತು. ಇತ್ತೀಚಿನವರೆಗೂ ಇದು ವಿರಳ ಲೋಹಗಳನ್ನು ಹೊರತೆಗೆದು, ಸಂಸ್ಕರಣೆ ಮಾಡುವ ದೇಶದ ಏಕೈಕ ಸಂಸ್ಥೆಯಾಗಿತ್ತು. ಆಡಳಿತಾತ್ಮಕ ಮತ್ತು ಇತರ ಕಾರಣಗಳಿಂದ ಐಆರ್‌ಇಎಲ್ ನಿರೀಕ್ಷಿತ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಎನ್ನುವ ದೂರುಗಳಿವೆ. ಕಳೆದ ಡಿಸೆಂಬರ್‌ನಿಂದ ಸಂಸ್ಥೆಗೆ ಪೂರ್ಣಾವಧಿ ಅಧ್ಯಕ್ಷರೇ ಇಲ್ಲ ಎಂದು ವರದಿಯಾಗಿದೆ.

ನಂತರದಲ್ಲಿ ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ–2023 ಅನ್ನು ತಿದ್ದುಪಡಿ ಮಾಡಿ, ಖಾಸಗಿಯವರಿಗೂ ವಿರಳ ಲೋಹಗಳ ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ. 20ಕ್ಕೂ ಹೆಚ್ಚು ಕಂಪನಿಗಳು ಈ ಬಗ್ಗೆ ಆಸಕ್ತಿ ವಹಿಸಿವೆ ಎಂದು ಹೇಳಲಾಗುತ್ತಿದ್ದು, ಅವು ಕಾರ್ಯಾರಂಭ ಮಾಡಿ, ವಿರಳ ಲೋಹಗಳನ್ನು ಉತ್ಪಾದಿಸಲು ಬಹಳ ಸಮಯ ಬೇಕು.

ಸಂಸ್ಕರಣೆಯ ಸಾಮರ್ಥ್ಯ ಸೀಮಿತ ಆಗಿದ್ದು, ಐಆರ್‌ಇಎಲ್ ನಿಯೋಡಿಮಿಯಮ್ ಸೇರಿದಂತೆ ಕೆಲವು ವಿರಳ ಲೋಹಗಳನ್ನು ಕಳೆದ 13 ವರ್ಷಗಳಿಂದ ಜಪಾನ್‌ಗೆ ರಫ್ತು ಮಾಡುತ್ತಿತ್ತು. 2024ರಲ್ಲಿ ಭಾರತವು 1,000 ಟನ್ (ಐಆರ್‌ಇಎಲ್ ಹೊರತೆಗೆದ ವಿರಳ ಲೋಹಗಳ ಮೂರನೇ ಒಂದರಷ್ಟು ಭಾಗ) ಜಪಾನ್‌ಗೆ ರಫ್ತು ಮಾಡಿತ್ತು. ಇದೀಗ ಚೀನಾದ ನಿರ್ಬಂಧದಿಂದ ಸಮಸ್ಯೆ ಉದ್ಭವಿಸಿದ ನಂತರ ಐಆರ್‌ಇಎಲ್ ಸಂಸ್ಥೆಯು ತನ್ನ ಸಂಸ್ಕರಣಾ ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳಲು ಯೋಜಿಸಿದ್ದು, ಜಪಾನ್‌ಗೆ ರಫ್ತು ಮಾಡುವುದನ್ನು ಸ್ಥಗಿತಗೊಳಿಸಿದೆ.

ಆಧಾರ: ಪಿಟಿಐ, ರಾಯಿಟರ್ಸ್, ಅಮೆರಿಕದ ಜಿಯಾಲಾಜಿಕಲ್ ಸರ್ವೆ, ಪಿಐಬಿ ಪ್ರಕಟಣೆ

ಯಾವುದಕ್ಕೆಲ್ಲ ಬಳಕೆ?

ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು, ಎಲೆಕ್ಟ್ರಿಕ್ ವಾಹನಗಳು (ಇವಿ), ವಿಮಾನಗಳ ಎಂಜಿನ್‌ಗಳು, ವೈದ್ಯಕೀಯ ಉಪಕರಣಗಳು, ತೈಲ ಸಂಸ್ಕರಣೆ, ಗಾಳಿಯಿಂದ ವಿದ್ಯುತ್ ಉತ್ಪಾದಿಸುವ ಟರ್ಬೈನ್‌ಗಳು, ಕ್ಷಿಪಣಿಗಳು, ರೇಡಾರ್ ವ್ಯವಸ್ಥೆ ಸೇರಿದಂತೆ ರಕ್ಷಣಾ ಉಪಕರಣಗಳ ತಯಾರಿಕೆಯಲ್ಲಿ ಈ ವಿರಳ ಲೋಹಗಳು ಪ್ರಮುಖ ಪಾತ್ರ ವಹಿಸುತ್ತವೆ.

ನಿಕ್ಷೇಪ ಇದ್ದರೂ ಉತ್ಪಾದನೆ ಕಡಿಮೆ

ಜಾಗತಿಕವಾಗಿ ಈ ಅಪರೂಪದ ಲೋಹಗಳ ಬಹು ದೊಡ್ಡ ನಿಕ್ಷೇಪ ಇರುವುದು ಚೀನಾದಲ್ಲಿ. ಉತ್ಪಾದನೆಯೂ ಅಲ್ಲಿಯೇ ಹೆಚ್ಚು. ಅಮೆರಿಕದ ಜಿಯೊಲಾಜಿಕಲ್ ಸರ್ವೆಯ 2025ರ ಜನವರಿ ವರದಿ ಪ್ರಕಾರ, ವಿರಳ ಲೋಹ ಖನಿಜಗಳ ನಿಕ್ಷೇಪದಲ್ಲಿ ಭಾರತ ಮೂರನೇ ಸ್ಥಾನದಲ್ಲಿದೆ. ಬ್ರೆಜಿಲ್ ಎರಡನೇ ಸ್ಥಾನದಲ್ಲಿದೆ. ಅಮೆರಿಕ ಏಳನೇ ಸ್ಥಾನದಲ್ಲಿದೆ.

ಭಾರತವು ನಿಕ್ಷೇಪದಲ್ಲಿ ಮೂರನೇ ಸ್ಥಾನದಲ್ಲಿದ್ದರೂ, ಇಲ್ಲಿ ಅವುಗಳ ಉತ್ಪಾದನೆ ತುಂಬಾ ಕಡಿಮೆ. 2023, 2024ರಲ್ಲಿ ತಲಾ 2,900 ಟನ್‌ಗಳಷ್ಟು ಲೋಹಗಳನ್ನು ಭಾರತ ಉತ್ಪಾದಿಸಿದೆ.





ಯಾವೆಲ್ಲಾ ಲೋಹಗಳು?

ಈ ಗುಂಪಿನಲ್ಲಿ 17 ಲೋಹಗಳಿವೆ. ಇವುಗಳಲ್ಲಿ ರಸಾಯನ ವಿಜ್ಞಾನ ಭಾಷೆಯಲ್ಲಿ ಲ್ಯಾಂಥನೈಡ್‌ಗಳು ಎಂದು ಕರೆಯಲಾಗುವ ಬೆಳ್ಳಿಯಂತೆ ಹೊಳೆಯುವ 15 ಲೋಹಧಾತುಗಳು ಸೇರಿವೆ.
ಅವುಗಳೆಂದರೆ: ಸ್ಕ್ಯಾಂಡಿಯಮ್, ಯಿಟ್ರಿಯಮ್, ಲ್ಯಾಂಥನಮ್, ಸೀರಿಯಮ್, ಪ್ರೇಸಿಯೊಮಿಡಿಯಮ್, ನಿಯೊಡಿಮಿಯಮ್, ಪ್ರೊಮೀಥಿಯಮ್, ಸಮೇರಿಯಮ್, ಯುರೋಪಿಯಮ್, ಗ್ಯಾಡೊಲಿನಿಯಮ್, ಟರ್ಬಿಯಮ್, ಡಿಸ್ಪೋರ್ಸಿಯಮ್, ಹೋಲ್ಮಿಯಮ್, ಎರ್ಬಿಯಮ್, ಥೂಲಿಯಂ, ಯೆಟ್ಟೆರ್ಬಿಯಮ್ ಮತ್ತು ಲೂಟೀಷಿಯಮ್.

ಸ್ಕ್ಯಾಂಡಿಯಂ ಮತ್ತು ಯಿಟ್ರಿಯಮ್ ಬಿಟ್ಟು ಉಳಿದವೆಲ್ಲವೂ ಲ್ಯಾಂಥನೈಡ್‌ಗಳು.

ಯಾವುದಕ್ಕೆ ಬೇಡಿಕೆ?

ಲ್ಯಾಂಥನಮ್ ಮತ್ತು ಸೀರಿಯಮ್‌ಗಳು ಸಾಮಾನ್ಯವಾದ ಅಪರೂಪದ ಲೋಹಗಳು. ಲ್ಯಾಂಥನಮ್ ಅನ್ನು ಕ್ಯಾಮೆರಾ ಲೆನ್ಸ್ ಮತ್ತು ಲೈಟಿಂಗ್ ಉಪಕರಣಗಳಲ್ಲಿ ಬಳಸಲಾಗುತ್ತದೆ. ಸೀರಿಯಮ್ ಅನ್ನು ಎಂಜಿನ್‌ಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಎಂಜಿನ್‌ಗಳ ಹೊಗೆ ಉಗುಳುವಿಕೆಯನ್ನು ಕಡಿಮೆ ಮಾಡುವ ವೇಗವರ್ಧಕ ಪರಿವರ್ತಕಗಳಲ್ಲಿ ಬಳಸಲಾಗುತ್ತದೆ. ನಿಯೋಡಿಮಿಯಮ್ ಮತ್ತು ಪ್ರೇಸಿಯೊಮಿಡಿಯಮ್ ಲೋಹಗಳನ್ನು ಎಲೆಕ್ಟ್ರಿಕ್ ವಾಹನಗಳು (ಇವುಗಳ ಮ್ಯಾಗ್ನೆಟ್ ಮೋಟರ್‌ಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ) ಮತ್ತು ಪವನ ವಿದ್ಯುತ್ ಉತ್ಪಾದಿಸುವ ಟರ್ಬೈನ್‌ಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಇವುಗಳಿಗೆ ಈಗ ಹೆಚ್ಚು ಬೇಡಿಕೆ ಇದೆ.

ನಿಯೋಡಿಮಿಯಮ್



ಭಾರತದಿಂದ ಹಲವು ಕ್ರಮ

- ನೀತಿ ನಿಯಮಗಳ ಬದಲಾವಣೆ, ಉದ್ಯಮಿಗಳ ಸಹಭಾಗಿತ್ವ ಮತ್ತು ಅಂತರರಾಷ್ಟ್ರೀಯ ಪಾಲುದಾರಿಕೆಗಳ ಮೂಲಕ ಸಮಸ್ಯೆ ಪರಿಹಾರಕ್ಕೆ ಪ್ರಯತ್ನ
- ಚೀನಾ ಮೇಲಿನ ಅವಲಂಬನೆ ತಪ್ಪಿಸಲು ಪರ್ಯಾಯ ಆಮದು ಮೂಲಗಳ ಹುಡುಕಾಟ, ಮಾತುಕತೆ
- ಜಿಯೊಲಾಜಿಕಲ್ ಸರ್ವೆ ಆಫ್ ಇಂಡಿಯಾದಿಂದ ವಿರಳ ಲೋಹಗಳ ನಿಕ್ಷೇಪಗಳ ಶೋಧ
- ವಿರಳ ಲೋಹಗಳ ದೇಶೀಯ ಉತ್ಪಾದನೆಗೆ ಯೋಜನೆ; 'ಪ್ರಮುಖ ಖನಿಜಗಳ 'ರಾಷ್ಟ್ರೀಯ ಮಿಷನ್ 2025'ರ ಮೂಲಕ ಹಲವು ರೀತಿಯ ಪ್ರಯತ್ನ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ರಾಷ್ಟ್ರೀಯ

ಮಾಜಿ ಸಿ.ಎಂ ಜಗನ್ ಕಾರಿಗೆ ಸಿಲುಕಿ ಕಾರ್ಯಕರ್ತ ಸಾವು

ಬೆಂಗಳೂರು: ಆಂಧ್ರಪ್ರದೇಶದ ಗುಂಟೂರು ನಗರದ ಹೊರವಲಯದ ಎಟುಕೂರು ಬಳಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಮುಖ್ಯಸ್ಥ, ಮಾಜಿ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಅವರಿದ್ದ ವಾಹನಕ್ಕೆ ಸಿಲುಕಿ ಪಕ್ಷದ ಕಾರ್ಯಕರ್ತ ಚೀಲಿ ಸಿಂಗಯ್ಯ ಎನ್ನುವವರು ಮೃತಪಟ್ಟಿದ್ದಾರೆ.

ಜೂನ್ 18ರಂದು ಈ ಘಟನೆ ನಡೆದಿದ್ದು, ಈ ಕುರಿತು ಹಲವು ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿವೆ. ಆರಂಭದಲ್ಲಿ ರೆಡ್ಡಿ ಅವರ ಅನಧಿಕೃತ ಬೆಂಗಾವಲು ವಾಹನಕ್ಕೆ ಸಿಕ್ಕಿ ಮೃತಪಟ್ಟಿದ್ದಾರೆ ಎನ್ನಲಾಗಿತ್ತು.

ಈ ಹಿಂದೆ ಮೃತಪಟ್ಟಿದ್ದ ಕಾರ್ಯಕರ್ತನ ಕುಟುಂಬದ ಭೇಟಿಗೆ ಜಗನ್‌ಮೋಹನ್ ರೆಡ್ಡಿ ಅವರು ಸತ್ತೇನಪಲ್ಲಿಗೆ ತೆರಳುವಾಗ ಈ ಘಟನೆ ನಡೆದಿದೆ. ಗ್ರಾಮದಲ್ಲಿ ರ್‍ಯಾಲಿ ಆಯೋಜಿಸಿದ್ದು, ಪೊಲೀಸರು 100 ಬೆಂಬಲಿಗರು ಸೇರಲು ಹಾಗೂ ಮೂರು ವಾಹನಗಳ ಬಳಕೆಗೆ ಅನುಮತಿ ನೀಡಿದ್ದರು.

ಆದರೆ, ಅಧಿಕ ಸಂಖ್ಯೆಯಲ್ಲಿ ಬೆಂಬಲಿಗರು ಸೇರಿದ್ದರು. ವಾಹನದಲ್ಲಿದ್ದ ಜಗನ್ ಅವರಿಗೆ ಪುಷ್ಪಗುಚ್ಛ ನೀಡಲು ನೂಕುನುಗ್ಗಲು ದಾಟಿ ಸಿಂಗಯ್ಯ ಹೋಗಲು ಯತ್ನಿಸುವಾಗ ಅವಘಡ ನಡೆದಿದೆ ಎನ್ನಲಾಗಿದೆ.

ಸಿಂಗಯ್ಯ ವಾಹನದಡಿ ಸಿಲುಕಿದಾಗ ಇತರರು ಕೂಗಿಕೊಂಡರು ಚಾಲಕ ವಾಹನ ನಿಲ್ಲಿಸಲಿಲ್ಲ. ಆಸ್ಪತ್ರೆಗೆ ಕರೆದೊಯ್ಯುವಾಗ ಆತ ಮೃತಪಟ್ಟ ಎಂದು ಹೇಳಲಾಗಿದೆ.

ಬಿಹಾರ: ಮತದಾರರ ಪಟ್ಟಿ ಪರಿಷ್ಕರಣೆಗೆ ಮನೆ ಮನೆಗೆ ಭೇಟಿ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಕೊನೆಯಲ್ಲಿ ಬಿಹಾರ ವಿಧಾನಸಭಾ ಚುನಾವಣೆ ನಡೆಯಲಿದೆ. ಇದಕ್ಕೆ ಪೂರಕವಾಗಿ ನಡೆಯುವ ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಮನೆ ಮನೆಗೂ ತೆರಳಿ ಪರಿಶೀಲನೆ ನಡೆಸಲು ಚುನಾವಣಾ ಆಯೋಗ ಉದ್ದೇಶಿಸಿದೆ. ಈ ಮೂಲಕ ಮತದಾರರ ಪಟ್ಟಿಯ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಆಯೋಗ ಬಯಸಿದೆ.

ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮತ್ತು ತೆಗೆದು ಹಾಕುವ ವಿಷಯಕ್ಕೆ ಸಂಬಂಧಿಸಿದಂತೆ ವಿವಿಧ ಸಂಘ ಸಂಸ್ಥೆಗಳು, ರಾಜಕೀಯ ಪಕ್ಷಗಳು ಮತ್ತು ಇತರರು ಕಳವಳ ವ್ಯಕ್ತಪಡಿಸಿರುವುದನ್ನು ಗಮನಿಸಿರುವ ಆಯೋಗವು, ಮನೆಗಳಿಗೆ ಭೇಟಿ ನೀಡಿದ ಬಳಿಕವಷ್ಟೇ ಪಟ್ಟಿ ಪರಿಷ್ಕರಿಸಲು ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಹಿಳೆಯೊಬ್ಬರು ಮಳೆಯಲ್ಲಿ ನೆನೆಯುತ್ತಾ, ಬರಿಗಾಲಿನಲ್ಲಿ ನೃತ್ಯ ಮಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮಹಿಳೆಯು ಇರಾನ್‌ನ ಇಸ್ಲಾಮಿಕ್ ಆಡಳಿತದ ವಿರುದ್ಧ ಪ್ರತಿಭಟನೆ ಮಾಡುವ ಸಲುವಾಗಿ ನರ್ತಿಸುತ್ತಿರುವುದಾಗಿ ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಅದು ಸುಳ್ಳು ಸುದ್ದಿ.



ಇನ್‌ವಿಡ್ ಟೂಲ್ ಮೂಲಕ ವಿಡಿಯೊ ಕೀಫ್ರೇಮ್‌ಗಳನ್ನು ವಿಂಗಡಿಸಿ, ಅವನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಅದು 2023ರ ಜುಲೈ 16ರ ವಿಡಿಯೊ ಎನ್ನುವುದು ತಿಳಿಯಿತು. ಫ್ರಾನ್ಸ್ ಮೂಲದ ಸಾಮಾಜಿಕ ಜಾಲತಾಣಗಳ ಇನ್‌ಫ್ಲುಯೆನ್ಸರ್ ತಮ್ಮಾ ಸಬೆಲಾಶ್ವಿಲಿ ಅದನ್ನು ತಮ್ಮ ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಟಿಕ್ ಟಾಕ್ ವೇದಿಕೆಗಳಲ್ಲಿ ಪೋಸ್ಟ್ ಮಾಡಿದ್ದರು. ತಮ್ಮ ಹಳೆಯ ವಿಡಿಯೊ ಅನ್ನು ಇರಾನ್–ಇಸ್ರೇಲ್ ಯುದ್ಧಕ್ಕೆ ತಳುಕು ಹಾಕಿ ಸುಳ್ಳು ಪ್ರತಿಪಾದನೆಗಳೊಂದಿಗೆ ಹಂಚಿಕೊಳ್ಳುತ್ತಿರುವ ಬಗ್ಗೆ ತಮ್ಮಾ ಅವರು 2025ರ ಜೂನ್ 9ರಂದು ಸ್ಪಷ್ಟೀಕರಣವನ್ನೂ ನೀಡಿದ್ದಾರೆ. ಈ ಬಗ್ಗೆ ಬೂಮ್ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ನುಡಿ ಬೆಳಗು

ಇಲ್ಲದವರಿಗೆ ಮಿಡಿದರೆ ಕಾಯಕ ಕೈಲಾಸ

ದಾದಾಪೀರ್ ನವಿಲೇಹಾಳ್

ಆತನಿಗೆ ವಯಸ್ಸು ಇನ್ನೂ 35. ಮಗುವಿನಂತಹ ಮುಖಚಹರೆ. ಯಾರಾದರೂ ಸರಿ ಇವನನ್ನು ಮಾತಾಡಿಸಿಯೇ ಮುಂದಕ್ಕೆ ಹೋಗಬೇಕು. ಇಲ್ಲದಿದ್ದರೆ ಇವನು ಬಿಡಬೇಕಲ್ಲ, ಕಲ್ಲನ್ನೂ ಅಲ್ಲಾಡಿಸಿ ನಗಿಸಿ ಬಿಡುವವನು. ಹೊಲಕ್ಕೆ ಹೊರಟನೆಂದರೆ ದಣಿವು ಕಾಣದಂತೆ ಹಗಲಿಡೀ ಬೆವರು ಸುರಿಸುತ್ತಾನೆ. ವರ್ಷಕ್ಕೆ ಎರಡು ಸಲ ಮಾತ್ರ ಈದ್ಗಾ ನಮಾಜಿಗೆ ಸೇರಿದವರ ಎದುರು ಎತ್ತುಗಳಿಗೆ ನೊಗ ಕಟ್ಟ ನೇಗಿಲು ನೇತು ಹಾಕಿಕೊಂಡು ಹೊರಡುತ್ತಾನೆ. ಮೂರೂ ಹೊತ್ತು ಏನು ದುಡೀತೀಯೋ ತಮ್ಮಾ, ಹಬ್ಬದ ದಿನನಾದರೂ ನಮಾಜಿಗೆ ಬಾರೋ' ಅಂತ ಕರೆದರೆ 'ನೀವು ದೇವರ ಹತ್ರ ಬೇಡಿಕೊಳ್ರಿ, ನಾನು ಭೂಮ್ತಾಯಿ ಹತ್ರ ಬೇಡಿಕೊಳ್ತೀನಿ' ಅನ್ನುವ ಲೋಕನಿಷ್ಠುರಿ. ಈತ ಶಾಲೆಗಿಂತ ಹೊಲಮನೆ ಕೆಲಸದಲ್ಲಿ ಕಲಿತದ್ದೇ ಹೆಚ್ಚು. ಇವನ ಬಿಡುವಿನ ಜಾಗವೆಂದರೆ ಊರುಬಾಕಲು. ಅಲ್ಲಿ ತರಾವರಿ ಜನ, ಇಕಾತಿ ಮಾತು, ತಾರಾತಿಗಡಿ, ನಗೆಸುಗ್ಗಿ, ಹಾಡು ಹಬ್ಬ. ಅಲ್ಲಿ ನಾಲ್ಕು ಜನರಿಗೆ ತಿನಿಸಿ ಕುಡಿಸಿದರೆ ಅವನ ಜೀವಕ್ಕೆ ತನುವು. ಇವನ ಇನ್ನೊಂದು ಮುಖ, ಊರಲ್ಲಿ ಯಾರು ಸತ್ತರೂ ಸರಿ, ಹಾರೆ, ಸಲಾಕೆ, ಪುಟ್ಟಿ ಹಿಡಿದು ಗುದ್ದು ತೆಗೆಯಲು ಇವನದೇ ಮೊದಲ ಹಾಜರಿ. ಇಲ್ಲಿಗೆ ಎಲ್ಲರೂ ಬರಬೇಕು. ನನಗೂ ಜಾಗ ಬೇಕಲ್ಲ ಅನ್ನುತ್ತಾನೆ. ಶವಕ್ಕೆ ಮನೆ ಮಾಡಿ ಬಂದವನೇ ಸೀದಾ ಹೆಣದ ಮೈ ತೊಳೆಯಲು ತೋಳೇರಿಸುತ್ತಾನೆ.

ಹುಟ್ಟಿದ ಮೇಲೆ ಊರು, ಸಮಾಜ ತನ್ನ ಮೇಲೆ ತೀರಿಸಲಾಗದ ಮುಯ್ಯಿ ಹೊರಿಸಿದೆ. ಅದರ ಭಾರವನ್ನು ಸ್ವಲ್ಪವಾದರೂ ಕಡಿಮೆ ಮಾಡಿಕೊಳ್ಳಲು ಇರುವ ದಾರಿ ಎಂದರೆ ಒಂದು ಕೆಲಸ, ಮತ್ತೊಂದು ಕಾಯಕ. ನೂರಕ್ಕೆ ನೂರು ಲೌಕಿಕವಾಗುವುದು ದುಡಿಮೆ ತರುವ ಕೆಲಸದಿಂದ ಮಾತ್ರ ಸಾಧ್ಯ. ಕೆಲಸದಿಂದ ಕಾಯಕದ ಪಾವಿತ್ರ್ಯಕ್ಕೆ ಜೀವ ಜಿಗಿಯಬೇಕು. ಅದು ಸಂಸಾರವನ್ನು ಮೀರಿ ಸಮಾಜಕ್ಕೆ ವಿಸ್ತರಿಸಿಕೊಳ್ಳಬೇಕು. ದುಡಿಮೆಯ ಒಂದು ಪಾಲನ್ನು ಯಾವುದಾದರೂ ರೂಪದಲ್ಲಿ ಸಮಾಜಕ್ಕೆ ಕೊಟ್ಟು ಕಳೆದುಕೊಳ್ಳುವುದೇ ಕಾಯಕದ ಕೇಂದ್ರ ಪ್ರಾಣ. ಹಾಗೆ ಕಳೆದುಕೊಳ್ಳುವ ಮೂಲಕ ಪಡೆದುಕೊಂಡದ್ದನ್ನು ಒಮ್ಮೆ ಲೆಕ್ಕ ಹಾಕಬೇಕು. ಪಡೆದುಕೊಂಡದ್ದರ ಭಾರವೇ ಹೆಚ್ಚಾಗಿರುತ್ತದೆ.

ಇರುವಷ್ಟು ದಿನ ಸಮಾಜ ಸಂಬಂಧಗಳನ್ನು ಜೀವಂತವಾಗಿ ಇಟ್ಟುಕೊಳ್ಳಲು ಬೇಕಾದದ್ದು ಹೀಗೆ ಕಳೆದುಕೊಳ್ಳುವ ಭಾವ. ನಾವು ಬದುಕಿದ ಪರಿಸರದಿಂದ, ಸಮಾಜದಿಂದ ಪಡೆದುಕೊಂಡ ಎಲ್ಲವನ್ನೂ ಪೂರ್ತಿ ಹಿಂತಿರುಗಿಸಲಾದೀತೇ? ಎಲ್ಲರೂ ಆ ಋಣಭಾರವನ್ನು ಹೊತ್ತೇ ಹೊರಡಬೇಕು. ಕೂಡಿಟ್ಟದ್ದನ್ನು ತಿನ್ನಲು ತಾನೇ ಇರುವುದಿಲ್ಲ ಅನ್ನುವ ಸತ್ಯ ಗೊತ್ತಾಗುವ ಹೊತ್ತಿಗೆ ಪರಿತಪಿಸಲೂ ಆಗದಂತಹ ಪ್ರಮಾದಗಳು ಜರುಗಿ ಹೋಗಿರುತ್ತವೆ. ಅಷ್ಟೇ ಅಲ್ಲ, ಏನೂ ಮಾಡಲಾಗದ ಅಸಹಾಯಕ ಸ್ಥಿತಿಗೆ ಬದುಕು ಬಂದು ನಿಂತಿರುತ್ತದೆ. ಇಲ್ಲದವರಿಗಾಗಿ ಮಿಡಿಯುವ ಕರುಳ ಕಾಳಜಿಯಿಂದ ಕಾಯಕ ಕೈಲಾಸವಾಗುತ್ತದೆ. ನಮ್ಮ ಬದುಕಿಗೆ ಸತ್ಯವೂ ಶುದ್ಧವೂ ಆದ ಪಾವಿತ್ರ್ಯ ಬರುತ್ತದೆ.

'ಹೀಗೆ ಹಗಲು ರಾತ್ರಿ ದುಡಿದು ಸಿಕ್ಕ ಸಿಕ್ಕವರಿಗೆಲ್ಲಾ ಕೊಟ್ಟು ಕಳೀತಿಯಲ್ಲಾ, ಮಕ್ಕಳು ಮರಿ ಅದಾವೆ, ಮದುವೆ ಮುಂಜಿ ಆಗೋದಿದೆ, ಅಕಸ್ಮಾತ್ ನಿನಿಗೇನಾದ್ರೂ ಆದ್ರೆ ಗತಿ ಏನು' ಅಂತ ಯಾರಾದರೂ ಅಂದರೆ ಆತನ ಉತ್ತರ: 'ನಾನು ಸಾಕ್ತೀನಿ ಅನ್ನೋದು ಅಹಂಕಾರ. ಕೊಡೋನು ಕಿತ್ಕೊಳ್ಳೋನು ಮೇಲಿದ್ದಾನೆ. ಆಕಳೇನು ಕರುಗಳಿಗೆ ಬಣವೆ ಒಟ್ಟಿ ಸಾಯುತ್ತಾ?'

ಬಂದ ಹಾಗೆ ಬದುಕುವ ಇಂತಹ ನಂಬಿಕೆ, ಭರವಸೆ ವಿಶ್ವಾಸಗಳಿಗಿಂತ ಬೇರೆ ತಾತ್ವಿಕತೆ ಏನಿದೆ? ಯಾವ ಓದೂ, ಜ್ಞಾನವೂ ಸಾಧಿಸಲಾಗದ ಇಂಥ ಜೀವನ ಶ್ರದ್ಧೆ ಲೋಕಾನುಭವದಿಂದ ಸಾಧ್ಯವಾಗುತ್ತದೆ.

ಪದಬಂಧ 6082

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಡುವಿರುವ ಲಾಯದಿಂದ ತಪ್ಪಿಸಿಕೊಳ್ಳುವಿಕೆ (4)
3.ವರ್ಣವುಳ್ಳ ಅಕ್ಷರಮಾಲೆ (4)
5.ಕನಕವನ್ನು ನೋಡುತ್ತಿರುವ ತಿಳಿಗೇಡಿ (3)
7.ಸರಾಗವಾಗಿ ಕೆಲಸ ಮಾಡುವ ಮೋಚಿ (4)
9.ಅಶೋಕ ವೃಕ್ಷದ ಬಳಿ ತೋಡಿಕೊಂಡ ವ್ಯಸನ (2)
10.ಭಕ್ತಿಯನ್ನು ಸಲ್ಲಿಸುವವ ತಿರುಗಿದ್ದಾನಲ್ಲಾ? (2)
11.ದಿನಮಣಿ ಹಾಗೂ ರಜನೀಕರ ಒಟ್ಟಿಗಿದ್ದಾರೆ (4)
14.ವನದ ಹತ್ತಿರ ಕಟ್ಟಿರುವ ಮನೆ (3)
17.ಬರ ಬಂದಾಗಿನ ನಗ್ನತೆ (4)
18.ಹಸುವಿನ ಹತ್ತಿರ ಆಡುತ್ತಿರುವ ಚಿಕ್ಕ ಮಗು (4)

ಮೇಲಿಂದ ಕೆಳಕ್ಕೆ

1.ಪದ ಹಾಡಿ ಬಹುಮಾನವಾಗಿ ಪಡೆದ ಬಿಲ್ಲೆ (3)
2.ನಿನ್ನೆ ನುಡಿದಿರುವ ಸತ್ಯ (2)
3.ಮನಸ್ಸನ್ನು ಸೆಳೆದ ಕಾಡು ಹೂ (4)
4.ಲೆಕ್ಕ ಬರೆಯುವವನು (3)
6.ನಿಖರವಾಗಿ ವ್ಯಕ್ತವಾದ ಮರುಕ (4)
7.ಮುದ್ರಣದಲ್ಲಿ ಕಾಣಿಸಿದ ಕಡಲು (3)
8.ಭಕ್ತನಲ್ಲಿ ನೆತ್ತರು ಸುರಿಯುತ್ತಿದೆಯಲ್ಲಾ? (4)
12.ಚಂದದಿಂದ ವಂತಿಗೆ ನೀಡುವವನು (4)
13.ಅಡಿಪಾಯ ಇಲ್ಲಿದೆ (3)
15.ಇದು ಕನಸಲ್ಲ! ಸತ್ಯ (3)
16.ಸಂದೇಹ ಪಡುವವನ ಶರೀರ (2)



6081ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚಕ್ಷುಃಪ್ರೀತಿ 4.ಲವಾಜಮೆ
6.ವಿಧುರ 7.ಬಡವಿ
8.ದನುಜ 10.ದಮನ
12.ಗದ್ಗದ 13.ಅಪಾತ್ರ
14.ಅನಿರುದ್ಧ 16.ಬಹಿರಂಗ

ಮೇಲಿಂದ ಕೆಳಕ್ಕೆ:
1.ಚಮ್ತಾರ 2.ತಿಲ
3.ಆಮೆ 5.ವಾಕ್ಕೋವಿದ
6.ವಿಷಾದ 9.ಜಗದ್ಗುರು
11.ನಕ್ಷತ್ರ 13.ಅನಂಗ
14.ಅಕ್ಕ 15.ದ್ಧಬ

ಸುಡೊಕು 6466

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2			6	7	4		
3								
	7	1		4	8		6	
	4						8	
8		9		7	1			6
	5		8		4		9	
2				9			3	
4		3		5	2			8
	1		4			5	2	

6465 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

23 ಜೂನ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣತ್ರಯೋದಶಿ ಗಂ 22-10 ನಕ್ಷತ್ರ: ಕೃತಿಕ ಗಂ. 15-17 ಯೋಗ: ಧೃತಿ ಗಂ. 13-17, ಮಿಥುನ ಮಾಸದ 09 ನೇ ದಿನ. ಮಳೆ ನಕ್ಷತ್ರ : ಆರ್ದ್ರಾ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 – 09-00 ಸೂರ್ಯೋದಯ : 06-09 ಸೂರ್ಯಾಸ್ತ : 06-56, ಮುಸ್ಲಿಂ ದಿನಾಂಕ : 26 ಜುಲ್‌ಹಿಜಾ, ಅದೃಷ್ಟ ಸಂಖ್ಯೆ : 5, 11

ಮೇಷ: ಯಾವುದೇ ಪ್ರಯತ್ನವನ್ನು ನಿಲ್ಲಿಸದೆ ಜಾಗರೂಕತೆಯಿಂದ ಕೆಲಸವನ್ನು ಮುನ್ನಡೆಸಿರಿ. ಆರ್ಥಿಕ ಸುಧಾರಣೆಯಿಂದ ಕುಟುಂಬದ ಎಲ್ಲ ತೊಂದರೆಗಳು ನಿವಾರಣೆಯಾಗಲಿವೆ. ಮನರಂಜನೆಗಾಗಿ ಖರ್ಚು ಮಾಡುವಿರಿ.

ವೃಷಭ: ಹಂತ ಹಂತದಲ್ಲೂ ಜುಗ್ಗನೆಂದು ಹೀಯಾಳಿಸಿಕೊಂಡು ಕೂಡಿಟ್ಟ ಹಣ ದೊಡ್ಡ ಮೊತ್ತವಾಗಿ ಉಪಯೋಗಕ್ಕೆ ಬರಲಿದೆ. ಕುಟುಂಬದ ಆಂತರಿಕ ವಿಷಯದಲ್ಲಿ ಉಂಟಾದ ತಪ್ಪುಗ್ರಹಿಕೆಯಿಂದ ಮನಸ್ತಾಪಗಳು ಬರಬಹುದು.

ಮಿಥುನ: ಮಾಡುವ ಕೆಲಸಗಳಲ್ಲಿ ಅದೃಷ್ಟವನ್ನು ಪರೀಕ್ಷಿಸಿಕೊಳ್ಳುವಿರಿ. ಪುಸ್ತಕದ ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿ ಲಾಭ ಸಿಗಲಿದೆ. ಇಂದಿನ ವಿಚಾರಕ್ಕೆ ತೀರ್ಮಾನಿಸದೇ, ಭವಿಷ್ಯದ ಬಗ್ಗೆ ಯೋಚಿಸಿ ತೀರ್ಮಾನಿಸಿ.

ಕರ್ಕಾಟಕ: ಮಾನಸಿಕ ಸ್ಥೈರ್ಯ ಸದೃಢವಾಗುವುದು. ಹಲವಾರು ಕಾರಣಗಳಿಗೆ ಸ್ನೇಹಿತರ ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರವನ್ನು ಅಪೇಕ್ಷಿಸಬಹುದು. ಮೇಲಧಿಕಾರಿಗಳ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗುವಿರಿ.

ಸಿಂಹ: ಗಳಿಕೆಯ ಬಗ್ಗೆ ಚಿಂತಿಸಬೇಡಿ, ಕೆಲಸದಲ್ಲಿ ಅಸ್ತಿತ್ವವನ್ನು ಕಾಪಾಡಿಕೊಳ್ಳಿ. ಉತ್ಸಾಹವನ್ನು ಹೆಚ್ಚಿಸಿಕೊಳ್ಳುವ ಸಮಯವಾಗಿದೆ. ಮತ್ತೊಬ್ಬರನ್ನು ಗೌರವಿಸುವುದರಿಂದ ನಿಮ್ಮ ಗೌರವವು ಹೆಚ್ಚುವುದು.

ಕನ್ಯಾ: ದಾಯಾದಿಗಳು ಅಥವಾ ಅಕ್ಕ-ಪಕ್ಕದವರು ಭೂ ಸಂಬಂಧದ ಕಲಹಗಳನ್ನು ಬಿಟ್ಟು ರಾಜಿ ಮಾಡಿಕೊಳ್ಳುವ ಮನೋಭಾವಕ್ಕೆ ಬರುವರು. ಅದರಂತೆ ನಡೆಯುವುದೇ ಉತ್ತಮ. ಅನವಶ್ಯಕ ಚಿಂತೆ ಕಂಡುಬರಲಿದೆ.

ತುಲಾ: ಈ ದಿನ ಸರ್ಕಾರಿ ಮೂರನೇ ದರ್ಜೆಯ ನೌಕರರಿಗೆ ಆರ್ಥಿಕವಾಗಿ ಅನುಕೂಲವಾಗುವುದು. ಬಂಡವಾಳ ಹೆಚ್ಚಿಸಿಕೊಳ್ಳುವ ಬಗ್ಗೆ ಯೋಚಿಸಬಹುದು. ಮನೆಯ ಹಿರಿಯರ ಆರೋಗ್ಯದಲ್ಲಿ ಏರಿಳಿತ ಕಾಣುವಂತಾಗಲಿದೆ.

ವೃಶ್ಚಿಕ: ಅಧಿಕ ಜವಾಬ್ದಾರಿ ಅಥವಾ ಒತ್ತಡ ತರುವಂಥ ಕೆಲಸಗಳಿಂದ ದೂರವಿರಿ. ಕ್ರೀಡಾಪಟುಗಳಿಗೆ ಮತ್ತು ಕಲಾವಿದರಿಗೆ ಸಾಧನೆಗೆ ತಕ್ಕಂತೆ ಸರ್ಕಾರದಿಂದ ಸನ್ಮಾನಗಳು ಲಭಿಸಬಹುದು.

ಧನು: ಮಾತುಗಾರಿಕೆಯ ಸಾಮರ್ಥ್ಯದಿಂದ ಇತರರನ್ನು ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ಅದನ್ನು ಬಳಸಿಕೊಳ್ಳಿ. ಬಂಧುಗಳು ಹಾಗೂ ಮಿತ್ರರೊಡನೆ ಸಂತೋಷದ ಕ್ಷಣಗಳನ್ನು ಹಂಚಿಕೊಳ್ಳಲಿದ್ದೀರಿ.

ಮಕರ: ರಾಜಕಾರಣಿಗಳಿಗೆ ಬಹು ದಿನಗಳ ನಿರೀಕ್ಷೆಯಂತೆ ಉತ್ತಮ ಸ್ಥಾನಮಾನ ಲಭ್ಯವಾಗಲಿದೆ. ಮನೋಭಾವಕ್ಕೆ ಕುಟುಂಬ ವರ್ಗದವರು ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಾರೆ. ಕೆಲವು ವಿಷಯದಲ್ಲಿ ಕಠಿಣ ನಿಲುವಿನ ಅಗತ್ಯವಿದೆ.

ಕುಂಭ: ಮಂದಗತಿಯ ನಡೆ ಕಂಡರೂ ಅಭಿವೃದ್ಧಿಯಂತೂ ಖಚಿತವಾಗಿ ಅನುಭವಕ್ಕೆ ಬರುವುದು. ಬೆನ್ನುನೋವು ಹೋಗಲಾಡಿಸಿಕೊಳ್ಳಲು ಯೋಗಾಭ್ಯಾಸ ಮಾಡಿರಿ. ದೇವತಾ ಅನುಗ್ರಹ ಉತ್ತಮವಿದೆ.

ಮೀನ: ರಬ್ಬರ್, ಪ್ಲಾಸ್ಟಿಕ್ ವ್ಯವಹಾರದವರು ವ್ಯಾಪಾರದಲ್ಲಿ ಅಧಿಕ ಲಾಭ ಹೊಂದುವರು. ತೆಗೆದುಕೊಂಡಿರುವ ನಿರ್ಧಾರಗಳು ಭವಿಷ್ಯದ ಮೇಲೆ ಉತ್ತಮ ಪರಿಣಾಮ ಬೀರಲಿವೆ. ನಿರ್ಧಾರದಲ್ಲಿ ಸ್ಪಷ್ಟತೆ ಇರಲಿ.

ಗುಂಡಣ್ಣ



© 2025 by King Features Syndicate, Inc. World Rights reserved
www.Blondie.com

ಸರ್ಕಾರಿ, ಖಾಸಗಿ ವಲಯದ ಬ್ಯಾಂಕ್‌ಗಳ ಸಹಯೋಗ

ಡಿಜಿಟಲ್ ವಂಚನೆಗೆ ಆರ್‌ಬಿಐ ಲಗಾಮು

ನವದೆಹಲಿ (ಪಿಟಿಐ): ಡಿಜಿಟಲ್ ಪಾವತಿ ವ್ಯವಸ್ಥೆಗಳ ಮೂಲಕ ನಡೆಯುವ ವಂಚನೆಗಳನ್ನು ಮಟ್ಟ ಹಾಕುವ ಉದ್ದೇಶದಿಂದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ಖಾಸಗಿ ಮತ್ತು ಸರ್ಕಾರಿ ಸ್ವಾಮ್ಯದ ಪ್ರಮುಖ ಬ್ಯಾಂಕ್‌ಗಳ ಜೊತೆಗೂಡಿ ಡಿಜಿಟಲ್ ಪಾವತಿ ಗುಪ್ತಚರ ವೇದಿಕೆ (ಡಿಪಿಐಪಿ) ಅಭಿವೃದ್ಧಿಪಡಿಸಲು ಮುಂದಾಗಿದೆ.

ಈ ವ್ಯವಸ್ಥೆಯನ್ನು ಆರ್‌ಬಿಐ, ಡಿಜಿಟಲ್ ಸಾರ್ವಜನಿಕ ಮೂಲ ಸೌಕರ್ಯದ (ಡಿಪಿಐ) ಮಾದರಿಯಲ್ಲಿ ಅಭಿವೃದ್ಧಿಪಡಿಸಲಿದೆ. ಇಡೀ ವ್ಯವಸ್ಥೆಯ ಮೇಲೆ ಆರ್‌ಬಿಐ ಮೇಲ್ವಿಚಾರಣೆ ಇರಲಿದೆ.

ಡಿಜಿಟಲ್ ಪಾವತಿ ವ್ಯವಸ್ಥೆಗಳ ಮೂಲಕ ವಂಚನೆಗಳು ನಡೆದಲ್ಲಿ, ಅದರ ಮಾಹಿತಿಯನ್ನು ತಕ್ಷಣವೇ ಹಂಚಿಕೊಳ್ಳುವ ಸೌಲಭ್ಯ ಇರಲಿದೆ. ಆ ಮೂಲಕ, ವಂಚನೆಯ ಉದ್ದೇಶದ ಡಿಜಿಟಲ್ ವಹಿವಾಟುಗಳನ್ನು ತಡೆಯುವ ಉದ್ದೇಶ ಆರ್‌ಬಿಐಗೆ ಇದೆ ಎಂದು ಮೂಲಗಳು ಹೇಳಿವೆ.

ಸಮಾಲೋಚನೆ

- ಗರಿಷ್ಠ 10 ಬ್ಯಾಂಕ್‌ಗಳ ಜೊತೆ ಸಮಾಲೋಚನೆ ನಡೆಸಿ, ರಿಸರ್ವ್ ಬ್ಯಾಂಕ್ ಇನ್ನೊವೇಷನ್ ಹಬ್, ಡಿಪಿಐಪಿ ಮಾದರಿಯನ್ನು ರೂಪಿಸಲಿದೆ.
- ಕಾರ್ಡ್ ಬಳಸಿ ಮಾಡುವ ಪಾವತಿಗಳಲ್ಲಿ, ಇಂಟರ್ನೆಟ್ ಮೂಲಕ ಮಾಡುವ ಪಾವತಿಗಳಲ್ಲಿ ಹೆಚ್ಚಿನ ವಂಚನೆ ಪ್ರಕರಣಗಳು ವರದಿಯಾಗಿವೆ.

ವಂಚನೆ ಪ್ರಕರಣಗಳು ಖಾಸಗಿ ವಲಯದ ಬ್ಯಾಂಕ್‌ಗಳಿಗೂ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೂ ತಲೆನೋವಾಗಿ ಪರಿಣಮಿಸಿವೆ. ಹೀಗಾಗಿ ಹೊಸದಾಗಿ ಅಸ್ತಿತ್ವಕ್ಕೆ ಬರಲಿರುವ ವ್ಯವಸ್ಥೆಯ ಸಾಂಸ್ಥಿಕ ರೂಪವನ್ನು ಖಾಸಗಿ ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ನೆರವು ಪಡೆದು ನಿರ್ಣಯಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಹೊಸ ವ್ಯವಸ್ಥೆಯ ರೂಪುರೇಷೆಗಳನ್ನು ಅಂತಿಮಗೊಳಿಸಲು ಆರ್‌ಬಿಐ ಈ ತಿಂಗಳ ಆರಂಭದಲ್ಲಿ ಉನ್ನತ ಮಟ್ಟದ ಸಭೆಯೊಂದನ್ನು ನಡೆಸಿದೆ. ವಿವಿಧ ಬ್ಯಾಂಕ್‌ಗಳ ಹಿರಿಯ ಅಧಿಕಾರಿಗಳು, ಆರ್‌ಬಿಐ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗಿಯಾಗಿದ್ದರು.

ಡಿಜಿಟಲ್ ಪಾವತಿ ವ್ಯವಸ್ಥೆಗಳ ಮೂಲಕ ಆಗುವ ವಂಚನೆಗಳನ್ನು ತಡೆಯುವುದು ಕೇಂದ್ರ ಸರ್ಕಾರದ ಹಾಗೂ ಆರ್‌ಬಿಐನ ಆದ್ಯತೆಗಳಲ್ಲಿ ಒಂದು. ಹೀಗಾಗಿ, ಮುಂದಿನ ಕೆಲವು ತಿಂಗಳುಗಳಲ್ಲಿ ಈ ವ್ಯವಸ್ಥೆಯು ಕಾರ್ಯಾಚರಣೆ ಆರಂಭಿಸುವ ನಿರೀಕ್ಷೆ ಇದೆ ಎಂದು ಮೂಲಗಳು ಹೇಳಿವೆ.

ಈ ವ್ಯವಸ್ಥೆಯು ಕಾರ್ಯಾಚರಣೆ ಆರಂಭಿಸಿದ ನಂತರದಲ್ಲಿ ವಿವಿಧ ಮೂಲಗಳಿಂದ ಲಭ್ಯವಾಗುವ ದತ್ತಾಂಶ ವಿಶ್ಲೇಷಿಸಲಿದೆ. ವಂಚನೆಯ ಉದ್ದೇಶದ ವಹಿವಾಟುಗಳನ್ನು ಅದು ತಡೆಯಲಿದೆ. ಮಾಹಿತಿಯನ್ನು ತಕ್ಷಣಕ್ಕೆ ಹಂಚಿಕೊಳ್ಳುವ ಮೂಲಕ ವಹಿವಾಟುಗಳು ಸುರಕ್ಷಿತವಾಗಿ ಇರುವಂತೆ ನೋಡಿಕೊಳ್ಳಲಿದೆ ಎಂದಿವೆ.

ಬೆಳ್ಳಿ: ಹೊಸ ಹೂಡಿಕೆಗೆ ಸಕಾಲವೇ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

2023ರ ಜನವರಿಯಿಂದ 2025ರ ಜೂನ್ ನಡುವೆ ಬೆಳ್ಳಿಯ ಹೂಡಿಕೆದಾರರಿಗೆ ಶೇಕಡ 47.5ರಷ್ಟು ಲಾಭ ಸಿಕ್ಕಿದೆ. ಎರಡೂವರೆ ವರ್ಷದಲ್ಲಿ ಬೆಳ್ಳಿಯ ಬೆಲೆ ₹74,600ಯಿಂದ ₹1.10 ಲಕ್ಷಕ್ಕೆ ಏರಿಕೆಯಾಗಿದೆ. ಅಂದರೆ ಈ ಅವಧಿಯಲ್ಲಿ ಒಂದು ಕೆ.ಜಿ ಬೆಳ್ಳಿಯ ಬೆಲೆ ಸುಮಾರು ₹36 ಸಾವಿರದಷ್ಟು ಹೆಚ್ಚಳವಾಗಿದೆ. ಚಿನ್ನದ ಬೆಲೆ ಏರಿಕೆಗೆ ಪೈಪೋಟಿ ಕೊಡುವಷ್ಟರ ಮಟ್ಟಿಗೆ ರಜತದ ಬೆಲೆ ಜಿಗಿಯುತ್ತಿದೆ. ಪರಿಸ್ಥಿತಿ ಹೀಗಿರುವಾಗ ಬೆಳ್ಳಿಯ ಮೇಲೆ ಹೂಡಿಕೆಗೆ ಇದು ಸೂಕ್ತ ಸಮಯವೇ? ಅದರ ಬೆಲೆ ಮತ್ತಷ್ಟು ಏರಿಕೆ ಕಾಣುವುದೇ? ಈಗಾಗಲೇ ಹೂಡಿಕೆ ಮಾಡಿ ಲಾಭ ಪಡೆದಿರುವವರು ಅದನ್ನು ನಗದೀಕರಣ ಮಾಡಿಕೊಳ್ಳಬೇಕೇ?

ಬೆಳ್ಳಿ ಬೆಲೆಯ ಇತಿಹಾಸ ನೋಡಿದಾಗ ಅಲ್ಲಿ ಸದಾ ಏರಿಳಿತ ಕಾಣಿಸುತ್ತದೆ. 1981ರಲ್ಲಿ ಒಂದು ಕೆ.ಜಿ ಬೆಳ್ಳಿಯ ಬೆಲೆ ₹2,715 ಇತ್ತು. 1989ರಲ್ಲಿ ಅದು ₹6,755ಕ್ಕೆ ಜಿಗಿಯಿತು. 1992ರ ಹೊತ್ತಿಗೆ ಬೆಳ್ಳಿಯ ಬೆಲೆ ₹8,040 ದಾಟಿತು. ಆದರೆ ಮತ್ತೊಂದು ವರ್ಷದಲ್ಲಿ (1993ರಲ್ಲಿ) ಬೆಳ್ಳಿಯ ಬೆಲೆ ₹5,489ಕ್ಕೆ ಇಳಿಯಿತು. ನಂತರ ಕೊಂಚ ಚೇತರಿಸಿಕೊಂಡ ಬೆಳ್ಳಿ, 2003ರವರೆಗೂ ಏಳೆಂಟು ಸಾವಿರದ ಆಸುಪಾಸಿನಲ್ಲೇ ಇತ್ತು. ಅಂದರೆ, 10 ವರ್ಷ ಬೆಳ್ಳಿಯ ಬೆಲೆ ಹೆಚ್ಚು ಏರಿಕೆ ಕಾಣಲಿಲ್ಲ. ಆದರೆ 2011ರಲ್ಲಿ ಬೆಳ್ಳಿಯ ಬೆಲೆ ಗಣನೀಯ ಏರಿಕೆ ಕಂಡು ಕೆ.ಜಿಗೆ ₹56,900 ದಾಟಿತು. ಮುಂದಿನ ಹತ್ತು ವರ್ಷ ಅಂದರೆ 2021ರವರೆಗೂ ಬೆಳ್ಳಿಯ ಬೆಲೆ ₹37 ಸಾವಿರದಿಂದ ₹62,572 ನಡುವೆ ಏರಿಳಿತ ಕಾಣುತ್ತಿತ್ತು. 2023ರಿಂದ ರಜತದ ಬೆಲೆ ಮಿಂಚಿನ ಓಟ ಮುಂದುವರಿಸಿದೆ. ಬೆಳ್ಳಿಯ ಬೆಲೆ 2023ರಲ್ಲಿ ₹78,600, 2024ರಲ್ಲಿ ₹95,700 ಮತ್ತು 2025ರಲ್ಲಿ ₹1.10 ಲಕ್ಷದ ಆಸುಪಾಸಿನಲ್ಲಿದೆ. (ಪಟ್ಟಿ ಗಮನಿಸಿ)

ಬೆಳ್ಳಿಯ ಬೆಲೆಯ ಏರಿಳಿತದ ಹಾದಿ
(1981ರಿಂದ 2025ರವರೆಗೆ) (1 ಕೆ.ಜಿಗೆ)

ವರ್ಷ	ಬೆಲೆ
1981	₹2,715
1989	₹6,755
1992	₹8,040
1993	₹5,489
2003	₹7,695
2011	₹56,900
2021	₹62,572
2023	₹78,600
2024	₹95,700
2025	₹1.10 ಲಕ್ಷ

(ಮಾಹಿತಿ ಮೂಲ – ಬ್ಯಾಂಕ್ ಬಜಾರ್)

ಬೆಳ್ಳಿಯ ಮೇಲಿನ ಹೂಡಿಕೆಗೆ ಇದು ಸಕಾಲವೇ?: ಬೆಳ್ಳಿಯ ಬೆಲೆ ಎತ್ತ ಸಾಗಲಿದೆ ಎನ್ನುವುದನ್ನು ಅಂದಾಜು ಮಾಡಲು ಕೆಲವು ವಿಷಯಗಳನ್ನು ವಿಶ್ಲೇಷಣೆಗೆ ಒಳಪಡಿಸಬೇಕಾಗುತ್ತದೆ. ಬೆಳ್ಳಿಯ ಬೇಡಿಕೆ ಮತ್ತು ಪೂರೈಕೆ, ಆರ್ಥಿಕ ಚಟುವಟಿಕೆ, ಬಡ್ಡಿದರ, ಡಾಲರ್ ಮೌಲ್ಯ, ಜಾಗತಿಕ ವಿದ್ಯಮಾನಗಳು, ಚಿನ್ನ ಮತ್ತು ಬೆಳ್ಳಿಯ ಅನುಪಾತ, ತಾಮ್ರ ಮತ್ತು ಬೆಳ್ಳಿಯ ಅನುಪಾತ ಹೀಗೆ ಹಲವು ಅಂಶಗಳು ಬೆಳ್ಳಿಯ ಬೆಲೆಯನ್ನು ನಿರ್ಧರಿಸುತ್ತವೆ. ಕೆಲ ಆಯ್ದ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸೋಣ.

ಬೇಡಿಕೆ ಮತ್ತು ಪೂರೈಕೆ: ಚಿನ್ನದ ಬೆಲೆ ಏರಿಕೆ ಹೇಗೆ ಬೇಡಿಕೆ ಮತ್ತು ಪೂರೈಕೆಯ ಮೇಲೆ ನಿರ್ಧಾರವಾಗುವುದೋ ಅದೇ ರೀತಿ ಬೆಳ್ಳಿಯ ಬೆಲೆ ಏರಿಕೆ ಸಹ ಬೇಡಿಕೆ ಮತ್ತು ಪೂರೈಕೆಯ ತಳಹದಿಯ ಮೇಲೆ ನಿಂತಿದೆ. ಅಮೆರಿಕದ ಸಿಲ್ವರ್ ಇನ್‌ಸ್ಟಿಟ್ಯೂಟ್ 2025ರಲ್ಲಿ ನಡೆಸಿರುವ ಸಮೀಕ್ಷೆಯು ಬೆಳ್ಳಿಯ ಬೇಡಿಕೆ ಮತ್ತು ಪೂರೈಕೆಯ ವಿಷಯವಾಗಿ ಬೆಳಕು ಚೆಲ್ಲುತ್ತದೆ. ಸಾಮಾನ್ಯವಾಗಿ ಗಣಿಗಾರಿಕೆ ಮತ್ತು ಮರುಬಳಕೆಯ ವಿಧಾನದಲ್ಲಿ ಬೆಳ್ಳಿಯ ಉತ್ಪಾದನೆ ಆಗುತ್ತದೆ. ಕೈಗಾರಿಕಾ ಬಳಕೆ, ಫೋಟೋಗ್ರಫಿ, ಆಭರಣ ತಯಾರಿಕೆ, ನಾಣ್ಯ ತಯಾರಿಕೆ ಮತ್ತು ಬೆಳ್ಳಿಯ ಬಿಸ್ಕತ್‌ಗಳಿಗೆ ಬೇಡಿಕೆ ಇರುತ್ತದೆ. ಬೆಳ್ಳಿಗೆ ಇರುವ ಬೇಡಿಕೆಯಲ್ಲಿ ಶೇ 50ಕ್ಕೂ ಹೆಚ್ಚು ಪಾಲು ಎಲೆಕ್ಟ್ರಾನಿಕ್ಸ್, ಸೋಲಾರ್ ಫಲಕ ಮತ್ತು ವಿದ್ಯುತ್‌ಚಾಲಿತ ವಾಹನಗಳ ತಯಾರಿಕಾ ವಲಯದಿಂದ ಬರುತ್ತಿದೆ. 2020ರವರೆಗೂ ಬೆಳ್ಳಿಯ ಬೇಡಿಕೆಗೆ ತಕ್ಕಂತೆ ಪೂರೈಕೆ ಇತ್ತು. ಆದರೆ 2021ರಿಂದ ಲಭ್ಯತೆಗಿಂತ ಬೇಡಿಕೆ ಜಾಸ್ತಿಯಾಗುತ್ತಿದೆ. ಸಿಲ್ವರ್ ಇನ್‌ಸ್ಟಿಟ್ಯೂಟ್ ಪ್ರಕಾರ 2025ರಲ್ಲಿ ಕೈಗಾರಿಕಾ ವಲಯದಲ್ಲಿ ಬೆಳ್ಳಿಗೆ ಇರುವ ಬೇಡಿಕೆ ಸುಮಾರು 700 ಮಿಲಿಯನ್ ಔನ್ಸ್. ಸದ್ಯದ ಪರಿಸ್ಥಿತಿಯಲ್ಲಿ ಪೂರೈಕೆ ಪ್ರಮಾಣಕ್ಕಿಂತ ಬೇಡಿಕೆ ಜಾಸ್ತಿ ಇದೆ. ಆ ಕಾರಣದಿಂದಾಗಿ ಬೆಳ್ಳಿಯ ಬೆಲೆ ಏರುತ್ತಿದೆ. ಆದರೆ ಬೇಡಿಕೆ ಪ್ರಮಾಣ ತಗ್ಗಿದರೆ ಒಂದೆರಡು ವರ್ಷಗಳಲ್ಲಿ ಬೆಳ್ಳಿಯ ಬೆಲೆ ಇಳಿಕೆ ಕಾಣಬಹುದು.

ಆರ್ಥಿಕ ಚಟುವಟಿಕೆ: ಬೆಳ್ಳಿಗೆ ಸೃಷ್ಟಿಯಾಗಿರುವ ಬಹುಪಾಲು ಬೇಡಿಕೆ ಕೈಗಾರಿಕಾ ವಲಯದಿಂದ ಬರುತ್ತಿದೆ. ದೇಶದಲ್ಲಿ ಆರ್ಥಿಕ ಪ್ರಗತಿಯಾದರೆ ಕೈಗಾರಿಕೆ ಮತ್ತು ಉತ್ಪಾದನಾ ವಲಯಗಳು ವೇಗ ಪಡೆದುಕೊಂಡು ಚಟುವಟಿಕೆ ಹೆಚ್ಚಿಸುವುದರಿಂದ ಬೆಳ್ಳಿಗೆ ಬೇಡಿಕೆ ಬರುತ್ತದೆ. ವಿಶ್ವ ಬ್ಯಾಂಕ್‌ನ ದತ್ತಾಂಶದ ಪ್ರಕಾರ 2024ರ ಒಟ್ಟು ಜಾಗತಿಕ ಜಿಡಿಪಿ ಬೆಳವಣಿಗೆ ಶೇ 3.2ರಷ್ಟಿದ್ದರೆ 2023ರಲ್ಲಿ ಜಿಡಿಪಿ ಬೆಳವಣಿಗೆ ದರ ಶೇ 2.8ರಷ್ಟಿತ್ತು. ಅಂದರೆ, 2024ರ ಜಿಡಿಪಿ ಹೆಚ್ಚಳ ಬೆಳ್ಳಿಯ ಬೆಲೆ ಏರಿಕೆಗೆ ಪರೋಕ್ಷವಾಗಿ ಅನುಕೂಲಕರ ವಾತಾವರಣ ಸೃಷ್ಟಿಸಿರಬಹುದು. ಆದರೆ 2025ರ ಜಾಗತಿಕ ಜಿಡಿಪಿ ಬೆಳವಣಿಗೆ ದರದ ಅಂದಾಜು ಅಷ್ಟು ಉತ್ತಮವಾಗಿಲ್ಲ. 2025ರಲ್ಲಿ ಜಿಡಿಪಿ ಬೆಳವಣಿಗೆ ದರ ಶೇ 2.7ರಷ್ಟು ಇರಬಹುದು ಎಂದು ವಿಶ್ವ ಬ್ಯಾಂಕ್ ಹೇಳಿದೆ. ಒಟ್ಟಾರೆಯಾಗಿ ನೋಡಿದಾಗ 2025ರಲ್ಲಿ ಆರ್ಥಿಕ ಪ್ರಗತಿ ಕುಂಠಿತವಾಗುವ ಸಂಭವವಿದೆ ಎಂದು ಬಹುತೇಕ ವಿಶ್ಲೇಷಣೆಗಳು ಹೇಳುತ್ತಿವೆ. ಈ ದೃಷ್ಟಿಯಲ್ಲಿ ನೋಡಿದಾಗ 2025 ಬೆಳ್ಳಿಗೆ ಅಷ್ಟು ಆಶಾದಾಯಕವಲ್ಲ.

ಬಡ್ಡಿ ದರ ನೀತಿ: ಬಡ್ಡಿ ದರ ಏರಿಕೆ ಅಥವಾ ಇಳಿಕೆಯು ಬೆಳ್ಳಿಯ ಬೆಲೆ ಏರಿಕೆ ಮೇಲೆ ಪರಿಣಾಮ ಬೀರುತ್ತದೆ. ಬಡ್ಡಿ ದರ ಜಾಸ್ತಿ ಇದ್ದಾಗ ಹೂಡಿಕೆದಾರರು ಬಾಂಡ್, ನಿಶ್ಚಿತ ಹೂಡಿಕೆಗಳು ಸೇರಿದಂತೆ ನಿಶ್ಚಿತ ಆದಾಯ ಕೊಡುವ ಹೂಡಿಕೆಗಳತ್ತ ವಾಲುತ್ತಾರೆ. ಆದರೆ ಬಡ್ಡಿ ದರ ಇಳಿಕೆಯ ಸಂದರ್ಭದಲ್ಲಿ ನಗದು ಹರಿವು ಹೆಚ್ಚಾಗುವ ಕಾರಣ ಬೆಳ್ಳಿ, ಚಿನ್ನದಂತಹ ಹೂಡಿಕೆಗಳ ಮೇಲೆ ಹೂಡಿಕೆದಾರರು ಚಿತ್ತ ಹರಿಸುತ್ತಾರೆ. ಸದ್ಯ ಅಮೆರಿಕದ ಫೆಡರಲ್ ಬ್ಯಾಂಕ್‌ನ ಬಡ್ಡಿ ದರ ಶೇ 4.25ರಿಂದ ಶೇ 4.5ರ ನಡುವೆ ಇದೆ. ಅಮೆರಿಕದಲ್ಲಿ ಬೆಲೆ ಏರಿಕೆ ನಿಯಂತ್ರಣಕ್ಕೆ ಬಂದಿರುವ ಕಾರಣ ಈ ವರ್ಷ ಮತ್ತೆ ಎರಡು ಬಾರಿ ಬಡ್ಡಿ ದರ ಇಳಿಕೆ ಮಾಡುವ ಸಾಧ್ಯತೆಯನ್ನು ಅಮೆರಿಕ ಫೆಡರಲ್ ಬ್ಯಾಂಕ್ ಹೇಳಿದೆ. ಜಗತ್ತಿನ ಇತರ ಪ್ರಮುಖ ರಾಷ್ಟ್ರಗಳೂ ಬಡ್ಡಿ ಇಳಿಕೆಯ ಹಾದಿಯಲ್ಲಿವೆ. ಹೀಗಿರುವಾಗ ಬೆಳ್ಳಿಯ ಓಟಕ್ಕೆ ಮತ್ತಷ್ಟು ಅನುಕೂಲಕರ ವಾತಾವರಣ ಸೃಷ್ಟಿಯಾಗುವ ಸಂಭವವಿದೆ.

ಜಾಗತಿಕ ವಿದ್ಯಮಾನಗಳು: ಜಾಗತಿಕ ತಲ್ಲಣ, ಯುದ್ಧದ ಸಂದರ್ಭ, ಆರ್ಥಿಕ ಅನಿಶ್ಚಿತತೆ ಹೀಗೆ ಅನೇಕ ಸಂಕಷ್ಟಗಳಿಂದ ಪಾರಾಗಲು ಪ್ರತಿ ದೇಶವೂ ಸುರಕ್ಷತೆಯ ದೃಷ್ಟಿಯಿಂದ ಚಿನ್ನ ಮತ್ತು ಬೆಳ್ಳಿಯ ಮೇಲೆ ಹೂಡಿಕೆ ಮಾಡುತ್ತದೆ. ಸಾಮಾನ್ಯವಾಗಿ ಜಾಗತಿಕ ಅನಿಶ್ಚಿತ ಸಂದರ್ಭಗಳು ಬಂದಾಗ ಚಿನ್ನ ಮತ್ತು ಬೆಳ್ಳಿಯ ಬೆಲೆ ಏರಿಕೆ ಕಾಣುತ್ತದೆ. ಸದ್ಯದ ಸಂದರ್ಭ ನೋಡಿದಾಗ ಇಸ್ರೇಲ್–ಇರಾನ್, ರಷ್ಯಾ–ಉಕ್ರೇನ್ ಯುದ್ಧ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಂಕ ಸಮರ ಸೇರಿದಂತೆ ಹಲವು ಅಂಶಗಳು ಬೆಳ್ಳಿಯ ಬೆಲೆ ಏರಿಕೆ ಕಾಣಲು ಪೂರಕವಾಗಿವೆ.

(ಗಮನಿಸಿ: ಇದು ಬೆಳ್ಳಿಯ ಮೇಲೆ ಹೂಡಿಕೆಗೆ ನೀಡುತ್ತಿರುವ ಸಲಹೆ ಅಲ್ಲ. ಹೂಡಿಕೆಗೆ ಮುನ್ನ ನಿಮ್ಮ ಹಣಕಾಸು ಸಲಹೆಗಾರರನ್ನು ಸಂಪರ್ಕಿಸಿ)
(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ
ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ನರ್ಸರಿ ಟೀಚರ್ಸ್ ಟ್ರೈನಿಂಗ್ ಕೋರ್ಸ್
ಪ್ರೈಮರಿ ಟೀಚರ್ಸ್ ಟ್ರೈನಿಂಗ್ (PTT)
Diploma in Computer Teachers Training Course
DIPLOMA IN COMPUTER DATA ENTRY OPERATOR
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]
ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Empanelled & Recognised by Govt. of India & Karnataka
The RCSS
Mob. 9008419955, 9901520055, 9449198555
Email: info@thercss.co, Web: www.thercss.com

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹590
	12 ಕ್ಕೆ	₹80
ಮೈಸೂರು:	100 ಕ್ಕೆ	₹595

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹300-558
ದ್ವಿತಳಿ (ಬಿ.ವಿ)	₹401-653

311 ಭಾರತೀಯರು ವಾಪಸ್

ನವದೆಹಲಿ (ಪಿಟಿಐ): ಸಂಘರ್ಷ ಪೀಡಿತ ಇರಾನ್‌ನಿಂದ 311 ಭಾರತೀಯರನ್ನು ಸುರಕ್ಷಿತವಾಗಿ ಭಾನುವಾರ ತಾಯ್ನಾಡಿಗೆ ಕರೆತರಲಾಯಿತು ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಇರಾನ್‌ನ ಮಶಾದ್ ನಗರದಿಂದ ವಿಶೇಷ ವಿಮಾನದಲ್ಲಿ ಭಾರತೀಯರನ್ನು ನವದೆಹಲಿಗೆ ಕರೆತರ ಲಾಯಿತು ಎಂದು ಅದು ಹೇಳಿದೆ. 'ಆಪರೇಷನ್ ಸಿಂಧೂ' ಮೂಲಕ ಇರಾನ್‌ನಿಂದ ಇಲ್ಲಿಯವರೆಗೆ 1,428 ಭಾರತೀಯರನ್ನು ದೇಶಕ್ಕೆ ವಾಪಸ್ ಕರೆತಂದಂತಾಗಿದೆ.

ವಿಮಾನ ಸಂಚಾರ ತಾತ್ಕಾಲಿಕ ಕಡಿತ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಮೂರು ಮಾರ್ಗಗಳಲ್ಲಿ ವಿಮಾನ ಸಂಚಾರ ಅಮಾನತು ಹಾಗೂ 19 ದೇಶಿ ಮಾರ್ಗಗಳಲ್ಲಿನ ವಿಮಾನ ಹಾರಾಟವನ್ನು ಜುಲೈ 15ರವರೆಗೆ ತಾತ್ಕಾಲಿಕವಾಗಿ ಕಡಿತಗೊಳಿಸುವ ನಿರ್ಧಾರವನ್ನು ವಿಮಾನಯಾನ ಸೇವಾ ಕಂಪನಿ ಏರ್ ಇಂಡಿಯಾ ಭಾನುವಾರ ಪ್ರಕಟಿಸಿದೆ.

ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಬಿಕ್ಕಟ್ಟಿನಿಂದ ಮುನ್ನೆಚ್ಚರಿಕೆ ಕ್ರಮವಾಗಿ ಇರಾನ್, ಇರಾಕ್ ಮತ್ತು ಇಸ್ರೇಲ್‌ನ ವಾಯುಮಾರ್ಗದಲ್ಲಿ ಪ್ರಸ್ತುತ ವಿಮಾನಗಳ ಕಾರ್ಯಾಚರಣೆ ನಡೆಸುವುದಿಲ್ಲ. ಯುಎಇ, ಕತಾರ್, ಒಮಾನ್ ಮತ್ತು ಕುವೈತ್ ಸೇರಿದಂತೆ ವಿವಿಧ ಸ್ಥಳಗಳಿಗೆ ಪರ್ಯಾಯ ಮಾರ್ಗವನ್ನು ಬಳಸಿಕೊಳ್ಳಲಾಗುವುದು. ಯುರೋಪ್ ಮತ್ತು ಉತ್ತರ ಅಮೆರಿಕಕ್ಕೆ ಪ್ರಯಾಣದ ಅವಧಿ ಹೆಚ್ಚಳವಾಗಬಹುದು ಎಂದು ಕಂಪನಿ ತಿಳಿಸಿದೆ.

ವಿಮಾನ ಸಂಚಾರದಲ್ಲಿ ತಾತ್ಕಾಲಿಕ ಕಡಿತದ ಹೊರತಾಗಿಯೂ ಏರ್ ಇಂಡಿಯಾ ನಿತ್ಯ 600 ಹಾರಾಟವನ್ನು ನಡೆಸಲಿದೆ ಎಂದು ತಿಳಿಸಿದೆ.

'ಭದ್ರತಾ ಸಲಹೆಗಾರರೊಂದಿಗೆ ನಿರಂತರ ಸಮಾಲೋಚನೆಯಲ್ಲಿದ್ದೇವೆ. ಪರಿಸ್ಥಿತಿಯನ್ನು ಜಾಗರೂಕತೆಯಿಂದ ಮೇಲ್ವಿಚಾರಣೆ ಮಾಡಲಾಗುತ್ತಿದೆ. ನಮ್ಮ ಪ್ರಯಾಣಿಕರು, ಸಿಬ್ಬಂದಿ ಮತ್ತು ವಿಮಾನಗಳ ಸುರಕ್ಷತೆ ಮೊದಲ ಆದ್ಯತೆಯಾಗಿದೆ' ಎಂದು ತಿಳಿಸಿದೆ.

ಕಚ್ಚಾ ತೈಲದಲ್ಲಿ ರಷ್ಯಾ ಪಾಲು ಶೇ 35

ಸಂಘರ್ಷದ ಹೊತ್ತಿನಲ್ಲಿ ರಷ್ಯಾದಿಂದ ತೈಲ ಆಮದು ಹೆಚ್ಚಳ

ನವದೆಹಲಿ (ಪಿಟಿಐ): ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ತೀವ್ರಗೊಂಡಿರುವ ಸಂದರ್ಭದಲ್ಲಿ, ರಷ್ಯಾ ಮತ್ತು ಅಮೆರಿಕದಿಂದ ಆಮದು ಮಾಡಿಕೊಳ್ಳುವ ತೈಲದ ಪ್ರಮಾಣವನ್ನು ಭಾರತವು ಜೂನ್ ತಿಂಗಳಲ್ಲಿ ಹೆಚ್ಚಿಸಿದೆ.

ಭಾರತಕ್ಕೆ ಕಚ್ಚಾ ತೈಲ ಪೂರೈಕೆಯಲ್ಲಿ ರಷ್ಯಾ ಈಗ ಶೇಕಡ 35ರಷ್ಟು ಪಾಲು ಹೊಂದಿದೆ.

ಜೂನ್ 1ರಿಂದ 19ರವರೆಗೆ ರಷ್ಯಾದಿಂದ ಪ್ರತಿ ದಿನ ಅಂದಾಜು 21 ಲಕ್ಷದಿಂದ 22 ಲಕ್ಷ ಬ್ಯಾರೆಲ್‌ನಷ್ಟು ಕಚ್ಚಾ ತೈಲವನ್ನು ಭಾರತ ಆಮದು ಮಾಡಿಕೊಂಡಿದೆ. ಇದು ಕಳೆದ ಎರಡೂವರೆ ವರ್ಷಗಳ ಅತಿ ಹೆಚ್ಚಿನ ಪ್ರಮಾಣ ಎಂದು ಜಾಗತಿಕ ವ್ಯಾಪಾರ ವಿಶ್ಲೇಷಕ ಸಂಸ್ಥೆ ಕೆಪ್ಲೆರ್ ಭಾನುವಾರ ತಿಳಿಸಿದೆ.

ಮೇ ತಿಂಗಳಲ್ಲಿ ಭಾರತವು ರಷ್ಯಾದಿಂದ ಪ್ರತಿದಿನ 19.6 ಲಕ್ಷ ಬ್ಯಾರೆಲ್‌ನಷ್ಟು ತೈಲ ಆಮದು ಮಾಡಿಕೊಳ್ಳುತ್ತಿತ್ತು. ಅಮೆರಿಕದಿಂದ ಮೇ ತಿಂಗಳಲ್ಲಿ 2.80 ಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ಪ್ರತಿ ದಿನ ಖರೀದಿ ಮಾಡುತ್ತಿತ್ತು. ಜೂನ್ ತಿಂಗಳಲ್ಲಿ ಈ ಪ್ರಮಾಣ 4.39 ಲಕ್ಷ ಬ್ಯಾರೆಲ್‌ಗೆ ಏರಿಕೆಯಾಗಿದೆ ಎಂದು ಕೆಪ್ಲರ್ ತಿಳಿಸಿದೆ.

ಪಶ್ಚಿಮ ಏಷ್ಯಾದ ದೇಶಗಳಾದ ಇರಾಕ್, ಸೌದಿ ಅರೇಬಿಯಾ, ಯುಎಇ ಮತ್ತು ಕುವೈತ್‌ನಿಂದ ಜೂನ್ 19ರವರೆಗೆ ಅಂದಾಜು 19 ಲಕ್ಷ ಬ್ಯಾರೆಲ್‌ನಷ್ಟು ತೈಲವನ್ನು ಭಾರತ ಆಮದು ಮಾಡಿಕೊಂಡಿದೆ. ಜೂನ್ ಅಂತ್ಯದ ವೇಳೆಗೆ ಇದು 20 ಲಕ್ಷ ಬ್ಯಾರೆಲ್‌ಗೆ ತಲುಪುವ ನಿರೀಕ್ಷೆಯಿದೆ. ಮೇ ತಿಂಗಳಿಗೆ ಹೋಲಿಸಿದರೆ ಇಲ್ಲಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣ 1 ಲಕ್ಷದಿಂದ 1.5 ಲಕ್ಷ ಬ್ಯಾರೆಲ್‌ನಷ್ಟು ಕಡಿಮೆಯಾಗಿದೆ. ಆದರೆ, ರಷ್ಯಾದಿಂದ ಆಮದು ಮಾಡಿಕೊಳ್ಳುವುದು ಇದಕ್ಕಿಂತಲೂ ಹೆಚ್ಚಾಗಿದೆ ಎಂದು ತಿಳಿಸಿದೆ.

ಭಾರತವು ಜಗತ್ತಿನಲ್ಲಿ ಮೂರನೇ ಅತಿದೊಡ್ಡ ತೈಲ ಆಮದು ಮತ್ತು ಬಳಕೆ ರಾಷ್ಟ್ರವಾಗಿದೆ.

ಇಸ್ರೇಲ್–ಇರಾನ್ ಬಿಕ್ಕಟ್ಟು: ಷೇರುಪೇಟೆ ಮೇಲೆ ಪರಿಣಾಮ?

ಇಸ್ರೇಲ್–ಇರಾನ್ ಬಿಕ್ಕಟ್ಟು ಮತ್ತು ಕಚ್ಚಾ ತೈಲ ಬೆಲೆಯು ಈ ವಾರ ಷೇರು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಲಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಅಂದಾಜಿಸಿದ್ದಾರೆ.

'ಜಾಗತಿಕ ರಾಜಕೀಯ ಅನಿಶ್ಚಿತತೆ ಮುಂದುವರಿದಿದೆ. ಮುಂಬರಲಿರುವ ಅಮೆರಿಕದ ಜಿಡಿಪಿ ದತ್ತಾಂಶ ಮತ್ತು ವೈಯಕ್ತಿಕ ಬಳಕೆ ವೆಚ್ಚ, ಭಾರತದ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕದತ್ತ ಹೂಡಿಕೆದಾರರು ಗಮನ ನೀಡಿದ್ದಾರೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಒಡಿಶಾ: ಬಾಲೇಶ್ವರದ 50 ಗ್ರಾಮ ಜಲಾವೃತ

ಬಾಲೇಶ್ವರ (ಒಡಿಶಾ) (ಪಿಟಿಐ): ಪ್ರವಾಹದಿಂದ ತತ್ತರಿಸಿರುವ ಒಡಿಶಾದಲ್ಲಿ ಸುವರ್ಣರೇಖಾ ನದಿ ನೀರಿನ ಮಟ್ಟ ಭಾನುವಾರ ಕೊಂಚ ಇಳಿಮುಖಗೊಂಡಿದೆ. ಆದರೆ ಬಾಲೇಶ್ವರ ಜಿಲ್ಲೆಯ 50 ಹಳ್ಳಿಗಳು ಜಲಾವೃತಗೊಂಡಿದ್ದು, ಯುವಕನೊಬ್ಬ ನಾಪತ್ತೆಯಾಗಿದ್ದಾನೆ.

ಶನಿವಾರ ಉಂಟಾದ ಪ್ರವಾಹದಲ್ಲಿ ಬಾಲೈಪಾಲ್ ಬ್ಲಾಕ್‌ನ ಬಿಷ್ಣುಪುರ್ ಗ್ರಾಮ ಪಂಚಾಯಿತಿಯ ಯುವಕ ಕೊಚ್ಚಿಕೊಂಡು ಹೋಗಿದ್ದಾನೆ.

ಒಡಿಶಾ ವಿಪತ್ತು ಕ್ಷಿಪ್ರ ಕಾರ್ಯಪಡೆಯು ರಕ್ಷಣೆ ಹಾಗೂ ಪರಿಹಾರ ಕಾರ್ಯಾಚರಣೆ ಕೈಗೊಂಡಿದೆ.

'ಯಾವುದೇ ಮುನ್ಸೂಚನೆ ನೀಡದೆ ಜಾರ್ಖಂಡ್‌ನ ಚಾಂದಿಲ್ ಅಣೆಕಟ್ಟೆಯಿಂದ ಏಕಾಏಕಿ ನೀರು ಬಿಟ್ಟಿದ್ದರಿಂದ ಒಡಿಶಾದ ಬಾಲೈಪಾಲ್, ಭೋಗರೈ, ಬಸ್ತಾ ಹಾಗೂ ಜಲೇಶ್ವರ ಪ್ರದೇಶದ 50 ಸಾವಿರಕ್ಕೂ ಹೆಚ್ಚಿನ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದು ಕ್ರಿಮಿನಲ್ ಕೃತ್ಯವಾಗಿದೆ' ಎಂದು ಸಂಸದ ಪ್ರತಾಪ್ ಸಾರಂಗಿ ಆರೋಪಿಸಿದ್ದಾರೆ.

ಪಹಲ್ಗಾಮ್ ಉಗ್ರರಿಗೆ ನೆರವು ಆರೋಪ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ: ದಕ್ಷಿಣ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ಭಯೋತ್ಪಾದಕರು ನಡೆಸಿದ್ದ ಭೀಕರ ದಾಳಿಗೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಶನಿವಾರ ಇಬ್ಬರು ಸ್ಥಳೀಯರನ್ನು ಬಂಧಿಸಿದೆ.

ಪಾಕಿಸ್ತಾನ ಮೂಲದ ಲಷ್ಕರ್–ಎ–ತಯಬಾದ (ಎಲ್‌ಇಟಿ) ಮೂವರು ಭಯೋತ್ಪಾದಕರಿಗೆ ಈ ಇಬ್ಬರು ಆಶ್ರಯ ನೀಡಿದ್ದರು ಎಂದು ಎನ್‌ಐಎ ಆರೋಪಿಸಿದೆ. ಪಹಲ್ಗಾಮ್‌ನ ಬಟ್‌ಕೋಟೆಯಿಂದ ಪರ್ವೈಜ್ ಅಹ್ಮದ್ ಜೋಥರ್ ಮತ್ತು ಪಹಲ್ಗಾಮ್‌ನ ಹಿಲ್‌ಪಾರ್ಕ್ ಬಳಿಯ ಬಶೀರ್ ಅಹ್ಮದ್ ಜೋಥರ್ ಬಂಧಿತ ಆರೋಪಿಗಳು.

ಭಾರಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಭಯೋತ್ಪದಕರಿಗೆ ಈ ಆರೋಪಿಗಳು ಆಶ್ರಯ, ಆಹಾರ ಒದಗಿಸುವುದು ಸೇರಿದಂತೆ ಎಲ್ಲ ರೀತಿಯ ನೆರವು ಒದಗಿಸಿದ್ದರು. ಈ ಭಯೋತ್ಪಾದಕರು ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ನಡೆಸಿದ ದಾಳಿಯಲ್ಲಿ 25 ಪ್ರವಾಸಿಗರು ಮತ್ತು ಒಬ್ಬರು ಸ್ಥಳೀಯರು ಮೃತಪಟ್ಟಿದ್ದರು.

ಈ ದಾಳಿ ನಡೆದ ಎರಡು ತಿಂಗಳ ಬಳಿಕ ಇಬ್ಬರ ಬಂಧನವಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ಇಲ್ಲಿಯವರೆಗೂ ಸ್ಥಳೀಯ ಪ್ರತ್ಯಕ್ಷದರ್ಶಿಗಳು ಸೇರಿದಂತೆ 2,000ಕ್ಕೂ ಹೆಚ್ಚು ಜನರನ್ನು ವಿಚಾರಣೆಗೆ ಒಳಪಡಿಸಿದೆ.

ಕೆಲ ವಾರಗಳ ಹಿಂದೆಯಷ್ಟೇ ಭಯೋತ್ಪಾದಕ ನಿಗ್ರಹ ಪಡೆಯು ಕಾಶ್ಮೀರ, ಶೋಪಿಯಾನ್, ಪುಲ್ವಾಮಾ, ಕುಲ್ಗಾಮ್, ಸೋಪೋರ್, ಕುಪ್ವಾರ ಜಿಲ್ಲೆಗಳ 32 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿತ್ತು.

ಬಂಧಿತರು ದಾಳಿಕೋರ ಭಯೋತ್ಪಾದಕರ ಗುರುತುಗಳನ್ನು ಬಹಿರಂಗಪಡಿಸಿದ್ದು, ಅವರನ್ನು ಪಾಕ್ ಮೂಲದ ನಿಷೇಧಿತ ಎಲ್‌ಇಟಿಗೆ ಸೇರಿದವರು ಎಂಬುದನ್ನು ದೃಢಪಡಿಸಿದ್ದಾರೆ ಎಂದು ವರದಿಯಾಗಿದೆ.

ಈ ಸ್ಥಳೀಯರ ನೆರವು ಪಡೆದ ಭಯೋತ್ಪಾದಕರು ಏಪ್ರಿಲ್ 22ರಂದು ಪ್ರವಾಸಿಗರನ್ನು ಧಾರ್ಮಿಕ ಆಧಾರದ ಮೇಲೆ ಆಯ್ದುಕೊಂಡು ಭೀಕರವಾಗಿ ಹತ್ಯೆ ಮಾಡಿದ್ದರು ಎಂದು ಎನ್‌ಐಎ ಅಧಿಕಾರಿಗಳು ಹೇಳಿದ್ದಾರೆ.

ಆರೋಪಿಗಳನ್ನು ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಅಡಿ ಬಂಧಿಸಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅವಶೇಷ ಸಾಗಣೆ

ಪಿಟಿಐ ಚಿತ್ರ:

ಅಹಮದಾಬಾದ್‌ನಲ್ಲಿ ಇತ್ತೀಚೆಗೆ ಅಪಘಾತಕ್ಕೀಡಾದ ಏರ್ ಇಂಡಿಯಾ ವಿಮಾನದ ಅವಶೇಷಗಳನ್ನು ಲಾರಿಯ ಮೂಲಕ ಭಾನುವಾರ ಸಾಗಿಸಲಾಯಿತು

'ಉಮೀದ್' ಪೋರ್ಟಲ್: ಆರು ತಿಂಗಳಲ್ಲಿ ವಕ್ಫ್ ಆಸ್ತಿಗಳ ಅಪ್‌ಲೋಡ್‌ಗೆ ಸೂಚನೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಇರುವ ನೋಂದಾಯಿತ ವಕ್ಫ್ ಆಸ್ತಿಗಳ ವಿವರಗಳನ್ನು ಆರು ತಿಂಗಳೊಳಗೆ 'ಉಮೀದ್ ಪೋರ್ಟಲ್'ನಲ್ಲಿ ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕು ಎಂದು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ ಭಾನುವಾರ ತಿಳಿಸಿದೆ.

ಈ ನಿಟ್ಟಿನಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಇನ್ನಷ್ಟು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಅದು ಹೇಳಿದೆ.

ಸಚಿವಾಲಯದ ಕಾರ್ಯದರ್ಶಿ ಚಂದ್ರಶೇಖರ್ ಕುಮಾರ್ ಅವರು ಶನಿವಾರ ಮುಂಬೈನಲ್ಲಿರುವ ಮಹಾರಾಷ್ಟ್ರ ರಾಜ್ಯ ವಕ್ಫ್ ಮಂಡಳಿಯ ಸಿಇಒ ಕಚೇರಿಗೆ ಭೇಟಿ ನೀಡಿ, ಪರಿಶೀಲನಾ ಸಭೆ ನಡೆಸಿದರು. ಅವರು ಕಳೆದ ವಾರ ಬಿಹಾರದಲ್ಲಿ ಇದೇ ರೀತಿಯ ಪರಿಶೀಲನೆ ನಡೆಸಿದ್ದರು. ಪೋರ್ಟಲ್ ಮತ್ತು ಅದರ ಅನುಷ್ಠಾನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸಲಹೆಗಳೇನಾದರೂ ಇದ್ದರೆ ನೀಡುವಂತೆ ಅವರು ಸಭೆಯಲ್ಲಿ ತಿಳಿಸಿದರು.

ವಕ್ಫ್ ಆಸ್ತಿಗಳ ನಿರ್ವಹಣೆಯನ್ನು ಸುಗಮಗೊಳಿಸಲು ಮತ್ತು ಪಾರದರ್ಶಕತೆ ಹೆಚ್ಚಿಸಲು ಕೇಂದ್ರ ಸರ್ಕಾರ ಜೂನ್ 6ರಂದು 'ಉಮೀದ್ ಪೋರ್ಟಲ್'ಗೆ ಚಾಲನೆ ನೀಡಿದೆ. ಆಸ್ತಿಗಳಿಗೆ 'ಜಿಯೊ ಟ್ಯಾಗ್' ಮಾಡುವುದು ಇದರ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ.

ಈ ಪೋರ್ಟಲ್ ಕೇಂದ್ರೀಕೃತ ಡಿಜಿಟಲ್ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ಆಸ್ತಿ ದಾಖಲೆಗಳು ನೈಜ ಸಮಯದ ಅಪ್‌ಲೋಡ್, ಪರಿಶೀಲನೆ ಮತ್ತು ಮೇಲ್ವಿಚಾರಣೆಯನ್ನು ಇದು ನಿರ್ವಹಿಸಲಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸಚಿವ, ಬಿಜೆಪಿ ಸಂಸದ ಸುರೇಶ್ ಗೋಪಿ ನಟಿಸಿರುವ ಸಿನಿಮಾ

'ಜಾನಕಿ ವರ್ಸಸ್ ಸ್ಟೇಟ್ ಆಫ್ ಕೇರಳ' ಸಿನಿಮಾಕ್ಕೆ ತಡೆ

ಪ್ರಜಾವಾಣಿ ವಾರ್ತೆ

ತಿರುವನಂತಪುರಂ: ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಖಾತೆಯ ರಾಜ್ಯ ಸಚಿವ ಸುರೇಶ್ ಗೋಪಿ ನಟನೆಯ 'ಜಾನಕಿ ವರ್ಸಸ್ ಸ್ಟೇಟ್ ಆಫ್ ಕೇರಳ' ಸಿನಿಮಾ ಬಿಡುಗಡೆಗೆ ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿ (ಸಿಬಿಎಫ್‌ಸಿ) ಅನುಮತಿ ನಿರಾಕರಿಸಿದೆ. ಪುರಾಣದ ಪ್ರಕಾರ, ಭಗವಾನ್ ಶ್ರೀರಾಮನ ಹೆಂಡತಿ 'ಸೀತೆ'ಯ ಮತ್ತೊಂದು ಹೆಸರು 'ಜಾನಕಿ' ಆಗಿರುವ ಕಾರಣ ಸಿಬಿಎಫ್‌ಸಿ ಈ ನಿರ್ಧಾರಕ್ಕೆ ಬಂದಿದೆ.

ಜಾನಕಿ v/s ಸ್ಟೇಟ್ ಕೇರಳ ಪೋಸ್ಟರ್

ಈ ಸಿನಿಮಾದಲ್ಲಿ ಸುರೇಶ್ ಅವರು ವಕೀಲನ ಪಾತ್ರ ನಿರ್ವಹಿಸಿದ್ದರೆ, ನಟಿ ಅನುಪಮಾ ಪರಮೇಶ್ವರನ್ 'ಜಾನಕಿ' ಪಾತ್ರ ನಿರ್ವಹಿಸಿದ್ದಾರೆ.

'ಸಿಬಿಎಫ್‌ಸಿ ಜಾನಕಿ ಸಿನಿಮಾ ಬಿಡುಗಡೆಗೆ ಅನುಮತಿ ನಿರಾಕರಿಸಿದೆ. ಹೀಗಾಗಿ ಜೂನ್ 27ರಂದು ಸಿನಿಮಾ ಬಿಡುಗಡೆಯಾಗುವುದಿಲ್ಲ' ಎಂದು ಸಿನಿಮಾ ನಿರ್ಮಾಪಕ ಹಾಗೂ ನಿರ್ದೇಶಕ ಪ್ರವೀಣ್ ನಾರಾಯಣ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

ಈ ಕುರಿತು ಸಿಬಿಎಫ್‌ಸಿ ಅಧಿಕಾರಿಗಳು ಇದುವರೆಗೂ ಪ್ರತಿಕ್ರಿಯೆ ನೀಡಿಲ್ಲ. ಕೇರಳ ಸಿನಿಮಾ ಕಾರ್ಮಿಕರ ಒಕ್ಕೂಟ (ಎಫ್‌ಇಎಫ್‌ಕೆಎ) ಸಿಬಿಎಫ್‌ಸಿ ನಡೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

'ಸಿನಿಮಾದ ಪಾತ್ರದಲ್ಲಿ ಜಾನಕಿ ಹೆಸರು ಬಳಸದಂತೆ ಮೌಖಿಕವಾಗಿ ಸೂಚಿಸಿದೆ. ಆದರೆ, ಇಡೀ ಸಿನಿಮಾದಲ್ಲಿಯೇ ಆ ಹೆಸರು ತೆಗೆದುಹಾಕಬೇಕು ಎಂದು ಸಿಬಿಎಫ್‌ಸಿ ಬಯಸುತ್ತಿದೆ' ಎಂದು ಎಫ್‌ಇಎಫ್‌ಕೆಎ ಪ್ರಧಾನ ಕಾರ್ಯದರ್ಶಿ ಬಿ.ಉನ್ನಿಕೃಷ್ಣನ್ ತಿಳಿಸಿದರು.

'ಈ ಕುರಿತು ಸುರೇಶ್ ಗೋಪಿ ಜೊತೆಗೂ ಮಾತುಕತೆ ನಡೆಸಿದ್ದೇನೆ. ಅವರು ಕೂಡ ಮಧ್ಯಪ್ರವೇಶಿಸಿದರೂ, ಸಿಬಿಎಫ್‌ಸಿ ನಿಲುವಿನಲ್ಲಿ ಯಾವುದೇ ಬದಲಾವಣೆಯಾಗಿಲ್ಲ' ಎಂದರು.

'ಈ ಕುರಿತು ಸಿನಿಮಾ ನಿರ್ಮಾಪಕರು ಕಾನೂನು ಹೋರಾಟ ನಡೆಸುವುದು ಉತ್ತಮ' ಎಂದು ಉನ್ನಿಕೃಷ್ಣನ್ ಸಲಹೆ ನೀಡಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ಇರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Industrial & Factory

Peenya

PEENYA 1ST Stage 8300 Sq.Ft Shed with Land For Sale with 65 H.P Power North East Corner M: 9606034112

ಪ್ರವಾಸ

Travel

ರಿಯಾಯಿತಿ ದರದಲ್ಲಿ 8/13/21 ದಿನಗಳ ಕಾಶಿ,ಗಯಾ ಪ್ರಯಾಗ್ ರಾಜ್ ಅಯೋಧ್ಯ ಪುರಿಜಗನ್ನಾಥ್ ಭುವನೇಶ್ವರ್ ಆಗ್ರಾ,ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯಮುನೋತ್ರಿ, ದೆಹಲಿ ಸೆಪ್ಟೆಂಬರ್ ಅಕ್ಟೋಬರ್ ತಿಂಗಳ ಪ್ರವಾಸಕ್ಕಾಗಿ ಜುಲೈ ತಿಂಗಳ 31ರ ಒಳಗೆ ಪೂರ್ತಿ ದರ ಪಾವತಿಸಿದವರಿಗೆ ಟ್ರಾನ್ಸ್‌ಪೋರ್ಟೇಶನಲ್ಲಿ 10% ರಿಯಾಯಿತಿ ಕೊಡಲಾಗುವುದು ಸಂಪರ್ಕಿಸಿ: ಶ್ರೀಸುಧಾ ಟ್ರಾವೆಲ್ಸ್ 8088826815 9019301300

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

14ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ತಾರಾಮಣಿ
ಜನನ: 2.9.1954 ಮರಣ: 23.6.2011

ನೀವು ನಮ್ಮನ್ನಗಲಿ ಇಂದಿಗೆ ಹದಿನಾಲ್ಕು ವರ್ಷವಾಯಿತು. ನೀವು ನಮ್ಮ ಮನೆ ಮತ್ತು ಮನದಲ್ಲಿ ಹಚ್ಚಿದ ಹಣತೆಯಂತೆ ದಾರಿ ದೀಪವಾಗಿದ್ದೀರಿ. ಭಗವಂತನು ನಿಮ್ಮ ಆತ್ಮಕ್ಕೆ "ಚಿರಶಾಂತಿ" ನೀಡಲೆಂದು ಪ್ರಾರ್ಥಿಸುವ.
ಪತಿ: ದಾಸಯ್ಯ, ಮಾಜಿ ಸದಸ್ಯರು, ಕರ್ನಾಟಕ ಲೋಕಸೇವಾ ಆಯೋಗ.
–: ಮಕ್ಕಳಾದ :–
ಸುಮಾ, ಚೇತನ್, ಹಂಸ, ಮೊಮ್ಮಕ್ಕಳು, ಅಳಿಯಂದಿರು ಮತ್ತು ಬಂಧುಭಾಂದವರು.

ವೈಕುಂಠ ಸಮಾರಾಧನೆ

ಶ್ರೀ ಹೆಚ್.ಎಂ. ರೇವಣ್ಣ ರವರ ಧರ್ಮಪತ್ನಿ
ಶ್ರೀಮತಿ ವತ್ಸಲಾ ರೇವಣ್ಣ
ದಿನಾಂಕ: 12–06–2025ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ವೈಕುಂಠ ಸಮಾರಾಧನೆಯನ್ನು ದಿನಾಂಕ: 24–06–2025 ಮಂಗಳವಾರ ಮಧ್ಯಾಹ್ನ 12.30 ಗಂಟೆಗೆ ಮಾಗಡಿಯ ಆರ್ ಆರ್ ಪ್ಯಾಲೇಸ್‌ನಲ್ಲಿ ನಡೆಸಲಾಗುವುದು. ಸರ್ವರೂ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ಪ್ರಾರ್ಥಿಸುವ,
ಇಂತಿ:
ಶ್ರೀ ಹೆಚ್. ಎಂ. ರೇವಣ್ಣ - 9901184466
ಶ್ರೀ ಶಶಾಂಕ್ ರೇವಣ್ಣ - 9164330999
ಶ್ರೀ ಅನೂಪ್ ರೇವಣ್ಣ - 9535999555

CASAGRAND Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ನಿರ್ದೇಶಕರಲ್ಲಿ ಯಾರಿಗೊಲಿಯಲಿದೆ ಪ್ರಶಸ್ತಿ?

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಮೂರನೇ ಆವೃತ್ತಿಯ ಸಮಾರಂಭ ಜೂನ್ 27ರಂದು ನಡೆಯಲಿದೆ. 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಇದೀಗ ‘ಅತ್ಯುತ್ತಮ ನಿರ್ದೇಶನ’ ವಿಭಾಗದಲ್ಲಿ ನಾಮನಿರ್ದೇಶನಗೊಂಡವರನ್ನು ಪರಿಚಯಿಸುವ ಸಮಯ. ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ **https://www.prajavani.net/cinesamman/season3**

ಸಂತೋಷ್ ಆನಂದರಾಮ್

ಇವರು ‘ಯುವ’ ಚಿತ್ರದ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ‘ರಾಕಿ’ ಚಿತ್ರದ ಮೂಲಕ ಗೀತರಚನಕಾರರಾಗಿ ಚಿತ್ರರಂಗ ಪ್ರವೇಶಿಸಿದರು. ‘ಚಿಂಗಾರಿ’ ಚಿತ್ರಕ್ಕೆ ಚಿತ್ರಕಥೆ, ಸಂಭಾಷಣಾಕಾರನಾಗಿ, ಜತೆಗೆ ನಿರ್ದೇಶನ ವಿಭಾಗದಲ್ಲಿಯೂ ಕೆಲಸ ಮಾಡಿದರು. 2014ರಲ್ಲಿ ತೆರೆ ಕಂಡ ಇವರ ನಿರ್ದೇಶನದ ಮೊದಲ ಚಿತ್ರ ‘ಮಿಸ್ಟರ್ ಆ್ಯಂಡ್ ಮಿಸೆಸ್ ರಾಮಾಚಾರಿ’ ಸೂಪರ್ ಹಿಟ್. ಇದಾದ ಬಳಿಕ ಪುನೀತ್ ರಾಜ್‌ಕುಮಾರ್ ಅವರ ‘ರಾಜಕುಮಾರ’ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದರು. ಈ ಚಿತ್ರ ಕೂಡ ಬ್ಲಾಕ್ ಬಸ್ಟರ್ ಪಟ್ಟ ಸೇರಿತು. ನಂತರ ಇದೇ ಜೋಡಿಯ ‘ಯುವರತ್ನ’ ತೆರೆ ಕಂಡಿತು. ಪುನೀತ್ ನಿಧನದ ಬಳಿಕ ‘ಯುವ’ ಚಿತ್ರ ಕೈಗೆತ್ತಿಕೊಂಡರು. ಇದು ಯುವರಾಜ್ ಕುಮಾರ್ ಅವರನ್ನು ನಾಯಕನಾಗಿ ಬೆಳ್ಳಿತೆರೆಗೆ ಪರಿಚಯಿಸಿದ ಚಿತ್ರ.

ಸಿಂಪಲ್ ಸುನಿ

ನಿರ್ದೇಶಕ, ನಿರ್ಮಾಪಕ, ಚಿತ್ರಕಥೆಗಾರ ಮತ್ತು ಗೀತರಚನಕಾರನಾಗಿ ಗುರುತಿಸಿಕೊಂಡಿರುವ ಇವರು ‘ಒಂದು ಸರಳ ಪ್ರೇಮಕಥೆ’ ಚಿತ್ರಕ್ಕಾಗಿ ನಾಮನಿರ್ದೇಶಿತರಾಗಿದ್ದಾರೆ. ತಮ್ಮ ಮೊದಲ ಚಿತ್ರ ‘ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ’ ಯಶಸ್ವಿಯಾದ ಬಳಿಕ ಇವರು ಚಿತ್ರರಂಗದಲ್ಲಿ ಸಿಂಪಲ್ ಸುನಿ ಎಂದೇ ಜನಪ್ರಿಯರಾದರು. ‘ಉಳಿದವರ ಕಂಡಂತೆ’ ಚಿತ್ರದ ನಿರ್ಮಾಪಕರಲ್ಲೊಬ್ಬರು. ‘ಆಪರೇಷನ್ ಅಲಮೇಲಮ್ಮ’, ‘ಚಮಕ್’ ಸೇರಿದಂತೆ ಒಂದಷ್ಟು ಚಿತ್ರಗಳಿಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಸದ್ಯ ‘ಗತವೈಭವ’, ‘ದೇವರು ರುಜು ಮಾಡಿದನು’ ಸೇರಿದಂತೆ ನಾಲ್ಕು ಸಿನಿಮಾಗಳು ಇವರ ಬತ್ತಳಿಕೆಯಲ್ಲಿವೆ.

ಪೃಥ್ವಿ ಕೊಣನೂರು

ಗಟ್ಟಿಯಾದ ಸಾಮಾಜಿಕ ಸಂದೇಶವುಳ್ಳ ಕಲಾತ್ಮಕ ಸಿನಿಮಾಗಳಿಗೆ ಹೆಸರುವಾಸಿಯಾಗಿರುವ ಇವರು ‘ಹದಿನೇಳೆಂಟು’ ಚಿತ್ರಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಮಾಡಿದ್ದು ನಾಲ್ಕು ಸಿನಿಮಾಗಳಾದರೂ, ಎಲ್ಲವೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಂಥವು. ಇವರ ಮೊದಲ ಸಿನಿಮಾ ‘ಅಲೆಗಳು’ ಕೆಲ ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೆ ಆಯ್ಕೆಗೊಂಡಿತ್ತು. ನಿರ್ದೇಶಕನಾಗಿ ಗಮನ ಸೆಳೆದಿದ್ದು ‘ರೈಲ್ವೆ ಚಿಲ್ಡ್ರನ್’ ಚಿತ್ರದಿಂದ. ಮಕ್ಕಳ ಕುರಿತಾದ ವಿಭಿನ್ನ ಕಥೆಯನ್ನು ಹೊಂದಿರುವ ಚಿತ್ರವಿದು. ಇವರ ‘ಪಿಂಕಿ ಎಲ್ಲಿ’ ಚಿತ್ರ 2020ನೇ ಸಾಲಿನ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಸೇರಿದಂತೆ ಒಂದಷ್ಟು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿತು. ನಂತರದ ‘ಹದಿನೇಳೆಂಟು’ ಚಿತ್ರ ಕೂಡ ಬೂಸಾನ್ ಸೇರಿದಂತೆ ಪ್ರತಿಷ್ಠಿತ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಒಂದಷ್ಟು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿತು. ಈ ಚಿತ್ರದಿಂದ ನಿರ್ದೇಶನದ ಜತೆಗೆ ಸಿನಿಮಾ ನಿರ್ಮಾಣಕ್ಕೂ ಕೈ ಹಾಕಿದರು. ಸದ್ಯ ಹೊಸ ಚಿತ್ರವೊಂದರ ಸಿದ್ಧತೆಯಲ್ಲಿದ್ದಾರೆ.

ನರ್ತನ್

‘ಭೈರತಿ ರಣಗಲ್’ ಚಿತ್ರಕ್ಕಾಗಿ ನಾಮನಿರ್ದೇಶಿತರಾಗಿದ್ದಾರೆ. ಇವರು ಕನ್ನಡ ಚಿತ್ರರಂಗದ ಯುವ ಪ್ರತಿಭಾನ್ವಿತ ನಿರ್ದೇಶಕ, ಚಿತ್ರಸಾಹಿತಿ ಮತ್ತು ಸಂಭಾಷಣಾಕಾರ. ಪ್ರಶಾಂತ್ ನೀಲ್ ಅವರ ‘ಉಗ್ರಂ’, ಚಂದ್ರಶೇಖರ ಬಂಡಿಯಪ್ಪ ಅವರ ‘ರಥಾವರ’ ಚಿತ್ರಗಳಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದರು. ಬಳಿಕ ‘ಮಫ್ತಿ’ ಚಿತ್ರದಿಂದ ಸ್ವತಂತ್ರ ನಿರ್ದೇಶಕರಾದರು. ಶ್ರೀಮುರಳಿ ನಾಯಕನಾಗಿರುವ ಈ ಚಿತ್ರದ ದೊಡ್ಡ ಮಟ್ಟದಲ್ಲಿ ಹಿಟ್ ಆಯಿತು. ಶಿವರಾಜ್‌ಕುಮಾರ್ ‘ಭೈರತಿ ರಣಗಲ್’ ಎಂಬ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಅದೇ ಪಾತ್ರದ ಹಿನ್ನೆಲೆ ಇಟ್ಟುಕೊಂಡು ಸಿದ್ಧಗೊಂಡ ಚಿತ್ರ ‘ಭೈರತಿ ರಣಗಲ್’. ಸದ್ಯ ಇನ್ನೊಂದು ಚಿತ್ರದ ಬರವಣಿಗೆ ಕೈಗೆತ್ತಿಕೊಂಡಿದ್ದಾರೆ. ‘ಸ್ಟಾರ್ ನಟರೊಬ್ಬರಿಗಾಗಿ ಈ ಚಿತ್ರ ಸಿದ್ಧಗೊಳ್ಳುತ್ತಿದ್ದು, ಎಲ್ಲವೂ ಅಂತಿಮಗೊಂಡ ನಂತರ ಈ ಬಗ್ಗೆ ಮಾಹಿತಿ ನೀಡುತ್ತೇನೆ’ ಎಂದಿದ್ದಾರೆ ನರ್ತನ್.

ಎಂ.ಭರತ್ ರಾಜ್

‘ಲಾಫಿಂಗ್ ಬುದ್ಧ’ ಚಿತ್ರಕ್ಕಾಗಿ ನಾಮನಿರ್ದೇಶಿತರಾಗಿದ್ದಾರೆ. ಬಳ್ಳಾರಿಯ ಶಿರಗುಪ್ಪದವರಾದ ಇವರು, ಇಂಜಿನಿಯರಿಂಗ್ ಪದವೀಧರ. ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದವರು ಸಿನಿಮಾ ಮೇಲಿನ ಒಲವಿನಿಂದ ಕೆಲಸ ಬಿಟ್ಟು ಚಿತ್ರರಂಗದತ್ತ ಮುಖ ಮಾಡಿದರು. ‘ಯಾನ’ ಚಿತ್ರದ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡುವುದರೊಂದಿಗೆ ಸಿನಿಪಯಣ ಪ್ರಾರಂಭಿಸಿದರು. ಬಳಿಕ ‘ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ’ ಚಿತ್ರದ ಸಹ ನಿರ್ದೇಶಕನಾಗಿ ರಿಷಬ್ ಶೆಟ್ಟಿ ತಂಡ ಸೇರಿಕೊಂಡರು. ‘ಹೀರೋ’ ಇವರ ಚೊಚ್ಚಲ ನಿರ್ದೇಶನದ ಸಿನಿಮಾ. ಸದ್ಯ ಇನ್ನೊಂದು ಚಿತ್ರದ ಬರವಣಿಗೆಯಲ್ಲಿದ್ದಾರೆ.

ಜಯಶಂಕರ್ ಆರ್ಯರ್

‘ಶಿವಮ್ಮ ಯರೇಹಂಚಿನಾಳ’ ಚಿತ್ರಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಇಂಜಿನಿಯರ್ ಆಗಿರುವ ಇವರು ಕಿರುಚಿತ್ರಗಳಿಂದ ಚಿತ್ರರಂಗ ಪ್ರವೇಶಿಸಿದರು. ರಿಷಬ್ ಶೆಟ್ಟಿ ನಿರ್ಮಾಣದ ‘ಕಥಾ ಸಂಗಮ’ ಚಿತ್ರದ ಏಳು ನಿರ್ದೇಶಕರಲ್ಲಿ ಒಬ್ಬರು. ಸಹಜತೆಯಿಂದ ಕೂಡಿದ ಚಿತ್ರಗಳಿಗೆ ಒತ್ತುಕೊಡುವ ಇವರು ವಿದೇಶಿ ಚಿತ್ರಗಳ ಕುರಿತು ಸಾಕಷ್ಟು ಅಧ್ಯಯನ ನಡೆಸಿದ್ದಾರೆ. ಇವರ ‘ಶಿವಮ್ಮ ಯರೇಹಂಚಿನಾಳ’ ಬೂಸಾನ್ ಚಿತ್ರೋತ್ಸವ ಸೇರಿದಂತೆ ಸಾಕಷ್ಟು ಪ್ರತಿಷ್ಠಿತ ಚಿತ್ರೋತ್ಸವಗಳಿಗೆ ಆಯ್ಕೆಗೊಂಡು ಕೆಲವೆಡೆ ಪ್ರಶಸ್ತಿಗಳನ್ನೂ ಪಡೆದಿದೆ. ಸದ್ಯ ಹೊಸ ಚಿತ್ರದ ಸಿದ್ಧತೆಯಲ್ಲಿದ್ದಾರೆ.

ಉತ್ಸವ್ ಗೋನವಾರ

‘ಫೋಟೊ’ ಚಿತ್ರಕ್ಕಾಗಿ ನಾಮನಿರ್ದೇಶಿತರಾಗಿದ್ದಾರೆ. ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಗೋನವಾರದ ಉತ್ಸವ್, ಚಿತ್ರೋತ್ಸವಗಳಲ್ಲಿ ಹಲವು ಮಾದರಿಯ ಸಿನಿಮಾಗಳನ್ನು ನೋಡುತ್ತಾ, ಅವುಗಳಿಂದ ಪ್ರಭಾವಿತರಾಗಿ, ಪ್ರೇರಣೆಗೊಂಡು ‘ಫೋಟೋ’ ಚಿತ್ರ ನಿರ್ದೇಶಿಸಿದವರು. ವಿಭಿನ್ನ ಕಥಾ ಹಂದರ ಹೊಂದಿರುವ, ಅತ್ಯಂತ ಸಹಜತೆಯಿಂದ ಕೂಡಿರುವ ಈ ಚಿತ್ರ ಸಾಕಷ್ಟು ಚಿತ್ರೋತ್ಸವಗಳಿಗೆ ಆಯ್ಕೆಗೊಂಡಿತ್ತು. ಇದು ಇವರ ಮೊದಲ ಸಿನಿಮಾ. ಸದ್ಯ ಇನ್ನೊಂದು ಚಿತ್ರದ ಬರವಣಿಗೆಯಲ್ಲಿದ್ದಾರೆ.

ಸಿದ್ದು ಪೂರ್ಣಚಂದ್ರ



‘ತಾರಿಣಿ’ ಚಿತ್ರಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಕಲಾತ್ಮಕ ಸಿನಿಮಾಗಳಿಂದಲೇ ಗುರುತಿಸಿಕೊಂಡಿರುವ ಇವರು ‘ದಾರಿ ಯಾವುದಯ್ಯಾ ವೈಕುಂಠಕೆ’ ಚಿತ್ರದ ಮೂಲಕ ನಿರ್ದೇಶಕರಾದರು. ಈ ಚಿತ್ರ ಅಂತರರಾಷ್ಟ್ರೀಯ ಚಿತ್ರೋತ್ಸವದ ಹೆಸರಿನಲ್ಲಿ ನಡೆಯುವ ಇತರ ಕೆಲವು ಚಿತ್ರೋತ್ಸವಗಳಲ್ಲಿ ಪ್ರಶಸ್ತಿ ಪಡೆಯಿತು. ‘ಬ್ರಹ್ಮಕಮಲ’, ‘ಈ ಪಾದ ಪುಣ್ಯಪಾದ’ ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. ‘ತಾರಿಣಿ’ ಭ್ರೂಣ ಹತ್ಯೆ ವಿರುದ್ಧ ಸಮರ ಸಾರುವ ಕತೆ ಹೊಂದಿದೆ. ಸದ್ಯ ಇವರು ‘ಪುಟ್ಟಣ್ಣನ ಕತ್ತೆ’ ಎಂಬ ಮತ್ತೊಂದು ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಈ ಚಿತ್ರದ ಚಿತ್ರೀಕರಣ ಪ್ರಗತಿಯಲ್ಲಿದೆ.

ಸಹ ಪ್ರಾಯೋಜಕರು: ಟಿಟಿಕೆ ಪ್ರೆಸ್ಟೀಜ್, ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್, ಹೋಂಡಾ, ವಿ, ಸದ್ಗುರು ಆಯುರ್ವೇದ, ದಿ ಬೆಂಗಳೂರ್ ಸಿಟಿ ಕೊ–ಆಪರೇಟಿವ್ ಬ್ಯಾಂಕ್, ದಿ ಜನತಾ ಕೊ–ಆಪರೇಟಿವ್ ಬ್ಯಾಂಕ್, ಕೆಎಸ್‌ಡಿಎಲ್. **ಮೊಬಿಲಿಟಿ ಪಾರ್ಟ್‌ನರ್:** ಮರ್ಸಿಡೀಸ್ ಬೆಂಜ್–ಅಕ್ಷಯ್ ಮೋಟರ್ಸ್.
ಬ್ಯಾಂಕಿಂಗ್ ಪಾರ್ಟ್‌ನರ್: ಕೆನರಾ ಬ್ಯಾಂಕ್. **ಸ್ಟೈಲ್ ಪಾರ್ಟ್‌ನರ್:** ಬಿ.ಎಸ್. ಚನ್ನಬಸಪ್ಪ ಆ್ಯಂಡ್ ಸನ್ಸ್. **ಟ್ರಾವೆಲ್ ಪಾರ್ಟ್‌ನರ್:** ಟ್ರಾವೆಲ್‌ಮಾರ್ಟ್. **ವಾರ್ಡ್‌ರೋಬ್ ಪಾರ್ಟ್‌ನರ್:** ನ್ಯುಮೆನ್. **ನಾಲೆಜ್ ಪಾರ್ಟ್‌ನರ್ಸ್:** ಇನ್‌ಸೈಟ್ಸ್‌ಐಎಎಸ್ ಮತ್ತು ಗೀತಂ ಬೆಂಗಳೂರು. **ಇನ್‌ಶ್ಯೂರೆನ್ಸ್ ಪಾರ್ಟ್‌ನರ್:** ನ್ಯಾಷನಲ್ ಇನ್‌ಶ್ಯೂರೆನ್ಸ್.
ಟೆಲಿಕಾಸ್ಟ್ ಪಾರ್ಟ್‌ನರ್: ಜೀ ಕನ್ನಡ. **ಆಡಿಟ್ ಪಾರ್ಟ್‌ನರ್:** ಇ ಆ್ಯಂಡ್ ವೈ.

ಹೊರ್ಮುಜ್ ಜಲಸಂಧಿ ಬಂದ್?

ದಾಳಿಗೆ ಪ್ರತೀಕಾರ: ಇರಾನ್ ಚಿಂತನೆ ಜಾಗತಿಕ ತೈಲ ವಹಿವಾಟಿನ ಮೇಲೆ ‘ದಾಳಿ’

ದುಬೈ (ರಾಯಿಟರ್ಸ್): ಜಾಗತಿಕವಾಗಿ ಶೇ 20-30ರಷ್ಟು ತೈಲ ಸಾಗಣೆಗೆ ‘ಹೆದ್ದಾರಿ’ ಆಗಿರುವ ಹೊರ್ಮುಜ್ ಜಲಸಂಧಿ ಬಂದ್ ಮಾಡುವ ತೀರ್ಮಾನಕ್ಕೆ ಇರಾನ್‌ನ ಸಂಸತ್ತು ಅನುಮೋದನೆ ನೀಡಿದೆ.

‘ಬಂದ್ ಕ್ರಮ ಕುರಿತು ಇರಾನ್‌ನ ಉನ್ನತಾಧಿಕಾರವುಳ್ಳ, ರಾಷ್ಟ್ರೀಯ ಭದ್ರತಾ ಮಂಡಳಿಯು ಈ ಕುರಿತು ಅಂತಿಮ ತೀರ್ಮಾನ ಕೈಗೊಳ್ಳಲಿದೆ’ ಎಂದು ಇರಾನ್‌ನ ‘ಪ್ರೆಸ್ ಟಿ.ವಿ’ ವರದಿ ಮಾಡಿದೆ.

ಹೊರ್ಮುಜ್ ಜಲಸಂಧಿಯು ತೈಲ ಸಾಗಣೆ ಹಡಗುಗಳು ಸಂಚರಿಸುವ ಪ್ರಮುಖ ಮಾರ್ಗಗಳಲ್ಲಿ ಒಂದಾಗಿದೆ. ಜಾಗತಿಕವಾಗಿ ಶೇ 20ರಷ್ಟು ತೈಲ ಈ ಮಾರ್ಗದ ಮೂಲಕವೇ ಸಾಗಣೆಯಾಗಲಿದೆ.

ಈ ಜಲಮಾರ್ಗ ಸುಮಾರು 33 ಕಿ.ಮೀನಷ್ಟು ಅಗಲವಾಗಿದ್ದು, ಹಡಗು ಸಂಚಾರ ಮಾರ್ಗವು ಉಭಯ ಕಡೆ ಕೇವಲ 3 ಕಿ.ಮೀ.ನಷ್ಟಿದೆ. ಈ ಜಲಮಾರ್ಗವು ಒಮಾನ್ ಮತ್ತು ಇರಾನ್ ನಡುವೆ ಹಾದುಹೋಗಲಿದೆ. ಪಶ್ಚಿಮ ಏಷ್ಯಾದಲ್ಲಿ ಗಲ್ಫ್ ರಾಷ್ಟ್ರಗಳು, ದಕ್ಷಿಣದಲ್ಲಿ ಅರೇಬಿಯನ್ ಸಮುದ್ರಕ್ಕೆ ಸಂಪರ್ಕ ಕಲ್ಪಿಸಲಿದೆ.

ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಮಾತನಾಡಿದ ಇರಾನ್‌ನ ಸಂಸದ ಮತ್ತು ರೆವೊಲ್ಯೂಷನರಿ ಗಾರ್ಡ್ಸ್ ಕಮಾಂಡರ್ ಇಸ್ಮಾಯಿಲ್ ಕೊಸಾರಿ, ‘ಏನು ಅಗತ್ಯವಿದೆಯೊ ಆ ಎಲ್ಲವನ್ನು ಮಾಡುತ್ತೇವೆ’ ಎಂದರು.

ಇರಾನ್ ಜಲಮಾರ್ಗವನ್ನು ಬಂದ್ ಮಾಡಲಿದೆಯೇ ಎಂಬ ಪ್ರಶ್ನೆಗೆ ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಅವರು, ‘ನಮ್ಮ ಮುಂದೆ ಅನೇಕ ಆಯ್ಕೆಗಳಿವೆ’ ಎಂದು ಪ್ರತಿಕ್ರಿಯಿಸಿದ್ದಾರೆ.

ಮುಖ್ಯಾಂಶಗಳು

- ಶೇ 20-30ರಷ್ಟು ತೈಲ ಸಾಗಣೆಗೆ ‘ಹೆದ್ದಾರಿ’
- ಜಾಗತಿಕವಾಗಿ ಅನಿಲ, ಇಂಧನ ಪೂರೈಕೆ ಮೇಲೆ ಪರಿಣಾಮ
- ವಿವಿಧ ದೇಶಗಳ ಕರೆನ್ಸಿಗಳ ಮೌಲ್ಯ ಏರುಪೇರು ಸಾಧ್ಯತೆ

ಯುದ್ಧ ವಿಮಾನಗಳಿದ್ದ ಯುದ್ಧನೌಕೆ ವಾಹಕ ಹೊರ್ಮುಜ್ ಜಲಸಂಧಿಯಲ್ಲಿ ಸಾಗಿತು (ಸಂಗ್ರಹ ಚಿತ್ರ –ಎ.ಪಿ)

ಭಾರತದ ಮೇಲೂ ಪ್ರತಿಕೂಲ ಪರಿಣಾಮ?

ನವದೆಹಲಿ (ಪಿಟಿಐ): ಹೊರ್ಮುಜ್ ಜಲಸಂಧಿಯನ್ನು ಇರಾನ್ ಬಂದ್ ಮಾಡಿದಲ್ಲಿ ಅದರ ಪರಿಣಾಮ ಭಾರತಕ್ಕೆ ತೈಲ ಸಾಗಣೆ ಪ್ರಕ್ರಿಯೆಯ ಮೇಲೂ ಆಗಲಿದೆ ಎನ್ನುತ್ತಾರೆ ಪರಿಣತರು.

ತೈಲ ಸಾಗಣೆ ಹಡಗುಗಳ ಸಂಚಾರ ಬಂದ್ ಮಾಡಿದರೆ ಜಾಗತಿಕವಾಗಿ ಪರಿಣಾಮ ಉಂಟಾಗಲಿದೆ. ಹೊರ್ಮುಜ್ ಜಲಸಂಧಿಯು ಗಲ್ಫ್ ಮತ್ತು ಅರೇಬಿಯನ್ ಸಮುದ್ರ ನಡುವಣ ಸಂಪರ್ಕ ಮಾರ್ಗವಾಗಿದೆ ಎಂದು ಕ್ಷೇತ್ರದ ಪರಿಣತರು ಹೇಳುತ್ತಾರೆ.

ವಿಶ್ವದ ವಿವಿಧ ದೇಶಗಳಿಗೆ ಸಾಗಣೆ ಆಗುವ ತೈಲದ ಶೇ 30ರಷ್ಟು ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಈ ಮಾರ್ಗದ ಮೂಲಕವೇ ಸಾಗಣೆ ಆಗಲಿದೆ.

ಈಗ ಜಲಸಂಧಿ ಬಂದ್ ಆದಲ್ಲಿ ಜಾಗತಿಕವಾಗಿ ಅನಿಲ, ಇಂಧನ ಪೂರೈಕೆ ತಗ್ಗಲಿದೆ. ಇದರ ನೇರ ಪರಿಣಾಮವಾಗಿ ಇಂಧನ ದರ ಗಗನಮುಖಿ ಆಗಬಹುದು ಎಂಬುದು ಈಗಿನ ಆತಂಕ.

ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವ ವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ.ಲಕ್ಷ್ಮಣ್ ಕುಮಾರ್ ಬೆಹೆರಾ ಅವರು, ತೈಲ ಸಾಗಣೆ ಮಾರ್ಗ ಬಂದ್ ಆದಲ್ಲಿ ಇರಾನ್‌ನಿಂದ ಆಮದಾಗುವ ಕಚ್ಚಾ ತೈಲ ತಗ್ಗಲಿದೆ ಎಂದರು.

ನೌಕಾಪಡೆಯ ಮಾಜಿ ವಕ್ತಾರ, ಕ್ಯಾಪ್ಟನ್ ಡಿ.ಕೆ.ಶರ್ಮಾ (ನಿವೃತ್ತ) ಅವರು ಈಗಿನ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ತೈಲ ಸಾಗಣೆಗೆ ನಿರ್ಬಂಧ ಹೇರಿದಲ್ಲಿ ಅದರ ಪರಿಣಾಮ ಜಾಗತಿಕ ತೈಲ ವಹಿವಾಟಿನ ಮೇಲಾಗಲಿದೆ ಎನ್ನುತ್ತಾರೆ.

ತೈಲ ದರವೂ ಗಣನೀಯವಾಗಿ ಏರಿಕೆ ಆಗಬಹುದು. ಇರಾನ್ ಪ್ರತೀಕಾರದ ಕ್ರಮಗಳಿಗೆ ಮುಂದಾದಲ್ಲಿ ಕಚ್ಚಾ ತೈಲ ದರವು ಬ್ಯಾರಲ್‌ಗೆ 80 ರಿಂದ 100 ಡಾಲರ್‌ಗೆ ಏರಬಹುದು. ಹೂಡಿಕೆದಾರರ ಚಿತ್ತ ಸ್ಥಿರ ಮಾರುಕಟ್ಟೆಗಳತ್ತ ಹೊರಳುವ ಕಾರಣ, ಈ ವಲಯದ ದೇಶಗಳ ಕರೆನ್ಸಿಗಳ ಮೌಲ್ಯವೂ ಏರುಪೇರಾಗಬಹುದು ಎಂದು ವಿಶ್ಲೇಷಿಸಿದರು.

ಯುದ್ಧ ವ್ಯಾಪಕವಾಗುವ ಆತಂಕ-ವಿಶ್ವಸಂಸ್ಥೆ: ‘ಇರಾನ್ ಮೇಲಿನ ಅಮೆರಿಕ ದಾಳಿಯಿಂದ ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ಅಪಾಯಕಾರಿಯಾಗುವಷ್ಟು ಉಲ್ಬಣಿಸಲಿದೆ’ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಆತಂಕ ವ್ಯಕ್ತಪಡಿಸಿದ್ದಾರೆ.

ಅಮೆರಿಕ ದಾಳಿಯಿಂದ ಧೃತಿಗೆಟ್ಟ ಇರಾನ್

ದುಬೈ (ಎ.ಪಿ): ದಶಕಗಳ ಯತ್ನದ ಫಲವಾಗಿ ಮೂರು ಹಂತದ ಭದ್ರತೆ ಸೇನಾ ಸಾಮರ್ಥ್ಯ ಕಟ್ಟಿಕೊಂಡಿರುವ ಇರಾನ್, ಇತ್ತ ಅಮೆರಿಕದ ನೇರ ದಾಳಿಯಿಂದ ತುಸು ಧೃತಿಗೆಟ್ಟಿದೆ. ಅಮೆರಿಕ ಪಡೆಗಳು ಸರಣಿ ದಾಳಿ ನಡೆಸುವ ಇಂಗಿತ ಇರುವಂತೆಯೇ, ಅದಕ್ಕೆ ಪ್ರತೀಕಾರ ನಡೆಸುವ ಸುಳಿವನ್ನು ಇರಾನ್ ನೀಡಿದೆ. ಆದರೆ, ಪ್ರತೀಕಾರ ಶೈಲಿ ಇನ್ನೂ ಸ್ಪಷ್ಟವಾಗಿಲ್ಲ.

ಸದ್ಯ, ಇಸ್ರೇಲ್– ಅಮೆರಿಕ ಸೇನಾ ಸಾಮರ್ಥ್ಯದಲ್ಲಿ ಮೇಲುಗೈ ಸಾಧಿಸಿವೆ. ಆದರೆ, ಇದಷ್ಟೇ ಫಲನೀಡದು ಎಂಬುದಕ್ಕೆ ಈಚಿನ ಅಮೆರಿಕ ಸೇನೆ ಮಧ್ಯಪ್ರವೇಶದ ಹಲ ನಿದರ್ಶನಗಳಿವೆ.

ಸಂಭನೀಯ ‘ಪ್ರತೀಕಾರ’ ಕ್ರಮಗಳು ಹೀಗಿವೆ:

- ಹೊರ್ಮುಜ್ ಜಲಸಂಧಿ ಬಂದ್: ಈ ಮೂಲಕ ಜಾಗತಿಕವಾಗಿ ತೈಲ ಸಾಗಣೆ, ತೈಲ ವಹಿವಾಟಿಗೆ ಧಕ್ಕೆ ಉಂಟು ಮಾಡುವುದು
- ಕುವೈತ್, ಬಹರೇನ್, ಕತಾರ್ ಮತ್ತು ಯುಎಇಗಳಲ್ಲಿ ಇರುವ ಅಮೆರಿಕದ ಸೇನಾ ನೆಲೆ ಮತ್ತು ತುಕಡಿಗಳನ್ನುಗುರಿಯಾಗಿಸಿ ದಾಳಿ ನಡೆಸಬಹುದು. ಸಾವಿರಾರು ಕಿ.ಮೀ ದೂರ ಇರುವ ಕಾರಣ ಇಸ್ರೇಲ್ ದಾಳಿಗೆ ತಡೆಯೊಡ್ಡುವುದು ಅಸಾಧ್ಯ ಎಂಬ ಅಂದಾಜಿದೆ
- ಅಮೆರಿಕವು ಸದ್ಯ ಭಾರಿ ದರ ತೆತ್ತು ಇಂಧನ ಪಡೆಯುತ್ತಿರುವ ದೇಶಗಳಲ್ಲಿನ ತೈಲ ಮತ್ತು ಅನಿಲ ನೆಲೆಗಳ ಮೇಲೆ ದಾಳಿ ನಡೆಸುವುದು. 2019ರಲ್ಲಿ ಸೌದಿ ಅರೇಬಿಯಾದ ಎರಡು ತೈಲ ನೆಲೆಗಳ ಮೇಲೆ ಡ್ರೋನ್ ದಾಳಿ ನಡೆಸಿತ್ತು.

ಇರಾನ್ ಮೇಲೆ ಅಮೆರಿಕ ದಾಳಿ

ಒಂದನೇ ಪುಟದಿಂದ...

‘ಶಾಂತಿ ಒಪ್ಪಂದಕ್ಕೆ ಒಪ್ಪದೇ ಇದ್ದಲ್ಲಿ, ಇರಾನ್ ಮತ್ತಷ್ಟು ಭೀಕರ ದಾಳಿಗಳನ್ನು ಎದುರಿಸಬೇಕಾಗುತ್ತದೆ. ಇದು ಅಮೆರಿಕ, ಇಸ್ರೇಲ್ ಹಾಗೂ ಇಡೀ ವಿಶ್ವಕ್ಕೇ ಐತಿಹಾಸಿಕ ಕ್ಷಣ. ಯುದ್ಧಕ್ಕೆ ಅಂತ್ಯಹಾಡಲು ಇರಾನ್ ಒಪ್ಪಿಕೊಳ್ಳಬೇಕು’ ಎಂದೂ ಹೇಳಿದರು.

‘ಭೂಮಿಯೊಳಗೆ ಬಹು ಆಳದಲ್ಲಿ ಫೋರ್ಡೊ ಪರಮಾಣು ಘಟಕ ನಿರ್ಮಿಸಲಾಗಿದೆ. ಇದನ್ನು ಗುರಿಯಾಗಿಸಿ ‘ಬಂಕರ್ ಬಸ್ಟರ್’ ಬಾಂಬ್‌ಗಳನ್ನು ಹಾಕಲಾಗಿದೆ. ಇತರ ಪರಮಾಣು ಘಟಕಗಳನ್ನು ಗುರಿಯಾಗಿಸಿ ಟೊಮಾಹಾಕ್ ಕ್ಷಿಪಣಿಗಳನ್ನು ಹಾರಿಸಲಾಗಿದೆ’ ಎಂದು ಟ್ರಂಪ್ ಅವರು ‘ಫಾಕ್ಸ್ ನ್ಯೂಸ್’ಗೆ ತಿಳಿಸಿದ್ದಾರೆ.

‘ಉಪಗ್ರಹ ಚಿತ್ರಗಳಿಂದ ಹಾನಿ ಬಹಿರಂಗ: ‘ಅಸೋಸಿಯೇಟೆಡ್ ಪ್ರೆಸ್’ ಸುದ್ದಿಸಂಸ್ಥೆಯು, ಉಪಗ್ರಹ ಸೆರೆಹಿಡಿದ ಚಿತ್ರಗಳನ್ನು ಭಾನುವಾರ ವಿಶ್ಲೇಷಿಸಿದ್ದು, ಅಮೆರಿಕ ನಡೆಸಿದ ದಾಳಿಯಲ್ಲಿ ಫೋರ್ಡೊ ಪರಮಾಣು ಘಟಕದ ಪ್ರವೇಶ ಮಾರ್ಗಗಳಿಗೆ ಹಾನಿಯಾಗುವುದು ಕಂಡುಬರುತ್ತದೆ ಎಂದು ಹೇಳಿದೆ.

‘ಪ್ಲಾನೆಟ್ ಲ್ಯಾಬ್ಸ್ ಪಿಬಿಸಿ’ ಸೆರೆಹಿಡಿದ ಚಿತ್ರಗಳನ್ನು ಸುದ್ದಿಸಂಸ್ಥೆ ವಿಶ್ಲೇಷಿಸಿದೆ.

ಪರಮಾಣು ಘಟಕ ಇರುವ ಪರ್ವತ ಪ್ರದೇಶಕ್ಕೇ ಹಾನಿಯಾಗಿದೆ. ಒಂದೊಮ್ಮೆ ಕಂದುಬಣ್ಣದಾಗಿದ್ದ ಪರ್ವತದ ಕೆಲ ಭಾಗಗಳು ಬೂದು ಬಣ್ಣಕ್ಕೆ ತಿರುಗಿವೆ. ಇದು, ಆ ಸ್ಥಳದಲ್ಲಿ ಸಂಭವಿಸಿದ ಭಾರಿ ಸ್ಫೋಟದಿಂದಾಗಿ ಅವಶೇಷಗಳು ಎಲ್ಲೆಡೆ ಹರಡಿರುವುದು ಹಾಗೂ ಹಾನಿಯಾಗಿರುವುದನ್ನು ತೋರುತ್ತದೆ ಎಂದೂ ಹೇಳಿದೆ.

ಬಿ–2 ಬಾಂಬರ್, ಟೊಮಾಹಾಕ್ ಕ್ಷಿಪಣಿ ಬಳಕೆ

ರಹಸ್ಯವಾಗಿ ಕಾರ್ಯಾಚರಣೆ ನಡೆಸಿ, ಶತ್ರು ರಾಷ್ಟ್ರಗಳ ಗುರಿಗಳನ್ನು ನಾಶ ಮಾಡುವ ಸಾಮರ್ಥ್ಯವುಳ್ಳ ಬಿ–2 ಯುದ್ಧ ವಿಮಾನಗಳನ್ನು ಬಳಸಿ ಬಾಂಬ್ ಹಾಕಲಾಗಿದೆ. 30 ಅತ್ಯಾಧುನಿಕ ಟೊಮಾಹಾಕ್ ಕ್ಷಿಪಣಿಗಳನ್ನು ಬಳಸಿ, ಈ ಭೀಕರ ದಾಳಿ ನಡೆಸಲಾಗಿದೆ ಎಂದು ಅಮೆರಿಕ ಹಾಗೂ ಇಸ್ರೇಲ್ ಅಧಿಕಾರಿಗಳು ಹೇಳಿದ್ದಾರೆ.

ಇರಾನ್‌ನ ಪರಮಾಣು ಘಟಕಗಳು ಭೂಮಿಯ ಆಳದಲ್ಲಿ ನಿರ್ಮಿಸಲಾಗಿದ್ದು, ಸುಲಭವಾಗಿ ಭೇದಿಸಲು ಆಗುವುದಿಲ್ಲ. ಭಾರಿ ಪ್ರಮಾಣದ ಬಾಂಬ್ ಹಾಕಿ, ಘಟಕಗಳನ್ನು ನಾಶ ಮಾಡಲಾಗಿದೆ. ಜಲಾಂತರ್ಗಾಮಿಗಳಿಂದಲೂ ಚಿಮ್ಮಿರುವ ಕ್ಷಿಪಣಿಗಳು ನಿರ್ದೇಶಿತ ಗುರಿಗಳನ್ನು ನಾಶ ಮಾಡುವಲ್ಲಿ ಸಫಲವಾಗಿವೆ.

ಟೆಹರಾನ್‌ನಿಂದ 220 ಕಿ.ಮೀ. ದೂರದಲ್ಲಿರುವ ನಟಾನ್ಜ್ ಪರಮಾಣು ಘಟಕವು ಯುರೇನಿಯಂ ಅನ್ನು ಶೇ 60ರಷ್ಟು ಶುದ್ಧೀಕರಿಸುವ ಸಾಮರ್ಥ್ಯ ಹೊಂದಿದೆ. ಅಣ್ವಸ್ತ್ರ ತಯಾರಿಕೆಯಲ್ಲಿ ಬಳಸುವ ಯುರೇನಿಯಂ ಶೇ 90ರಷ್ಟು ಶುದ್ಧೀಕರಣಗೊಂಡಿರುವುದು ಅಗತ್ಯ.

ಕೋಮ್ ನಗರ ಸಮೀಪವಿರುವ ಫೋರ್ಡೊ ಘಟಕ ಹಾಗೂ ಟೆಹರಾನ್‌ನ ಆಗ್ನೇಯದಲ್ಲಿರುವ ಇಸ್‌ಫಹಾನ್ ಘಟಕದ ಮೇಲೂ ದಾಳಿ ನಡೆಸಲಾಗಿದೆ.

‘ಬಂಕರ್ ಬಸ್ಟರ್’ ಬಾಂಬ್ ಎಂದೂ ಕರೆಯಲಾಗುವ ‘ಜಿಬಿಯು–57’ (ಮ್ಯಾಸಿವ್ ಆರ್ಡನನ್ಸ್ ಪೆನೆಟ್ರೇಟರ್–ಎಂಒಪಿ) 6 ಬಾಂಬ್‌ಗಳನ್ನು ಹಾಕಲಾಗಿದೆ. ಇವುಗಳ ತೂಕ 30 ಸಾವಿರ ಪೌಂಡ್ (ಅಂದಾಜು 13,500 ಕೆ.ಜಿ).

‘ಜಿಬಿಯು–57’ ಬಾಂಬ್‌ಗಳನ್ನು 60 ಮೀಟರ್ ಆಳಕ್ಕೆ ನುಗ್ಗಿ, ನಂತರ ಸ್ಫೋಟವಾಗುವಂತೆ ವಿನ್ಯಾಸ ಮಾಡಲಾಗಿದೆ. ಫೋರ್ಡೊ ಘಟಕವನ್ನು ಪರ್ವತದ 100 ಮೀಟರ್ ಆಳದಲ್ಲಿ ನಿರ್ಮಿಸಲಾಗಿದೆ. ಹೀಗಾಗಿ, ಬಿ–2 ಬಾಂಬರ್‌ಗಳು ಮಾತ್ರ ‘ಜಿಬಿಯು–57’ ಬಾಂಬ್‌ಗಳನ್ನು ಹೊತ್ತೊಯ್ದು, ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ.

ಇಂಧನ ಮರುಪೂರಣ ಮಾಡದಯೇ, ಈ ಬಾಂಬರ್‌ಗಳು ಎರಡು ‘ಜಿಬಿಯು–57’ ಬಾಂಬ್‌ಗಳನ್ನು ಹೊತ್ತು 9.600 ಕಿ.ಮೀ. ಕ್ರಮಿಸಬಲ್ಲವು. ಇದೇ ಮೊದಲ ಬಾರಿಗೆ ಅಮೆರಿಕ ‘ಜಿಬಿಯು–57’ ಬಾಂಬ್‌ಗಳನ್ನು ಬಳಸಿದೆ.

ಟೊಮಾಹಾಕ್ ಕ್ಷಿಪಣಿಗಳನ್ನು ಯುದ್ಧನೌಕೆಗಳು, ಜಲಾಂತರ್ಗಾಮಿಗಳು ಹಾಗೂ ನೆಲದಿಂದಲೂ ಉಡ್ಡಯನ ಮಾಡಬಹುದು. 1,000 ಮೈಲು ದೂರದ ಗುರಿಗಳನ್ನು ನಾಶ ಮಾಡುವ ಸಾಮರ್ಥ್ಯವನ್ನು ಈ ಕ್ಷಿಪಣಿಗಳು ಹೊಂದಿವೆ. ಉಡ್ಡಯನ ಮಾಡಿದ ಮೇಲೂ, ತನ್ನ ದಿಕ್ಕನ್ನು ಬದಲಿಸಿ ಗುರಿಗಳನ್ನು ತಲುಪುವ ಹಾಗೂ ವಾಯಪ್ರದೇಶ ರಕ್ಷಣೆ ಭೇದಿಸಿ, ಮುನ್ನುಗ್ಗುವ ಸಾಮರ್ಥ್ಯವನ್ನು ಸಹ ಈ ಕ್ಷಿಪಣಿಗಳು ಹೊಂದಿವೆ.

‘ಐಎಇಎ ತುರ್ತು ಸಭೆ’

ಅಮೆರಿಕ ದಾಳಿಯಿಂದಾಗಿ ಇರಾನ್‌ನ ಮೂರು ಪರಮಾಣು ಘಟಕಗಳು ನಾಶವಾಗಿದ್ದು, ಸ್ಥಳದಲ್ಲಿ ಯಾವುದೇ ವಿಕಿರಣ ಸೋರಿಕೆ ಕಂಡುಬಂದಿಲ್ಲ ಎಂದು ಅಂತರರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ (ಐಎಇಎ) ಹೇಳಿದೆ.

‘ಈ ವಿದ್ಯಮಾನ ಕುರಿತು ಚರ್ಚಿಸಲು 35 ದೇಶಗಳಿರುವ ಮಂಡಳಿಯ ಸಭೆಯನ್ನು ಸೋಮವಾರ ಕರೆಯಲಾಗಿದೆ’ ಎಂದು ಐಎಇಎ ಮುಖ್ಯಸ್ಥ ರಫೇಲ್ ಗ್ರಾಸಿ ಹೇಳಿದ್ದಾರೆ.

‘ಇರಾನ್ ವಿರುದ್ಧ ಅಮೆರಿಕ ಯುದ್ಧ ಬಯಸುವುದಿಲ್ಲ’

ವಾಷಿಂಗ್ಟನ್(ಎಪಿ): ‘ಇರಾನ್ ವಿರುದ್ಧ ಯುದ್ಧವನ್ನು ನಾವು ಬಯಸುವುದಿಲ್ಲ. ಮೂರು ಪರಮಾಣು ಘಟಕಗಳನ್ನು ಗುರಿಯಾಗಿಸಿ ನಡೆಸಿದ ಬಾಂಬ್ ದಾಳಿಯ ಹಿಂದೆ ಇರಾನ್‌ನಲ್ಲಿ ಆಡಳಿತ ಬದಲಿಸುವ ಉದ್ದೇಶವೂ ಇಲ್ಲ’ ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಭಾನುವಾರ ಹೇಳಿದ್ದಾರೆ.

ಇನ್ನೊಂದೆಡೆ, ‘ಈ ದಾಳಿಯು, ಅಮೆರಿಕದೊಂದಿಗೆ ಮಾತುಕತೆ ನಡೆಸುವುದಕ್ಕೆ ಇರಾನ್‌ಗೆ ಹೊಸದಾಗಿ ಅವಕಾಶ ಕಲ್ಪಿಸಿದೆ’ ಎಂದು ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಹೇಳಿದ್ದಾರೆ.

ರಕ್ಷಣಾ ಇಲಾಖೆ ಕೇಂದ್ರ ಕಚೇರಿ ಪೆಂಟಗನ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹೆಗ್ಸೆತ್ ಹಾಗೂ ವಾಯುಪಡೆಯ ಜಾಯಿಂಟ್ ಚೀಫ್ಸ್ ಆಫ್ ಸ್ಟಾಫ್‌ನ ಮುಖ್ಯಸ್ಥ ಜನರಲ್ ಡ್ಯಾನ್ ಕೇನ್ ಮಾತನಾಡಿ,‘ಪಳಗಿದ ಸಿಬ್ಬಂದಿ ನಡೆಸಿದ ಈ ಕಾರ್ಯಾಚರಣೆಯನ್ನು ಇರಾನ್‌ನ ಯಾವುದೇ ಪ್ರತಿರೋಧವಿಲ್ಲದೆಯೇ ಕಾರ್ಯಗತಗೊಳಿಸಲಾಯಿತು’ ಎಂದರು.

‘ಫೋರ್ಡೊ, ನಟಾನ್ಜ್ ಹಾಗೂ ಎಸ್‌ಫಹಾನ್ ಪರಮಾಣು ಘಟಕಗಳನ್ನು ನಾಶ ಮಾಡುವುದು ‘ಆಪರೇಷನ್ ಮಿಡ್‌ನೈಟ್ ಹ್ಯಾಮರ್’ನ ಉದ್ದೇಶವಾಗಿತ್ತು. ಅದನ್ನು ಯಶಸ್ವಿಯಾಗಿ ಸಾಧಿಸಲಾಗಿದೆ. ಅಂತಿಮ ಫಲಿತಾಂಶ ತಿಳಿಯಲು ಸಮಯ ಬೇಕು. ಆದರೆ, ಈ ಮೂರು ಘಟಕಗಳಿಗೆ ಭಾರಿ ಹಾನಿಯಾಗಿರುವುದನ್ನು ಆರಂಭಿಕ ಪರಿಶೀಲನೆ ದೃಢಪಡಿಸಿದೆ’ ಎಂದೂ ಅವರು ಹೇಳಿದರು.

ಸುದ್ದಿವಾಹಿನಿಯೊಂದಕ್ಕೆ ಸಂದರ್ಶನ ನೀಡಿರುವ ಉಪಾಧ್ಯಕ್ಷ ವ್ಯಾನ್ಸ್,‘ದಾಳಿ ವೇಳೆ ನಮಗೆ ಏನು ಕಂಡುಬಂತು ಎಂಬುದು ಸೂಕ್ಷ್ಮ ವಿಚಾರ. ಹೀಗಾಗಿ ಅದರ ಬಗ್ಗೆ ನಾನು ಚರ್ಚಿಸುವುದಿಲ್ಲ. ಆದರೆ, ಅಣ್ವಸ್ತ್ರ ಅಭಿವೃದ್ಧಿಪಡಿಸಬೇಕೆನ್ನುವ ಇರಾನ್‌ನ ಯತ್ನವನ್ನು ನಾವು ತಡೆದಿದ್ದೇವೆ ಎಂದು ವಿಶ್ವಾಸದಿಂದ ಹೇಳಬಲ್ಲೆ’ ಎಂದರು.

‘ಈ ಬಿಕ್ಕಟ್ಟಿಗೆ ಶಾಂತಿಯುತವಾಗಿ ಪರಿಹಾರ ಕಂಡುಕೊಳ್ಳುವಂತೆ ಇರಾನ್ ಜೊತೆ ವ್ಯಾಪಕ ಸಮಾಲೋಚನೆ ನಡೆಸಿದೆವು. ಮಾತುಕತೆಗೆ ಇರಾನ್ ಸಿದ್ಧವಿಲ್ಲ ಎಂಬುದು ಮನವರಿಕೆಯಾದ ಬಳಿಕವೇ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ದಾಳಿ ನಡೆಸುವ ನಿರ್ಧಾರ ಕೈಗೊಂಡರು’ ಎಂದು ವ್ಯಾನ್ಸ್ ಹೇಳಿದರು.

ಇರಾನ್ ಯುದ್ಧಭೂಮಿ ಪ್ರತ್ಯಕ್ಷ ಅನುಭವ ಹಂಚಿಕೊಂಡ ವಿದ್ಯಾರ್ಥಿ

ಬದುಕಿ ಬರುವ ಭರವಸೆಯೇ ಇರಲಿಲ್ಲ

● ನರಸಿಂಹ ಮೂರ್ತಿ ಕೆ.ಎನ್



ಸೈಯದ್ ಮೊಹಮ್ಮದ್ ತಾಕಿ

ಗೌರಿಬಿದನೂರು (ಚಿಕ್ಕಬಳ್ಳಾಪುರ): ಇರಾನ್ ಮತ್ತು ಇಸ್ರೇಲ್ ನಡುವೆ ಯುದ್ಧ ಆರಂಭವಾದಾಗ ನಾವಿದ್ದ ಟೆಹರಾನ್‌ನಿಂದ ಐದು ಕಿಲೋ ಮೀಟರ್ ದೂರದಲ್ಲೇ ಇಸ್ರೇಲ್‌ನಿಂದ ನಿರಂತರವಾಗಿ ಕ್ಷಿಪಣಿ ದಾಳಿಯಾಗುತ್ತಿತ್ತು. ಮತ್ತೆ ಜೀವಂತವಾಗಿ ತಾಯ್ನಾಡಿಗೆ ಮತ್ತು ಸ್ವಗ್ರಾಮ ಅಲೀಪುರಕ್ಕೆ ಮರಳುವ ಭರವಸೆ ಎಳ್ಳಷ್ಟೂ ಇರಲಿಲ್ಲ...

– ಇರಾನ್‌ನಿಂದ ಶನಿವಾರ ಅಲೀಪುರಕ್ಕೆ ಬಂದಿಳಿದ ಸೈಯದ್ ಮೊಹಮ್ಮದ್ ತಾಕಿ ಎಂಬ ವೈದ್ಯಕೀಯ ವಿದ್ಯಾರ್ಥಿ ಹಂಚಿಕೊಂಡ ಅನುಭವದ ಮಾತುಗಳಿವು. ಅಲೀಪುರದ ಸೈಯದ್ ತಾಕಿ ಇರಾನ್ ರಾಜಧಾನಿ ಟೆಹರಾನ್‌ನಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾರೆ.

ಟೆಹರಾನ್‌ನಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿರುವ ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕು ಅಲೀಪುರ ಗ್ರಾಮದ 11 ವಿದ್ಯಾರ್ಥಿಗಳು ಶನಿವಾರ ತಡರಾತ್ರಿ ಗ್ರಾಮಕ್ಕೆ ಬಂದರು. ಅದಕ್ಕೂ ಮೊದಲು ಮಧ್ಯಾಹ್ನ 15 ನಾಗರಿಕರು ಸುರಕ್ಷಿತವಾಗಿ ಮರಳಿದ್ದರು.

ಇರಾನ್‌ನಲ್ಲಿ ಸಿಲುಕಿದ್ದ ಸಾವಿರಾರು ಭಾರತೀಯರನ್ನು ಭಾರತ ಸರ್ಕಾರದ ಸಿಂಧೂ ಕಾರ್ಯಾಚರಣೆ ಅಡಿ ಸುರಕ್ಷಿತವಾಗಿ ತಾಯ್ನಾಡಿಗೆ ಕರೆ ತಂದಿದೆ.

ಅಲೀಪುರದ150ಕ್ಕೂ ಹೆಚ್ಚು ಗ್ರಾಮಸ್ಥರು ಇರಾನ್‌ನಲ್ಲಿ ಸಿಲುಕಿದ್ದಾರೆ. ಭಾನುವಾರ ರಾತ್ರಿ ಮತ್ತು ಸೋಮವಾರ ಮತ್ತಷ್ಟು ವಿದ್ಯಾರ್ಥಿಗಳು ಮತ್ತು ನಾಗರಿಕರು ಇರಾನ್‌ನಿಂದ ಗ್ರಾಮಕ್ಕೆ ಬರಲಿದ್ದಾರೆ.

ಟೆಹರಾನ್ ನಗರದ ಕೆಲವು ಬೃಹತ್ ಕಟ್ಟಡಗಳು ಕ್ಷಿಪಣಿ ದಾಳಿಯಿಂದ ಹಾನಿಗೆ ಒಳಗಾಗಿವೆ. ಅನೇಕ ಗಗನಚುಂಬಿ ಕಟ್ಟಡಗಳು ಧರೆಗೆ ಉರುಳುವುದನ್ನು ಕಣ್ಣಾರೆ ಕಂಡಿದ್ದೇವೆ. ಇಸ್ರೇಲ್ ಕ್ಷಿಪಣಿಗಳನ್ನು ಇರಾನ್ ಆಗಸದಲ್ಲೇ ಹೊಡೆದುರುಳಿಸಿದೆ. ಟೆಹರಾನ್‌ನಿಂದ ಶುಕ್ರವಾರ ಮಶಾದ್ ನಗರಕ್ಕೆ ಬಂದಾಗ ಅಲ್ಲಿಯೂ ನಿರಂತರವಾಗಿ ಕ್ಷಿಪಣಿಗಳ ದಾಳಿ ನಡೆಯುತ್ತಿತ್ತು. ಆಗಸದಲ್ಲಿ ಚಿಮ್ಮಿ ಬರುತ್ತಿದ್ದ ರಾಕೆಟ್‌ಗಳು ಪಟಾಕಿಗಳಂತೆ ಗೋಚರಿಸುತ್ತಿದ್ದವು ಎಂದರು.

ಕ್ಷಿಪಣಿ ದಾಳಿ ನೋಡಿ ಆತಂಕವಾಗಿತ್ತು. ಇಂಟರ್‌ನೆಟ್ ಕಡಿತಗೊಳಿಸಲಾಗಿತ್ತು. ಇದರಿಂದ ಮನೆಯವರೊಂದಿಗೆ ಸಂಪರ್ಕ ಸಾಧಿಸಲು ಕಷ್ಟವಾಯಿತು ಎಂದರು.

> ಇಸ್ರೇಲ್ ದಾಳಿ ನಡೆಸುತ್ತಿರುವ ಸುದ್ದಿಯನ್ನು ಟಿ.ವಿಯಲ್ಲಿ ನೋಡಿದಾಗ ಮನೆಯಲ್ಲಿ ಎಲ್ಲರಿಗೂ ಭಯವಾಗಿತ್ತು. ಎಲ್ಲರನ್ನೂ ಸುರಕ್ಷಿತವಾಗಿ ಭಾರತಕ್ಕೆ ಕರೆ ತರುವುದಾಗಿ ಅಧಿಕಾರಿಗಳು ತಿಳಿಸಿದ್ದರು
>
> **ಮಿರ್‌ರಾಜಾ ತಾಕಿ,** ವಿದ್ಯಾರ್ಥಿ ತಂದೆ

‘ಹೋಟೆಲ್‌ನಲ್ಲಿ ಇರಿಸಿದ್ದರು’

ಭಾರತೀಯ ವಿದ್ಯಾರ್ಥಿಗಳನ್ನು ವಿಮಾನ ನಿಲ್ದಾಣಕ್ಕೆ ಕರೆ ತರುವಾಗ 60 ಕಿಲೋ ಮೀಟರ್‌ಗೆ ಒಂದು ಚೆಕ್ ಪೋಸ್ಟ್ ನಿರ್ಮಿಸಿ ತಪಾಸಣೆ ಮಾಡುತ್ತಿದ್ದರು. ನಂತರ ವಿಮಾನ ನಿಲ್ದಾಣಕ್ಕೆ ಬಂದ ನಂತರ ಭಾರತೀಯ ರಾಯಭಾರ ಕಚೇರಿಯು 1200ಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳನ್ನು ಪ್ರತ್ಯೇಕ ಹೋಟೆಲ್‌ಗಳಲ್ಲಿ ಇರಿಸಿತ್ತು ಎಂದರು.

ಅಲೀಪುರದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಕೊಠಡಿ ನೀಡಲಾಗಿತ್ತು. ಇಲ್ಲಿ ವೈ–ಫೈ ವ್ಯವಸ್ಥೆಯಿಂದ ಮನೆಯವರೊಂದಿಗೆ ಮಾತನಾಡಲು ಅವಕಾಶ ಕಲ್ಪಿಸಲಾಗಿತ್ತು. ಟೆಹರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಸಿಬ್ಬಂದಿ ಪ್ರತಿಯೊಬ್ಬ ಭಾರತೀಯರನ್ನೂ ಸಂಪರ್ಕಿಸಿ ಎಲ್ಲಾ ಅಗತ್ಯ ಸೌಕರ್ಯ ಒದಗಿಸಿದರು ಎಂದು ಸೈಯದ್ ಮೊಹಮ್ಮದ್ ತಾಕಿ ಕೃತಜ್ಞತೆ ಸಲ್ಲಿಸಿದರು.

ಭಾರತಕ್ಕೆ ಯಾವಾಗ ಮರಳುತ್ತೇವೆ ಎಂಬ ಬಗ್ಗೆ ಯಾವುದೇ ಖಚಿತವಾಗಿ ಮಾಹಿತಿ ನೀಡುತ್ತಿರಲಿಲ್ಲ. ಆರು ತಾಸು ಮುಂಚಿತವಾಗಿ ಸಿದ್ಧವಾಗಿರುವಂತೆ ಮಾತ್ರ ತಿಳಿಸಿದ್ದರು. ಎರಡನೇ ತಂಡದಲ್ಲಿ ಭಾರತಕ್ಕೆ ಹೊರಡಲು ಸಿದ್ಧರಾಗಿ ವಿಮಾನ ನಿಲ್ದಾಣದಲ್ಲಿ ಇರುವಂತೆ ತಿಳಿಸಿದ್ದರು. ಭಾರತೀಯ ರಾಯಭಾರ ಕಚೇರಿ ಸಿಬ್ಬಂದಿ ಜೊತೆ ನಿರಂತರ ಸಂಪರ್ಕದಲ್ಲಿ ಇದ್ದೆವು ಎಂದರು.

ಪರಸ್ಪರರ ಮೇಲೆ ದಾಳಿ

ಶನಿವಾರ ರಾತ್ರಿ ಇಸ್ರೇಲ್ ಮೇಲೆ, ಖೋರ್ರಾಮ್‌ಶಹ್ರ್–4 ಸೇರಿದಂತೆ 40 ಕ್ಷಿಪಣಿಗಳಿಂದ ದಾಳಿ ನಡೆಸಲಾಗಿದೆ ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ ಹೇಳಿದೆ.

‘ನಮ್ಮ ಸಾಮರ್ಥ್ಯಗಳನ್ನು ಇನ್ನೂ ಸಂಪೂರ್ಣವಾಗಿ ಬಳಸಿ, ಕಾರ್ಯಾಚರಣೆ ಆರಂಭಿಸಿಲ್ಲ. ಮುಂದಿನ ದಿನಗಳಲ್ಲಿ ದಾಳಿಗಳನ್ನು ಮತ್ತಷ್ಟು ಹೆಚ್ಚಿಸಲಾಗುವುದು’ ಎಂದಿದೆ.

ದೇಶದ ಕೇಂದ್ರ ಹಾಗೂ ಉತ್ತರ ಭಾಗಗಳ ಕೆಲ ಪ್ರದೇಶಗಳ ಮೇಲೆ ಇರಾನ್ ಭಾನುವಾರ ಕ್ಷಿಪಣಿ ದಾಳಿ ನಡೆಸಿದ್ದು, 86 ಜನರು ಗಾಯಗೊಂಡಿದ್ದಾರೆ ಎಂದು ಇಸ್ರೇಲ್‌ನ ಆರೋಗ್ಯ ಸಚಿವಾಲಯ ಹೇಳಿದೆ. ಟೆಲ್ ಅವೀವ್‌ನಲ್ಲಿ ಹೆಚ್ಚು ಹಾನಿಯಾಗಿದೆ. ಇರಾನ್ ದಾಳಿ ನಡೆಸಿದ ಬೆನ್ನಲ್ಲೇ ಪ್ರತಿ ದಾಳಿ ಆರಂಭಿಸಲಾಗಿದೆ. ಇರಾನ್‌ನ ಪಶ್ಚಿಮ ಭಾಗದಲ್ಲಿನ ಸೇನಾ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಹೇಳಿದೆ.

ಇರಾನ್‌ನ ಡೆಜ್‌ಫುಲ್ ವಿಮಾನ ನಿಲ್ದಾಣದಲ್ಲಿದ್ದ ವಿಮಾನವೊಂದಕ್ಕೆ ಹಾನಿ ಮಾಡಲಾಗಿದೆ. ಎರಡು ಎಫ್–5 ಯುದ್ಧವಿಮಾನಗಳನ್ನು ಕೂಡ ಹೊಡೆದುರುಳಿಸಲಾಗಿದೆ ಎಂದು ಇಸ್ರೇಲ್ ಹೇಳಿದೆ. ಈ ಕುರಿತು ಇರಾನ್ ಪ್ರತಿಕ್ರಿಯಿಸಿಲ್ಲ.

ಜಸ್‌ಪ್ರೀತ್ ಬೂಮ್ರಾ ವಿಕೆಟ್ ಸಂಭ್ರಮ

ಲೀಡ್ಸ್ ಟೆಸ್ಟ್: ಭಾರತಕ್ಕೆ 6 ರನ್ ಮುನ್ನಡೆ; ಬ್ರೂಕ್ ಕೈತಪ್ಪಿದ ಶತಕ, ಪ್ರಸಿದ್ಧಗೆ 3 ವಿಕೆಟ್

ಪ್ರಸಿದ್ಧ ಕೃಷ್ಣ ಸಂಭ್ರಮ
ಎಪಿ ಚಿತ್ರಗಳು


ಜಸ್‌ಪ್ರೀತ್ ಬೂಮ್ರಾ
24.4 ಓವರ್
5 ಮೇಡನ್
83 ರನ್
5 ವಿಕೆಟ್

• ಸಿಡ್ನಿ ಕಿರಣ್

ಲೀಡ್ಸ್: ಹೆಡಿಂಗ್ಲೆ ಕ್ರೀಡಾಂಗಣದಲ್ಲಿ ಭಾನುವಾರ ತಂಪುಗಾಳಿ ಸುಳಿದಾಡುತ್ತಲೇ ಇತ್ತು. ಅದರಲ್ಲಿಯೇ ಭಾರತ ಮತ್ತು ಇಂಗ್ಲೆಂಡ್ ತಂಡಗಳ ಆಟಗಾರರು ಒಂದು ರೀತಿಯಲ್ಲಿ 'ಸಮಬಲ'ದ ಹೋರಾಟ ಪ್ರದರ್ಶಿಸಿದರು. ತಪ್ಪುಗಳನ್ನು ಎಸಗುವುದರಲ್ಲಿಯೂ ಕೂಡ!

ಹೌದು; ಭಾರತದ ಫೀಲ್ಡರ್‌ಗಳು ಕ್ಯಾಚ್‌ಗಳನ್ನು ನೆಲಕ್ಕೆ ಚೆಲ್ಲಿದರು. ಬೌಲರ್‌ಗಳು ಶಾರ್ಟ್ ಪಿಚ್ ಎಸೆತಗಳನ್ನು ಪ್ರಯೋಗಿಸುವಲ್ಲಿ ನಿರೀಕ್ಷಿತ ಯಶಸ್ಸು ಕಾಣಲಿಲ್ಲ. ಇಂಗ್ಲೆಂಡ್ ಬ್ಯಾಟರ್‌ಗಳು ತಕ್ಕಮಟ್ಟಿಗೆ ಇದರ ಲಾಭ ಪಡೆದರು. ಆದರೆ ಅವರೂ ಶಾಲೆಯ ಮಕ್ಕಳ ರೀತಿಯಲ್ಲಿ ಕೆಲವು ಅಚಾತುರ್ಯಗಳನ್ನು ಮಾಡಿಕೊಂಡು ವಿಕೆಟ್ ಚೆಲ್ಲಿದರು. ಅದರಿಂದಾಗಿ ದೊಡ್ಡ ಮುನ್ನಡೆ ಸಾಧಿಸುವ ಅವಕಾಶ ಉಭಯ ತಂಡಗಳ ಕೈತಪ್ಪಿತು. ಇದೆಲ್ಲದರ ನಡುವೆ ವೇಗಿ ಜಸ್‌ಪ್ರೀತ್ ಬೂಮ್ರಾ ಐದು ವಿಕೆಟ್ ಗೊಂಚಲು ಗಳಿಸುವ ಮೂಲಕ ಭಾರತ ತಂಡಕ್ಕೆ 6 ರನ್‌ಗಳ ಅತ್ಯಲ್ಪ ಮುನ್ನಡೆ ಕೊಡಿಸಿದರು.

ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 471 ರನ್‌ಗಳಿಗೆ ಉತ್ತರವಾಗಿ ಆತಿಥೇಯರು 100.4 ಓವರ್‌ಗಳಲ್ಲಿ 465 ರನ್ ಗಳಿಸಿದರು. ಒಂದು ರನ್ ಅಂತರದಲ್ಲಿ ಶತಕ ಕೈತಪ್ಪಿಸಿಕೊಂಡ ಹ್ಯಾರಿ ಬ್ರೂಕ್ (99 ರನ್), ಜೆಮಿ ಸ್ಮಿತ್ (40 ರನ್) ಮತ್ತು ಕ್ರಿಸ್ ವೋಕ್ಸ್ (38 ರನ್) ಅವರು ಇಂಗ್ಲೆಂಡ್ ತಂಡವು ದೊಡ್ಡ ಹಿನ್ನಡೆ ಅನುಭವಿಸುವುದನ್ನು ತಪ್ಪಿಸಿದರು. ಎರಡನೇ ಇನಿಂಗ್ಸ್ ಆರಂಭಿಸಿದ ಭಾರತ ತಂಡವು ಮಳೆ ಬಂದು ಆಟ ಸ್ಥಗಿತವಾಗುವ ಮುನ್ನ 23.5 ಓವರ್‌ಗಳಲ್ಲಿ 2 ವಿಕೆಟ್‌ಗೆ 90 ರನ್ ಗಳಿಸಿತು.

ಕೆ.ಎಲ್. ರಾಹುಲ್ (ಬ್ಯಾಟಿಂಗ್ 47) ಮತ್ತು ನಾಯಕ ಶುಭಮನ್ ಗಿಲ್ (ಬ್ಯಾಟಿಂಗ್ 6) ಕ್ರೀಸ್‌ನಲ್ಲಿದ್ದಾರೆ. ಮೊದಲ ಇನಿಂಗ್ಸ್‌ನಲ್ಲಿ ಶತಕ ಹೊಡೆದಿದ್ದ ಯಶಸ್ವಿ ಜೈಸ್ವಾಲ್ 4 ರನ್ ಮಾತ್ರ ಗಳಿಸಿದರು ಮತ್ತು ಪದಾರ್ಪಣೆ ಪಂದ್ಯ ಆಡುತ್ತಿರುವ ಸಾಯಿ ಸುದರ್ಶನ್ 30 ರನ್ ಗಳಿಸಿದರು.

ಪಂದ್ಯದ ಎರಡನೇ ದಿನದಾಟದ ಅಂತ್ಯಕ್ಕೆ ಇಂಗ್ಲೆಂಡ್ 3 ವಿಕೆಟ್‌ಗಳಿಗೆ 209 ರನ್ ಗಳಿಸಿತ್ತು. ಶತಕ ಗಳಿಸಿದ್ದ ಒಲಿ ಪೋಪ್ ಕ್ರೀಸ್‌ನಲ್ಲಿದ್ದರು. ಮೂರನೇ ದಿನ ಬೆಳಿಗ್ಗೆ ಭಾರತ ತಂಡವೇ ಉತ್ತಮ ಆರಂಭ ಮಾಡಿತು. ತಂಡದಲ್ಲಿರುವ ಕನ್ನಡಿಗ ಪ್ರಸಿದ್ಧಕೃಷ್ಣ ಅವರು ದಿನದಾಟದ ಮೂರನೇ ಓವರ್‌ನಲ್ಲಿಯೇ ಪೋಪ್ (106 ರನ್) ವಿಕೆಟ್ ಕಬಳಿಸಿದರು. ರಿಷಭ್ ಪಂತ್ ಪಡೆದ ಕ್ಯಾಚ್‌ಗೆ ಪೋಪ್ ನಿರ್ಗಮಿಸಿದರು. ಇದಕ್ಕೂ ಮುನ್ನ ಪ್ರಸಿದ್ಧ ಅವರು ತುಸು ದುಬಾರಿಯೂ ಆದರು. ಬ್ರೂಕ್ ಅವರು ಪ್ರಸಿದ್ಧಗೆ ಒಂದು ಬೌಂಡರಿ ಮತ್ತು ಸಿಕ್ಸರ್ ಹೊಡೆದಿದ್ದರು.

ಪೋಪ್ ವಿಕೆಟ್ ಬಿದ್ದ ನಂತರ ಹೊಸ ಬ್ಯಾಟರ್‌ಗಳನ್ನು ತಡೆಯುವ ಪ್ರಯತ್ನ ಸಾಕಾಗಲಿಲ್ಲ. ಅದರಲ್ಲೂ ಬ್ರೂಕ್ ಅವರು ಬೌಲರ್‌ಗಳನ್ನು ದಂಡಿಸಿದರು. ಅವರೊಂದಿಗೆ ಸ್ಮಿತ್ ಕೂಡ ಇದ್ದರು. ಪ್ರಸಿದ್ಧ ಎಷ್ಟೇ ದಂಡನೆಗೊಳಗಾದರೂ ಶಾರ್ಟ್ ಎಸೆತಗಳನ್ನು ಹಾಕುವಲ್ಲಿ ಹಿಂಜರಿಯಲಿಲ್ಲ. ಅವರ ಅಂತಹದ್ದೇ ಒಂದು ಎಸೆತವನ್ನು ಹುಕ್ ಮಾಡಿದ ಬ್ರೂಕ್ ಶಾರ್ದೂಲ್ ಠಾಕೂರ್‌ಗೆ ಸುಲಭ ಕ್ಯಾಚ್ ಆದರು. ಕೇವಲ ಒಂದು ರನ್ ಅಂತರದಿಂದ ಶತಕವಂಚಿತರಾದರು. ಸ್ವಲ್ಪ ಹೊತ್ತಿನ ಬಳಿಕ ಜೆಮಿ ಸ್ಮಿತ್ ವಿಕೆಟ್ ಕೂಡ ಪ್ರಸಿದ್ಧ ಪಾಲಾಯಿತು. ಆದರೂ ಬೆಂಗಳೂರಿನ ಬೌಲರ್ 20 ಓವರ್‌ಗಳಲ್ಲಿ 128 ರನ್ ಬಿಟ್ಟುಕೊಟ್ಟರು.

ಫೀಲ್ಡಿಂಗ್ ಕೂಡ ಕಳಪೆಯಾಗಿತ್ತು. ಶನಿವಾರವೂ ಕೆಲವು ಕ್ಯಾಚ್ ಕೈಬಿಟ್ಟಿದ್ದ ಫೀಲ್ಡರ್‌ಗಳು ಮೂರನೇ ದಿನವೂ ಎರಡು ಕ್ಯಾಚ್ ಕೈಚೆಲ್ಲಿದರು.

ಈ ಎಲ್ಲ ಅಡೆತಡೆಗಳ ನಡುವೆಯೂ ಬೂಮ್ರಾ ಬೌಲಿಂಗ್ ಮಾತ್ರ ಮೊನಚಾಗಿಯೇ ಇತ್ತು. ಒಟ್ಟು ಐದು ವಿಕೆಟ್‌ಗಳ ಗೊಂಚಲನ್ನು ತಮ್ಮದಾಗಿಸಿಕೊಂಡ ಅವರು, ಕೊನೆಯಲ್ಲಿ ಬೀಸಾಟವಾಡುತ್ತಿದ್ದ ವೋಕ್ಸ್‌ಗೆ ಪೆವಿಲಿಯನ್ ದಾರಿ ತೋರಿಸುವಲ್ಲಿ ಸಫಲರಾದರು. ಚಹಾ ವಿರಾಮದ ಹೊತ್ತಿಗೆ ಇಂಗ್ಲೆಂಡ್ ಇನಿಂಗ್ಸ್‌ಗೆ ತೆರೆಬಿತ್ತು. ಆದರೆ ದೊಡ್ಡ ಮುನ್ನಡೆ ಸಾಧಿಸುವ ಭಾರತದ ಕನಸು ಕೈಗೂಡಲಿಲ್ಲ. ಪಂದ್ಯದಲ್ಲಿ ಇನ್ನೂ ಎರಡು ದಿನಗಳು ಬಾಕಿ ಇವೆ.

ಸ್ಕೋರ್ ಕಾರ್ಡ್

1ನೇ ಇನಿಂಗ್ಸ್: ಭಾರತ
471 (113 ಓವರುಗಳಲ್ಲಿ)
ಇಂಗ್ಲೆಂಡ್
465 (100.4 ಓವರುಗಳಲ್ಲಿ)
ಶನಿವಾರ: 3ಕ್ಕೆ 209 (49 ಓವರ್)

ಪೋಪ್ ಸಿ ಪಂತ್ ಬಿ ಪ್ರಸಿದ್ಧ 106 (137ಎ, 4X14)
ಬ್ರೂಕ್ ಸಿ ಠಾಕೂರ್ ಬಿ ಪ್ರಸಿದ್ಧ 99(112ಎ, 4X11, 6X2)
ಸ್ಟೋಕ್ಸ್ ಸಿ ಪಂತ್ ಬಿ ಸಿರಾಜ್ 20 (52ಎ, 4X3)
ಸ್ಮಿತ್ ಸಿ ಸಾಯಿ ಬಿ ಪ್ರಸಿದ್ಧ 40 (52ಎ, 4X5, 6X1)
ಕ್ರಿಸ್ ಬಿ ಬೂಮ್ರಾ 38 (55ಎ, 4X3, 6X2)
ಕಾರ್ಸ್ ಬಿ ಸಿರಾಜ್ 22 (23ಎ, 4X4)
ಟಂಗ್ ಬಿ ಬೂಮ್ರಾ 11 (18ಎ,4X2)
ಬಷೀರ್ ಔಟಾಗದೇ 1 (4ಎ)
ಇತರೆ: 34 (ಬೈ 8, ಲೆಗ್‌ಬೈ 18, ವೈಡ್ 1, ನೋಬಾಲ್ 7)
ವಿಕೆಟ್ ಪತನ: 4–225 (ಒಲಿ ಪೋಪ್;51.1), 5–276 (ಬೆನ್ ಸ್ಟೋಕ್ಸ್; 64.5), 6–349 (ಜೆಮಿ ಸ್ಮಿತ್;79.3), 7–398 (ಹ್ಯಾರಿ ಬ್ರೂಕ್; 87.3), 8–453(ಬ್ರೈಡನ್ ಕಾರ್ಸ್; 94.5), 9–460 (ಕ್ರಿಸ್ ವೋಕ್ಸ್; 98.5), 10–465 (ಜೋಷ್ ಟಂಗ್ 100.4)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 24.4–5–83–5, ಮೊಹಮ್ಮದ್ ಸಿರಾಜ್ 27–0–122–2, ಪ್ರಸಿದ್ಧಕೃಷ್ಣ 20–0–128–3, ರವೀಂದ್ರ ಜಡೇಜ 23–4–68–0, ಶಾರ್ದೂಲ್ ಠಾಕೂರ್ 6–0–38–0

ಎರಡನೇ ಇನಿಂಗ್ಸ್:
ಭಾರತ 2 ಕ್ಕೆ 90
(23.5 ಓವರ್‌ಗಳಲ್ಲಿ)

ಯಶಸ್ವಿ ಸಿ ಸ್ಮಿತ್ ಬಿ ಕಾರ್ಸ್ 4 (11ಎ, 4X1)
ರಾಹುಲ್ ಬ್ಯಾಟಿಂಗ್ 47 (75ಎ, 4X7)
ಸಾಯಿ ಸಿ ಕ್ರಾಲಿ ಬಿ ಸ್ಟೋಕ್ಸ್ 30 (48ಎ, 4X4)
ಗಿಲ್ ಬ್ಯಾಟಿಂಗ್ 6 (10ಎ, 4X1)
ಇತರೆ: 3 (ಲೆಗ್‌ಬೈ 1, ವೈಡ್ 1, ನೋಬಾಲ್ 1)
ವಿಕೆಟ್ ಪತನ: 1–16 (ಯಶಸ್ವಿ ಜೈಸ್ವಾಲ್;3.1), 2–82 (ಸಾಯಿ ಸುದರ್ಶನ್; 20.5)
ಬೌಲಿಂಗ್: ಕ್ರಿಸ್ ವೋಕ್ಸ್ 6–2–18–0, ಬ್ರೈಡನ್ ಕಾರ್ಸ್ 5–0–27–1, ಜೋಷ್ ಟಂಗ್ 5–0–15–0, ಶೋಯಬ್ ಬಷೀರ್ 2.5–1–11–0, ಬೆನ್ ಸ್ಟೋಕ್ಸ್ 5–1–18–1.

ಕರ್ನಾಟಕಕ್ಕೆ ಚಿನ್ನದ ಸಂಭ್ರಮ

ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್: ಅನೀಶ್ ಮಿಂಚು

ಪ್ರಜಾವಾಣಿ ವಾರ್ತೆ

ಮಹಿಳೆಯರ 4x200 ಮೀ. ಫ್ರೀಸ್ಟೈಲ್‌ನಲ್ಲಿ ಚಿನ್ನದ ಪದಕ ಗೆದ್ದ ತ್ರಿಶಾ, ವಿಹಿತಾ, ಮೀನಾಕ್ಷಿ ಹಾಗೂ ದಿನಿಧಿ

ಭುವನೇಶ್ವರ್: ಕರ್ನಾಟಕದ ಈಜುಪಟುಗಳು ಭಾನುವಾರ ಇಲ್ಲಿ ಆರಂಭವಾದ 78ನೇ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಮೂರು ಚಿನ್ನ ಸೇರಿದಂತೆ ಒಟ್ಟು ಏಳು ಪದಕಗಳನ್ನು ಗೆದ್ದುಕೊಂಡರು.

ಪುರುಷರ 200 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಬೆಂಗಳೂರಿನ ಅನೀಶ್ ಎಸ್. ಗೌಡ ಅವರು ಚಿನ್ನದ ಪದಕ ಗೆದ್ದರು. ಇದೇ ವಿಭಾಗದಲ್ಲಿ ಕರ್ನಾಟಕದ ಶಾನ್ ಗಂಗೂಲಿ ಕಂಚು ಪಡೆದರು. ತನೀಶ್ ಜಾರ್ಜ್ ಮ್ಯಾಥ್ಯೂ, ಚಿಂತನ್ ಎಸ್. ಶೆಟ್ಟಿ, ಎಸ್. ದರ್ಶನ್, ಅನೀಶ್ ಎಸ್. ಗೌಡ ಅವರಿದ್ದ ತಂಡವು 4X200 ಮೀ ಫ್ರೀಸ್ಟೈಲ್‌ನಲ್ಲಿ ಬಂಗಾರದ ಪದಕ ಗೆದ್ದಿತು.

ಪುರುಷರ 200 ಮೀ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಎಲ್. ಮಣಿಕಂಠ ಬೆಳ್ಳಿ ಪದಕ ಜಯಿಸಿದರು.

ಮಹಿಳೆಯರ ವಿಭಾಗದಲ್ಲಿ ಕರ್ನಾಟಕದ ತಾನ್ಯಾ ಷಡಕ್ಷರಿ ಬೆಳ್ಳಿ ಜಯಿಸಿದರು. 100 ಮೀ ಬಟರ್‌ಫ್ಲೈ-ನಲ್ಲಿ ಸೃಷ್ಟಿ ಉಪಾಧ್ಯಾಯ ಮತ್ತು ಆಸ್ತಾ ಚೌಧರಿ ಅವರು 1ನಿಮಿಷ, 03.50 ಸೆಕೆಂಡುಗಳಲ್ಲಿ ಏಕಕಾಲಕ್ಕೆ ಗುರಿ ತಲುಪಿ ಪ್ರಶಸ್ತಿ ಹಂಚಿಕೊಂಡರು. ದಿನಿಧಿ ದೇಸಿಂಗು ನಂತರದ ಸ್ಥಾನ ಪಡೆದರು.

ಫಲಿತಾಂಶಗಳು: ಪುರುಷರು: 200 ಮೀ ಫ್ರೀಸ್ಟೈಲ್: ಅನೀಶ್ ಎಸ್. ಗೌಡ (ಕರ್ನಾಟಕ; 1ನಿ,50.85ಸೆ)–1, ಸಜನ್ ಪ್ರಕಾಶ್ (ಪೊಲೀಸ್)–2, ಶಾನ್ ಗಂಗೂಲಿ (ಕರ್ನಾಟಕ)–3.
200 ಮೀ ಬ್ರೆಸ್ಟ್‌ಸ್ಟ್ರೋಕ್: ಧನುಷ್ ಸುರೇಶ್ (ತಮಿಳುನಾಡು; 2ನಿ, 19.17ಸೆ)–1, ಎಲ್. ಮಣಿಕಂಠ (ಕರ್ನಾಟಕ; 2ನಿ,20.56ಸೆ)–2, ರಾಣಾ ಪ್ರತಾಪ್ (ಎಸ್‌ಎಸ್‌ಸಿಬಿ)–3.
4X200 ಮೀ ಫ್ರೀಸ್ಟೈಲ್: ಕರ್ನಾಟಕ (ತನೀಶ್ ಜಾರ್ಜ್ ಮ್ಯಾಥ್ಯೂ, ಚಿಂತನ್ ಎಸ್. ಶೆಟ್ಟಿ, ಎಸ್. ದರ್ಶನ್, ಅನೀಶ್ ಎಸ್. ಗೌಡ; ಕಾಲ: 7ನಿ,40.90ಸೆ)–1, ಮಹಾರಾಷ್ಟ್ರ (ಅಥರ್ವ ಜಯಸಿಂಗ್ ಸಂಕಲ್ಪ, ಶುಭಮ್ ದಾದಾಸೊ ದಾಯಗುಡೆ, ಓಂ ಪ್ರವೀಣ ಸತಾಂ, ರಿಷಭ್ ಅನುಪಮ್ ದಾಸ್)–2, ಎಸ್‌ಎಸ್‌ಸಿಬಿ (ಉನ್ನಿಕೃಷ್ಣನ್, ಎಸ್. ಆದರ್ಶ್, ಜಿ. ಸಂಪತ್ ಕುಮಾರ್ ಯಾದವ್, ಆನಂದ್)–3.
ಮಹಿಳೆಯರು: 200 ಮೀ ಬ್ರೆಸ್ಟ್‌ಸ್ಟ್ರೋಕ್: ಹರ್ಷಿತಾ ಜಯರಾಮ್ (ಆರ್‌ಎಸ್‌ಪಿಬಿ; 2ನಿ,37.72ಸೆ)–1, ತಾನ್ಯಾ ಷಡಕ್ಷರಿ (ಕರ್ನಾಟಕ; 2ನಿ,39.41ಸೆ)–2, ಸಾನ್ವಿ ದೇಶವಾಲ್ (ಮಹಾರಾಷ್ಟ್ರ; 2ನಿ,40.24ಸೆ)–3.
100 ಮೀ ಬಟರ್‌ಫ್ಲೈ: ಸೃಷ್ಟಿ ಉಪಾಧ್ಯಾಯ (ಒಡಿಶಾ; 1ನಿ,03.50 ಸೆ), ಆಸ್ತಾ ಚೌಧರಿ (ಆರ್‌ಎಸ್‌ಪಿಬಿ 1ನಿ,03.50ಸೆ) – 1, ದಿನಿಧಿ ದೇಶಿಂಗು (ಕರ್ನಾಟಕ; 1ನಿ,03.52ಸೆ)–3.

ಬ್ಯಾಸ್ಕೆಟ್‌ಬಾಲ್: ಎಚ್‌ಬಿಆರ್ ತಂಡಕ್ಕೆ ಜಯ

ಬೆಂಗಳೂರು: ಶಶಿಧರ್ ಮತ್ತು ಸಂಕೇತ್ ಅವರ ಆಟದ ಬಲದಿಂದ ಎಚ್‌ಬಿಆರ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು ಎಸ್. ರಂಗರಾಜನ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಪುರುಷರ ಬ್ಯಾಸ್ಕೆಟ್‌ಬಾಲ್ ಟೂರ್ನಿಯ 'ಸಿ' ಡಿವಿಷನ್ ಲೀಗ್ ಪಂದ್ಯದಲ್ಲಿ 58–55ರಿಂದ ಬಿಸಿವೈಎ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ, ಪ್ರಥಮಾರ್ಧದದಲ್ಲಿ ಹತ್ತು ಅಂಕಗಳಿಂದ (19–29) ಹಿನ್ನಡೆಯಲ್ಲಿದ್ದ ಎಚ್‌ಬಿಆರ್ ಬಿ.ಸಿ ತಂಡವು ನಂತರದಲ್ಲಿ ಪಾರಮ್ಯ ಮೆರೆಯಿತು. ಶಶಿಧರ್ 23 ಹಾಗೂ ಸಂಕೇತ್ 18 ಅಂಕ ಗಳಿಸಿದರು. ಬಿಸಿವೈಎ ತಂಡದ ಅಫ್ರೈಡ್ 18 ಹಾಗೂ ಅರುಣ್ 16 ಅಂಕ ಕಲೆಹಾಕಿದರು.

ಫಲಿತಾಂಶಗಳು: ಅಪ್ಪಯ್ಯ ಬಿ.ಸಿ 62–32ರಿಂದ ಪಟ್ಟಾಭಿರಾಮ್ ಬಿ.ಸಿ ವಿರುದ್ಧ; ಸಿಜೆಸಿ 55–36ರಿಂದ ಎಸ್‌ಬಿಐ ವಿರುದ್ಧ; ಎಚ್‌ಬಿಆರ್ ಬಿ.ಸಿ 58–55ರಿಂದ ಬಿಸಿವೈಎ ವಿರುದ್ಧ; ಯಲಹಂಕ ನ್ಯೂ ಟೌನ್ ಬಿ.ಸಿ 76–58ರಿಂದ ಹಲಸೂರು ಎಸ್.ಸಿ ವಿರುದ್ಧ; ರಾಜ್‌ಕುಮಾರ್ ಬಿ.ಸಿ 69–57ರಿಂದ ಎಂಸಿಎಚ್‌ಎಸ್ ವಿರುದ್ಧ; ಸಹಕಾರನಗರ್ ಬಿ.ಸಿ 65–45ರಿಂದ ಹೆಬ್ಬಾಳ ಬಿ.ಸಿ ವಿರುದ್ಧ ಹಾಗೂ ಎಂಇಜಿ & ಸೆಂಟರ್ ತಂಡವು 79–56ರಿಂದ ಹೂಪ್ಸ್ 7 ಬಿ.ಸಿ ವಿರುದ್ಧ ಜಯ ಗಳಿಸಿದವು.

ರಾಜ್ಯ ಸೀನಿಯರ್ ಅಥ್ಲೆಟಿಕ್ಸ್: ಮನೋಜ್, ಸ್ನೇಹಾ ವೇಗಿಗಳು

ದಕ್ಷಿಣ ಕನ್ನಡದ ಮುತ್ತಪ್ಪ ನೂತನ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಮುತ್ತಪ್ಪ ಭಾನುವಾರ ನಡೆದ ಕರ್ನಾಟಕ ರಾಜ್ಯ ಸೀನಿಯರ್ ಅಥ್ಲೆಟಿಕ್ ಕೂಟದ ಪುರುಷರ ವಿಭಾಗದ ಹ್ಯಾಮರ್ ಥ್ರೋನಲ್ಲಿ ನೂತನ ದಾಖಲೆ ಬರೆದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಸ್ಪರ್ಧೆಯಲ್ಲಿ ಮುತ್ತಪ್ಪ ಅವರು 59.30 ಮೀಟರ್ಸ್ ದೂರ ಹ್ಯಾಮರ್ ಥ್ರೋ ಮಾಡಿದರು. ಇದರೊಂದಿಗೆ ಸಚಿನ್ ಅವರ ಹೆಸರಿನಲ್ಲಿದ್ದ ಹಳೆಯ ದಾಖಲೆ (58.69ಮೀ) ಮುರಿದರು.

ವೇಗದ ರಾಜ–ರಾಣಿ: ಬೆಂಗಳೂರಿನ ಆರ್ಯನ್ ಮನೋಜ್ ಮತ್ತು ಚಿಕ್ಕಮಗಳೂರಿನ ಎಸ್.ಎಸ್. ಸ್ನೇಹಾ ಅವರು ಈ ಕೂಟದಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ 100 ಮೀಟರ್ಸ್ ಓಟದ ವಿಭಾಗದಲ್ಲಿ ವೇಗದ 'ರಾಜ' ಮತ್ತು 'ರಾಣಿ'ಯಾಗಿ ಹೊರಹೊಮ್ಮಿದರು.



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರಾಜ್ಯ ಸೀನಿಯರ್ ಅಥ್ಲೆಟಿಕ್ಸ್‌ನ ಪುರುಷರ 100 ಮೀ ಓಟದಲ್ಲಿ ಗುರಿಯತ್ತ ಮುನ್ನುಗ್ಗಿದ ಆರ್ಯನ್ ಮನೋಜ್ (ಎಡಚಿತ್ರ) ಮಹಿಳೆಯರ 100 ಮೀ ಓಟದಲ್ಲಿ ಗುರಿಯತ್ತ ಮುನ್ನುಗ್ಗಿದ ಎಸ್‌ಎಸ್‌ ಸ್ನೇಹಾ ಚಿತ್ರಗಳು: ಎಸ್‌ಕೆ. ದಿನೇಶ್

ಫಲಿತಾಂಶ: ಪುರುಷರು: 100 ಮೀ ಓಟ: ಆರ್ಯನ್ ಮನೋಜ್ (ಬೆಂಗಳೂರು; 10.34ಸೆ)–1, ಗಗನ್ ಎಲ್ ಗೋಯೆಡಾ (ಬೆಂಗಳೂರು)–2, ಆರ್. ಪ್ರಜ್ವಲ್ (ಮೈಸೂರು)–3. 400 ಮೀ ಓಟ: ಬಾಲಕೃಷ್ಣ (ಹಾಸನ; 47.36ಸೆ)–1, ಸಿ.ಎಚ್. ರಿಹಾನ್ (ಬೆಂಗಳೂರು)–2, ಡಿ. ಸ್ಯಾಮುಯೆಲ್ (ಬೆಂಗಳೂರು)–3.
800 ಮೀ ಓಟ: ತುಷಾರ್ ಭೆಕೆ (ಬೆಳಗಾವಿ; 1ನಿ,50.6ಸೆ)–1, ಕಮಲ ಕಣ್ಣನ್ ಎಸ್ (ಬೆಂಗಳೂರು ನಗರ)–2, ವಿನಾಯಕ (ಬೆಳಗಾವಿ)–3.
1500 ಮೀ: ವೈಭವ್ ಮಾರುತಿ ಪಾಟೀಲ (ಬೆಳಗಾವಿ; 3ನಿ,52.9ಸೆ)–1, ಸಂಗಮೇಶ್ ಕುರಿ (ಬೆಂಗಳೂರು)–2, ಆರೋಹಿತ (ಬೆಂಗಳೂರು)–3.
5000 ಮೀ: ಓಂಕಾರ್ ರಾಜೇಂದ್ರ ಪಿ (ಬೆಂಗಳೂರು: 14ನಿ, 18.72ಸೆ)–1, ಶಿವಾಜಿ ಮಾದಪ್ಪಗೌಡ (ಉತ್ತರ ಕನ್ನಡ)–2, ಎ.ಆರ್.ರೋಹಿತ್ (ಬೆಂಗಳೂರು)–3.
110 ಮೀ ಹರ್ಡಲ್ಸ್: ಪಿ. ಯಶಸ್ (ತುಮಕೂರು; 14.27ಸೆ)–1, ಆದೇಶ್ ಜಿ ಹೆಗಡೆ (ಬೆಂಗಳೂರು)–2, ಲಬೈಕ್‌ನಲಬಂದ್ (ಬೆಳಗಾವಿ)–3
400 ಮೀ ಹರ್ಡಲ್ಸ್: ಪಿ.ಯಶಸ್ (ತುಮಕೂರು; 51.3ಸೆ)–1, ರಕ್ಷಿತ್ ಆರ್ ಅರವಿಂದ (ಉತ್ತರಕನ್ನಡ)–2, ರಕ್ಷಿತ್ (ಉಡುಪಿ; 53.4ಸೆ)–3
ಲಾಂಗ್‌ಜಂಪ್: ಟಿ.ಆರ್. ಅನುಷ್ (ಉಡುಪಿ; ದೂರ: 7.49ಮೀ)–1, ಎಸ್. ಆರ್ಯ (ಬೆಂಗಳೂರು)–2, ಬಿ. ನವೀನ್ (ತುಮಕೂರು)–3
ಹೈಜಂಪ್ : ಸುದೀಪ್ (ಶಿವಮೊಗ್ಗ; ಎತ್ತರ; 2.05ಮೀ)–1, ಎಸ್.ಹರ್ಷಿತ್ (ಬೆಂಗಳೂರು)–2, ಸಿನಾನ್ (ಉಡುಪಿ)–3.
ಟ್ರಿಪಲ್ ಜಂಪ್: ಜೆಸ್ಸಿ ಸಂದೇಶ್ (ಬೆಂಗಳೂರು; 15.38ಮೀ)–1, ಆರ್. ಅಬ್ದುಲ್ ಮುನಾಫ್ (ಬೆಂಗಳೂರು)–2, ಗಣೇಶ್ ಕುಮಾರ್ (ಮೈಸೂರು)–3
ಪೋಲ್‌ವಾಲ್ಟ್: ಸುಭಾಷ್ ಚಂದವನ (ಬೆಂಗಳೂರು; 4.60 ಮೀ) –1, ಸಿದ್ಧರಾಮ (ಬೆಂಗಳೂರು)–2.
ಶಾಟ್‌ಪಟ್: ಅಜಯ್ ಅಶೋಕ್ (ಬೆಳಗಾವಿ; ದೂರ: 16.88ಮೀ)–1, ಪ್ರಜ್ವಲ್ ಎಂ ಶೆಟ್ಟಿ (ಉಡುಪಿ)–2, ಇ. ಮೋಹನ್ (ಮೈಸೂರು)–3.
ಜಾವೆಲಿನ್ ಥ್ರೋ: ಶಶಾಂಕ್ ಪಾಟೀಲ (ಬೆಳಗಾವಿ; 76.36ಮೀ)–1, ಶಾರೂಕ್ (ಕೆಎಸ್‌ಪಿ)–2, ಬಿ. ಕಲ್ಲೋಳಪ್ಪ (ಬೆಳಗಾವಿ)–3.
ಹ್ಯಾಮರ್ ಥ್ರೋ: ಮುತ್ತಪ್ಪ (ಹೊಸ ದಾಖಲೆ: 59.30 ಮೀ. ಹಳೆಯದು: 58.69ಮೀ–ಸಚಿನ್)–1, ಸಚಿನ್ (ಕೊಪ್ಪಳ)–2, ಧೀರಜ್ (ಉಡುಪಿ)–3
ಮಹಿಳೆಯರು: 100 ಮೀ ಓಟ: ಎಸ್.ಎಸ್. ಸ್ನೇಹಾ (ಚಿಕ್ಕಮಗಳೂರು; 11.52ಸೆ)–1, ಎ.ಟಿ. ದಾನೇಶ್ವರಿ (ಬೆಳಗಾವಿ)–2, ಪ್ರಕೃತಿ (ಚಿತ್ರದುರ್ಗ)–3
400 ಮೀ: ವಿಜಯಕುಮಾರಿ (ಬೆಂಗಳೂರು; 53.3ಸೆ)–1, ಪೂವಮ್ಮ (ದಕ್ಷಿಣ ಕನ್ನಡ)–2, ಸಿಂಚಲ್ ಕಾವೇರಮ್ಮ (ಕೊಡಗು)–3
800 ಮೀ: ಪಿ.ಬಿ. ರೇಖಾ (ದಕ್ಷಿಣ ಕನ್ನಡ; 2ನಿ,14.4ಸೆ)–1, ಜಿ.ಮನುಶ್ರೀ (ಬೆಂಗಳೂರು)–2, ಪ್ರತೀಕ್ಷಾ (ಉಡುಪಿ)–3
1500ಮೀ: ಡಿ.ಆರ್. ಸ್ಮಿತಾ (ಹಾಸನ; 4ನಿ,33.1ಸೆ)–1, ಸಿ. ಪ್ರಿಯಾಂಕಾ (ಬೆಂಗಳೂರು)–2, ಸಿ.ಎಂ. ರಾಶಿ (ಕೊಡಗು)–3
5000ಮೀ: ತೇಜಸ್ವಿ (ಕೆಎಸ್‌ಪಿ; 18ನಿ,11.89ಸೆ)–1, ಆರಾಧಾನ (ಬೆಂಗಳೂರು)–2, ಎಂ.ಎನ್. ಸೀಮಾ (ಬೆಳಗಾವಿ)–3
100ಮೀ ಹರ್ಡಲ್ಸ್: ಶ್ರೇಯಾ ರಾಜೇಶ್ (ಬೆಂಗಳೂರು; 14.39ಸೆ)–1, ಬಿ.ಎಸ್. ಕೀರ್ತಿ (ಧಾರವಾಡ)–2,
400 ಮೀ ಹರ್ಡಲ್ಸ್: ದೀಕ್ಷಿತಾ ಎಸ್ ಗೌಡ (ಉತ್ತರಕನ್ನಡ; 1ನಿ,00.4ಸೆ)–1, ಕೆ. ಪ್ರಜ್ಞಾ (ಉಡುಪಿ)–2, ಮೇಘಾ ಮುನವಳ್ಳಿ (ಧಾರವಾಡ)–3
ಲಾಂಗ್‌ಜಂಪ್: ಸಿ. ವರ್ಷಿತಾ (ಮಂಡ್ಯ; 5.91ಮೀ)–1, ಶ್ರೀದೇವಿಕಾ (ಉಡುಪಿ)–2, ಅಕ್ಷತಾ (ಉಡುಪಿ)–3
ಹೈಜಂಪ್: ಪಲ್ಲವಿ ಪಾಟೀಲ (ಯಾದಗಿರಿ; 1.80ಮೀ)–1, ಎಸ್.ಬಿ. ಸುಪ್ರಿಯಾ (ಚಿಕ್ಕಮಗಳೂರು)–2.
ಟ್ರಿಪಲ್ ಜಂಪ್: ಸಿ. ವರ್ಷಿತಾ (ಮಂಡ್ಯ; 12.60ಮೀ)–1, ಐಶ್ವರ್ಯ (ಬೆಳಗಾವಿ)–2.
ಪೋಲ್‌ವಾಲ್ಟ್: ಸಿಂಧುಶ್ರೀ (ಬೆಂಗಳೂರು; 3.70ಮೀ)–1, ಎ.ನಿಶಾ ಬಾನು (ರೈಲ್ವೆಸ್)–2.
ಡಿಸ್ಕಸ್ ಥ್ರೋ: ಬಿ. ಸುಷ್ಮಾ (ದಕ್ಷಿಣ ಕನ್ನಡ; 41.08ಮೀ)–1, ಮಾಧುರ್ಯ (ಉಡುಪಿ)–2, ಪ್ರಗ್ಯಾ ಗೋಯಲ್ (ಬೆಂಗಳೂರು)–3.
ಶಾಟ್‌ಪಟ್: ವಿ. ಅಂಬಿಕಾ (ಮೈಸೂರು; 14.20ಮೀ)–1, ಟಿ. ನಿವೇತಾ (ಕರ್ನಾಟಕ ಎಫ್‌ಡಿ)–2, ಬೃಂದಾ ಎಸ್. ಗೌಡ (ಮೈಸೂರು)–3
ಹ್ಯಾಮರ್ ಥ್ರೋ: ಸ್ಪ್ರುಹಾ ರಾಜು ನಾಯ್ಕ (ಬೆಳಗಾವಿ; 46.10 ಮೀ)–1, ಅಮ್ರೀನ್ (ದಕ್ಷಿಣ ಕನ್ನಡ)–2, ಖುಷಿ ಸಾಲಿಯಾನ (ದಕ್ಷಿಣ ಕನ್ನಡ)–3.

ಸಂಕ್ಷಿಪ್ತ ಸುದ್ದಿ

ಏಷ್ಯನ್ ಸ್ನೂಕರ್: ಕಮಲ್ ಚಾವ್ಲಾ ಶುಭಾರಂಭ



ಕೊಲಂಬೊ: ಭಾರತದ ಸ್ನೂಕರ್ ಆಟಗಾರರು ಭಾನುವಾರ ಇಲ್ಲಿ ಆರಂಭವಾದ 6–ರೆಡ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಮಿಶ್ರಫಲ ಪಡೆದರು.

ಭಾರತದ ಕಮಲ್ ಚಾವ್ಲಾ ಅವರು ಹೆಚ್ಚು ಪ್ರಭಾವಿಯಾದರು. ಅವರೂ ಸೇರಿದಂತೆ ಭಾರತದ ಮೂವರು ಈ ಸ್ಪರ್ಧೆಯಲ್ಲಿದ್ದಾರೆ. ಸಿ ಗುಂಪಿನ ಹಣಾಹಣಿಯಲ್ಲಿ ಕಮಲ್ ಅವರು 4–1ರಿಂದ ಮೆಕಾವ್ರೊ ಚೀನಾದ ವೈ ಐಪ್ ಲ್ಯಾಮ್ ವಿರುದ್ಧ ಜಯಗಳಿಸಿದರು.

ಎ ಗುಂಪಿನಲ್ಲಿ ನಡೆದ ಪಂದ್ಯದಲ್ಲಿ ಭಾರತದ ಪುಷ್ಪೇಂದರ್ ಸಿಂಗ್ 4–1 (49-23, 40-16, 1-40, 47-33, 56 (36) -0) ರಿಂದ ಬಾಂಗ್ಲಾದ ಝಿಯಾವುರ್ ರೆಹಮಾನ್ ಆಝಾದ್ ವಿರುದ್ಧ ಜಯಿಸಿದರು. ಇನ್ನೊಂದು ಪಂದ್ಯದಲ್ಲಿ ಚೀನಾದ ಚಿ ಕಿನ್ ಚಾನ್ 4–3ರಿಂದ ಪುಷ್ಪೇಂದರ್ ಸಿಂಗ್ ಅವರನ್ನು ಮಣಿಸಿದರು.

ಡಿ ಗುಂಪಿನಲ್ಲಿ ಭಾರತದ ಪಾರಸ್ ಗುಪ್ತಾ ಅವರು 4–3 (20-52, 42 (37) -5, 47-17, 46-34, 25-36, 13-36, 28-25) ರಿಂದ ಶ್ರೀಲಂಕಾದ ಮೊಹಮ್ಮದ್ ಮುಬೀನ್ ವಿರುದ್ಧ ಜಯ ಸಾಧಿಸಿದರು.

ಕುಸ್ತಿ: ತಂಡ ಪ್ರಶಸ್ತಿ ಗೆದ್ದ ಭಾರತ ಪುರುಷರ ತಂಡ

ವಿಯೆಟ್ನಾಂ (ಪಿಟಿಐ): ಭಾರತದ ಪುರುಷ ಕುಸ್ತಿಪಟುಗಳು ಇಲ್ಲಿ ನಡೆಯುತ್ತಿರುವ 23 ವರ್ಷದೊಳಗಿನವರ ಏಷ್ಯನ್ ಚಾಂಪಿಯನ್‌ಷಿಪ್‌ನ ಫ್ರೀಸ್ಟೈಲ್ ಸ್ಪರ್ಧೆಗಳಲ್ಲಿ ಆರು ಚಿನ್ನ ಹಾಗೂ ಒಂದು ಬೆಳ್ಳಿ ಪದಕ ಗೆಲ್ಲುವ ಮೂಲಕ ತಂಡ ಪ್ರಶಸ್ತಿಯನ್ನು ಜಯಿಸಿದರು.

ಇದರೊಂದಿಗೆ ಭಾರತದ ಪುರುಷ ಮತ್ತು ಮಹಿಳಾ ತಂಡಗಳು ತಂಡ ಪ್ರಶಸ್ತಿ ಗೆದ್ದವು. ಭಾರತದ ಮಹಿಳಾ ಕುಸ್ತಿಪಟುಗಳು ಚಾಂಪಿಯನ್‌ಷಿಪ್‌ನ ಎಲ್ಲ 10 ಸ್ಪರ್ಧೆಗಳಲ್ಲೂ ಪದಕ ಜಯಿಸಿದ್ದರು.

ನಿಖಿಲ್ (61 ಕೆ.ಜಿ), ಸುಜೀತ್ ಕಲ್ಕಲ್ (65 ಕೆ.ಜಿ), ಜೈದೀಪ್ (74 ಕೆ.ಜಿ), ಚಂದ್ರಮೋಹನ್ (79 ಕೆ.ಜಿ), ಸಚಿನ್ (92 ಕೆ.ಜಿ) ಹಾಗೂ ವಿಕ್ಕಿ (97 ಕೆ.ಜಿ) ಚಿನ್ನದ ಪದಕ ಗೆದ್ದರು. ಜಸಪೂರಣ್ ಸಿಂಗ್ 125 ಕೆ.ಜಿ ವಿಭಾಗದಲ್ಲಿ ಬೆಳ್ಳಿ ಪದಕ ಗಳಿಸಿದರು.

ಗ್ರೀಕೊ-ರೋಮನ್ ಶೈಲಿಯಲ್ಲಿ, ಭಾರತದ ಪುರುಷ ಸ್ಪರ್ಧಿಗಳು ಚಿನ್ನವೂ ಸೇರಿದಂತೆ ಮೂರು ಪದಕಗಳನ್ನು ಗೆದ್ದರು.

ಟಿ20 ವಿಶ್ವಕಪ್: ಕೆನಡಾ ಅರ್ಹ

ಒಂಟಾರಿಯೊ, ಕೆನಡಾ (ಪಿಟಿಐ): ಕೆನಡಾ ದೇಶದ ಪುರುಷರ ಕ್ರಿಕೆಟ್ ತಂಡವು ಮುಂದಿನ ವರ್ಷ ನಡೆಯಲಿರುವ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲು ಅರ್ಹತೆ ಗಳಿಸಿದೆ. ವಿಶ್ವಕಪ್ ಟೂರ್ನಿಯು ಭಾರತ ಮತ್ತು ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ ನಡೆಯಲಿದೆ.

ಅಮೆರಿಕಾ ಕ್ವಾಲಿಫೈಯರ್ ಸುತ್ತಿನಲ್ಲಿ ಬಹಾಮಾಸ್ ತಂಡದ ಎದುರು 7 ವಿಕೆಟ್‌ಗಳಿಂದ ಜಯಿಸಿದ ಕೆನಡಾ ಅರ್ಹತೆ ಗಿಟ್ಟಿಸಿತು. ಈ ಸುತ್ತಿನಲ್ಲಿ ಕೆನಡಾ ಗೆದ್ದ ಸತತ ಐದನೇ ಪಂದ್ಯ ಇದಾಗಿದೆ. ಹೋದ ವರ್ಷದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಕೆನಡಾ ತಂಡವು ಆಡಿತ್ತು.

ಹಾಕಿ: ಪುರುಷರ ತಂಡಕ್ಕೆ ಗೆಲುವು

ಆ್ಯಂಟ್‌ವರ್ಪ್ (ಬೆಲ್ಜಿಯಂ) (ಪಿಟಿಐ): ಭಾರತ ಪುರುಷರ ಹಾಕಿ ತಂಡವು, ಭಾನುವಾರ ನಡೆದ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಬೆಲ್ಜಿಯಂ ವಿರುದ್ಧ 4–3ರಿಂದ ರೋಚಕ ಜಯ ಸಾಧಿಸಿತು. ಈ ಮೂಲಕ, ಯುರೋಪಿನ ಲೆಗ್‌ನಲ್ಲಿ ಸತತ ಏಳು ಸೋಲು ಕಂಡಿದ್ದ ಹರ್ಮನ್‌ಪ್ರೀತ್ ಸಿಂಗ್ ಪಡೆ, ಗೆಲುವಿನ ಹಳಿಗೆ ಮರಳುವಲ್ಲಿ ಕೊನೆಗೂ ಯಶಸ್ವಿ ಆಯಿತು.

ಸುಖಜೀತ್ ಸಿಂಗ್ (21ನೇ ಹಾಗೂ 35ನೇ ನಿ.) ಎರಡು ಗೋಲು ಗಳಿಸಿ, ಭಾರತ ತಂಡ ಪಂದ್ಯ ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸಿದರು. ಅಮಿತ್ ರೋಹಿದಾಸ್ (36ನೇ ನಿ.) ಹಾಗೂ ನಾಯಕ ಹರ್ಮನ್‌ಪ್ರೀತ್ ಸಿಂಗ್ (59ನೇ ನಿ.) ತಲಾ ಒಂದು ಗೋಲು ಗಳಿಸಿದರು.

ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ಆಟಗಾರ ಲಾರೆನ್ಸ್ ನಿಧನ


ಡೇವಿಡ್ ಲಾರೆನ್ಸ್ —ಎಕ್ಸ್ ಚಿತ್ರ

ಲೀಡ್ಸ್ (ರಾಯಿಟರ್ಸ್): ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ಆಟಗಾರ ಡೇವಿಡ್ ಲಾರೆನ್ಸ್ (61) ಭಾನುವಾರ ನಿಧನರಾದರು.

ಅವರು ಮೋಟರ್ ನ್ಯೂರಾನ್ ಕಾಯಿಲೆಯಿಂದ (ಎಂಎನ್‌ಡಿ) ಬಳಲಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬ್ರಿಟಿಷ್ ನಾಡಿನಲ್ಲಿ ಜನಿಸಿ ಇಂಗ್ಲೆಂಡ್ ತಂಡವನ್ನು ಪ್ರತಿನಿಧಿಸಿದ ಮೊದಲ ಕಪ್ಪುವರ್ಣದ ಆಟಗಾರ ಎಂಬ ಹೆಗ್ಗಳಿಕೆ ಲಾರೆನ್ಸ್ ಅವರದ್ದಾಗಿದೆ. ಹೋದ ವರ್ಷ ಅವರಿಗೆ ಎಂಎನ್‌ಡಿ ಇರುವುದು ಪರೀಕ್ಷೆಯಿಂದ ಪತ್ತೆಯಾಗಿತ್ತು. ಈ ಕಾಯಿಲೆಯು ದೇಹದ ಸ್ನಾಯುಗಳನ್ನು ನಷ್ಟ ಮಾಡುತ್ತದೆ. ಮಿದುಳು ಮತ್ತು ನರಮಂಡಲದ ಮೇಲೂ ಕೆಟ್ಟ ಪರಿಣಾಮ ಬೀರುತ್ತದೆ.

'ಖ್ಯಾತ ಆಟಗಾರ ಡೇವ್ ಲಾರೆನ್ಸ್ (ಸ್ಯಡ್) ಅವರು ನಿಧನರಾಗಿರುವುದಾಗಿ ತಿಳಿಸಲು ಬೇಸರವಾಗುತ್ತಿದೆ. ಅವರು ಮೋಟರ್ ನ್ಯೂರಾನ್ ಕಾಯಿಲೆಗೆ ತುತ್ತಾಗಿದ್ದರು' ಎಂದು ಲಾರೆನ್ಸ್ ಕುಟುಂಬದ ಮೂಲಗಳು ಸ್ಪಷ್ಟಪಡಿಸಿವೆ.

'ಅವರೊಬ್ಬ ಪ್ರಭಾವಶಾಲಿ ವ್ಯಕ್ತಿತ್ವದ ಆಟಗಾರನಾಗಿದ್ದರು. ಕ್ರಿಕೆಟ್ ಮೈದಾನದೊಳಗೆ ಮತ್ತು ಹೊರಗೆ ಅವರು ಸವಾಲುಗಳನ್ನು ದಿಟ್ಟವಾಗಿ ಎದುರಿಸುತ್ತಿದ್ದ ರೀತಿ ಬಹಳಷ್ಟು ಜನರಿಗೆ ಪ್ರೇರಣೆಯಾಗಿದೆ' ಎಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

1988ರಲ್ಲಿ ಲಾರೆನ್ಸ್ ಅವರು ಶ್ರೀಲಂಕಾ ವಿರುದ್ಧ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು. 1991ರಲ್ಲಿ ದಿ ಓವಲ್ ಕ್ರೀಡಾಂಗಣದಲ್ಲಿ ಅವರು ವೆಸ್ಟ್ ಇಂಡೀಸ್ ವಿರುದ್ಧ ಐದು ವಿಕೆಟ್ ಗೊಂಚಲು ಗಳಿಸಿದ್ದರು. 2022ರಲ್ಲಿ ಗ್ಲಾಸ್ಟರ್‌ಶೈರ್ ಕೌಂಟಿ ಕ್ರಿಕೆಟ್ ಕ್ಲಬ್ ಅಧ್ಯಕ್ಷರಾಗಿದ್ದರು. ಈ ಸ್ಥಾನಕ್ಕೇರಿದ ಮೊದಲ ಕಪ್ಪುವರ್ಣೀಯ ಕೂಡ ಆಗಿದ್ದರು.

ಬಲಗೈ ವೇಗಿಯಾಗಿದ್ದ ಅವರು 5 ಟೆಸ್ಟ್ ಆಡಿ 18 ವಿಕೆಟ್ ಗಳಿಸಿದ್ದರು. ಏಕೈಕ ಏಕದಿನ ಪಂದ್ಯದಲ್ಲಿ 4 ವಿಕೆಟ್ ಪಡೆದಿದ್ದರು. ಒಟ್ಟು 185 ಪ್ರಥಮ ದರ್ಜೆ ಪಂದ್ಯಗಳಿಂದ 515 ವಿಕೆಟ್ ಗಳಿಸಿದ್ದರು.

ಗೌರವಾಂಜಲಿ: ಹೆಡಿಂಗ್ಲೆಯಲ್ಲಿ ನಡೆಯುತ್ತಿರುವ ಟೆಸ್ಟ್‌ನಲ್ಲಿ ಆಡುತ್ತಿರುವ ಭಾರತ ಮತ್ತು ಇಂಗ್ಲೆಂಡ್ ತಂಡದ ಆಟಗಾರರು ತಮ್ಮ ತೋಳಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಡೇವಿಡ್ ನಿಧನಕ್ಕೆ ಗೌರವ ಸಲ್ಲಿಸಿದರು. ದಿನದಾಟದ ಆರಂಭಕ್ಕೂ ಮುನ್ನ ಉಭಯ ತಂಡಗಳ ಆಟಗಾರರು ಒಂದು ನಿಮಿಷ ಮೌನಾಚರಣೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಿದರು.